ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

'ಚಿನ್ನ' ಸಂಭ್ರಮ

ಫಿಡೆ ಕ್ಯಾಂಡಿಡೇಟ್ಸ್ 2024ರ ವಿಜೇತ ಡಿ. ಗುಕೇಶ್ ಅವರು ಚಿನ್ನದ ಪದಕದೊಂದಿಗೆ ಚೆನ್ನೈನಲ್ಲಿ ಭಾನುವಾರ ಕಾಣಿಸಿಕೊಂಡಿದ್ದು ಹೀಗೆ



ಆಳ–ಅಗಲ

ಬೀದಿ ಬೀದಿಯಲ್ಲಿ ಪೆನ್‌ಡ್ರೈವ್: ಹೆಣ್ಣಿನ ಮಾನವೂ ಬೀದಿಗೆ...

ಮಸಾಲೆಯಲ್ಲಿ ಕೀಟನಾಶಕ ಅಂಶವಿಲ್ಲ: ಎಂಡಿಎಚ್ 10

ಶಾಸನಸಭೆಗಳ ಕಲಾಪ ಅವಧಿ ಸರಾಸರಿ 22 ದಿನ! 11

ಮೋದಿ ಅಲೆಯೋ, ಗ್ಯಾರಂಟಿ ಸೆಲೆಯೋ? 8

'ಮೀಸಲಾತಿ ವಿರೋಧಿಸಿದ್ದ ಆರ್‌ಎಸ್‌ಎಸ್' 9

ಪ್ರಜಾವಾಣಿ

ಸ್ಪರ್ಧಾವಾಣಿ

MASTERMIND

ಈ ಸಂಚಿಕೆಯಲ್ಲಿ ಮಾದರಿ ಪ್ರಶ್ನೆಪತ್ರಿಕೆಗಳು, QR ಕೋಡ್ ಆಧಾರಿತ ಮಾದರಿ ಪರೀಕ್ಷೆ ಹಾಗೂ ವಿಡಿಯೋ ಪಾಠಗಳು ಲಭ್ಯ

ಈ QR ಕೋಡ್ ಸ್ಕ್ಯಾನ್ ಮಾಡಿ, ಪ್ರಕಟವಾಗುವ ಅರ್ಜಿ ಭರ್ತಿ ಮಾಡಿ, ಚಂದಾದಾರರಾಗಿ ನೋಂದಣಿ ಮಾಡಿಕೊಳ್ಳಿ

ಚಂದಾದಾರಿಕೆ ಕೇವಲ ₹360ರಿಂದ ಪ್ರಾರಂಭ

ಲೈಂಗಿಕ ದೌರ್ಜನ್ಯದ ಆರೋಪ: ಎಸ್‌ಐಟಿ ತನಿಖೆಗೆ ಪ್ರಕರಣ ಹಸ್ತಾಂತರಿಸಿ ಸರ್ಕಾರದ ಆದೇಶ

ರೇವಣ್ಣ, ಪ್ರಜ್ವಲ್ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಹಾಸನ/ಬೆಂಗಳೂರು: ಮನೆಯಲ್ಲಿ ಕೆಲಸಕ್ಕಿದ್ದ ಮಹಿಳೆ ಮತ್ತು ಅವರ ಮಗಳ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ ಆರೋಪದಡಿ ಹೊಳೆನರಸೀಪುರ ಕ್ಷೇತ್ರದ ಶಾಸಕ ಎಚ್.ಡಿ.ರೇವಣ್ಣ ಮತ್ತು ಅವರ ಮಗ, ಹಾಸನ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ.

ಸಂತ್ರಸ್ತೆಯ ದೂರು ಆಧರಿಸಿ ಹೊಳೆನರಸೀಪುರ ನಗರ ಠಾಣೆಯಲ್ಲಿ ಭಾನುವಾರ ಎಫ್‌ಐಆರ್ ದಾಖಲಿಸಲಾಗಿದೆ. ರೇವಣ್ಣ ಅವರನ್ನೇ ಮೊದಲ ಆರೋಪಿಯನ್ನಾಗಿ ಮಾಡಿದ್ದು, ಪ್ರಜ್ವಲ್ ರೇವಣ್ಣ ಎರಡನೇ ಆರೋಪಿ ಎಂದು ಉಲ್ಲೇಖಿಸಲಾಗಿದೆ.

ಪ್ರಜ್ವಲ್ ರೇವಣ್ಣ ಹಲವು ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದಾರೆ ಎಂಬ ಆರೋಪದ ತನಿಖೆಗೆ ನೇಮಿಸಿರುವ ವಿಶೇಷ ತನಿಖಾ ತಂಡಕ್ಕೆ ಪ್ರಕರಣ ವರ್ಗಾಯಿಸಿ ಗೃಹ ಇಲಾಖೆ ಆದೇಶ ಹೊರಡಿಸಿದೆ.

ರಾಜಕೀಯ ಪ್ರಭಾವ ಬಳಸಿಕೊಂಡು ಹಾಸನ ಜಿಲ್ಲೆಯಲ್ಲಿ ಹಲವು ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ ಆರೋಪಕ್ಕೆ ಸಂಬಂಧಿಸಿದ ವಿಡಿಯೊ ತುಣುಕುಗಳು ಹಲವು ದಿನಗಳಿಂದ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದ್ದವು. ಈ ವಿಡಿಯೊಗಳಿದ್ದ ಪೆನ್‌ಡ್ರೈವ್‌ಗಳನ್ನು ದೊಡ್ಡ ಸಂಖ್ಯೆಯಲ್ಲಿ ಸಾರ್ವಜನಿಕವಾಗಿ ಸಿಗುವಂತೆ ಮಾಡಲಾಗಿದೆ.

ತನಿಖೆಯನ್ನು ಎಸ್‌ಐಟಿಗೆ ವಹಿಸುವಂತೆ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀ ಚೌಧರಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ಪತ್ರ ಬರೆದಿದ್ದರು.

4ನೇ ಪುಟ ನೋಡಿ



ಎಚ್‌.ಡಿ ರೇವಣ್ಣ

ಪ್ರಜ್ವಲ್ ರೇವಣ್ಣ

ಪ್ರಜ್ವಲ್ ರೇವಣ್ಣ ವಿರುದ್ಧದ ಆರೋಪಗಳ ಕುರಿತು ತನಿಖೆಗೆ ಎಸ್‌ಐಟಿ ರಚಿಸಿರುವ ಸರ್ಕಾರದ ನಿರ್ಧಾರವನ್ನು ಸ್ವಾಗತಿಸುವೆ. ತನಿಖೆ ನಡೆದು, ಸತ್ಯ ಹೊರಬರಲಿ

ಜಿ.ಟಿ.ದೇವೇಗೌಡ, ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ

ಮಾಂಗಲ್ಯದ ಬಗ್ಗೆ ಮಾತನಾಡುವ ಮೋದಿಯವರು ತಾವು ಆಲಿಂಗಿಸುವ ದೇವೇಗೌಡರ ಮೊಮ್ಮಗ, ಸಂಸದ ಪ್ರಜ್ವಲ್ ಎಷ್ಟು ಮಹಿಳೆಯರ ತಾಳಿ ಕಿತ್ತಿದ್ದಾರೆ ಎಂದೂ ಹೇಳಬೇಕು

ಕೃಷ್ಣ ಬೈರೇಗೌಡ, ಕಂದಾಯ ಸಚಿವ

'ತನಿಖೆಯಲ್ಲಿ ಹಸ್ತಕ್ಷೇಪ ಇಲ್ಲ'

ಪರಮೇಶ್ವರ

ಬೆಂಗಳೂರು: 'ಅಶ್ಲೀಲ ವಿಡಿಯೊ ಪ್ರಕರಣಕ್ಕೆ ಸಂಬಂಧಿಸಿದ ಆರೋಪಗಳ ಕುರಿತ ತನಿಖೆಯನ್ನು ಎಸ್‌ಐಟಿಗೆ ಒಪ್ಪಿಸಿದ್ದೇವೆ. ನಾವು ಒಮ್ಮೆ ಎಸ್‌ಐಟಿಗೆ ವಹಿಸಿದರೆ, ಅವರು ಏನು ನಿರ್ಧಾರ ತೆಗೆದುಕೊಳ್ಳುತ್ತಾರೆಯೋ, ಅದು ಅವರಿಗೆ ಬಿಟ್ಟಿದ್ದು. ನಾವು ಹಸ್ತಕ್ಷೇಪ ಮಾಡುವುದಿಲ್ಲ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಪ್ರಜ್ವಲ್ ರೇವಣ್ಣ ಅವರು ವಿದೇಶಕ್ಕೆ ಹೋಗಿದ್ದರೆ ಎಸ್‌ಐಟಿ ತಂಡವೇ ಕರೆದುಕೊಂಡು ಬಂದು ತನಿಖೆ ನಡೆಸಲಿದೆ' ಎಂದರು.

'ಸಂತ್ರಸ್ತ ಮಹಿಳೆಯರು ಅನ್ಯಾಯದ ಬಗ್ಗೆ ಹೇಳಿಕೊಳ್ಳಲು ನಿಮ್ಮನ್ನು ಸಂಪರ್ಕಿಸಿದ್ದಾರಾ' ಎಂಬ ಪ್ರಶ್ನೆಗೆ ಪರಮೇಶ್ವರ, 'ಚುನಾವಣೆಯಲ್ಲಿ ಕಾರ್ಯನಿರತನಾಗಿರುವುದರಿಂದ ನನ್ನನ್ನು ಯಾರೂ ಸಂಪರ್ಕಿಸಿಲ್ಲ. ಆದರೆ, ಮುಖ್ಯಮಂತ್ರಿ ಮತ್ತು ಪೊಲೀಸ್ ಮಹಾನಿರ್ದೇಶಕರಿಗೆ ಮಹಿಳಾ ಆಯೋಗದವರು ಪತ್ರ ಬರೆದಿದ್ದಾರೆ. ಅದರ ಆಧಾರದಲ್ಲಿ ತನಿಖೆಗೆ ಆದೇಶಿಸಲಾಗಿದೆ. ರಾಜ್ಯ ಸರ್ಕಾರ ಇದನ್ನು ಗಂಭೀರವಾಗಿ ತೆಗೆದುಕೊಂಡಿದೆ' ಎಂದರು.

'ತಪ್ಪು ಮಾಡಿದ್ದರೆ ಶಿಕ್ಷೆಯಾಗಲೇಬೇಕು'

ಎಚ್‌.ಡಿ. ಕುಮಾರಸ್ವಾಮಿ

ಬೆಂಗಳೂರು: 'ಹಾಸನ ಸಂಸದ ಪ್ರಜ್ವಲ್ ರೇವಣ್ಣ ತಪ್ಪು ಮಾಡಿದ್ದರೆ ಶಿಕ್ಷೆಯಾಗಲೇಬೇಕು. ಉಪ್ಪು ತಿಂದವರು ನೀರು ಕುಡಿಯಲೇಬೇಕು' ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್‌.ಡಿ. ಕುಮಾರಸ್ವಾಮಿ ಭಾನುವಾರ ಹೇಳಿದರು.

ಪ್ರಜ್ವಲ್ ರೇವಣ್ಣ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿರುವ ಆರೋಪದ ಕುರಿತ ಪ್ರಶ್ನೆಗೆ, 'ಈ ಕುರಿತು ತನಿಖೆಗೆ ಎಸ್‌ಐಟಿ ರಚಿಸಿರುವುದು ಗಮನಕ್ಕೆ ಬಂದಿದೆ. ಎಸ್‌ಐಟಿ ತನಿಖೆ ಪೂರ್ಣಗೊಳ್ಳಲಿ. ಸತ್ಯಾಂಶ ಏನು ಎಂಬುದು ಹೊರಬರಲಿ' ಎಂದರು.

4ನೇ ಪುಟ ನೋಡಿ

ಆರೋಪಗಳೇನು?

- ಲೈಂಗಿಕ ಕಿರುಕುಳ (ಐಪಿಸಿ ಸೆಕ್ಷನ್ 354 (ಎ)
- ಮಹಿಳೆಯನ್ನು ಹಿಂಬಾಲಿಸುವುದು (ಐಪಿಸಿ-354 (ಡಿ)
- ಜೀವ ಬೆದರಿಕೆ (ಐಪಿಸಿ 506)
- ಮಹಿಳೆಯ ಮಾನಹಾನಿ (ಐಪಿಸಿ 509)

ತನಿಖೆ ಆರಂಭಿಸಿದ ಎಸ್‌ಐಟಿ

ಗೃಹ ಇಲಾಖೆ ಆದೇಶ ಹೊರಡಿಸಿದ ಬೆನ್ನಲ್ಲೇ ಪ್ರಜ್ವಲ್ ರೇವಣ್ಣ ವಿರುದ್ಧದ ಆರೋಪಗಳ ಕುರಿತು ವಿಶೇಷ ತನಿಖಾ ತಂಡದ (ಎಸ್‌ಐಟಿ) ಅಧಿಕಾರಿಗಳು ತನಿಖೆ ಆರಂಭಿಸಿದ್ದಾರೆ. ಹಿರಿಯ ಅಧಿಕಾರಿಗಳ ತಂಡವೊಂದು ಭಾನುವಾರವೇ ಹಾಸನ ಜಿಲ್ಲೆಗೆ ತೆರಳಿದೆ.

ಸಿಐಡಿಯ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಬಿ.ಕೆ.ಸಿಂಗ್ ಅವರನ್ನು ಎಸ್‌ಐಟಿಯ ಮುಖ್ಯಸ್ಥರಾಗಿ ನೇಮಿಸಲಾಗಿದೆ.

4ನೇ ಪುಟ ನೋಡಿ

ಓಟ– ನೋಟ ಬೆಂಗಳೂರಿನಲ್ಲಿ ಭಾನುವಾರ ನಡೆದ ಟಿಸಿಎಸ್ ವಿಶ್ವ ಟೆನ್ ಕೆ ಓಟದಲ್ಲಿ ಪಾಲ್ಗೊಂಡ ವಿವಿಧ ದೇಶಗಳ ಅಥ್ಲೀಟ್‌ಗಳು ವಿಧಾನಸೌಧದ ಮುಂದೆ ಸಾಗಿದರು -ಪ್ರಜಾವಾಣಿ ಚಿತ್ರ/ ರಂಜು ಪಿ

ಸಿಇಟಿ: ಪಠ್ಯಕ್ಕೆ ಹೊರತಾದ ಪ್ರಶ್ನೆ ಕೈಬಿಡಲು ತೀರ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕಾಗಿ ನಡೆದಿದ್ದ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು (ಸಿಇಟಿ) ಮತ್ತೆ ನಡೆಸುವ ಬದಲು, ಪಠ್ಯಕ್ಕೆ ಹೊರತಾದ ಪ್ರಶ್ನೆಗಳನ್ನು ಮೌಲ್ಯಮಾಪನ ಪ್ರಕ್ರಿಯೆಯಿಂದ ಕೈಬಿಡಲು ಉನ್ನತ ಶಿಕ್ಷಣ ಇಲಾಖೆಯು ನಿರ್ಧರಿಸಿದೆ.

ಪಠ್ಯಕ್ಕೆ ಹೊರತಾದ ಪ್ರಶ್ನೆಗಳು ಎಷ್ಟು ಸೇರಿವೆ ಎನ್ನುವ ಮಾಹಿತಿ ನೀಡಲು ವಿಷಯವಾರು ತಲಾ ಮೂವರು ತಜ್ಞರಿದ್ದ ನಾಲ್ಕು ಸಮಿತಿಗಳನ್ನು ರಚಿಸಲಾಗಿತ್ತು. ಈ ಸಮಿತಿ ನೀಡಿದ್ದ ವರದಿಯನ್ನು ಆಧರಿಸಿ ಇಲಾಖೆ ಈ ಕ್ರಮ ತೆಗೆದುಕೊಂಡಿದೆ.

ವಿದ್ಯಾರ್ಥಿಗಳ ಹಿತಾಸಕ್ತಿಯನ್ನು ಗಮನದಲ್ಲಿಟ್ಟು, 2023-24ರ ಪಠ್ಯಕ್ರಮದಿಂದ ಹೊರತಾದ ಪ್ರಶ್ನೆಗಳನ್ನು ಮೌಲ್ಯಮಾಪನದಿಂದ ಕೈಬಿಟ್ಟು, ಉಳಿದ ಪ್ರಶ್ನೆಗಳನ್ನು ಮಾತ್ರ ಪರಿಗಣಿಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ (ಕೆಇಎ) ನಿರ್ದೇಶನ ನೀಡಲಾಗಿದೆ ಎಂದು ಉನ್ನತ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಎಂ.ಎಸ್.ಶ್ರೀಕರ್ ತಿಳಿಸಿದ್ದಾರೆ.

ಕೆಇಎ ಏ.18 ಮತ್ತು 19ರಂದು ಸಿಇಟಿ ನಡೆಸಿತ್ತು. ಪರೀಕ್ಷೆಯಲ್ಲಿ ಭೌತವಿಜ್ಞಾನ ವಿಷಯದ 9, ರಸಾಯನ ವಿಜ್ಞಾನ ಮತ್ತು ಗಣಿತ ವಿಷಯದ ತಲಾ 15, ಜೀವವಿಜ್ಞಾನ ವಿಷಯದ 11 ಪ್ರಶ್ನೆಗಳು ಪಠ್ಯಕ್ಕೆ ಹೊರತಾಗಿದ್ದವು ಎಂದೂ ತಿಳಿಸಿದ್ದಾರೆ.

ಪಿಯುಸಿ–2 ಮತ್ತು ಪಿಯುಸಿ–3 ಪರೀಕ್ಷೆಗಳು, ಕಾಮೆಡ್‌-ಕೆ, ಜೆಇಇ ಮುಖ್ಯಪರೀಕ್ಷೆ, ನೀಟ್ ಸೇರಿ ವಿವಿಧ ಪರೀಕ್ಷೆಗಳು ಮೇ ಮತ್ತು ಜೂನ್ ತಿಂಗಳಲ್ಲಿ ನಡೆಯಲಿವೆ. ಸಿಇಟಿ ಮರು ಪರೀಕ್ಷೆ ನಡೆಸಿದರೆ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಹೊರೆಯ ಜೊತೆಗೆ, ವೃತ್ತಿಪರ ಕೋರ್ಸ್‌ಗಳ ಶೈಕ್ಷಣಿಕ ವೇಳಾಪಟ್ಟಿಯ ಮೇಲೂ ಪರಿಣಾಮ ಬೀರಲಿದೆ. ಹೀಗಾಗಿ ಮರು ಪರೀಕ್ಷೆ ನಡೆಸದಿರಲು ತೀರ್ಮಾನಿಸಲಾಗಿದೆ ಎಂದೂ ವಿವರಿಸಿದ್ದಾರೆ.

ಮುಖ್ಯಾಂಶಗಳು

- ಪಠ್ಯದ ಹೊರತಾದ ಪ್ರಶ್ನೆಗಳ ಪಟ್ಟಿ ಕೆಇಎ ವೆಬ್‌ಸೈಟ್‌ನಲ್ಲಿ ಪ್ರಕಟವಾಗಲಿದೆ
- ಪ್ರಶ್ನೆಪತ್ರಿಕೆ ತಯಾರಿಸಲು ಎಸ್‌ಒಪಿ ರೂಪಿಸಲು ಕೆಇಎಗೆ ನಿರ್ದೇಶನ

17 ಜಿಲ್ಲೆಗಳಲ್ಲಿ ಬಿಸಿ ಗಾಳಿ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಸೋಮವಾರದಿಂದ ನಾಲ್ಕು ದಿನ ಬಿಸಿ ಗಾಳಿ ಹೆಚ್ಚಾಗುವ ಸಾಧ್ಯತೆಯಿದ್ದು, ಹವಾಮಾನ ಇಲಾಖೆಯು 17 ಜಿಲ್ಲೆಗಳಿಗೆ ಶಾಖಾಘಾತದ ಮುನ್ಸೂಚನೆ ನೀಡಿದೆ.

ಬೀದರ್, ಕಲಬುರಗಿ, ವಿಜಯಪುರ, ಯಾದಗಿರಿ, ರಾಯಚೂರು, ಬಾಗಲಕೋಟೆ, ಬೆಳಗಾವಿ, ಗದಗ, ಹಾವೇರಿ, ಕೊಪ್ಪಳ, ಬಳ್ಳಾರಿ, ವಿಜಯನಗರ, ದಾವಣಗೆರೆ, ಚಿತ್ರದುರ್ಗ, ತುಮಕೂರು, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗೆ 'ಆರೆಂಜ್ ಅಲರ್ಟ್' ನೀಡಲಾಗಿದೆ. ಈ ಜಿಲ್ಲೆಗಳಲ್ಲಿ ಶಾಖದ ಅಲೆಗಳು ಹೆಚ್ಚಾಗುವ ಸಾಧ್ಯತೆ ಇದೆ ಎಂದು ಇಲಾಖೆ ತಿಳಿಸಿದೆ.

ರಾಜ್ಯದಾದ್ಯಂತ ಮುಂದಿನ ಒಂದು ವಾರ ಒಣಹವೆ ಇರುವ ಸಂಭವವಿದೆ. ಮುಂದಿನ ಐದು ದಿನ ಗರಿಷ್ಠ ತಾಪಮಾನ 2ರಿಂದ 3 ಡಿಗ್ರಿ ಸೆಲ್ಸಿಯಸ್ ಏರುವ ಸಾಧ್ಯತೆಯಿದೆ. ಮೇ 2ರವರೆಗೆ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಬಿಸಿ ವಾತಾವರಣವಿರುವ ಸಂಭವವಿದೆ ಎಂದು ಇಲಾಖೆ ಹೇಳಿದೆ.

11ನೇ ಪುಟ ನೋಡಿ

ಆರ್ಚರಿ: ಭಾರತ ಪುರುಷರ ತಂಡಕ್ಕೆ ಚಿನ್ನದ ಪದಕ

ಶಾಂಘೈ (ಪಿಟಿಐ): ಧೀರಜ್ ಬೊಮ್ಮದೇವರ, ತರುಣ್ ದೀಪ್ ರಾಯ್ ಮತ್ತು ಪ್ರವೀಣ್ ಜಾಧವ್ ಅವರನ್ನೊಳಗೊಂಡ ಭಾರತ ಪುರುಷರ ರಿಕರ್ವ್ ತಂಡವು ಹಾಲಿ ಒಲಿಂಪಿಕ್ಸ್ ಚಾಂಪಿಯನ್ ದಕ್ಷಿಣ ಕೊರಿಯಾವನ್ನು ಮಣಿಸಿ ಆರ್ಚರಿ ವಿಶ್ವಕಪ್‌ನಲ್ಲಿ ಚಿನ್ನದ ಪದಕ ಜಯಿಸಿದೆ. 14 ವರ್ಷಗಳ ನಂತರ ಭಾರತ ಐತಿಹಾಸಿಕ ಸಾಧನೆ ಮಾಡಿದೆ.

ಕೊರಿಯಾ ವಿರುದ್ಧದ ಈ ಗೆಲುವಿನಿಂದಾಗಿ ಭಾರತಕ್ಕೆ ಮುಂಬರುವ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯುವ ಅವಕಾಶ ಹೆಚ್ಚಿಸಿದೆ. ಧೀರಜ್, ತರುಣ್ ಮತ್ತು ಪ್ರವೀಣ್ ಅವರನ್ನೊಳಗೊಂಡ ತಂಡ ಒಂದು ಸೆಟ್ ಕೂಡ ಕಳೆದುಕೊಳ್ಳದೆ ಪ್ರಬಲ ಕೊರಿಯಾವನ್ನು ಮಣಿಸಿತು.

'ಮಂಗಳಸೂತ್ರ ಧರಿಸದ ಪ್ರಿಯಾಂಕಾ'

ಭೋಪಾಲ್ (ಪಿಟಿಐ): ಮಧ್ಯಪ್ರದೇಶದ ಮುಖ್ಯಮಂತ್ರಿ ಮೋಹನ್ ಯಾದವ್ ಅವರು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಿರುದ್ಧ ವಾಗ್ದಾಳಿ ನಡೆಸಿದ್ದು, 'ತಮ್ಮ ಕುಟುಂಬದಲ್ಲಿ ಹುಟ್ಟಿದ ಮೊಮ್ಮಗಳು 'ಮಂಗಳಸೂತ್ರ'ವನ್ನೂ ಧರಿಸದಿರುವುದಕ್ಕೆ ಮಾಜಿ ಪ್ರಧಾನಿ ಜವಾಹರ ಲಾಲ್ ನೆಹರೂ ಅವರ ಆತ್ಮ ಕಣ್ಣೀರು ಹಾಕುತ್ತಿರಬಹುದು' ಎಂದರು.

ಗುನಾ ಲೋಕಸಭಾ ಕ್ಷೇತ್ರದಲ್ಲಿ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ಪ್ರಧಾನಿ ಮೋದಿ ಅವರ 'ಮಂಗಳ ಸೂತ್ರ' ಹೇಳಿಕೆಗೆ ಪ್ರತಿಕ್ರಿಯಿಸುತ್ತಾ ಪ್ರಿಯಾಂಕಾ ಅವರು, 'ನನ್ನ ತಾಯಿ ದೇಶಕ್ಕಾಗಿ ಮಂಗಳಸೂತ್ರ ತ್ಯಾಗ ಮಾಡಿದ್ದರು' ಎಂದು ಹೇಳಿದ್ದರು.

'ರಾಜ–ಮಹಾರಾಜರಿಗೆ ನಿಂದನೆ'

'ಬಿಜೆಪಿ ವಿಜಯ ಸಂಕಲ್ಪ ಸಮಾವೇಶ'ದಲ್ಲಿ ಕಾಂಗ್ರೆಸ್ ವಿರುದ್ಧ ಮೋದಿ ಆರೋಪ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ರಾಜ, ಮಹಾರಾಜರನ್ನು ನಿಂದಿಸುವ ಕಾಂಗ್ರೆಸ್‌ನವರು ಸುಲ್ತಾನ, ನವಾಬ್, ನಿಜಾಮರ ಆಳ್ವಿಕೆಯನ್ನು ಕಿಂಚಿತ್ತೂ ಟೀಕಿಸಲ್ಲ. ಸ್ವಾತಂತ್ರ್ಯ ಪೂರ್ವದಿಂದಲೂ ಮುಂದುವರಿಸಿರುವ ತುಷ್ಟೀಕರಣ ನೀತಿಯನ್ನು ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲೂ ತೋರ್ಪಡಿಸಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಆರೋಪಿಸಿದರು.

ಲೋಕಸಭಾ ಚುನಾವಣೆಯ ಪ್ರಚಾರದ ಭಾಗವಾಗಿ ನಗರದಲ್ಲಿ ಭಾನುವಾರ ನಡೆದ 'ಬಿಜೆಪಿ ವಿಜಯ ಸಂಕಲ್ಪ ಸಮಾವೇಶ'ದಲ್ಲಿ ಮಾತನಾಡಿದ ಅವರು, 'ಛತ್ರಪತಿ ಶಿವಾಜಿ ಮಹಾರಾಜ, ಕಿತ್ತೂರು ರಾಣಿ ಚನ್ನಮ್ಮ, ಮೈಸೂರು ದೊರೆಗಳ ಕೊಡುಗೆ ಕಾಂಗ್ರೆಸ್‌ನವರಿಗೆ ಕಾಣಿಸುವುದಿಲ್ಲ. ಬನಾರಸ್ ರಾಜರು ಬನಾರಸ್ ಹಿಂದೂ ವಿಶ್ವವಿದ್ಯಾಲಯ ಕಟ್ಟಿದರು. ಅಹಲ್ಯಾಬಾಯಿ ಹೋಳ್ಕರ್ ಅವರಂಥ ರಾಣಿಯರು ದೇವಾಲಯಗಳನ್ನು ರಕ್ಷಿಸಿದರು. ಬರೋಡಾದ ಗಾಯಕವಾಡ ರಾಜರು ಡಾ.ಬಿ.ಆರ್. ಅಂಬೇಡ್ಕರ್ ಅವರನ್ನು ಶಿಕ್ಷಣಕ್ಕಾಗಿ ವಿದೇಶಕ್ಕೆ ಕಳಿಸದೇ ಇದ್ದಿದ್ದರೆ ಇಂದು ಈ ದೇಶವನ್ನು ಹೀಗೆ ನೋಡಲು ಸಾಧ್ಯವಿತ್ತೇ? ಇಂಥ ರಾಜರನ್ನು ನಿಂದಿಸಿ, ದೇಶದ ಪರಂಪರೆಯನ್ನೇ ಅವಮಾನಿಸಿದ್ದಾರೆ' ಎಂದರು.

'ಔರಂಗಜೇಬನಂಥ ಅದೆಷ್ಟೋ ಸುಲ್ತಾನರು ದೇಶದಲ್ಲಿ ಅತ್ಯಾಚಾರ ಎಸಗಿದರು. ಸಂಪತ್ತು ಲೂಟಿ ಮಾಡಿದರು. ದೇವಾಲಯ, ಪ್ರಾರ್ಥನಾ ಸ್ಥಳಗಳನ್ನು ಧ್ವಂಸ ಮಾಡಿದರು. ಇದ್ಯಾವುದನ್ನೂ ಕಾಂಗ್ರೆಸ್ ಪ್ರಸ್ತಾಪಿಸಲ್ಲ. ದೇಶ ವಿಭಜನೆಗೆ ಕಾರಣರಾದವರನ್ನು ಪ್ರಶ್ನಿಸಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮೋದಿ ಭಾನುವಾರ ಬೆಳಗಾವಿ, ಶಿರಸಿ, ದಾವಣಗೆರೆ, ಹೊಸಪೇಟೆಯಲ್ಲಿ ಪ್ರಚಾರ ಸಭೆಗಳಲ್ಲಿ ಪಾಲ್ಗೊಂಡು ಪಕ್ಷದ ಅಭ್ಯರ್ಥಿಗಳ ಪರ ಮತ ಯಾಚಿಸಿದರು.

ದಾವಣಗೆರೆಯಲ್ಲಿ ಭಾನುವಾರ ಲೋಕಸಭಾ ಚುನಾವಣಾ ಪ್ರಚಾರ ಸಭೆಯಲ್ಲಿ ಪಾಲ್ಗೊಂಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರು ಅಭಿಮಾನಿಗಳತ್ತ ಕೈಬೀಸಿದರು. ಚಿತ್ರದುರ್ಗ ಕ್ಷೇತ್ರದ ಅಭ್ಯರ್ಥಿ ಗೋವಿಂದ ಕಾರಜೋಳ, ಸಂಸದ ಜಿ.ಎಂ ಸಿದ್ದೇಶ್ವರ ಹಾಗೂ ಹಾವೇರಿ ಕ್ಷೇತ್ರದ ಅಭ್ಯರ್ಥಿ ಬಸವರಾಜ ಬೊಮ್ಮಾಯಿ, ದಾವಣಗೆರೆ ಕ್ಷೇತ್ರದ ಅಭ್ಯರ್ಥಿ ಗಾಯಿತ್ರಿ ಸಿದ್ದೇಶ್ವರ ಹಾಗೂ ಇತರರು ಇದ್ದಾರೆ –ಪ್ರಜಾವಾಣಿ ಚಿತ್ರ/ ಸತೀಶ ಬಡಿಗೇರ್

ಸುಳ್ಳು ಹೇಳುವ ಮೋದಿಗೆ ನಾಚಿಕೆಯೇ ಇಲ್ಲ: ಸಿದ್ದರಾಮಯ್ಯ

ಉಗಾರ ಖುರ್ದ (ಬೆಳಗಾವಿ ಜಿಲ್ಲೆ): 'ಬರೀ ಸುಳ್ಳು ಹೇಳುವ ನರೇಂದ್ರ ಮೋದಿ ಅವರಿಗೆ ನಾಚಿಕೆಯೇ ಆಗುವುದಿಲ್ಲ. ಬಾಯಿ ಬಿಟ್ಟರೆ ಹಸಿ ಸುಳ್ಳುಗಳೇ ಹೊರಬರುತ್ತವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಧಾನಿ ಮೋದಿ ಅವರಿಗೆ ತಿರುಗೇಟು ನೀಡಿದ್ದಾರೆ.

ಕಾಗವಾಡ ತಾಲ್ಲೂಕಿನ ಉಗಾರ ಖುರ್ದ ಗ್ರಾಮದಲ್ಲಿ ಭಾನುವಾರ ಅಭ್ಯರ್ಥಿ ಪ್ರಿಯಾಂಕಾ ಜಾರಕಿಹೊಳಿ ಪರ ಚುನಾವಣಾ ಪ್ರಚಾರ ಸಮಾವೇಶದಲ್ಲಿ ಮಾತನಾಡಿದ ಅವರು, 'ರಾಣಿ ಚನ್ನಮ್ಮ, ಛತ್ರಪತಿ ಶಿವಾಜಿಯನ್ನು ಕಾಂಗ್ರೆಸ್‌ನವರು ಅವಮಾನಿಸಿದ್ದಾರೆ ಎಂದು ಮೋದಿ ಬೆಳಗಾವಿಯಲ್ಲಿ ಹೇಳಿದ್ದಾರೆ. ಇದು ಅತ್ಯಂತ ಕೆಟ್ಟ ಸುಳ್ಳು. ನಾವು ಯಾವತ್ತೂ ಅವಮಾನಿಸಿಲ್ಲ. ದೇಶದ ಪ್ರಧಾನಿಯಾಗಿ ಇಂಥ ಸುಳ್ಳು ಹೇಳಬಹುದಾ' ಎಂದು ಪ್ರಶ್ನಿಸಿದರು.

'ಸತ್ಯವೇನೆಂದರೆ ಚನ್ನಮ್ಮ ಜಯಂತಿ ಆಚರಣೆ ಆರಂಭಿಸಿದ್ದೇ ಸಿದ್ದರಾಮಯ್ಯ ಸರ್ಕಾರ. ಯಡಿಯೂರಪ್ಪ, ಬೊಮ್ಮಾಯಿ ಯಾರೂ ಮಾಡಿಲ್ಲ' ಎಂದರು.

4ನೇ ಪುಟ ನೋಡಿ

ಸಾಲದ ಆ್ಯಪ್‌ಗಳಿಂದ ವಂಚನೆ: ಸಾಕ್ಷ್ಯಗಳ ಕೊರತೆ- ಪೊಲೀಸರಿಗೆ ಸವಾಲು

ಪತ್ತೆಯಾಗದ ಶೇ 36ರಷ್ಟು ಪ್ರಕರಣ

● ಪ್ರಜ್ವಲ್ ಡಿಸೋಜಾ

ಬೆಂಗಳೂರು: ಸಾಲದ ಆ್ಯಪ್‌ಗಳ ವಂಚನೆಗೆ ಸಂಬಂಧಿಸಿದಂತೆ ದಾಖಲಾಗಿರುವ ಪ್ರಕರಣಗಳ ಪೈಕಿ ಶೇ 36ರಷ್ಟರಲ್ಲಿ ಆರೋಪಿಗಳ ಪತ್ತೆಗೆ ಸಾಕ್ಷ್ಯಗಳ ಕೊರತೆ ಉಂಟಾಗಿದ್ದು, ಪ್ರಕರಣಗಳನ್ನು ಭೇದಿಸುವುದು ಪೊಲೀಸರಿಗೆ ಸವಾಲಾಗಿದೆ.

ಆನ್‌ಲೈನ್ ಮೂಲಕ ಸಾಲ ನೀಡುವ ಆ್ಯಪ್ ಕಂಪನಿಗಳ ವಿರುದ್ಧ ದಾಖಲಾಗಿರುವ ಪ್ರಕರಣಗಳ ಅಂಕಿ–ಅಂಶವನ್ನು ಪೊಲೀಸರು ಸಿದ್ಧಪಡಿಸಿದ್ದಾರೆ.

'2020ರಿಂದ 2023ರವರೆಗೆ ಒಟ್ಟು 1,011 ಪ್ರಕರಣಗಳು ದಾಖಲಾಗಿವೆ. ಈ ಪೈಕಿ, 372 ಪ್ರಕರಣಗಳಲ್ಲಿ ಆರೋಪಿಗಳು ಪತ್ತೆಯಾಗಿಲ್ಲ. 84 ಪ್ರಕರಣಗಳಲ್ಲಿ ಕೃತ್ಯದ ಪುರಾವೆಗಳು

ಲಭ್ಯ ಇಲ್ಲವೆಂದು ಪೊಲೀಸರು ನ್ಯಾಯಾಲಯಕ್ಕೆ ತಿಳಿಸಿದ್ದಾರೆ' ಎಂದು ಮೂಲಗಳು ಹೇಳಿವೆ.

'ಉಳಿದಂತೆ 422 ಪ್ರಕರಣಗಳ ಮರು ವಿಚಾರಣೆಗೆ ಪೊಲೀಸರು ನ್ಯಾಯಾಲಯದಿಂದ ಅನುಮತಿ ಪಡೆದುಕೊಂಡಿದ್ದಾರೆ. 19 ಪ್ರಕರಣಗಳ ವಿಚಾರಣೆ ಬಾಕಿ ಇದೆ. ಉಳಿದ 114 ಪ್ರಕರಣಗಳ ತನಿಖೆ ಪ್ರಗತಿಯಲ್ಲಿದೆ' ಎಂದು ಮೂಲಗಳು ತಿಳಿಸಿವೆ.

'ಹೊರ ದೇಶಗಳ ಸರ್ವರ್'

'ಬಹುತೇಕ ಆ್ಯಪ್‌ಗಳ ನಿರ್ವಹಣೆಯನ್ನು ಹೊರ ದೇಶದ ಪ್ರಜೆಗಳು ನಿರ್ವಹಿಸುತ್ತಿದ್ದಾರೆ. ತಮ್ಮದೇ ಸರ್ವರ್‌ಗಳನ್ನು ಬಳಸುತ್ತಿದ್ದಾರೆ. ಆರೋಪಿಗಳನ್ನು ಪತ್ತೆ ಮಾಡಲು ಅವರು ಯಾವುದೇ ಮಾಹಿತಿ ನೀಡುತ್ತಿಲ್ಲ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

'ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡುವ ಆಮಿಷವೊಡ್ಡಿ ಆ್ಯಪ್‌ನವರು ಸಾಲ ಕೊಡುತ್ತಿದ್ದು, ದುಪ್ಪಟ್ಟು ಬಡ್ಡಿ ವಸೂಲಿ ಮಾಡುತ್ತಿದ್ದಾರೆ. ಮರುಪಾವತಿ ಮಾಡದಿದ್ದರೆ, ಖಾಸಗಿ ಫೋಟೊ, ವಿಡಿಯೊ ಇಟ್ಟುಕೊಂಡು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾರೆ. ಇದರಿಂದ ನೊಂದ ಹಲವರು ಠಾಣೆಗೆ ದೂರು ನೀಡಿದ್ದಾರೆ. ಅಂತರರಾಷ್ಟ್ರೀಯ ನಿಯಮಗಳಿಂದಾಗಿ ಆರೋಪಿಗಳನ್ನು ಪತ್ತೆ ಮಾಡುವುದು ಕಷ್ಟವಾಗುತ್ತಿದೆ' ಎಂದರು.

ಬ್ಯಾಂಕ್‌ಗಳ ಜೊತೆ ಸಭೆ: ಬೆಂಗಳೂರು ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ್ ಅವರು ಸಾಲದ ಆ್ಯಪ್‌ಗಳಿಗೆ ಕಡಿವಾಣ ಹಾಕಲು ಸಾಕಷ್ಟು ಕ್ರಮಗಳನ್ನು ಕೈಗೊಂಡಿದ್ದಾರೆ. ಬ್ಯಾಂಕ್ ಅಧಿಕಾರಿಗಳ ಜೊತೆ ಪ್ರತಿ ತಿಂಗಳು ಸಭೆ ನಡೆಸುತ್ತಿರುವ ಅವರು, ಆ್ಯಪ್ ಕಂಪನಿಗಳ ಖಾತೆಗಳ ಬಗ್ಗೆ ನಿಗಾ ವಹಿಸುವಂತೆ ಸೂಚಿಸುತ್ತಿದ್ದಾರೆ. ಅನುಮಾನಾಸ್ಪದ ವಹಿವಾಟುಗಳು ಕಂಡುಬಂದರೆ, ಮಾಹಿತಿ ನೀಡುವಂತೆ ಕೋರಿರುವುದಾಗಿಯೂ ಗೊತ್ತಾಗಿದೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ

SADGURU AYURVEDA

ಪರಿಪೂರ್ಣ ಸ್ನಾನಕ್ಕೆ ಬಳಸಿ

ಪರಿಶುದ್ಧ ಕಡಲೆಹಿಟ್ಟಿನೊಂದಿಗೆ ತಯಾರಿಸಲಾದ

ಸದ್ಗುರು ಆಯುರ್ವೇದ

ಗ್ರಾಮ್ ಫ್ಲೋರ್ ಸೋಪ್

ಈಗ ಚಿಕ್ಕ ಪ್ಯಾಕ್‌ನಲ್ಲಿ ಲಭ್ಯ ಬೆಲೆ ರೂ. 10/- (25ಗ್ರಾಂ)

ಎಲ್ಲಾ ಕಿರಾಣಿ ಅಂಗಡಿ,ಮೆಡಿಕಲ್ ಸ್ಟೋರ್ಸ್,ಸೂಪರ್ ಮಾರ್ಕೆಟ್ ಹಾಗು ಫ್ಯಾನ್ಸಿ ಸ್ಟೋರ್‌ಗಳಲ್ಲಿ ದೊರೆಯುತ್ತದೆ.

For Online shopping-www.sadguruayurveda.com For Queries.:8970703070

ಆಸ್ತಿ ಜಪ್ತಿಗೆ ಬ್ಯಾಂಕ್ ನೋಟಿಸ್: ಠಾಣೆಗೆ ದೂರು ನೀಡಿದ ಲ್ಯಾಂಗ್‌ಫೋರ್ಡ್ ರಸ್ತೆಯ ಫ್ಲ್ಯಾಟ್ ಭೋಗ್ಯದಾರ

₹40 ಲಕ್ಷ ಭೋಗ್ಯದ ಹಣ ಪಡೆದು ವಂಚನೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಫ್ಲ್ಯಾಟ್ ಮೇಲೆ ಸಾಲ ಪಡೆದಿದ್ದ ಮಾಲೀಕ ಅಲೀಮುದ್ದೀನ್
- ಅದೇ ಫ್ಲ್ಯಾಟ್‌ಅನ್ನು ಭೋಗ್ಯಕ್ಕೆ ಪಡೆದಿದ್ದವರಿಗೆ ಸಂಕಷ್ಟ

ಅಪರಾಧ ಸುದ್ದಿ

ಬೆಂಗಳೂರು: ಫ್ಲ್ಯಾಟ್ ಮೇಲಿನ ಲಕ್ಷಾಂತರ ರೂಪಾಯಿ ಸಾಲ ಮರುಪಾವತಿ ಮಾಡದ ಮಾಲೀಕ, ಅದೇ ಫ್ಲ್ಯಾಟ್ ಅನ್ನು ಮತ್ತೊಬ್ಬರಿಗೆ ₹40 ಲಕ್ಷ ಬೆಲೆಗೆ ಭೋಗ್ಯಕ್ಕೆ ನೀಡಿ ವಂಚಿಸಿರುವ ಬಗ್ಗೆ ಅಶೋಕನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಲ್ಯಾಂಗ್‌ಫೋರ್ಡ್ ರಸ್ತೆಯ ರೋಹನ್ ಎಂಬುವವರು ವಂಚನೆಗೆ ಸಂಬಂಧಪಟ್ಟಂತೆ ನ್ಯಾಯಾಲಯದಲ್ಲಿ ಖಾಸಗಿ ಮೊಕದ್ದಮೆ ಹೂಡಿದ್ದರು. ನ್ಯಾಯಾಲಯ ನೀಡಿರುವ ನಿರ್ದೇಶನದಂತೆ, ಫ್ಲ್ಯಾಟ್ ಮಾಲೀಕನಾಗಿರುವ ಆರೋಪಿ ಮೊಹಮ್ಮದ್ ಅಲೀಮುದ್ದೀನ್ (32) ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ದಾಖಲೆಗಳನ್ನು ಪರಿಶೀಲಿಸಿ ಮುಂದಿನ ಕ್ರಮ ಜರುಗಿಸಲಾಗುವುದು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಹೈದರಾಬಾದ್‌ನ ಉದ್ಯಮಿ ಅಲೀಮುದ್ದೀನ್, ಲ್ಯಾಂಗ್‌ಫೋರ್ಡ್ ರಸ್ತೆಯ ಬೈಡ್ ಸ್ಟ್ರೀಟ್‌ನಲ್ಲಿರುವ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರಲ್ಲಿ ಫ್ಲ್ಯಾಟ್ ಖರೀದಿಸಿದ್ದರು. ಅದೇ ಫ್ಲ್ಯಾಟ್ ಅಡವಿಟ್ಟು ಎಸ್‌ಬಿಐನಲ್ಲಿ (ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ) ಸಾಲ ಪಡೆದಿದ್ದರು. ನಿಗದಿತ ಸಮಯದಲ್ಲಿ ಕಂತು ಪಾವತಿ ಮಾಡುತ್ತಿರಲಿಲ್ಲ. ಇದರ ನಡುವೆಯೇ ಅದೇ ಫ್ಲ್ಯಾಟ್ ಅನ್ನು ದೂರುದಾರ ರೋಹನ್ ಹಾಗೂ ಅವರ ಪತ್ನಿ ಹೆಸರಿಗೆ ಭೋಗ್ಯಕ್ಕೆ ನೀಡಿದ್ದರು. ಅವರಿಂದ ಹಂತ ಹಂತವಾಗಿ ₹40 ಲಕ್ಷ ಪಡೆದುಕೊಂಡಿದ್ದರು' ಎಂದು ತಿಳಿಸಿವೆ.

'ಭೋಗ್ಯದ ಹಣ ಪಡೆದಿರುವ ಅಲೀಮುದ್ದೀನ್, ನಗರದಿಂದ ಪರಾರಿಯಾಗಿದ್ದಾರೆ. ಅವರು ಎಲ್ಲಿದ್ದಾರೆ ಎಂಬ ಮಾಹಿತಿ ಲಭ್ಯವಾಗಿಲ್ಲ. ಇದರ ನಡುವೆಯೇ ಎಸ್‌ಬಿಐ ಅಧಿಕಾರಿಗಳು, ಫ್ಲ್ಯಾಟ್ ಜಪ್ತಿ ಮಾಡಲು ಹಲವು ಬಾರಿ ನೋಟಿಸ್ ನೀಡಿದ್ದರು. ಅದಕ್ಕೆ ಅಲೀಮುದ್ದೀನ್ ಯಾವುದೇ ಉತ್ತರ ನೀಡಿರಲಿಲ್ಲ. ಹೀಗಾಗಿ, ಆಸ್ತಿ ಜಪ್ತಿ ಮಾಡಲು ಬ್ಯಾಂಕ್ ಅಧಿಕಾರಿಗಳು ನ್ಯಾಯಾಲಯದಿಂದ ಆದೇಶ ಪಡೆದುಕೊಂಡಿರುವುದಾಗಿ ಗೊತ್ತಾಗಿದೆ' ಎಂದು ಹೇಳಿವೆ.

'ಆಸ್ತಿ ಜಪ್ತಿ ಮಾಡಲೆಂದು ಬ್ಯಾಂಕ್ ಅಧಿಕಾರಿಗಳು ಫ್ಲ್ಯಾಟ್ ಬಳಿ ಬಂದಿದ್ದಾಗಲೇ ದೂರುದಾರರಿಗೆ ವಿಷಯ ಗೊತ್ತಾಗಿದೆ. ಈ ಬಗ್ಗೆ ವಿಚಾರಿಸಲು ಕರೆ ಮಾಡಿದರೂ ಅಲೀಮುದ್ದೀನ್ ಲಭ್ಯವಾಗಿಲ್ಲ. ಲಕ್ಷಾಂತರ ರೂಪಾಯಿ ಸಾಲ ಬಾಕಿ ಇರುವ ಮಾಹಿತಿಯನ್ನು ಮುಚ್ಚಿಟ್ಟಿದ್ದ ಅಲೀಮುದ್ದೀನ್, ಭೋಗ್ಯದ ಹೆಸರಿನಲ್ಲ ವಂಚಿಸಿರುವುದಾಗಿ ದೂರುದಾರರು ಆರೋಪಿಸುತ್ತಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ತಾಯಿಯ ಅಶ್ಲೀಲ ಫೋಟೊ ಕಳುಹಿಸಿ ಬ್ಲ್ಯಾಕ್‌ಮೇಲ್

ಬೆಂಗಳೂರು: ಮಹಿಳೆಯೊಬ್ಬರ ಫೋಟೊವನ್ನು ಅಶ್ಲೀಲವಾಗಿ ಸೃಷ್ಟಿಸಿ ಅದನ್ನು ಅವರ ಮಗಳಿಗೆ ಕಳುಹಿಸಿ, ಯುವಕನೊಬ್ಬ ಬ್ಲ್ಯಾಕ್‌ಮೇಲ್ ಮಾಡುತ್ತಿರುವ ಬಗ್ಗೆ ಅಮೃತಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಠಾಣೆ ವ್ಯಾಪ್ತಿಯಲ್ಲಿ ವಾಸವಿರುವ 18 ವರ್ಷ ವಯಸ್ಸಿನ ಯುವತಿ ದೂರು ನೀಡಿದ್ದಾರೆ. ಅಪರಿಚಿತನ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಹೇಳಿದರು.

'ದೂರುದಾರ ಯುವತಿ, ಇನ್‌ಸ್ಟಾಗ್ರಾಂನಲ್ಲಿ ಖಾತೆ ಹೊಂದಿದ್ದಾರೆ. ಅವರ ಖಾತೆಗೆ 2023ರ ಸೆಪ್ಟೆಂಬರ್‌ನಲ್ಲಿ ಅಪರಿಚಿತ ವ್ಯಕ್ತಿಯಿಂದ ಸಂದೇಶ ಬಂದಿತ್ತು. ತಾಯಿಯ ಫೋಟೊವನ್ನು ಅಶ್ಲೀಲವಾಗಿ ಸೃಷ್ಟಿಸಿ ಕಳುಹಿಸಲಾಗಿತ್ತು. ಫೋಟೊ ಅಳಿಸಿ ಹಾಕುವಂತೆ ಯುವತಿ ಕೋರಿದ್ದರು. ಅದಕ್ಕೆ ಅಪರಿಚಿತ ಒಪ್ಪಿರಲಿಲ್ಲ.'

'ಯುವತಿಗೆ ಮತ್ತೆ ಸಂದೇಶ ಕಳುಹಿಸಿದ್ದ ಆರೋಪಿ, 'ನಿನ್ನ ನಗ್ನ ಫೋಟೊಗಳನ್ನು ಕಳುಹಿಸಬೇಕು. ಇಲ್ಲದಿದ್ದರೆ, ನಿನ್ನ ತಾಯಿಯ ಫೋಟೊವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡುತ್ತೇನೆ' ಎಂದು ಬೆದರಿಸಿದ್ದ. ತಾಯಿಯ ಮರ್ಯಾದೆ ಹೋದೀತೆಂದು ಹೆದರಿದ್ದ ಯುವತಿ, ತಮ್ಮ ನಗ್ನ ಫೋಟೊಗಳನ್ನು ಕಳುಹಿಸಿದ್ದರು. ಅದೇ ಫೋಟೊಗಳನ್ನು ಆರೋಪಿ ಹಲವರಿಗೆ ಕಳುಹಿಸಿದ್ದ. ಜೊತೆಗೆ ಬ್ಲ್ಯಾಕ್‌ಮೇಲ್ ಮಾಡಲಾರಂಭಿಸಿದ್ದ' ಎಂದು ಪೊಲೀಸರು ತಿಳಿಸಿದರು.

'ಆರೋಪಿಯ ಕಿರುಕುಳದಿಂದ ಬೇಸತ್ತ ಯುವತಿ, ಪೋಷಕರಿಗೆ ವಿಷಯ ತಿಳಿಸಿದ್ದರು. ನಂತರವೇ ಠಾಣೆಗೆ ಬಂದು ದೂರು ನೀಡಿದ್ದಾರೆ. ಅಪರಿಚಿತನನ್ನು ಪತ್ತೆ ಮಾಡಲಾಗುತ್ತಿದೆ' ಎಂದು ಹೇಳಿದರು.

ಹುಳಿಮಾವು ಕೋದಂಡರಾಮ ಬ್ರಹ್ಮ ರಥೋತ್ಸವ

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: ಬನ್ನೇರುಘಟ್ಟ ರಸ್ತೆಯ ಹುಳಿಮಾವು ಗ್ರಾಮದಲ್ಲಿರುವ ಇತಿಹಾಸ ಪ್ರಸಿದ್ಧ ಕೋದಂಡರಾಮ ಸ್ವಾಮಿ ದೇವರ ಬ್ರಹ್ಮರಥೋತ್ಸವ ಭಾನುವಾರ ಸಂಭ್ರಮದಿಂದ ನಡೆಯಿತು.

ಸಾವಿರಾರು ಸಂಖ್ಯೆಯಲ್ಲಿ ನೆರೆದಿದ್ದ ಭಕ್ತರು ತೇರಿಗೆ ಹಣ್ಣು-ದವನ ಎಸೆಯುವ ಮೂಲಕ ಧನ್ಯತಾಭಾವ ಮೆರೆದರು. ರಾಮ, ಲಕ್ಷ್ಮಣ, ಸೀತೆಯ ವಿಗ್ರಹಗಳನ್ನು ಹೊತ್ತ ರಥವನ್ನು ಡೊಳ್ಳು ಕುಣಿತ, ತಮಟೆ, ನಗಾರಿ, ವಾದ್ಯ ಮೇಳದೊಂದಿಗೆ ದೇವಸ್ಥಾನದ ಸುತ್ತ ಭಕ್ತರು ಎಳೆದು ಸಂಭ್ರಮಿಸಿದರು.

ರಥೋತ್ಸವಕ್ಕೂ ಮುನ್ನ ದೇವಾಲಯದಲ್ಲಿ ಆಡಳಿತ ಮಂಡಳಿ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಅರ್ಚಕರು ವಿಶೇಷ ಪೂಜೆ ಸಲ್ಲಿಸಿದರು. ನಂತರ ಕೃಷ್ಣ ಗಂಧೋತ್ಸವ, ಹೂವಿನ ಸೇವೆ, ಆಸ್ಥಾನ ಸೇವೆ, ಮಹಾಮಂಗಳಾರತಿ, ರಥ ಪ್ರತಿಷ್ಠೆ ನಡೆದವು. ಮಧ್ಯಾಹ್ನ ಮಂತ್ರಪುಷ್ಪ ಮಹಾ ಮಂಗಳಾರತಿ, ಹೂವಿನ ಸೇವೆ ಅದ ನಂತರ ಬ್ರಹ್ಮರಥೋತ್ಸವ ನಡೆಯಿತು.

ಕೇರಳದ ಚೆಂಡೆವಾದ್ಯ, ನಂದಿಧ್ವಜ ಕುಣಿತ, ಕೀಲುಕುದುರೆ, ಡೊಳ್ಳುಕುಣಿತ, ಬಾಣಬಿರುಸು, ಪಟ್ಟದ ಕುಣಿತ ವಿವಿಧ ಜಾನಪದ ಕಲಾ ತಂಡಗಳ ಪ್ರದರ್ಶನ ನೋಡುಗರ ಕಣ್ಮನ ಸೆಳೆದವು. ರಥೋತ್ಸವದಲ್ಲಿ ಭಾಗವಹಿಸುವ ಸಾವಿರಾರು ಭಕ್ತರ ದಾಹ ಮತ್ತು ಹಸಿವು ತಣಿಸಲು ಗ್ರಾಮಸ್ಥರು ಅಲ್ಲಲ್ಲಿ ಅರವಂಟಿಕೆಗಳನ್ನು ಹಾಕಿ ಅನ್ನದಾನ, ಕುಡಿಯುವ ನೀರು, ಮಜ್ಜಿಗೆ, ಪಾನಕ, ಕೋಸಂಬರಿ ವಿತರಣೆ ಮಾಡಿದರು.

ರಾತ್ರಿ 8 ಗಂಟೆಯಿಂದ ಬೆಳಗಿನ ಜಾವದವರೆಗೆ ಕೋದಂಡರಾಮಸ್ವಾಮಿ ದೇವರೊಂದಿಗೆ ಮುತ್ತುರಾಯ ಸ್ವಾಮಿ, ಆಂಜನೇಯಸ್ವಾಮಿ, ವಿನಾಯಕಸ್ವಾಮಿ, ಆಲದಮರದ ದೊಡ್ಡಮ್ಮದೇವಿ, ಶಂಭುಲಿಂಗೇಶ್ವರಸ್ವಾಮಿ, ವೆಂಕಟರಮಣಸ್ವಾಮಿ, ಸೋಮೇಶ್ವರ, ಶ್ರೀಕೃಷ್ಣದೇವರು ಸೇರಿದಂತೆ 50ಕ್ಕೂ ಹೆಚ್ಚು ದೇವರುಗಳ ಮೂರ್ತಿಗಳ ಮೆರವಣಿಗೆಯು ಹೂವಿನ ಪಲ್ಲಕ್ಕಿ ಹಾಗೂ ಮುತ್ತಿನ ಪಲ್ಲಕ್ಕಿಯಲ್ಲಿ ಹುಳಿಮಾವು ಬಡಾವಣೆಯ ರಾಜಬೀದಿಗಳಲ್ಲಿ ಸಾಗಿತು.

ಬನ್ನೇರುಘಟ್ಟ ರಸ್ತೆಯ ಹುಳಿಮಾವು ಗ್ರಾಮದ ಕೋದಂಡರಾಮಸ್ವಾಮಿ ದೇವರ ಬ್ರಹ್ಮರಥೋತ್ಸವ ಭಾನುವಾರ ವಿಜೃಂಭಣೆಯಿಂದ ನಡೆಯಿತು

ಸುದ್ದಿ 2 ನಿಮಿಷ

ಯುವತಿಯರಿಗೆ ಕಿರುಕುಳ ಪೊಲೀಸರ ಗಸ್ತು ಹೆಚ್ಚಳ

ಬೆಂಗಳೂರು: 'ನಗರದ ಹಲವು ಪ್ರದೇಶಗಳಲ್ಲಿ ಪೇಯಿಂಗ್ ಗೆಸ್ಟ್ (ಪಿ.ಜಿ.) ಕಟ್ಟಡದಲ್ಲಿ ವಾಸವಿರುವ ಯುವತಿಯರನ್ನು ಕಿಡಿಗೇಡಿಗಳು ಚುಡಾಯಿಸುತ್ತಿದ್ದಾರೆ. ಯುವತಿಯರು ರಸ್ತೆಯಲ್ಲಿ ಓಡಾಡಲು ಭಯಪಡುತ್ತಿದ್ದಾರೆ' ಎಂದು ಸಾರ್ವಜನಿಕರು ದೂರಿದರು.

ಬೆಂಗಳೂರು ಪೊಲೀಸ್ ಕಮಿಷನರೇಟ್ ವತಿಯಿಂದ ಅರಮನೆ ಮೈದಾನದ ಗಾಯತ್ರಿ ವಿಹಾರ ಸಾಗರ್ ಸಭಾಭವನದಲ್ಲಿ ಭಾನುವಾರ ಆಯೋಜಿಸಿದ್ದ ಮಾಸಿಕ ಜನಸಂಪರ್ಕ ಸಭೆಯಲ್ಲಿ ಪಾಲ್ಗೊಂಡಿದ್ದ ಸಾರ್ವಜನಿಕರು ತಮ್ಮ ಸಮಸ್ಯೆಗಳನ್ನು ಹೇಳಿಕೊಂಡರು.

'ಯುಕಿಡಿಗೇಡಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಪಿ.ಜಿ. ಕಟ್ಟಡಗಳು ಇರುವ ಪ್ರದೇಶಗಳಲ್ಲಿ ಪೊಲೀಸರ ಗಸ್ತು ಹೆಚ್ಚಿಸಬೇಕು' ಎಂದು ಸಾರ್ವಜನಿಕರು ಒತ್ತಾಯಿಸಿದರು. ದೂರು ಆಲಿಸಿದ ಕಮಿಷನರ್ ಬಿ. ದಯಾನಂದ್, 'ನಗರದ ಬಹುತೇಕ ಕಡೆ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಮುಂದಿನ ದಿನಗಳಲ್ಲಿ ಪೇಯಿಂಗ್ ಗೆಸ್ಟ್ ಕಟ್ಟಡಗಳು ಇರುವ ಪ್ರದೇಶಗಳಲ್ಲಿ ಪೊಲೀಸರ ಗಸ್ತು ಹೆಚ್ಚಿಸಲಾಗುವುದು' ಎಂದರು.

ಸಾರ್ವಜನಿಕರೊಬ್ಬರು, 'ವಸಂತನಗರ ಹಾಗೂ ಸುತ್ತಮುತ್ತಲಿನ ಹಲವು ರಸ್ತೆಗಳಲ್ಲಿ ಬೀದಿದೀಪಗಳು ಇಲ್ಲ. ರಾತ್ರಿ ಹೊತ್ತು ರಸ್ತೆಗಳಲ್ಲಿ ಕತ್ತಲು ಆವರಿಸುತ್ತಿದೆ. ಇಂಥ ರಸ್ತೆಗಳಲ್ಲಿ ನಡೆದುಕೊಂಡು ಹೋಗಲು ಭಯವಾಗುತ್ತಿದೆ' ಎಂದು ಸಮಸ್ಯೆ ಹೇಳಿಕೊಂಡರು.

ಕೇಂದ್ರ ವಿಭಾಗದ ಡಿಸಿಪಿ ಎಚ್. ಶೇಖರ್, ಸಂಚಾರ ವಿಭಾಗದ ಡಿಸಿಪಿ ಅನಿತಾ ಹದ್ದಣ್ಣನವರ ಹಾಜರಿದ್ದರು.

ಸಹಾಯಕ ಪರೀಕ್ಷೆ: ಬೆರಳಚ್ಚಿನಿಂದ ಸಿಕ್ಕಿಬಿದ್ದ ನಕಲಿ ಅಭ್ಯರ್ಥಿಗಳು

ಬೆಂಗಳೂರು: ರಾಷ್ಟ್ರೀಯ ಮಿಲಿಟರಿ ಸ್ಕೂಲ್‌ನಲ್ಲಿ ಖಾಲಿ ಇರುವ ಸಹಾಯಕ ಹುದ್ದೆ ನೇಮಕಾತಿಗಾಗಿ ಇತ್ತೀಚೆಗೆ ನಡೆದ ಪರೀಕ್ಷೆಗೆ ಇಬ್ಬರು ನಕಲಿ ಅಭ್ಯರ್ಥಿಗಳು ಹಾಜರಾಗಿದ್ದು, ಕೃತ್ಯವನ್ನು ಪತ್ತೆ ಮಾಡಿರುವ ಅಧಿಕಾರಿಗಳು ಅಶೋಕನಗರ ಠಾಣೆಗೆ ದೂರು ನೀಡಿದ್ದಾರೆ.

'ಆಸ್ಟಿನ್ ಟೌನ್‌ನಲ್ಲಿರುವ ರಾಷ್ಟ್ರೀಯ ಮಿಲಿಟರಿ ಸ್ಕೂಲ್‌ನ ಸುಮಿತ್ ಅವರು ದೂರು ನೀಡಿದ್ದಾರೆ. ನಕಲಿ ಅಭ್ಯರ್ಥಿಗಳಿಂದ ಪರೀಕ್ಷೆ ಬರೆಸಿದ್ದ ಅಸಲಿ ಅಭ್ಯರ್ಥಿಗಳಾದ ಆತೀಶ್, ಅಜಯ್‌ಕುಮಾರ್ ಹಾಗೂ ಕೃತ್ಯಕ್ಕೆ ಸಹಕರಿಸಿದ್ದ ಇತರರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

'ಸಹಾಯಕ ಹುದ್ದೆ ನೇಮಕಾತಿಗಾಗಿ 2023ರ ಮಾರ್ಚ್ 9ರಂದು ಅಧಿಸೂಚನೆ ಹೊರಡಿಸಲಾಗಿತ್ತು. ಆತೀಶ್ ಹಾಗೂ ಅಜಯ್ ಕುಮಾರ್ ಅವರು ಅರ್ಜಿ ಸಲ್ಲಿಸಿದ್ದರು. 2024ರ ಮಾರ್ಚ್ 24ರಂದು ಲಿಖಿತ ಪರೀಕ್ಷೆ ನಡೆದಿತ್ತು. ಇಬ್ಬರ ಹೆಸರಿನಲ್ಲೂ ಪರೀಕ್ಷೆಯ ಪ್ರವೇಶಪತ್ರ ನೀಡಲಾಗಿತ್ತು'.

'ಅಸಲಿ ಅಭ್ಯರ್ಥಿಗಳು ಮಾರ್ಚ್ 30ರಂದು ನಡೆದ ಕೌಶಲ ಪರೀಕ್ಷೆಗೆ ಹಾಜರಾಗಿದ್ದರು. ಲಿಖಿತ ಪರೀಕ್ಷೆ ವೇಳೆ ಅಭ್ಯರ್ಥಿಗಳಿಂದ ಸಂಗ್ರಹಿಸಿದ್ದ ಬೆರಳಚ್ಚು ಹಾಗೂ ಕೌಶಲ ಪರೀಕ್ಷೆಗೆ ಹಾಜರಾಗಿದ್ದ ಅಸಲಿ ಅಭ್ಯರ್ಥಿಗಳ ಬೆರಳಚ್ಚು ಹೋಲಿಕೆ ಮಾಡಲಾಗಿತ್ತು. ಆಗ ವ್ಯತ್ಯಾಸ ಕಂಡುಬಂದಿತ್ತು. ತಪಾಸಣೆ ನಡೆಸಿದಾಗ, ನಕಲಿ ಅಭ್ಯರ್ಥಿಗಳು ಪರೀಕ್ಷೆ ಬರೆದಿರುವುದು ಗೊತ್ತಾಗಿದೆ. ಅಸಲಿ ಅಭ್ಯರ್ಥಿಗಳ ವಿಚಾರಣೆ ನಡೆಸಿ ನಕಲಿ ಅಭ್ಯರ್ಥಿಗಳನ್ನು ಪತ್ತೆ ಮಾಡಬೇಕಿದೆ' ಎಂದರು.

ಡಿಪ್ಲೊಮಾ ಕೋರ್ಸ್‌ಗೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೈಮಗ್ಗ ಮತ್ತು ಜವಳಿ ತಂತ್ರಜ್ಞಾನದಲ್ಲಿ ಡಿಪ್ಲೊಮಾ (ಡಿಎಚ್‌ಟಿಟಿ) ಕೋರ್ಸ್ ಮಾಡಲು ಆಸಕ್ತಿ ಹೊಂದಿರುವ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಒಟ್ಟು 44 ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳಿಗೆ ಅವಕಾಶವಿರುತ್ತದೆ. ವ್ಯಾಸಂಗದ ಸಮಯದಲ್ಲಿ ಪ್ರತಿ ವಿದ್ಯಾರ್ಥಿಗೆ ತಿಂಗಳಿಗೆ ₹2,500ರಂತೆ ಶಿಷ್ಯವೇತನ ನೀಡಲಾಗುವುದು. ಪುರುಷ ಅಭ್ಯರ್ಥಿಗಳಿಗೆ ವಸತಿನಿಲಯದ ಸೌಲಭ್ಯವನ್ನು ಹಣ ಪಾವತಿಸುವ ಆಧಾರದ ಮೇಲೆ ಕಲ್ಪಿಸಲಾಗುವುದು.

ಎಸ್ಸೆಸ್ಸೆಲ್ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಮಾಹಿತಿಗೆ 9449162822 ಸಂಪರ್ಕಿಸಿ

ಕಾಡುಗುಡಿ: ಪ್ರಸನ್ನ ನಂಜುಂಡೇಶ್ವರ ಸ್ವಾಮಿ ಬ್ರಹ್ಮ ರಥೋತ್ಸವ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಕಾಡುಗುಡಿಯಲ್ಲಿ ಪ್ರಸನ್ನ ನಂಜುಂಡೇಶ್ವರ ಸ್ವಾಮಿಯ ಬ್ರಹ್ಮ ರಥೋತ್ಸವ ಭಾನುವಾರ ವಿಜೃಂಭಣೆಯಿಂದ ಜರುಗಿತು.

ನಂಜುಂಡೇಶ್ವರ ದೇವರಿಗೆ ಬಗೆ ಬಗೆಯ ಹೂವಿನ ಅಲಂಕಾರ ಮಾಡಿ ವಿಶೇಷ ಪೂಜೆ ಮಾಡಲಾಯಿತು. ಊರಿನ ಪ್ರಮುಖ ಬೀದಿಗಳಲ್ಲಿ ದೇವರ ಮೆರವಣಿಗೆ ಮಾಡಲಾಯಿತು.

ಜಾತ್ರೆ ಮಹೋತ್ಸವದಲ್ಲಿ ಡೊಳ್ಳು ಕುಣಿತ, ವೀರಗಾಸೆ ನೃತ್ಯವು ಮನಸೂರೆಗೊಂಡಿತು. ದಿನ್ನೂರು, ಬೆಳತ್ತೂರು, ಬೆಳತ್ತೂರು ಕಾಲೊನಿ, ಚನ್ನಸಂದ್ರ, ಎಕೆಜಿ ಕಾಲೊನಿ, ಕುಂಬೇನ ಅಗ್ರಹಾರ ಸೇರಿದಂತೆ ಕಾಡುಗುಡಿ ಸುತ್ತಮುತ್ತಲಿನ ಭಕ್ತರು ಬ್ರಹ್ಮರಥೋತ್ಸವದಲ್ಲಿ ಪಾಲ್ಗೊಂಡಿದ್ದರು.

ದೇವಾಲಯ ಆವರಣದಲ್ಲಿ ಗ್ರಾಮಸ್ಥರಿಂದ ನೆರೆದಿದ್ದ ಭಕ್ತರಿಗೆ ಅನ್ನದಾಸೋಹ ಏರ್ಪಡಿಲಾಗಿತ್ತು. ಅಲ್ಲಲ್ಲಿ ಕೋಸಂಬರಿ, ಮಜ್ಜಿಗೆ ಹಾಗೂ ಪಾನಕ ವಿತರಿಸಲಾಯಿತು.

ಮಾಜಿ ಸಚಿವ ಅರವಿಂದ ಲಿಂಬಾವಳಿ, ಸಂಸದ ಮುನಿಸ್ವಾಮಿ, ಪಾಲಿಕೆ ಮಾಜಿ ಸದಸ್ಯ ಆಂಜನೇಯ ರೆಡ್ಡಿ, ಪ್ರಶಾಂತ್ ರೆಡ್ಡಿ, ಲಕ್ಷ್ಮೀನಾರಾಯಣ ಪಾಲ್ಗೊಂಡಿದ್ದರು.

ನಗರದಲ್ಲಿ ಇಂದು

ಎನ್. ನರಸಿಂಹಮೂರ್ತಿ ಅವರಿಗೆ ಬೀಳ್ಕೊಡುಗೆ ಸಮಾರಂಭ: ಆಯೋಜನೆ: ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ, ಇತಿಹಾಸ ವಿಭಾಗ, ಬೆಂಗಳೂರು ನಗರ ವಿಶ್ವವಿದ್ಯಾಲಯ, ಸ್ಥಳ: ಸೆಮಿನಾರ್ ಹಾಲ್, ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜಿನ ಆವರಣ, ಮಧ್ಯಾಹ್ನ 3

ವಿಶ್ವ ನೃತ್ಯ ದಿನಾಚರಣೆ: ನೃತ್ಯ ಪ್ರದರ್ಶನ: ಮಹಾಲಕ್ಷ್ಮಿ ಟಿ.ಆರ್., ಮೋಟ್‌ಮೈನಾ ಮೋನಿ, ರಾಹಿಣಿ, ಚೈತ್ರ ಎಚ್.ಎನ್., ಶ್ರೇಷ್ಠ ಎಸ್. ಕುಮಾರ್, ವಿಧಿಶಾ ಆರ್. ಭಟ್, ಚರಿತಾ ಚೇತನ್, ವಿಜಯಶ್ರೀ ಅಶೋಕ್, ಅನುಷ್ಕಾ ಅಶೋಕ್, ನಿರ್ದೇಶನ: ನಯನ ಎಸ್. ಮೋರೆ, ಆಯೋಜನೆ: ಶಾಂತಲ ಆರ್ಟ್ಸ್ ಟ್ರಸ್ಟ್, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 5.30

ರಾಮನವಮಿ ಸಂಗೀತೋತ್ಸವ-2024: ವಿಶೇಷ ಸಂಗೀತ ಕಛೇರಿ: ಅನಿರುದ್ಧ ಸೇತುರಾಮನ್ ಮತ್ತು ತಂಡ, ವಿಶೇಷ ಕರ್ನಾಟಕ ಸಂಗೀತ ಕಛೇರಿ: ವಾರಿಜಾಶ್ರೀ ವೇಣುಗೋಪಾಲ್, ಮತ್ತೂರು ಶ್ರೀನಿಧಿ, ತುಮಕೂರು ರವಿಶಂಕರ್, ಭಾರದ್ವಾಜ್ ಆರ್. ಶತವಲ್ಲಿ, ಆಯೋಜನೆ: ಶ್ರೀರಾಮ ಸೇವಾ ಮಂಡಲಿ, ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಮೈದಾನ, ಚಾಮರಾಜಪೇಟೆ, ಸಂಜೆ 5ರಿಂದ

ರಾಮನವಮಿ ಸಂಗೀತೋತ್ಸವ: ಗಾಯನ: ರಾಘವ್, ಪಿಟೀಲು: ವರಲಕ್ಷ್ಮಿ, ಮೃದಂಗ: ಸುಧನ್ವಾ, ಗಾಯನ: ಕಲಾವತಿ ಅವಧೂತ್, ಪಿಟೀಲು: ಚಾರುಲತಾ ರಾಮಾನುಜ್, ಮೃದಂಗ: ಫಣೀಂದ್ರ ಭಾಸ್ಕರ್, ಖಂಜಿರ: ಆರ್. ಕಾರ್ತಿಕ್, ಆಯೋಜನೆ ಮತ್ತು ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರನಗರ, ಸಂಜೆ 5ರಿಂದ

'ಮಹಾಭಾರತ-ಅಶ್ವಮೇಧ ಪರ್ವ' ಧಾರ್ಮಿಕ ಪ್ರವಚನ: ವ್ಯಾಸನಕೆರೆ ಪ್ರಭಂಜನಾಚಾರ್ಯ, ಆಯೋಜನೆ: ಗುರುರಾಜ ಅಸೋಸಿಯೇಷನ್, ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಎನ್.ಆರ್. ಕಾಲೊನಿ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಕುಂದು ಕೊರತೆ | ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ ಮಾಡಿ 9606038256

'ರಸ್ತೆಯಲ್ಲಿ ಹರಿಯುವ ಚರಂಡಿ ನೀರು'

ಶೋಭಾ ಸಿಲಿಕಾನ್ ಓಯಸಿಸ್ ಹತ್ತಿರದ ನಾಗನಾಥಪುರ ರಸ್ತೆಯಲ್ಲಿ ಚರಂಡಿ ನೀರು ಹರಿಯುತ್ತಿದೆ. ಇದರಿಂದ ವಾಹನ ಸಂಚಾರಕ್ಕೆ ತೊಂದರೆ ಆಗಿದೆ. ರಸ್ತೆಯಲ್ಲಿ ನೀರು ಹರಿಯುವ ಕಾರಣ ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದೆ. ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ತ್ಯಾಜ್ಯ ನೀರು ಹರಿದುಹೋಗಲು ಸರಿಯಾದ ಚರಂಡಿ ವ್ಯವಸ್ಥೆ ಇಲ್ಲದ ಕಾರಣ ಪ್ರತಿನಿತ್ಯ ರಸ್ತೆಯಲ್ಲಿ ನೀರು ಹರಿಯುತ್ತಿದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ.

ಸೂರಜ್, ನಾಗನಾಥಪುರ



ರಸ್ತೆಯಲ್ಲಿ ಹರಿಯುತ್ತಿರುವ ಚರಂಡಿ ನೀರು

'ಪಾದಚಾರಿ ಮಾರ್ಗ ಸರಿಪಡಿಸಿ'

ಚಿಕ್ಕ ನಾಯಕನ ಹಳ್ಳಿ ಎಚ್. ಸಿದ್ಧಾಪುರದ ಬಳಿ ಹಾಕಿರುವ ಕಸ.

ಹೊರಮಾವು ಬಂಜಾರ ಲೇಔಟ್‌ನ ಡಿಎಸ್ ಮ್ಯಾಕ್ಸ್ ಸಾಲಿಟೇರ್ ಅಪಾರ್ಟ್‌ಮೆಂಟ್ ಬಳಿಯ ಪಾದಚಾರಿ ಮಾರ್ಗ ಸಂಪೂರ್ಣ ಹದಗೆಟ್ಟಿದೆ. ಈ ಮಾರ್ಗದಲ್ಲಿ ಅಳವಡಿಸಿರುವ ಸಿಮೆಂಟ್ ಸ್ಲ್ಯಾಬ್‌ಗಳು ಕುಸಿದುಹೋಗಿವೆ. ಇದರಿಂದ ಪಾದಚಾರಿಗಳು ಮುಖ್ಯರಸ್ತೆಯಲ್ಲೇ ಸಂಚರಿಸಬೇಕಿದೆ. ಅಪಾರ್ಟ್‌ಮೆಂಟ್‌ಗೆ ಹೋಗಬೇಕಾದರೂ ಮುಖ್ಯರಸ್ತೆಯ ಮೂಲಕವೇ ಹೋಗಬೇಕು. ಆದ್ದರಿಂದ, ಬಿಬಿಎಂಪಿ ಕೂಡಲೇ ಇಲ್ಲಿನ ಪಾದಚಾರಿ ಮಾರ್ಗವನ್ನು ಸರಿಪಡಿಸಬೇಕು.

ರವಿಕುಮಾರ್, ಹೊರಮಾವು

'ರಸ್ತೆ ಗುಂಡಿ ಮುಚ್ಚಿ'

ಟಿ.ಸಿ. ಪಾಳ್ಯದಿಂದ ರಾಮಮೂರ್ತಿನಗರದ ಬ್ರಿಡ್ಜ್‌ಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಗುಂಡಿಗಳು ಬಿದ್ದಿದ್ದು, ರಸ್ತೆಯೆಲ್ಲ ಹಾಳಾಗಿದೆ. ಇದರಿಂದ ವಾಹನ ಸಂಚಾರಕ್ಕೆ ತೊಂದರೆಯಾಗಿದೆ. ಜೊತೆಗೆ ದ್ವಿಚಕ್ರ ವಾಹನ ಸವಾರರು ಗುಂಡಿಯಲ್ಲಿ ಬಿದ್ದು ಕೈಕಾಲು ಮುರಿದುಕೊಂಡಿದ್ದಾರೆ. ಇದು ಸಂಚಾರ ದಟ್ಟಣೆಯ ದೊಡ್ಡ ತಲೆನೋವಾಗಿ ಪರಿಣಮಿಸಿದೆ. ಈ ಬಗ್ಗೆ ಬಿಬಿಎಂಪಿಗೆ ಮನವಿ ಸಲ್ಲಿಸಲಾಗಿದೆ.

ಕಿಶೋರ್, ರಾಮಮೂರ್ತಿ ನಗರ

ರಾಮಮೂರ್ತಿ ನಗರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಗುಂಡಿ.

ಕ್ಲಾಸಿಫೈಡ್ಸ್
ADMISSION CORNER

SRI KRISHNA GROUP OF INSTITUTIONS
ITI Layout, Near Vidyapeeta Circle, Banashankari 3rd Stage, Bangalore-560 085
CONGRATULATIONS
100% RESULTS
PUC STATE TOPPERS 2022-24 BATCH
SCIENCE 9TH RANK — VISHNU S BHARDWAJ 590/600
COMMERCE 10TH RANK — TEJASWINI R 588/600
BENGALURU CITY UNIVERSITY RANK HOLDERS 2020-23 BATCH
BBA 1ST RANK — MS. RUTH R 5162/5400
BCA 5TH RANK — MR. MAHESH G 4923/5200
GIBS B SCHOOL MBA BENGALURU CITY UNIVERSITY RANK HOLDERS : 2020 -22 BATCH
1ST RANK — MS. PAVITHRA A 2424/3000
4TH RANK — MR. NISHANTH A 2375/3000
5TH RANK — MS. ROJA 2372/3000
MANAGEMENT CONGRATULATES BOTH THE STAFF AND THE STUDENTS FOR THIS GRAND ACHIEVEMENT
ADMISSION OPEN FOR THE YEAR 2024-25
PUC SCIENCE COMMERCE | B.COM DAY EVENING | BBA | BCA | M.COM | MBA
CONTACT: 9844784320, 9945330589

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

JOB OPPORTUNITIES

Multiple Vacancy

REQUIRED GAS Plants Karnataka male/female (8th tograduate) Supervisor, xman, Driver, Dataentry, Gard Salary 25k above +All facility shivamgasservises07@gmail.com, 7052138505, 8112322104

Security & Detectives

REPUTED SECURITY Agency Requires Security Guards/ Supervisors, Field Officers, Area Managers, Operations/ Marketing Team for Bangalore. Contact: 8073668816.

PERSONAL

Change of Name

CHANGE OF NAME
I Rupasri M N alias M N Rupashree, aged about 48 years w/o Late K S Srinath, residing at No.1361, Swarna, 8th Cross, 1st 'H' Main, near Girinagar Police Station, 2nd Phase, Bengaluru South-560085. Declare in some of the documents my name is mentioned M N Rupashree instead of Rupasri M N. Both above names pertaining to ME only. Vide affidavit dated 27.04.2024 before notary Aruna. V, Bengaluru

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

GOODWILL CHRISTIAN COLLEGE FOR WOMEN
No.10, Promenade Road, Frazer Town (Opp. Coles Park) Bengaluru - 560 005
CSI Karnataka Central Diocese
Affiliated to Bengaluru North University
NAAC ACCREDITED
Phone: 080 - 41516793, 41100422, 7022905576
Website: www.goodwillchristiancollege.com
E-mail: goodwillchristiancollege@gmail.com
Instagram: goodwillchristiancollege
ADMISSIONS OPEN 2024-2025
COURSES OFFERED
B.Com | BBA | BCA | B.Sc | B.A.
ROUNAQH

DH DECCAN HERALD
Classifieds
More value, more impact
ಪ್ರಜಾವಾಣಿ
EDUCATION
Book your Educational Related Ads in DH All Karnataka + Prajavani Bengaluru City
www.dhclassifieds.com
BOOK NOW
*Conditions apply
For more details contact:
+91 9731810277 | +91 9886213331
+91 9845114560 | +91 9900428036
+91 9901641752 | 080- 45557163/164

ವಾತಾವರಣದಲ್ಲಿ ಉಷ್ಣಾಂಶ ಹೆಚ್ಚಳದಿಂದ ಶಾಖಾಘಾತ, ಜ್ವರ ಸಂಬಂಧಿ ಪ್ರಕರಣ ಹೆಚ್ಚಳ

ಬಿಸಿಲ ಬೇಗೆ: ಹಲವು ಬಾಧೆ

• ವರುಣ ಹೆಗಡೆ

ಬೆಂಗಳೂರು: ನಗರದಲ್ಲಿ ಹೆಚ್ಚಿದ ತಾಪಮಾನದಿಂದಾಗಿ ಮಕ್ಕಳು ಸೇರಿ ವಿವಿಧ ವಯೋಮಾನದವರು ಅಸ್ವಸ್ಥರಾಗುತ್ತಿದ್ದು, ಆಸ್ಪತ್ರೆಗಳಿಗೆ ಭೇಟಿ ನೀಡುತ್ತಿರುವ ಹೊರರೋಗಿಗಳಲ್ಲಿ ಶೇ 30ರಷ್ಟು ಮಂದಿ ಬಿಸಿ ಗಾಳಿಯಿಂದ ಉಂಟಾಗುತ್ತಿರುವ ಸಮಸ್ಯೆಗಳಿಗೆ ತಪಾಸಣೆ ಮಾಡಿಸಿಕೊಳ್ಳುತ್ತಿದ್ದಾರೆ.

ಬಿಸಿಲ ಧಗೆ ದಿನದಿಂದ ದಿನಕ್ಕೆ ಏರತೊಡಗಿದೆ. ಗರಿಷ್ಠ ತಾಪಮಾನ 38 ಡಿಗ್ರಿ ಸೆಲ್ಸಿಯಸ್ ತಲುಪಿದರೆ, ಕನಿಷ್ಠ ತಾಪಮಾನ 24 ಡಿಗ್ರಿ ಸೆಲ್ಸಿಯಸ್ ಆಸುಪಾಸಿನಲ್ಲಿದೆ. ಏಪ್ರಿಲ್ ತಿಂಗಳ ಬಹುತೇಕ ದಿನಗಳು ಗರಿಷ್ಠ ಉಷ್ಣಾಂಶ 37 ಡಿಗ್ರಿ ಸೆಲ್ಸಿಯಸ್‌ನಷ್ಟಿತ್ತು ಎಂದು ವರದಿಯಾಗಿದೆ. ನಿರೀಕ್ಷಿತ ಮಳೆ ಬಾರದಿದ್ದರಿಂದ ದಿನದ ಬಹುತೇಕ ಅವಧಿ ಉಷ್ಣ ವಾತಾವರಣದಿಂದ ಕೂಡಿದ್ದು, ಕೆಲವೆಡೆ ಬಿಸಿ ಗಾಳಿ ಕಾಣಿಸಿಕೊಳ್ಳುತ್ತಿದೆ. ಬೇಸಿಗೆ ರಜೆಯ ಕಾರಣ ಹೊರಾಂಗಣ ಆಟಗಳಿಗೆ ಮೊರೆಹಗುತ್ತಿರುವ ಮಕ್ಕಳೂ ಹೆಚ್ಚಿನ ಸಂಖ್ಯೆಯಲ್ಲಿ ಅಸ್ವಸ್ಥಗೊಳ್ಳುತ್ತಿದ್ದಾರೆ.

ಕಲುಷಿತ ನೀರು, ಅಸುರಕ್ಷಿತ ಆಹಾರ ಸೇವನೆಯಿಂದ ಉದರಬೇನೆ, ವಿಷಮಶೀತ ಜ್ವರ, ಕಾಲರಾದಂತಹ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ. ಆರೋಗ್ಯ ಇಲಾಖೆ ಮಾಹಿತಿ ಪ್ರಕಾರ ಬಿಬಿಎಂಪಿ ವ್ಯಾಪ್ತಿಯಲ್ಲಿ ಈಗಾಗಲೇ 2.5 ಸಾವಿರಕ್ಕೂ ಅಧಿಕ ಮಂದಿಯಲ್ಲಿ ಡೆಂಗಿ ಶಂಕೆ ವ್ಯಕ್ತವಾಗಿದ್ದು, 2 ಸಾವಿರಕ್ಕೂ ಅಧಿಕ ಮಂದಿಯ ರಕ್ತದ ಮಾದರಿಯನ್ನು ಪರೀಕ್ಷೆ ಮಾಡಲಾಗಿದೆ. ರಾಜ್ಯದಲ್ಲಿ ಅಧಿಕೃತವಾಗಿ ದೃಢಪಟ್ಟ 27 ಕಾಲರಾ ಪ್ರಕರಣಗಳಲ್ಲಿ 10 ಪ್ರಕರಣಗಳು ಬೆಂಗಳೂರಿನಲ್ಲಿಯೇ ವರದಿಯಾಗಿವೆ.

ಆಸ್ಪತ್ರೆ ಭೇಟಿ ಹೆಚ್ಚಳ: ವಿಕ್ಟೋರಿಯಾ, ಜಯನಗರ ಸಾರ್ವಜನಿಕ ಆಸ್ಪತ್ರೆ, ಕಿಮ್ಸ್, ಮಣಿಪಾಲ್, ಫೋರ್ಟಿಸ್, ಅಪೋಲೊ, ನಾರಾಯಣ ಹೆಲ್ತ್ ಸೇರಿದಂತೆ ಪ್ರಮುಖ ಆಸ್ಪತ್ರೆಗಳಿಗೆ ಭೇಟಿ ನೀಡುತ್ತಿರುವ ಹೊರ ರೋಗಿಗಳಲ್ಲಿ ಶೇ 10 ಹಾಗೂ ಅದಕ್ಕಿಂತ ಅಧಿಕ ರೋಗಿಗಳು ಉದರಬೇನೆ, ವಿಷಮಶೀತ ಜ್ವರ, ಅತಿಸಾರ, ಬೆವರು ಗುಳ್ಳೆಯಂತಹ ಸಮಸ್ಯೆಗಳಿಂದ ಬಳಲುತ್ತಿದ್ದಾರೆ.

‘ಉದರಬೇನೆ ಸಮಸ್ಯೆಗೆ ಹೊರ ರೋಗಿಗಳ ವಿಭಾಗಕ್ಕೆ ಪ್ರತಿ ದಿನ 15-20 ರೋಗಿಗಳು ಬರುತ್ತಿದ್ದಾರೆ. ಶುಚಿ ಇಲ್ಲದ ಆಹಾರ ಮತ್ತು ನೀರು ಸೇವನೆಯಿಂದ ಈ ಸಮಸ್ಯೆ ಉಂಟಾಗುತ್ತಿದೆ’ ಎಂದು ಇಂದಿರಾನಗರದ ಸಾಂಕ್ರಾಮಿಕ ರೋಗಗಳ ಆಸ್ಪತ್ರೆಯ ವೈದ್ಯರೊಬ್ಬರು ತಿಳಿಸಿದರು.

‘ಬೇಸಿಗೆಯಲ್ಲಿ ನೀರಿನಿಂದಲೇ ಹೆಚ್ಚು ರೋಗಗಳು ಹರಡುತ್ತವೆ. ಹೀಗಾಗಿ, ಶುದ್ಧ ನೀರು ಕುಡಿಯುವುದು ಬಹಳ ಮುಖ್ಯ. ರಸ್ತೆ ಬದಿಯಲ್ಲಿ ತೆರೆದಿಟ್ಟ ಆಹಾರ ಪದಾರ್ಥ ಹಾಗೂ ಕತ್ತರಿಸಿದ ಹಣ್ಣುಗಳನ್ನು ತಿನ್ನುವುದರಿಂದ ರೋಗಾಣುಗಳು ಹರಡಿ, ಸಾಂಕ್ರಾಮಿಕ ರೋಗ ಕಾಣಿಸಿಕೊಳ್ಳುತ್ತದೆ’ ಎಂದು ವಿಕ್ಟೋರಿಯಾ ಆಸ್ಪತ್ರೆಯ ವೈದ್ಯರೊಬ್ಬರು ಹೇಳಿದರು.

ನೀರು, ಆಹಾರ ಸೇವಿಸುವಾಗ ಜಾಗ್ರತೆ ವಹಿಸಬೇಕು. ಕಲುಷಿತ ನೀರು, ಆಹಾರ ಸೇವನೆಯಿಂದ ಮಕ್ಕಳಲ್ಲಿ ವಾಂತಿ ಭೇದಿ ಸೇರಿ ವಿವಿಧ ಅನಾರೋಗ್ಯ ಕಾಣಿಸಿಕೊಳ್ಳುವ ಸಾಧ್ಯತೆ ಇದೆ

ಡಾ. ಸಂಜಯ್ ಕೆ.ಎಸ್., ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ ನಿರ್ದೇಶಕ



ಬೇಸಿಗೆ ಅವಧಿಯಲ್ಲಿ ಬಿಸಿಲು ಮತ್ತು ದೂಳಿನಿಂದಾಗಿ ಕಣ್ಣಿನ ಅಲರ್ಜಿಯಂತಹ ಸಮಸ್ಯೆಗಳು ಹೆಚ್ಚುತ್ತವೆ. ಕಣ್ಣಿನ ರಕ್ಷಣೆಗೆ ಪ್ರತಿಯೊಬ್ಬರೂ ಮುನ್ನೆಚ್ಚರಿಕೆ ವಹಿಸಬೇಕು

ಡಾ.ಜಿ. ನಾಗರಾಜು, ಮಿಂಟೊ ಕಣ್ಣಿನ ಆಸ್ಪತ್ರೆ ನಿರ್ದೇಶಕ

ವಾರದ ತಾಪಮಾನ (ಡಿಗ್ರಿ ಸೆಲ್ಸಿಯಸ್‌ನಲ್ಲಿ)

ದಿನಾಂಕ	ಗರಿಷ್ಠ	ಕನಿಷ್ಠ
ಏ.22	37.2	25.2
ಏ.23	37.2	24.8
ಏ.24	37	23.4
ಏ.25	37.4	24.8
ಏ.26	37.4	24.4
ಏ.27	38	23.4
ಏ.28	38.5	23.4

ಕಾಡುತ್ತಿದೆ ಕಣ್ಣಿನ ಅಲರ್ಜಿ

ಅತಿಯಾದ ಬಿಸಿಲಿಗೆ ಕಣ್ಣುರಿ, ಕಣ್ಣಿನಲ್ಲಿ ನೀರು, ತುರಿಕೆ, ಕಣ್ಣು ಕೆಂಪಾಗುವುದು, ಕಣ್ಣಿನ ಊತ ಸೇರಿ ವಿವಿಧ ಸಮಸ್ಯೆಗಳಿಗೆ ಜನ ಆಸ್ಪತ್ರೆಗಳತ್ತ ಮುಖಮಾಡುತ್ತಿದ್ದಾರೆ. ಇದರಿಂದಾಗಿ ನಗರದ ಪ್ರಮುಖ ಕಣ್ಣಿನ ಆಸ್ಪತ್ರೆಗಳಾದ ಮಿಂಟೊ, ನಾರಾಯಣ ನೇತ್ರಾಲಯ, ಡಾ.ಅಗರವಾಲ್ಸ್ ಐ ಹಾಸ್ಪಿಟಲ್, ಶಂಕರ ಕಣ್ಣಿನ ಆಸ್ಪತ್ರೆ ಹಾಗೂ ಬೆಂಗಳೂರು ನೇತ್ರಾಲಯದಲ್ಲಿ ಹೊರ ರೋಗಿಗಳ ಸಂಖ್ಯೆ ಶೇ 10ರಷ್ಟು ಹೆಚ್ಚಳವಾಗಿದೆ.

‘ಸೂರ್ಯನ ತೀವ್ರ ಕಿರಣಗಳು, ದೂಳು ಮತ್ತು ಮಾಲಿನ್ಯಕಾರಕಗಳಿಂದ ಕಣ್ಣಿಗೆ ಹೆಚ್ಚಿನ ಅಪಾಯ ಆಗುತ್ತದೆ. ಆಸ್ಪತ್ರೆಗೆ ಭೇಟಿ ನೀಡಿದ ಹಲವರಲ್ಲಿ ಒಣ ಕಣ್ಣಿನ ಸಮಸ್ಯೆ ಕಾಣಿಸಿಕೊಳ್ಳುತ್ತಿದೆ. ಈ ಅವಧಿಯಲ್ಲಿ ಕಣ್ಣಿನಲ್ಲಿ ನೀರಿನ ಉತ್ಪಾದನೆ ಕಡಿಮೆಯಾಗಿ, ಕಿರಿಕಿರಿ ಉಂಟಾಗುತ್ತದೆ. ಕಣ್ಣಿನ ರಕ್ಷಣೆಗೂ ಆದ್ಯತೆ ನೀಡಬೇಕು’ ಎಂದು ಡಾ. ಅಗರವಾಲ್ಸ್ ಆಸ್ಪತ್ರೆಯ ಕ್ಲಿನಿಕಲ್ ಸೇವೆಗಳ ಪ್ರಾದೇಶಿಕ ಮುಖ್ಯಸ್ಥ ಡಾ. ಶ್ರೀಪತಿ ಡಿ.ಕೆ. ತಿಳಿಸಿದರು.

ವೈದ್ಯರ ಪ್ರಮುಖ ಸಲಹೆಗಳು

- ರಸ್ತೆ ಬದಿಯ ಆಹಾರ ಸುರಕ್ಷಿತವಲ್ಲ
- ದ್ರವ ರೂಪದ ಆಹಾರವನ್ನು ಹೆಚ್ಚಾಗಿ ಸೇವಿಸಬೇಕು
- ಕಾಯಿಸಿ, ಆರಿಸಿದ ಶುದ್ಧ ನೀರನ್ನು ಕುಡಿಯಬೇಕು
- ಆಹಾರ ಸೇವಿಸುವ ಮೊದಲು ಕೈಗಳನ್ನು ಸ್ವಚ್ಛವಾಗಿ ತೊಳೆದುಕೊಳ್ಳಬೇಕು
- ತಾಜಾ ಹಾಗೂ ಪೌಷ್ಟಿಕ ಆಹಾರ ಸೇವಿಸಬೇಕು
- ಹತ್ತಿಯ ಬಟ್ಟೆಯನ್ನು ಧರಿಸಬೇಕು

ಗೃಹಿಣಿಗೆ ₹3.17 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ರಾಮನಗರ: ಪಾರ್ಟ್ ಟೈಂ ಉದ್ಯೋಗದ ನೆಪದಲ್ಲಿ ಗೃಹಣಿಯೊಬ್ಬರಿಗೆ ಅಪರಿಚಿತ ಮಹಿಳೆಯೊಬ್ಬಳು ₹3.17 ಲಕ್ಷ ವಂಚಿಸಿದ್ದಾಳೆ. ಈ ಕುರಿತು ಕಗ್ಗಲಿಪುರ ಪೊಲೀಸ್ ಠಾಣೆಯಲ್ಲಿ ಇತ್ತೀಚೆಗೆ ಪ್ರಕರಣ ದಾಖಲಾಗಿದೆ.

ಗೃಹಿಣಿಗೆ ಕರೆ ಮಾಡಿದ ಆರ್ಯ ಎಂಬ ಅಪರಿಚಿತ ಮಹಿಳೆ ಆನ್‌ಲೈನ್‌ನಲ್ಲಿ ಪಾರ್ಟ್ ಟೈಂ ಉದ್ಯೋಗ ಮಾಡಿದರೆ ಹೆಚ್ಚು ಸಂಪಾದಿಸಬಹುದು ಎಂದಳು. ಟೆಲಿಗ್ರಾಂ ಆ್ಯಪ್‌ನಲ್ಲಿ ನೀಡುವ ಟಾಸ್ಕ್ ಆಧಾರಿತ ಉದ್ಯೋಗ ಇದಾಗಿದೆ. ದಿನಕ್ಕೆ 21 ಟಾಸ್ಕ್ ಪೂರೈಸಿದರೆ ₹2 ಸಾವಿರದಿಂದ ₹8 ಸಾವಿರದವರೆಗೆ ಹಣ ಬರುತ್ತದೆ ಎಂದು ನಂಬಿಸಿದ್ದಾರೆ.

ಗೂಗಲ್‌ನಲ್ಲಿ ಐದು ಪಂಚತಾರಾ ಹೋಟೆಲ್‌ಗಳಿಗೆ ರಿವ್ಯೂ ಟಾಸ್ಕ್‌ಗಳನ್ನು ಮುಗಿಸಿದ ಬಳಿಕ, ಸಂಬಳ ಪಾವತಿಸಲಾಗುವುದು ಎಂದು ಸ್ಯಾಲರಿ ಕೋಡ್ ಮತ್ತು ಸಂಪರ್ಕಕ್ಕೆ ಮತ್ತೊಂದು ಲಿಂಕ್ ಅನ್ನು ಟೆಲಿಗ್ರಾಂನಲ್ಲಿ ಕಳುಹಿಸಿ ಕೊಟ್ಟಿದ್ದಾಳೆ. ಅದರಂತೆ, 3 ಟಾಸ್ಕ್ ಮುಗಿಸಿದ ಗೃಹಿಣಿಗೆ ತಲಾ ₹50ರಂತೆ ₹150 ಅನ್ನು ಅವರ ಬ್ಯಾಂಕ್ ಖಾತೆಗೆ ಪಾವತಿಸಿದ್ದಾರೆ. ಇದನ್ನು ನಿಜ ಎಂದು ನಂಬಿದ ಗೃಹಿಣಿ ಉದ್ಯೋಗದಲ್ಲಿ ಆಸಕ್ತಿ ತೋರಿಸಿದಿದ್ದಾರೆ.

ಅವರ ಉತ್ಸಾಹ ಗಮನಿಸಿದ ಮಹಿಳೆ, ₹2 ಸಾವಿರ ಹೂಡಿಕೆ ಮಾಡುವಂತೆ ಹೇಳಿದ್ದಾಳೆ. ಅದರಂತೆ ಹಣ ಕಳಿಸಿದ ಗೃಹಣಿಗೆ ಪ್ರತಿಯಾಗಿ ₹2800 ಹಣ ಬ್ಯಾಂಕ್ ಖಾತೆಗೆ ಬಂದಿದೆ. ನಂತರ ವೆಲ್‌ಫೇರ್ ಎಂಬ ಟಾಸ್ಕ್‌ಗಾಗಿ ₹60,736 ಹೂಡಿಕೆ ಮಾಡಿಸಿಕೊಂಡಿರುವ ವಂಚಕಿ, ಅದರ ಕಮಿಷನ್ ಪಡೆಯಲು ₹2.50 ಲಕ್ಷ ಹೂಡಿಕೆ ಮಾಡುವಂತೆ ಸೂಚಿಸಿದ್ದಾರೆ.

ಬಳಿಕ ಹೂಡಿಕೆಗೆ ಪ್ರತಿಯಾಗಿ ಕಮಿಷನ್ ಹಣ ಸೇರಿ ₹11.98 ಲಕ್ಷ ರೀಫಂಡ್ ಆಗಲಿದೆ ಎಂದು ಆಸೆ ತೋರಿಸಿದ್ದಾರೆ. ಹಣ ವರ್ಗಾವಣೆಯಾಗುವವರೆಗೆ ಬೇರೆ ಟಾಸ್ಕ್ ಪೂರೈಸಲು ಹೇಳಿದ್ದಾರೆ.

ಗೃಹಿಣಿಗೆ ಅವರ ಬ್ಯಾಂಕ್ ಖಾತೆಯು ಸ್ಥಗಿತವಾಗಿರುವ ಸಂದೇಶ ಬಂದಿದೆ. ಆಗ, ಖಾತೆ ಪರಿಶೀಲಿಸಿದಾಗ ತಾನು ವಂಚಕರ ಜಾಲಕ್ಕೆ ಸಿಲುಕಿರುವುದು ಗೊತ್ತಾಗಿದೆ.

ದೇಗುಲಕ್ಕೆ ದೇಣಿಗೆ ಕೊರತೆ ದಲಿತ ಮಹಿಳೆ ಶವಸಂಸ್ಕಾರಕ್ಕೆ ಅಡ್ಡಿ!

ಪ್ರಜಾವಾಣಿ ವಾರ್ತೆ

ಗೌರಿಬಿದನೂರು (ಚಿಕ್ಕಬಳ್ಳಾಪುರ): ದೇಗುಲಕ್ಕೆ ₹25 ಸಾವಿರ ದೇಣಿಗೆ ನೀಡಲಿಲ್ಲ ಎಂದು ಪರಿಶಿಷ್ಟ ಮಹಿಳೆ ಶವಸಂಸ್ಕಾರಕ್ಕೆ ಅವಕಾಶ ನೀಡದ ಘಟನೆಯೊಂದು ಭಾನುವಾರ ಪಟ್ಟಣದಲ್ಲಿ ನಡೆದಿದೆ.

ಮೃತಳ ಸಂಬಂಧಿಕರು ₹6 ಸಾವಿರ ಸಾಲ ತಂದು ದೇವಸ್ಥಾನಕ್ಕೆ ಒಪ್ಪಿಸಿದ ನಂತರವಷ್ಟೇ ಸಮುದಾಯದ ಮುಖಂಡರು ಶವಸಂಸ್ಕಾರಕ್ಕೆ ಅವಕಾಶ ನೀಡಿದ್ದಾರೆ.

ಪಟ್ಟಣದ 26ನೇ ವಾರ್ಡ್ ಗೊಟಕನಾಪುರದಲ್ಲಿ ಆದಿ ಕರ್ನಾಟಕ ಸಮುದಾಯದ ಹನುಮಕ್ಕ ಮೃತಪಟ್ಟಿದ್ದರು. ಶವಸಂಸ್ಕಾರಕ್ಕೆ ಸಂಪ್ರದಾಯದಂತೆ ಗೊಟಕನಾಪುರದ ಸತ್ಯಮ್ಮ ದೇವತೆ ದೇವಸ್ಥಾನಕ್ಕೆ ₹25 ಸಾವಿರ ದೇಣಿಗೆ ನೀಡಬೇಕು ಎಂದು ಸಮುದಾಯದ ಹಿರಿಯರು ಹೇಳಿದರು.

‘ತಮ್ಮ ಬಳಿ ಹಣವಿಲ್ಲ’ ಎಂದು ಮೃತಳ ಕುಟುಂಬದವರು ಬೇಡಿಕೊಂಡರೂ ಮುಖಂಡರು ಸೊಪ್ಪು ಹಾಕಲಿಲ್ಲ. ಮಧ್ಯಾಹ್ನ 12ರವರೆಗೂ ಶವ ಸಂಸ್ಕಾರಕ್ಕೆ ಅವಕಾಶ ಮಾಡಿಕೊಡಲಿಲ್ಲ. ಬಳಿಕ ₹ 6 ಸಾವಿರ ಹೊಂದಿಸಿ ನೀಡಿದ ಬಳಿಕವಷ್ಟೇ ಅಂತ್ಯಕ್ರಿಯೆಗೆ ಅವಕಾಶ ಮಾಡಿಕೊಟ್ಟರು.

‘ಮೊದಲಿನಿಂದಲೂ ನಾವು ಒಗ್ಗಟ್ಟಾಗಿ ಇದ್ದೇವೆ. ವರ್ಷಗಳಿಂದ ಇದೇ ರೀತಿ, ರಿವಾಜು ಪಾಲಿಸುತ್ತಿದ್ದೇವೆ. ಈಗ ಚಂದಾ ಕೊಡದಿದ್ದರೆ ಹೇಗೆ’ ಎಂದು ಆದಿ ಕರ್ನಾಟಕ ಸಂಘದ ಮುಖಂಡ ಗಂಗಯ್ಯ ಪ್ರಶ್ನಿಸಿದರು.

‘ಹಣ ಇರುವವರು, ಇಲ್ಲದವರೂ ಇರುತ್ತಾರೆ. ಇಂತ ಮೂಢನಂಬಿಕೆ ಬಗ್ಗೆ ಇಂದಿಗೂ ಅರಿವು ಮೂಡಲಿಲ್ಲ ಎಂದರೆ ಹೇಗೆ?’ ಎಂದು ಮೃತಳ ಪುತ್ರಿ ಮಂಜುಳಾ ‘ಪ್ರಜಾವಾಣಿ’ ಜೊತೆ ಅಳಲು ತೋಡಿಕೊಂಡರು.

ಈ ಬೆಳವಣಿಗೆ ಕುರಿತ ವಿಡಿಯೊ ಮತ್ತು ಆಡಿಯೊ ಜಾಲತಾಣಗಳಲ್ಲಿ ಸಾಕಷ್ಟು ಹರಿದಾಡಿದ್ದವು. ಅದರ ಹಿಂದೆಯೇ, ಸಮುದಾಯ ಮತ್ತು ರಾಜಕೀಯ ಮುಖಂಡರು ವಿವಾದ ತಣ್ಣಗಾಗಿಸಲು ಯತ್ನಿಸಿದರು.

ಕೆಂಗೇರಿ ಕರಗ ಶಕ್ತ್ಯೋತ್ಸವ ಸಂಪನ್ನ

ಪ್ರಜಾವಾಣಿ ವಾರ್ತೆ

ಕೆಂಗೇರಿಯಲ್ಲಿ ಕರಗ ಉತ್ಸವ ವಿಜೃಂಭಣೆಯಿಂದ ಜರುಗಿತು

ಕೆಂಗೇರಿ: ಐತಿಹಾಸಿಕ ಕೆಂಗೇರಿ ಯಲ್ಲಮ್ಮ ದೇವಿಯ 48ನೇ ಕರಗ ಶಕ್ತ್ಯೋತ್ಸವವು ಶನಿವಾರ ತಡರಾತ್ರಿ ಸಾವಿರಾರು ಭಕ್ತರ ಸಮ್ಮುಖದಲ್ಲಿ ಸಂಭ್ರಮದಿಂದ ಜರುಗಿತು.

ಸಂಪ್ರದಾಯದಂತೆ ಮಧ್ಯರಾತ್ರಿ 1.35ಕ್ಕೆ ಕರಗವನ್ನು ಹೊತ್ತ ಆನಂದ್ ಅವರು ದೇವಿಯ ಗರ್ಭಗುಡಿಯಿಂದ ಹೊರಬಂದು ದೇವಾಲಯಕ್ಕೆ ಮೂರು ಪ್ರದಕ್ಷಿಣೆ ಸಲ್ಲಿಸಿದರು. ಈ ಕ್ಷಣಕ್ಕಾಗಿ ಕಾಯುತ್ತಿದ್ದ ಸಹಸ್ರಾರು ಭಕ್ತರು ಗೋವಿಂದನ ನಾಮಸ್ಮರಣೆ ಮಾಡುತ್ತಾ, ಕರಗಕ್ಕೆ ಪುಷ್ಪಾರ್ಚನೆ ಮಾಡಿದರು.

ಕರಗದ ಪ್ರಯುಕ್ತ ದೇವಸ್ಥಾನದಲ್ಲಿ ಮುಂಜಾನೆಯಿಂದಲೇ ವಿಶೇಷ ಪೂಜಾ ಕಾರ್ಯಕ್ರಮಗಳು ನೆರವೇರಿದವು. ಯಲ್ಲಮ್ಮ ದೇವಸ್ಥಾನವನ್ನು ವಿವಿಧ ಹೂವು ಮತ್ತು ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ಕರಗ ಸಾಗುವ ದಾರಿಯುದ್ದಕ್ಕೂ ವಿದ್ಯುತ್ ದೀಪ, ಹೂಗಳಿಂದ ಅಲಂಕಾರ ಮಾಡಲಾಗಿತ್ತು.

ಕೆಂಗೇರಿಯ ರಾಜಬೀದಿಗಳಲ್ಲಿ ಸಾಗಿದ ಕರಗ, ನಂತರ ರಾಮದೇವರು, ಆಂಜನೇಯ ಸ್ವಾಮಿ, ಮುಸ್ಲಿಮರ ದರ್ಗಾ, ಮಾರಮ್ಮ, ಸೋಮೇಶ್ವರ, ಕೋಟೆ , ಅಂಬಾ ಭವಾನಿ, ಕಸ್ತೂರಮ್ಮನ ದೇವಾಲಯ ಸೇರಿದಂತೆ ಪ್ರಮುಖ ದೇವಾಲಯಗಳಿಗೆ ತೆರಳಿ ವಿಶೇಷ ಪೂಜೆ ಸ್ವೀಕರಿಸಿ ಭಾನುವಾರ ಬೆಳಿಗ್ಗೆ ದೇವಾಲಯಕ್ಕೆ ತಲುಪಿತು.

ಕರಗ ಮಹೋತ್ಸವದ ಅಂಗವಾಗಿ ಯಕ್ಷಗಾನ, ಮಾತೆಯರಿಂದ ಲಲಿತಾ ಸಹಸ್ರನಾಮ ಪಠಣ, ಕೀಲು ಕುದುರೆ, ಪಟದ ಕುಣಿತ, ವೀರಗಾಸೆ, ಪೂಜಾ ಕುಣಿತ, ಚಂಡೆ ವಾದ್ಯ, ಡೊಳ್ಳು, ನಾದಸ್ವರ, ತಮಟೆ ವಾದ್ಯ ಕಲಾವಿದರ ಪ್ರದರ್ಶನ, ಮಂಗಳವಾದ್ಯ, ವಾದ್ಯ ಗೋಷ್ಠಿ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಉತ್ಸವ ಸಮಿತಿ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಅಪಾರ ಸಂಖ್ಯೆಯಲ್ಲಿ ಭಕ್ತಾದಿಗಳು ಪಾಲ್ಗೊಂಡಿದ್ದರು.

ಶಾಶ್ವತ ನೀರಾವರಿ ಹೋರಾಟ ಸಮಿತಿ ಅಧ್ಯಕ್ಷ ಆಂಜನೇಯ ರೆಡ್ಡಿ

‘ಎಂ.ಬಿ.ಪಾಟೀಲರ ಕೊಡುಗೆ ಶೂನ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೃಷ್ಣಾ ನದಿ ನೀರಿನ ಬಗ್ಗೆ ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ ಅವರು ನೀಡಿರುವ ಹೇಳಿಕೆ ರಾಜಕೀಯ ಪ್ರೇರಿತವಾಗಿದೆ. 2013ರಲ್ಲಿ ಜಲಸಂಪನ್ಮೂಲ ಸಚಿವರಾಗಿದ್ದಾಗ ಅವರು ರಾಜ್ಯದ ನೀರಾವರಿ ಕ್ಷೇತ್ರಕ್ಕೆ ನೀಡಿದ ಕೊಡುಗೆ ಶೂನ್ಯ ಮತ್ತು ನೀರಾವರಿ ಪ್ರದೇಶದ ವಿಸ್ತರಣೆ ನಗಣ್ಯ’ ಎಂದು ಶಾಶ್ವತ ನೀರಾವರಿ ಹೋರಾಟ ಸಮಿತಿ ಅಧ್ಯಕ್ಷ ಆರ್. ಆಂಜನೇಯ ರೆಡ್ಡಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

‘ಜೆಡಿಎಸ್ ವರಿಷ್ಠ ಎಚ್‌.ಡಿ. ದೇವೇಗೌಡ ಅವರು ಇತ್ತೀಚೆಗೆ ಪ್ರಧಾನಿ ನರೇಂದ್ರ ಮೋದಿ ಅವರ ಮುಂದಿಟ್ಟಿರುವ ಕೃಷ್ಣಾ ನದಿ ನೀರಿನ ಬೇಡಿಕೆಗೆ ಪ್ರತಿಕ್ರಿಯಿಸಿರುವ ಎಂ.ಬಿ. ಪಾಟೀಲ, ‘ಕೃಷ್ಣಾ ನದಿಯಿಂದ ಒಂದು ಹನಿ ನೀರನ್ನೂ ಬರಪೀಡಿತ ಜಿಲ್ಲೆಗಳಾದ ಕೋಲಾರ, ಚಿಕ್ಕಬಳ್ಳಾಪುರಕ್ಕೆ ತೆಗೆದುಕೊಂಡು ಹೋಗಲು ಬಿಡುವುದಿಲ್ಲ’ ಎಂಬ ಅಪ್ರಬುದ್ಧ ಹೇಳಿಕೆ ನೀಡಿದ್ದಾರೆ. ಹಿಂದೆ ಜಲಸಂಪನ್ಮೂಲ ಸಚಿವರಾಗಿದ್ದಾಗ ಅವರು ಕೇವಲ ವಿಜಯಪುರ ಜಿಲ್ಲೆಗೆ ಸಿಮೀತರಾಗಿದ್ದರು. ಹಲವು ದಶಕಗಳಿಂದಲೂ ನೀರಾವರಿ ವಂಚಿತ ಬಯಲುಸೀಮೆಯ ನೀರಿನ ಬವಣೆಗೆ ಅವರೆಂದೂ ತಲೆಕೆಡಿಸಿಕೊಂಡವರಲ್ಲ’ ಎಂದು ಹೇಳಿದ್ದಾರೆ.

‘ಐದು ವರ್ಷಗಳ ಅವಧಿಯಲ್ಲಿ ಪಾಟೀಲರು ಬೊಗಸೆ ನೀರು ಹರಿಯುವ ಖಾತ್ರಿ ಇಲ್ಲದಿದ್ದರೂ ಎತ್ತಿನಹೊಳೆ ಯೋಜನೆಗೆ ದಲ್ಲಾಳಿಗಳ ಜತೆಗೆ ಶಾಮೀಲಾಗಿ, ಸಾವಿರಾರು ಕೋಟಿ ರೂಪಾಯಿಯಲ್ಲಿ ಕೊಳವೆ ಹಾಕಿಸುವುದರಲ್ಲಿ ತಲ್ಲೀನರಾಗಿದ್ದರು. 12 ವರ್ಷ ಕಳೆದರೂ ಒಂದು ಹನಿ ನೀರು ಸಹ ಹರಿಯದಿರುವ ಎತ್ತಿನಹೊಳೆಯ ಬಗ್ಗೆ ಅವರಿಗೆ ಯಾವುದೇ ಪಶ್ಚಾತ್ತಾಪವಿಲ್ಲ. ಅಖಂಡ ಕರ್ನಾಟಕದ ಸಮಗ್ರತೆಯನ್ನು ಮರೆತರೆ ರಾಜಕಾರಣಿಗಳಿಗೆ ಪಾಠ ಕಲಿಸಬೇಕಾಗುತ್ತದೆ’ ಎಂದು ಪ್ರಕಟಣೆಯಲ್ಲಿ ಅವರು ಎಚ್ಚರಿಕೆ ನೀಡಿದ್ದಾರೆ.

ಬೈಕ್‌ಗೆ ಕಾರು ಡಿಕ್ಕಿ: ಸವಾರ ಸಾವು

ಚಿಂತಾಮಣಿ: ನಗರದ ಹೊರವಲಯದಲ್ಲಿರುವ ತಾಲ್ಲೂಕಿನ ಬೂರಗಮಾಕಲಹಳ್ಳಿ ಬಳಿ ಶನಿವಾರ ಕಾರು ದ್ವಿಚಕ್ರವಾಹನಕ್ಕೆ ಡಿಕ್ಕಿ ಹೊಡೆದು ಸಂಭವಿಸಿದ ಅಪಘಾತದಲ್ಲಿ ಸವಾರ ಮೃತಪಟ್ಟಿದ್ದಾರೆ.

ನಗರದ ಅಗ್ರಹಾರದ ಫೋಟೋಗ್ರಾಫರ್ ಆನಂದ್ (53) ಮೃತಪಟ್ಟ ವ್ಯಕ್ತಿ. ಆನಂದ್ ತನ್ನ ಮಗ ಅಭಿಜಿತ್‌ನೊಂದಿಗೆ ಶನಿವಾರ ಸಂಜೆ ಬೂರಗಮಾಕಲಹಳ್ಳಿಯ ದೇವಸ್ಥಾನಕ್ಕೆ ಹೋಗಿ ವಾಪಸ್ ಬರುವ ಸಮಯದಲ್ಲಿ ಅವಘಡ ನಡೆದಿದೆ.

ಎದುರುಗಡೆಯಿಂದ ಬರುತ್ತಿದ್ದ ಕಾರು ದ್ವಿಚಕ್ರವಾಹನಕ್ಕೆ ಡಿಕ್ಕಿ ಹೊಡೆದಿದೆ. ಸವಾರ ಆನಂದ್ ಗಂಭೀರವಾಗಿ ಗಾಯಗೊಂಡಿದ್ದು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಮಿನಿ ಬಸ್ ಪಲ್ಟಿ: ಬಾಲಕ ಸಾವು

ಚಿಕ್ಕಮಗಳೂರು: ಶ್ರೀಗುರು ದತ್ತಾತ್ರೇಯ ಬಾಬಾಬುಡನ್ ಸ್ವಾಮಿ ದರ್ಗಾ ಮತ್ತು ಮಾಣಿಕ್ಯಧಾರ ಜಲಪಾತ ನಡುವಿನ ದುರ್ಗಮ ಹಾದಿಯಲ್ಲಿ, ಪ್ರವಾಸಿಗರ ಮಿನಿ ಬಸ್ ಪಲ್ಟಿಯಾಗಿದ್ದು, ಆರು ವರ್ಷದ ಬಾಲಕ ನವಾಜ್ ಮೃತಪಟ್ಟಿದ್ದಾನೆ.

ತುಮಕೂರು ಜಿಲ್ಲೆಯ ಶಿರಾ ಪಟ್ಟಣದಿಂದ ಬಂದಿದ್ದ ಪ್ರವಾಸಿಗರು, ದರ್ಗಾಕ್ಕೆ ಭೇಟಿ ನೀಡಿ ನಂತರ ಮಾಣಿಕ್ಯಧಾರ ಜಲಪಾತ ವೀಕ್ಷಣೆಗೆ ತೆರಳಿದ್ದರು. ಮಾಣಿಕ್ಯಧಾರಕ್ಕೆ ತೆರಳುವ ಮಾರ್ಗ ದುರ್ಗಮವಾಗಿದ್ದು, ಈ ಹಾದಿಯಲ್ಲಿ ಒಂದು ಕಿಲೊ ಮೀಟರ್ ರಸ್ತೆ ಸಂಪೂರ್ಣವಾಗಿ ಹಾಳಾಗಿದೆ. ವಾಹನ ಸಂಚಾರ ಸಾಧ್ಯವಿಲ್ಲದ ಸ್ಥಿತಿ ಇದೆ.

ಈ ರಸ್ತೆಯಲ್ಲಿ ಸಾಗಿದ ಮಿನಿ ಬಸ್, ಗುಡ್ಡದ ಕೆಳಕ್ಕೆ ಉರುಳಿದೆ. ಮೂರ್ನಾಲ್ಕು ಸುತ್ತು ಉರುಳಿ ಬಸ್ ತಲೆಕೆಳಗಾಗಿ ನಿಂತಿದ್ದು, 20ಕ್ಕೂ ಹೆಚ್ಚು ಪ್ರಯಾಣಿಕರು ಗಾಯಗೊಂಡಿದ್ದಾರೆ. ಉಸಿರುಗಟ್ಟಿದ್ದ ಆರು ವರ್ಷದ ಬಾಲಕ ನವಾಜ್‌ನನ್ನು ಚಿಕ್ಕಮಗಳೂರಿನ ಸರ್ಕಾರಿ ಆಸ್ಪತ್ರೆಗೆ ಕರೆತರಲಾಯಿತು. 45 ಕಿ.ಮೀ. ಕಡಿದಾದ ಘಾಟಿಯಲ್ಲಿ ಆಸ್ಪತ್ರೆಗೆ ಬರುವಷ್ಟರಲ್ಲಿ ಬಾಲಕ ಮೃತಪಟ್ಟಿದ್ದಾನೆ. ಉಳಿದವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಪ್ರಜ್ವಲ್ ರೇವಣ್ಣ ವಿರುದ್ಧ ಕ್ರಮಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೆಲಸದ ಸ್ಥಳದಲ್ಲಿ ಹೆಣ್ಣುಮಕ್ಕಳ ಮೇಲೆ ಶೋಷಣೆ ತಡೆಯುವ ಕಾನೂನು ತರಬೇಕಾದ ರಾಜಕಾರಣಿಯೇ ತನ್ನ ಸುತ್ತ ಇರುವ ಮಹಿಳೆಯರನ್ನು ಬಳಸಿಕೊಂಡು ಮಾಡಿರುವ ಕೃತ್ಯ ನಾಚಿಕೆಗೇಡು’ ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮಂಜುಳಾ ನಾಯ್ಡು ಹೇಳಿದರು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಕವಿತಾ ರೆಡ್ಡಿ ಮತ್ತು ಭವ್ಯ ನರಸಿಂಹಮೂರ್ತಿ ಜೊತೆ ಸುದ್ದಿಗೋಷ್ಠಿಯಲ್ಲಿ ಭಾನುವಾರ ಮಾತನಾಡಿದ ಅವರು, ‘ನೂರಾರು ಮಹಿಳೆಯರ ಮೇಲೆ ದೌರ್ಜನ್ಯ ಎಸಗಿದ ಆರೋಪ ಎದುರಿಸುತ್ತಿರುವ ಹಾಸನ ಸಂಸದ ಪ್ರಜ್ವಲ್ ರೇವಣ್ಣನ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿದರು.

ಕವಿತಾ ರೆಡ್ಡಿ ಮಾತನಾಡಿ, ‘ಮಾಜಿ ಪ್ರಧಾನಿ ಕುಟುಂಬದ ಸದಸ್ಯ ಪ್ರಜ್ವಲ್ ರೇವಣ್ಣ ಮಾಡಿರುವ ಹೀನ ಕೃತ್ಯ ಖಂಡನಿಯ’ ಎಂದರು.

‘ಸಣ್ಣ ವಿಚಾರಕ್ಕೂ ಮಾತನಾಡುವ ಪ್ರಧಾನಿ ಮೋದಿಯವರೇ ನಿಮ್ಮ ಮಿತ್ರ ಪಕ್ಷದ ಲೋಕಸಭಾ ಚುನಾವಣೆಯ ಅಭ್ಯರ್ಥಿಯ ಕೃತ್ಯದ ಬಗ್ಗೆ ಮಾತನಾಡಿ. ಏನೇ ಆದರೂ ಓಡಿ ಬರುವ ಶೋಭಕ್ಕ ಎಲ್ಲಿ ನಿಮ್ಮ ದನಿ? ಸಿ. ಟಿ. ರವಿ, ವಿಜಯೇಂದ್ರ, ಯತ್ನಾಳ, ಅಶೋಕ ಅವರೇ ಈಗ ನಿಮ್ಮ ನಾಲಿಗೆ ಹೊರಳುತ್ತಿಲ್ಲವೇ? ಇದು ರಾಜಕೀಯ ವಿಚಾರವಲ್ಲ; ದೇಶದ ಮರ್ಯಾದೆಯ ವಿಚಾರ. ನಮ್ಮ ಹೆಣ್ಣುಮಕ್ಕಳ ವಿಚಾರ. ಮಹಿಳೆಯ ಪರವಾಗಿ ದನಿ ಎತ್ತಲು ನಿಮಗೆ ಏನಾಗಿದೆ’ ಎಂದು ಪ್ರಶ್ನಿಸಿದರು.

ಭವ್ಯ ನರಸಿಂಹಮೂರ್ತಿ ಮಾತನಾಡಿ, ‘ಪ್ರಜ್ವಲ್ ರೇವಣ್ಣ ನಡೆಸಿರುವ ಕೃತ್ಯ ಇಡೀ ದೇಶದಲ್ಲೇ ಯಾವ ಜನಪ್ರತಿನಿಧಿಯೂ ನಡೆಸದ ಕೃತ್ಯ. ಶೋಷಣೆಗೆ ಒಳಗಾಗಿರುವ ಮಹಿಳೆಯರು ದನಿ ಇಲ್ಲದ ಮಹಿಳೆಯರು. ಈ ಆರೋಪಿಗೆ ತಕ್ಕ ಶಿಕ್ಷೆ ಆಗಬೇಕು’ ಎಂದರು.

‘ತಕ್ಷಣ ಬಂಧಿಸಿ, ಗಲ್ಲಿಗೇರಿಸಿ’

ಬೆಂಗಳೂರು: ‘ಸಂಸದ ಪ್ರಜ್ವಲ್ ರೇವಣ್ಣ ಅವರು ಮುಗ್ಧ ಮಹಿಳೆಯರ ಮೇಲೆ ಅತ್ಯಾಚಾರ ಎಸಗಿ, ಕೀಳುಮಟ್ಟದಿಂದ ಅವಮಾನಿಸಿದ್ದಾರೆ’ ಎಂದು ಆರೋಪಿಸಿರುವ ಕಾಂಗ್ರೆಸ್ ಕಾರ್ಯಕರ್ತರು, ಪ್ರಜ್ವಲ್ ಅವರನ್ನು ತಕ್ಷಣ ಬಂಧಿಸಿ, ಗಲ್ಲಿಗೇರಿಸಬೇಕು ಎಂದು ಆಗ್ರಹಿಸಿ ಪ್ರತಿಭಟನೆ ನಡೆಸಿದರು.

‘ಪ್ರಜ್ವಲ್ ರೇವಣ್ಣ ಹೆಣ್ಣುಮಕ್ಕಳನ್ನು ಅವಮಾನಿಸಿ, ಹಿಂಸಿಸಿ, ಲೈಂಗಿಕ ಕಿರುಕುಳ ನೀಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದ್ದರೂ ಮೌನಕ್ಕೆ ಶರಣಾಗಿರುವ ಬಿಜೆಪಿ ರಾಜ್ಯ, ರಾಷ್ಟ್ರ ನಾಯಕರು ಮಹಿಳೆಯರ ಕ್ಷಮೆ ಕೋರಬೇಕು’ ಎಂದು ಆಗ್ರಹಪಡಿಸಿದರು.

ಪ್ರಜ್ವಲ್ ರೇವಣ್ಣನ ಪ್ರತಿಕೃತಿ ದಹಿಸಿ ಆಕ್ರೋಶ ವ್ಯಕ್ತಪಡಿಸಿದರು. ‘ಮಹಿಳೆಯರನ್ನು ತಾಯಿ ಎಂದು ಸಂಬೋಧಿಸುವ ದೇವೇಗೌಡರು, ಕುಮಾರಸ್ವಾಮಿಯವರು ಇಂತಹ ಕಿಡಿಗೇಡಿ ಕೃತ್ಯವನ್ನು ಯಾಕೆ ಖಂಡಿಸುತ್ತಿಲ್ಲ ಎನ್ನುವುದು ರಾಜ್ಯದ ಜನರ ಪ್ರಶ್ನೆಯಾಗಿದೆ’ ಎಂದೂ ಟೀಕಿಸಿದರು.

ಪ್ರತಿಭಟನೆಯಲ್ಲಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಸ್. ಮನೋಹರ್, ಮುಖಂಡರಾದ ಆನಂದ್ ಪ್ರಕಾಶ್, ಹೇಮರಾಜು, ಮಹಿಳಾ ಕಾಂಗ್ರೆಸ್ ನಾಯಕಿ ಉಮಾಬಾಯಿ ಮುಂತಾದವರು ಇದ್ದರು.

ಸಿ.ಟಿ.ರವಿ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಸಿ.ಟಿ.ರವಿ

ಚಿಕ್ಕಮಗಳೂರು: ಚುನಾವಣೆ ಮುನ್ನಾದಿನ ‘ಎಕ್ಸ್’ನಲ್ಲಿ ದ್ವೇಷದ ಹೇಳಿಕೆ ಪ್ರಕಟಿಸಿದ ಆರೋಪದಲ್ಲಿ ಬಿಜೆಪಿ ಮುಖಂಡ ಸಿ.ಟಿ. ರವಿ ವಿರುದ್ಧ ಎರಡು ಎಫ್‌ಐಆರ್‌ಗಳನ್ನು ಪೊಲೀಸ್ ಇಲಾಖೆ ದಾಖಲಿಸಿದೆ.

ಏ.25ರಂದು ‘ಎಕ್ಸ್’ನಲ್ಲಿ ಹೇಳಿಕೆ ಪ್ರಕಟಿಸಿದ್ದ ಸಿ.ಟಿ. ರವಿ ಅವರು, ‘ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಈ ದೇಶದ ಸಂಪತ್ತಿನ ಮೇಲೆ ಮೊದಲ ಹಕ್ಕು ಹೊಂದಲಿದೆ’ ಎಂದು ಪೋಸ್ಟ್ ಮಾಡಿದ್ದರು. ಏ.26ರಂದು ಪ್ರಕಟಿಸಿದ್ದ ಪೋಸ್ಟ್‌ನಲ್ಲಿ, ‘ಕಾಂಗ್ರೆಸ್‌ನ ಪ್ರಣಾಳಿಕೆ ನೋಡಿದರೆ ಇಸ್ಲಾಮಿಕ್ ದೇಶಗಳ ಐಎಸ್ ರೀತಿಯಲ್ಲಿದೆ’ ಎಂದು ಹೇಳಿದ್ದರು.

ಎರಡೂ ಪೋಸ್ಟ್‌ಗಳ ಕುರಿತು ಸಹಾಯಕ ಚುನಾವಣಾಧಿಕಾರಿ ನೀಡಿದ್ದ ದೂರಿನ ಮೇರೆಗೆ ನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

10–ಕೆ ಓಟ... ಭಿನ್ನ ನೋಟ

1. ಬೆಂಗಳೂರಿನಲ್ಲಿ ಭಾನುವಾರ ನಡೆದ ‘ಟಿಸಿಎಸ್ ವಿಶ್ವ ಟೆನ್ ಕೆ’ ಓಟದ ಚಾಂಪಿಯನ್ಸ್ ರೇಸ್‌ನಲ್ಲಿ ಗಾಲಿ ಕುರ್ಚಿಯೊಂದಿಗೆ ಭಾಗವಹಿಸಿದ್ದ ಅಂಗವಿಕಲರೊಂದಿಗೆ ಕಲಾವಿದರೊಬ್ಬರು ಸಂಭ್ರಮಿಸಿದರು
2. ‘ಮಜಾ ಓಟ’ದಲ್ಲಿ ವಿವಿಧ ವೇಷಭೂಷಣಗಳೊಂದಿಗೆ ಭಾಗವಹಿಸಿದ್ದ ಕಲಾವಿದರು.
3. ‘ಮಜಾ ಓಟ’ದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸಿದ್ದ ಓಟ ಪ್ರಿಯರು

ಪ್ರಜಾವಾಣಿ ಚಿತ್ರಗಳು: ರಂಜು ಪಿ., ಎಸ್‌.ಕೆ. ದಿನೇಶ್

‘ಪಾ.ವೆಂ. ಸ್ಮೃತಿ’ ಕಾರ್ಯಕ್ರಮದಲ್ಲಿ ಜಯಂತ ಕಾಯ್ಕಿಣಿ

‘ದ್ವೇಷದ ಹಾವಿಗೆ ಆಹಾರವಾಗಬೇಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಾವು ಏಣಿ ಆಟದಂತಾಗಿರುವ ಬದುಕಿನಲ್ಲಿ ದ್ವೇಷದ ಹಾವಿಗೆ ಆಹಾರವಾಗಬಾರದು. ಶಿಕ್ಷಣ, ದಾರ್ಶನಿಕರ ಮಾರ್ಗದರ್ಶನದಲ್ಲಿ ಏಣಿ ಹತ್ತಿ ಪ್ರತಿಯೊಂದನ್ನೂ ಪ್ರೀತಿಯಿಂದ ನೋಡಬೇಕು’ ಎಂದು ಸಾಹಿತಿ ಜಯಂತ ಕಾಯ್ಕಿಣಿ ತಿಳಿಸಿದರು.

ಶಿವರಾಮ ಕಾರಂತ ವೇದಿಕೆ, ಪಾ.ವೆಂ. ಆಚಾರ್ಯ ಟ್ರಸ್ಟ್, ವಿನಾಯಕ ದೇವಸ್ಥಾನ ಸಮಿತಿ ಭಾನುವಾರ ಹಮ್ಮಿಕೊಂಡಿದ್ದ ‘ಪಾ.ವೆಂ. ಸ್ಮೃತಿ’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ವಾಟ್ಸ್‌ಆ್ಯಪ್ ಸಂದೇಶಗಳನ್ನು ನಂಬಿ ಯಾರನ್ನೋ ದ್ವೇಷ ಮಾಡಲು ಹೊರಡುವವರ ಸಂಖ್ಯೆ ಹೆಚ್ಚಾಗಿದೆ. ಮತೀಯವಾದ, ಅಟ್ಟಹಾಸ, ದೈಹಿಕ–ಐಹಿಕ ವಿಚಾರಗಳು ನಮ್ಮನ್ನು ನುಂಗುವ ಹಾವುಗಳು. ದ್ವೇಷ ಮೊದಲು ನಮ್ಮನ್ನೇ ಸುಡುತ್ತದೆ ಎಂಬುದನ್ನು ಅರಿಯದೆ ಅಮಾಯಕರು ಬಲಿಯಾಗುತ್ತಿದ್ದಾರೆ’ ಎಂದು ಬೇಸರ ವ್ಯಕ್ತಪಡಿಸಿದರು.

ಪಾ.ವೆಂ. ಆಚಾರ್ಯರು ಪ್ರೀತಿಯನ್ನು ಹಂಚಿದರು. ಅವರೆಂದೂ ಹಣಕ್ಕೆ ಪ್ರಾಮುಖ್ಯ ನೀಡಿದವರಲ್ಲ. ವಿಡಂಬನೆ, ಹಾಸ್ಯ ಅವರ ಬರಹಗಳಲ್ಲಿದ್ದರೂ ಮನರಂಜನೆಯೊಂದೇ ಬದುಕು ಅಲ್ಲ ಎಂಬುದನ್ನು ಅವರು ತಿಳಿದಿದ್ದರು. ವಿಜ್ಞಾನ ಮತ್ತು ಸಮಾಜ ಬಹಳ ಅಗತ್ಯ ಎಂದರಿತು ಕೆಲಸ ಮಾಡಿದ್ದರು ಎಂದು ನೆನಪು ಮಾಡಿಕೊಂಡರು.

‘ನಾವು ಕಲಿತಿರುವುದನ್ನು ಹಂಚುವ ಮೂಲಕ ಒಟ್ಟಿಗೆ ಸಾಗುವುದು ಹಿಂದಿನವರ ಗುಣವಾಗಿತ್ತು. ವೈಚಾರಿಕ ಚಿಂತಕರು ಎಂದರೆ ನಗದೇ ಗಂಭೀರವಾಗಿರಬೇಕು ಎಂದು ಅವರೆಲ್ಲ ತಿಳಿದಿರಲಿಲ್ಲ. ಲವಲವಿಕೆ ಮತ್ತು ಜಿಜ್ಞಾಸೆ ಅವರಿಗೆ ಬೇರೆಯಾಗಿರಲಿಲ್ಲ. ಇದೇ ಸಾಲಿಗೆ ಸೇರಿದವರು ಪಾ.ವೆಂ.’ ಎಂದು ತಿಳಿಸಿದರು.

ಬೆಂಗಳೂರು ವಿಶ್ವವಿದ್ಯಾಲಯ ಕನ್ನಡ ಅಧ್ಯಯನ ಕೇಂದ್ರದ ಪ್ರಾಧ್ಯಾಪಕಿ ಎಚ್. ಶಶಿಕಲಾ ಮಾತನಾಡಿ, ‘ಪಾ.ವೆಂ. ಅವರ ‘ಪದಾರ್ಥ ಚಿಂತಾಮಣಿ’ ಕೃತಿ ನೋಡಿದರೆ ಇಷ್ಟೊಂದು ಪದಗಳನ್ನು ಎಲ್ಲಿಂದ ಹುಡುಕಿ ತಂದಿದ್ದಾರೆ ಎಂದು ಅಚ್ಚರಿಯಾಗುತ್ತದೆ. ಅವರು ಪ್ರತಿ ಪದದ ಮೂಲ ಹುಡುಕಿ ಓದುಗರ ಮುಂದೆ ಇಟ್ಟಿದ್ದಾರೆ’ ಎಂದು ಹೇಳಿದರು.

‘ಓದುಗರನ್ನು ಹಿಡಿದಿಟ್ಟುಕೊಳ್ಳುವ ಶೈಲಿಯಲ್ಲಿ ಪಾ.ವೆಂ. ಬರೆಯುತ್ತಿದ್ದರು. ತಮ್ಮ ಬರಹಗಳ ಮೂಲಕ ಹೊಸ ವಿಚಾರಗಳನ್ನು ತಿಳಿಸಿ, ಓದುಗರನ್ನು ಜಾಗೃತರನ್ನಾಗಿ ಮಾಡುತ್ತಿದ್ದರು. ಯಾವ ಸಂಶೋಧನೆಗೂ ಕಡಿಮೆ ಇಲ್ಲದಂತೆ ಬರೆಯುತ್ತಿದ್ದರು’ ಎಂದರು.

‘ಪಾ.ವೆಂ ಸ್ಮೃತಿ’ ಕಾರ್ಯಕ್ರಮದಲ್ಲಿ ಶಿವರಾಮ ಕಾರಂತ ವೇದಿಕೆ ಅಧ್ಯಕ್ಷೆ ದೀಪಾ ಫಡ್ಕೆ, ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ಪ್ರಾಧ್ಯಾಪಕಿ ಎಚ್‌. ಶಶಿಕಲಾ, ಸಾಹಿತಿ ಜಯಂತ ಕಾಯ್ಕಿಣಿ, ಪಾ.ವೆಂ. ಆಚಾರ್ಯ ಟ್ರಸ್ಟ್ ಕಾರ್ಯದರ್ಶಿ ಛಾಯಾ ಕೆ. ಉಪಾಧ್ಯ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

‘ಬಾಹ್ಯಾಕಾಶ ತಂತ್ರಜ್ಞಾನ ಖಾಸಗಿ ಕಂಪನಿಗಳ ನೆರವು’

ಬೆಂಗಳೂರು (ಪಿಟಿಐ): ಬಾಹ್ಯಾಕಾಶ ತಂತ್ರಜ್ಞಾನ ಸಂಶೋಧನೆಯ ವೇಗ ತೀವ್ರಗೊಳ್ಳಲು ಖಾಸಗಿ ಕ್ಷೇತ್ರದವರು ನೆರವು ನೀಡಲಿದ್ದಾರೆ ಎಂದು ಇಸ್ರೋ ಅಧ್ಯಕ್ಷ ಎಸ್. ಸೋಮನಾಥ್ ಅಧಿಕೃತ ಇನ್‌ಸ್ಟಾಗ್ರಾಂ ಸಂವಾದದಲ್ಲಿ ತಿಳಿಸಿದ್ದಾರೆ.

ಬಹುತೇಕ ದೇಶಗಳಲ್ಲಿ ಬಾಹ್ಯಾಕಾಶ ತಂತ್ರಜ್ಞಾನ ಕ್ಷೇತ್ರಕ್ಕೆ ‘ಸ್ಪೇಸ್‌ಎಕ್ಸ್’ ಎಂಬ ಖಾಸಗಿ ಸಂಸ್ಥೆಯು ಹೆಚ್ಚು ಕೊಡುಗೆ ನೀಡಿದೆ ಎಂದು ಸಂವಾದದಲ್ಲಿ ಶನಿವಾರ ಆಸಕ್ತರೊಬ್ಬರು ಉಲ್ಲೇಖಿಸಿದಾಗ, ಸೋಮನಾಥ್ ಈ ರೀತಿ ಪ್ರತಿಕ್ರಿಯಿಸಿದ್ದಾರೆ.

ರಾಕೆಟ್ ಎಂಜಿನ್‌ಗಳ ತಯಾರಿಕೆಯಲ್ಲಿ ‘ಸ್ಪೇಸ್‌ಎಕ್ಸ್’ ಕಂಪನಿಯನ್ನು ಅಮೆರಿಕ ವ್ಯಾಪಕವಾಗಿ ತೊಡಗಿಸಿಕೊಂಡಿದೆ. ಆ ನಡೆಯನ್ನು ಭಾರತವೂ ಮಾನವ ಚಾಲಿತ ವೈಮಾನಿಕ ವಾಹನಗಳ ತಯಾರಿಕೆಯಲ್ಲಿ ಅನುಸರಿಸಲು ಸಾಧ್ಯವಿದೆ ಎಂದು ಅವರು ಪ್ರತಿಪಾದಿಸಿದ್ದಾರೆ.

ಓಬಳಾಪುರ ಜಾತ್ರೋತ್ಸವ ಆರಂಭ

ದಾಬಸ್ ಪೇಟೆ: ನೆಲಮಂಗಲ ತಾಲ್ಲೂಕು ತ್ಯಾಮಗೊಂಡ್ಲು ಹೋಬಳಿ ಓಬಳಾಪುರ ಗ್ರಾಮದ ಗಂಗಸಂದ್ರಮ್ಮ ದೇವಿ ಮತ್ತು ಗ್ರಾಮ ದೇವತೆ ಜಾತ್ರಾ ಮಹೋತ್ಸವ ಭಾನುವಾರದಿಂದ ಆರಂಭವಾಗಿದ್ದು, ಮೇ 1 ಬುಧವಾರದವರೆಗೆ ನಡೆಯಲಿದೆ.

ಭಾನುವಾರ ಮತ್ತು ಸೋಮವಾರ ವಿವಿಧ ಪೂಜಾ ಕೈಂಕರ್ಯಗಳು ನೆರವೇರಲಿವೆ. ರಾತ್ರಿ 8.30ಕ್ಕೆ ಕಲಾವಿದರಿಂದ ‘ಕುರುಕ್ಷೇತ್ರ ನಾಟಕ’ ಪ್ರದರ್ಶನವಿದೆ ಎಂದು ಧಾರ್ಮಿಕ ಚಿಂತಕ ಕೃಷ್ಣ ಆಚಾರ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬರ ಪರಿಹಾರ: ಕಾಂಗ್ರೆಸ್ ಮತ್ತು ಬಿಜೆಪಿ ವಾಕ್ಸಮರ • ಸಿ.ಎಂ, ಡಿಸಿಎಂಗೆ ಎರಡು ನಾಲಗೆ –ಆರ್. ಅಶೋಕ ಟೀಕೆ

‘ಯುಪಿಎ ಸರ್ಕಾರ ಅವಧಿಯಲ್ಲೇ ಅನ್ಯಾಯ’

ಪ್ರಜಾವಾಣಿ ವಾರ್ತೆ


ಆರ್. ಅಶೋಕ

ಬೆಂಗಳೂರು: ‘ಬರ ಪರಿಹಾರದ ವಿಚಾರದಲ್ಲಿ ರಾಜ್ಯಕ್ಕೆ ಅನ್ಯಾಯ ವಾಗಿರುವುದು ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ಅವಧಿಯಲ್ಲಿ. ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದ ಅವಧಿಯಲ್ಲಿ ಅಲ್ಲ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಭಾನುವಾರ ಮಾತನಾಡಿದ ಅವರು, ‘ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ರಾಜ್ಯಕ್ಕೆ ಭರಪೂರ ಪರಿಹಾರ ನೀಡಿದೆ. ಆದರೆ, ರಾಜ್ಯಕ್ಕೆ ಚಿಪ್ಪು ನೀಡಿರುವ ಕಾಂಗ್ರೆಸ್‌ನವರು ಸುಳ್ಳು ಆರೋಪ ಮಾಡುತ್ತಿದ್ದಾರೆ’ ಎಂದು ದೂರಿದರು.

‘ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ (ಎನ್‌ಡಿಆರ್‌ಎಫ್) ಮಾರ್ಗಸೂಚಿಗಳ ಪ್ರಕಾರ, ₹ 4,860 ಕೋಟಿ ಪರಿಹಾರ ಕೋರಿ ರಾಜ್ಯ ಸರ್ಕಾರ ಮೊದಲು ಕೇಂದ್ರಕ್ಕೆ ಮನವಿ ಸಲ್ಲಿಸಿತ್ತು. ಅದರ ಆಧಾರದಲ್ಲಿ ಕೇಂದ್ರ ₹ 3,454 ಕೋಟಿ ಬಿಡುಗಡೆ ಮಾಡಿದೆ. 2ನೇ ಹಂತದಲ್ಲಿ ₹ 18,172 ಕೋಟಿ ಪರಿಹಾರ ಕೋರಿ ಮನವಿ ಸಲ್ಲಿಸಿದ್ದ ಕಾಂಗ್ರೆಸ್ ಸರ್ಕಾರ, ಅದನ್ನೇ ಮುಂದಿಟ್ಟು ರಾಜಕೀಯ ಮಾಡುತ್ತಿದೆ. ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಅವರು ಎರಡು ನಾಲಗೆ ಇದ್ದಂತೆ ಮಾತನಾಡುತ್ತಾರೆ’ ಎಂದರು.

‘2004–05ರಿಂದ 2014ರವರೆಗೆ ರಾಜ್ಯ ಸರ್ಕಾರ ಬರ, ನೆರೆ ಪರಿಹಾರ ಕೋರಿ ಸಲ್ಲಿಸಿದ್ದ ಪ್ರಸ್ತಾವಗಳು ಮತ್ತು ಬಿಡುಗಡೆಯಾದ ನೆರವಿನ ಮೊತ್ತದ ಮಾಹಿತಿ ಅವಲೋಕಿಸಿ ನೋಡಲಿ. ಬೇಡಿಕೆಯ ಶೇ 4ರಿಂದ 18ರಷ್ಟು ಮೊತ್ತ ಮಾತ್ರ ಬಿಡುಗಡೆ ಮಾಡಲಾಗಿತ್ತು. ಇದು ಯುಪಿಎ ಮೈತ್ರಿಕೂಟದ ಸರ್ಕಾರ ಕರ್ನಾಟಕಕ್ಕೆ ಅನ್ಯಾಯ ಮಾಡಿರುವುದಕ್ಕೆ ಸಾಕ್ಷಿ’ ಎಂದರು. ‘2014ರಿಂದ ಈವರೆಗೆ ನರೇಂದ್ರ ಮೋದಿಯವರ ನೇತೃತ್ವದ ಎನ್‌ಡಿಎ ಮೈತ್ರಿಕೂಟದ ಸರ್ಕಾರದ ಅವಧಿಯಲ್ಲಿ ಬೇಡಿಕೆ ಮೊತ್ತಕ್ಕೆ ಹೋಲಿಸಿದರೆ ಶೇ 88ರವರೆಗೂ ಪರಿಹಾರ ಬಿಡುಗಡೆ ಆಗಿದೆ. ಈ ಕುರಿತು ನೈಜ ಅಂಕಿಅಂಶಗಳನ್ನು ಒದಗಿಸಲು ಬಿಜೆಪಿ ಸಿದ್ಧವಿದೆ. ಸುಳ್ಳು ಹೇಳುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಲಿ’ ಎಂದು ಅಶೋಕ ಆಗ್ರಹಿಸಿದರು.

ಬರ ಪರಿಹಾರ ಅಲ್ಪ: ಪ್ರತಿಭಟನೆ

ವಿಧಾನಸೌಧದ ಆವರಣದ ಗಾಂಧಿ ಪ್ರತಿಮೆ ಬಳಿ ಸಿ.ಎಂ. ಸಿದ್ದರಾಮಯ್ಯ ನೇತೃತ್ವದಲ್ಲಿ ಕಾಂಗ್ರೆಸ್ ನಾಯಕರು ಭಾನುವಾರ ಪ್ರತಿಭಟನೆ ನಡೆಸಿದರು

ಬೆಂಗಳೂರು: ‘ಕರ್ನಾಟಕಕ್ಕೆ ಕೇಂದ್ರ ಸರ್ಕಾರ ಅಲ್ಪ ಪ್ರಮಾಣದಲ್ಲಿ ಬರ ಪರಿಹಾರ ನೀಡಿದೆ ಎಂದು ಆರೋಪಿಸಿ ವಿಧಾನಸೌಧದ ಆವರಣದ ಗಾಂಧಿ ಪ್ರತಿಮೆ ಎದುರು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಕಾಂಗ್ರೆಸ್ ನಾಯಕರು ಚೊಂಬು ಹಿಡಿದು ಭಾನುವಾರ ಪ್ರತಿಭಟನೆ ನಡೆಸಿದರು.

‘ಬರ ಪರಿಹಾರ ವಿಚಾರದಲ್ಲಿ ನಮಗೆ ಅನ್ಯಾಯವಾಗಿದೆ. ನಾವು ಭಿಕ್ಷೆ ಕೇಳುತ್ತಿಲ್ಲ. ಬರ ಪರಿಹಾರ ವಿಚಾರದಲ್ಲಿ ಪ್ರಧಾನಿ ಮೋದಿ ಮತ್ತು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸುಳ್ಳು ಹೇಳಿದ್ದಾರೆ. ಅವರ ಜೊತೆಗೆ ಜೆಡಿಎಸ್ ಸೇರಿಕೊಂಡಿದೆ’ ಎಂದು ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ನಾಡದ್ರೋಹಿಗಳು-ಡಿಕೆಶಿ: ‘ನಮ್ಮ ರಾಜ್ಯಕ್ಕೆ ಬಿಜೆಪಿ, ಜೆಡಿಎಸ್‌ನವರಷ್ಟು ದ್ರೋಹ ಯಾರೂ ಬಗೆದಿಲ್ಲ. ಎರಡೂ ಪಕ್ಷಗಳ ಮುಖಂಡರು ಈ ರಾಜ್ಯದ ದ್ರೋಹಿಗಳು. ರಾಜ್ಯದ ಹಿತಕ್ಕೆ ಒಮ್ಮೆಯೂ ದನಿ ಎತ್ತದವರು. ನಮ್ಮ ಹೋರಾಟ ನಿರಂತರ. ನಾವು ಈ ವಿಚಾರದಲ್ಲಿ ರಾಜಿ ಪ್ರಶ್ನೆಯೇ ಇಲ್ಲ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಟೀಕಿಸಿದರು.

ಕೇಂದ್ರದಿಂದ ಲಾಲಿಪಾಪ್: ‘ಸುಪ್ರೀಂ ಕೋರ್ಟ್ ಛೀಮಾರಿ ಹಾಕಿದ ಬಳಿಕ ಕೇಂದ್ರ ಬಿಡುಗಡೆ ಮಾಡಿದೆ. ಈ ಲಾಲಿಪಾಪ್ ಅನ್ನು ಮೋದಿ ಕೊಟ್ಟಿದ್ದಾರೆ’ ಎಂದು ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಟೀಕಿಸಿದರು.

ಸಚಿವರಾದ ಕೃಷ್ಣ ಬೈರೇಗೌಡ, ಜಿ.ಪರಮೇಶ್ವರ, ಕೆ.ಎಚ್. ಮುನಿಯಪ್ಪ, ರಾಮಲಿಂಗಾರೆಡ್ಡಿ, ದಿನೇಶ್ ಗುಂಡೂರಾವ್, ಡಾ.ಎಂ.ಸಿ.ಸುಧಾಕರ್, ಎನ್. ಚಲುವರಾಯಸ್ವಾಮಿ, ಕಾಂಗ್ರೆಸ್ ಶಾಸಕರು ಪ್ರತಿಭಟನೆಯಲ್ಲಿದ್ದರು.

ಪ್ರತಿಭಟನೆಯಲ್ಲಿದ್ದ ಮುಖಂಡರು ‘ಖಾಲಿ ಚೊಂಬು ಕೊಟ್ಟ ಬಿಜೆಪಿ, ಚೊಂಬೇಶ್ವರ ಮೋದಿ’, ‘ಗೋ ಬ್ಯಾಕ್ ಮೋದಿ ಗೋ ಬ್ಯಾಕ್’ ಎಂದು ಘೋಷಣೆಗಳನ್ನು ಕೂಗಿ, ಆಕ್ರೋಶ ವ್ಯಕ್ತಪಡಿಸಿದರು..

ಬರ ಪರಿಹಾರದ ದಾಖಲೆ ಬಿಡುಗಡೆ ಮಾಡಿದ ಬೊಮ್ಮಾಯಿ


ಬಸವರಾಜ ಬೊಮ್ಮಾಯಿ

ಹಾವೇರಿ: ‘ಕೇಂದ್ರ ಸರ್ಕಾರ ನೀಡಿರುವ ₹3,454 ಕೋಟಿ ಬರ ಪರಿಹಾರದ ಮೊತ್ತಕ್ಕೆ ಸಮನಾಗಿ ರಾಜ್ಯ ಸರ್ಕಾರವೂ ತನ್ನ ಖಜಾನೆಯಿಂದ ರೈತರಿಗೆ ಬರ ಪರಿಹಾರವನ್ನು ತಕ್ಷಣವೇ ನೀಡಬೇಕು’ ಎಂದು ಹಾವೇರಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಸವರಾಜ ಬೊಮ್ಮಾಯಿ ಆಗ್ರಹಿಸಿದರು.

‘ಕಾಂಗ್ರೆಸ್ ಸರ್ಕಾರಕ್ಕೆ ಬದ್ಧತೆ ಇದ್ದರೆ, ಖಜಾನೆಯಲ್ಲಿ ದುಡ್ಡಿದ್ದರೆ ಮತ್ತು ರೈತರ ಬಗ್ಗೆ ನಿಜವಾದ ಕಾಳಜಿ ಇದ್ದರೆ ತನ್ನ ಪಾಲಿನ ಹಣವನ್ನೂ ಸಂಕಷ್ಟದಲ್ಲಿರುವ ಅನ್ನದಾತರ ಖಾತೆಗೆ ತಕ್ಷಣ ಹಾಕಬೇಕು. ಬರ ಪರಿಹಾರದ ಬಗ್ಗೆ ಕಾಂಗ್ರೆಸ್ ಸರ್ಕಾರ ಹಿಂದೆಂದೂ ಕಾಣದ ರಾಜಕಾರಣ ಮಾಡುತ್ತಿದೆ’ ಎಂದು ಅವರು ಭಾನುವಾರ ಪತ್ರಿಕಾ ಗೋಷ್ಠಿಯಲ್ಲಿ ಆರೋಪಿಸಿದರು.

‘ಯುಪಿಎ ಹಾಗೂ ಎನ್‌ಡಿಎ ಅವಧಿಯಲ್ಲಿ ರಾಜ್ಯಕ್ಕೆ ಬಿಡುಗಡೆಯಾದ ಪರಿಹಾರದ ದಾಖಲೆ ಬಿಡುಗಡೆ ಮಾಡಿ ಮಾತನಾಡಿದ ಅವರು, ಯುಪಿಎ ಸರ್ಕಾರದ ಅವಧಿಯಲ್ಲಿ 2004 ರಿಂದ 2014ರವರೆಗೆ 10 ವರ್ಷಗಳಲ್ಲಿ ರಾಜ್ಯ ಸರ್ಕಾರದಿಂದ ಬರ ಪರಿಹಾರಕ್ಕೆ ₹19,579 ಕೋಟಿ ಕೋರಲಾಗಿತ್ತು. ಆದರೆ ಬಿಡುಗಡೆ ಮಾಡಿದ್ದು ಕೇವಲ ₹1,954 ಕೋಟಿ. ಅಂದರೆ ಶೇ 10ರಷ್ಟು ಬರ ಪರಿಹಾರ’ ಎಂದು ಹೇಳಿದರು.

‘ಎನ್‌ಡಿಎ ಸರ್ಕಾರದ ಅವಧಿಯಲ್ಲಿ 2014-24ರವರೆಗೆ ರಾಜ್ಯ ಸರ್ಕಾರದಿಂದ ₹36,588 ಕೋಟಿ ಪರಿಹಾರಕ್ಕೆ ಬೇಡಿಕೆ ಸಲ್ಲಿಸಿದ್ದು, ಎನ್‌ಡಿಎ ನೇತೃತ್ವದ ಕೇಂದ್ರ ಸರ್ಕಾರ ₹9,639 ಕೋಟಿ (ಶೇ 26ರಷ್ಟು) ಬಿಡುಗಡೆ ಮಾಡಿದೆ. ಯುಪಿಎ ಸರ್ಕಾರ ಮತ್ತು ಎನ್‌ಡಿಎ ಸರ್ಕಾರ ಕರ್ನಾಟಕಕ್ಕೆ ನೀಡಿದ ಪರಿಹಾರದಲ್ಲಿ ಅಜಗಜಾಂತರವಿದೆ’ ಎಂದರು. ‘ಯಡಿಯೂರಪ್ಪ ಮತ್ತು ನಾನು ಸಿಎಂ ಆಗಿದ್ದ ಅವಧಿಯಲ್ಲಿ ಪ್ರವಾಹ ಬಂದಾಗ ಮನೆ ಕಳೆದುಕೊಂಡವರಿಗೆ ತಕ್ಷಣ ಪರಿಹಾರವಾಗಿ ₹10 ಸಾವಿರ ಬಿಡುಗಡೆ ಮಾಡಿದ್ದೆವು. ಈಗಿನ ಕಾಂಗ್ರೆಸ್ ಸರ್ಕಾರ ತನ್ನ ಖಜಾನೆಯಿಂದ ನಯಾಪೈಸೆ ಪರಿಹಾರ ನೀಡಿಲ್ಲ’ ಎಂದು ವಾಗ್ದಾಳಿ ನಡೆಸಿದರು.

ಮೋದಿಯವರನ್ನು ಟೀಕಿಸುವುದು ಕಾಂಗ್ರೆಸ್‌ಗೆ ಫ್ಯಾಷನ್ ಆಗಿದೆ. ಕಾಂಗ್ರೆಸ್‌ಗೆ ಮೋದಿ ಫೋಬಿಯಾ ಶುರುವಾಗಿದೆ ಎಂದು ಬೊಮ್ಮಾಯಿ ಹೇಳಿದರು.

ಕಾಂಗ್ರೆಸ್ ನಡೆ ಖಂಡಿಸುವೆ: ಬಿಎಸ್‌ವೈ

ಬಾಗಲಕೋಟೆ: ದೊಡ್ಡ ಪ್ರಮಾಣದಲ್ಲಿ ಪರಿಹಾರ ಹಣ ಬಿಡುಗಡೆ ಮಾಡಿದ ನಂತರವೂ ಪ್ರತಿಭಟಿಸುತ್ತಿರುವುದು ನೋಡಿದರೆ ಕೇಂದ್ರ ಸರ್ಕಾರವನ್ನು ದೂರಬೇಕು. ಅಪಪ್ರಚಾರ ಮಾಡಬೇಕು ಎನ್ನುವುದು ಬಿಟ್ಟರೆ ಕಾಂಗ್ರೆಸ್‌ನದ್ದು ಬೇರೆ ಉದ್ದೇಶ ಕಾಣುತ್ತಿಲ್ಲ. ಸ್ಪಂದಿಸಿದ ನಂತರವೂ ಪ್ರತಿಭಟನೆ ಮಾಡುವುದು ಮುಖ್ಯಮಂತ್ರಿ, ಉಪಮುಖ್ಯಮಂತ್ರಿಗೆ ಶೋಭೆ ತರುವುದಿಲ್ಲ. ಕಾಂಗ್ರೆಸ್‌ನ ಈ ನಡೆಯನ್ನು ಖಂಡಿಸುತ್ತೇನೆ’ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಹೇಳಿದರು.

‘ಯುಪಿಎ ಅವಧಿಯಲ್ಲಿ ರಾಜ್ಯಕ್ಕೆ ಶೇ 10–11ರಷ್ಟು ಅನುದಾನ ಬಿಡುಗಡೆ ಆಗಿದ್ದರೆ, ಎನ್‌ಡಿಎ ಅವಧಿಯಲ್ಲಿ ಶೇ 51ರಷ್ಟು ಅನುದಾನ ನೀಡಲಾಗಿದೆ

ಪ್ರಲ್ಹಾದ ಜೋಶಿ, ಬಿಜೆಪಿ ಅಭ್ಯರ್ಥಿ, ಧಾರವಾಡ ಲೋಕಸಭಾ ಕ್ಷೇತ್ರ

ಯುಪಿಎ ಅವಧಿಯಲ್ಲಿ 20 ತಿಂಗಳ ನಂತರ ರಾಜ್ಯಕ್ಕೆ ಬರ ಪರಿಹಾರ ಕೊಟ್ಟಿದ್ದರು. ಆಗ ಪ್ರತಿಭಟಿಸದ ಕಾಂಗ್ರೆಸ್‌ನವರು ಈಗ ಪ್ರತಿಭಟನೆ ಮಾಡುತ್ತಿದ್ದಾರೆ

ಬಸವರಾಜ ಬೊಮ್ಮಾಯಿ, ಬಿಜೆಪಿ ಅಭ್ಯರ್ಥಿ, ಹಾವೇರಿ ಲೋಕಸಭಾ ಕ್ಷೇತ್ರ

ರಾಜ್ಯದಲ್ಲಿರುವುದು ಕಟುಕ ಸರ್ಕಾರ: ಎಚ್‌ಡಿಕೆ

ಹೊಸಪೇಟೆ: ‘ಆರು ತಿಂಗಳಿಂದ ಬರಗಾಲವಿದೆ. ರೈತರು ಕಂಗಾಲಾಗಿದ್ದಾರೆ. ರಾಜ್ಯ ಸರ್ಕಾರಕ್ಕೆ ರೈತರ ಬಗ್ಗೆ ಅನುಕಂಪ ಇಲ್ಲ. ಇದು ಕಟುಕ ಸರ್ಕಾರ‘ ಎಂದು ಶಾಸಕ ಎಚ್.ಡಿ ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು.

ಹೊಸಪೇಟೆಯಲ್ಲಿ ಭಾನುವಾರ ಆಯೋಜಿಸಿದ್ದ ಬಿಜೆಪಿ ಪ್ರಚಾರ ಸಮಾವೇಶದಲ್ಲಿ ಮಾತನಾಡಿದ ಅವರು, ‘ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಜನರ ಅಭಿವೃದ್ಧಿ ಮಾಡಲಿಲ್ಲ’ ಎಂದರು.

‘ಎನ್‌ಡಿಆರ್‌ಎಫ್‌ನ ಮಾರ್ಗಸೂಚಿ ಪ್ರಕಾರ ₹4900 ಕೋಟಿ ಕೊಟ್ಟರೆ ಸಾಕು ಎಂದು ಕಾಂಗ್ರೆಸ್ ಸರ್ಕಾರವೇ ಹೇಳಿತ್ತು. ಈಗ ₹3454 ಕೊಟ್ಟರೂ ಕಾಂಗ್ರೆಸ್ ಪ್ರತಿಭಟನೆ ಮಾಡುತ್ತಿದೆ. ಇಂಥ ಸರ್ಕಾರವನ್ನು ಕಿತ್ತೊಗೆಯಬೇಕು’ ಎಂದು ಆಗ್ರಹಿಸಿದರು.

‘ಎನ್‌ಡಿಎ ಸರ್ಕಾರದ ಮೇಲೆ ಗೂಬೆ ಕೂರಿಸಲು ಕಾಂಗ್ರೆಸ್ ಯತ್ನ’

ಬೆಂಗಳೂರು: ‘ರಾಜ್ಯದಲ್ಲಿ ಬರ, ನೆರೆ ಬಂದಾಗ ಅತ್ಯಲ್ಪ ಪರಿಹಾರ ನೀಡಿ ವಂಚಿಸಿದ್ದು ಕಾಂಗ್ರೆಸ್ ನೇತೃತ್ವದ ಯುಪಿಎ ಮೈತ್ರಿಕೂಟದ ಸರ್ಕಾರ’ ಎಚ್.ಡಿ. ಕುಮಾರಸ್ವಾಮಿ ದೂರಿದರು.

ಎಚ್.ಡಿ. ಕುಮಾರಸ್ವಾಮಿ

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಯುಪಿಎ ಅವಧಿಯಲ್ಲಿ ರಾಜ್ಯಕ್ಕೆ ಹೆಚ್ಚು ಅನ್ಯಾಯವಾಗಿದೆ. ಆದರೆ, ರಾಜ್ಯದ ಕಾಂಗ್ರೆಸ್ ಸರ್ಕಾರ ಎನ್‌ಡಿಎ ಮೈತ್ರಿಕೂಟದ ಅವಧಿಯಲ್ಲಿ ಅನ್ಯಾಯವಾಗಿದೆ ಎಂದು |ಗೂಬೆ ಕೂರಿಸಲು ಯತ್ನಿಸುತ್ತಿದೆ’ ಎಂದರು.

‘ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರದ ವಿರುದ್ಧ ಅಪಪ್ರಚಾರ ಮಾಡುವುದರಲ್ಲೇ ಕಾಲಹರಣ ಮಾಡಬಾರದು. ಕೇಂದ್ರದಿಂದ ಬಂದಿರುವ ಹಣವನ್ನು ಜನರಿಗೆ ಸಮರ್ಪಕವಾಗಿ ತಲುಪಿಸುವ ಕೆಲಸ ಮಾಡಲಿ’ ಎಂದು ಆಗ್ರಹಿಸಿದರು.

ಸುದ್ದಿ 2 ನಿಮಿಷ

ಪಿತ್ರಾರ್ಜಿತ ಆಸ್ತಿ ತೆರಿಗೆ: ಆಧಾರ ಕೊಡಿ: ಪಿಎಂಗೆ ಸಿಎಂ ಸವಾಲು

ಬೆಂಗಳೂರು: ‘ಪಿತ್ರಾರ್ಜಿತ ಆಸ್ತಿ ತೆರಿಗೆ ಹೇರುವ ಬಗ್ಗೆ ಕಾಂಗ್ರೆಸ್ ಪಕ್ಷ ತನ್ನ ಪ್ರಣಾಳಿಕೆಯಲ್ಲಿ ಎಲ್ಲಿಯೂ ಹೇಳಿಲ್ಲ. ಪಕ್ಷದ ವೇದಿಕೆಯಲ್ಲಿಯೂ ಚರ್ಚೆಯಾಗಿಲ್ಲ. ಆ ಚರ್ಚೆಯನ್ನು ಪಕ್ಷ ನಡೆಸಿದ್ದರೆ ಅದಕ್ಕೆ ಆಧಾರ ಕೊಡಿ’ ಎಂದು ಪ್ರಧಾನಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸವಾಲು ಹಾಕಿದ್ದಾರೆ.

‘ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ ದೇಶದ ಸಂಪತ್ತಿನ ಸಮೀಕ್ಷೆ ನಡೆಸಿ ಹಿಂದೂಗಳ ಸಂಪತ್ತನ್ನು ಏಳೇಳು ಮಕ್ಕಳು ಹುಟ್ಟಿಸುವ ಮುಸ್ಲಿಮರಿಗೆ ಹಂಚಿಕೆ ಮಾಡುತ್ತಾರೆ’ ಎನ್ನುವುದಕ್ಕೆ ನಿಮ್ಮಲ್ಲಿ ಆಧಾರ ಏನಿದೆ? ಲೋಕಸಭಾ ಚುನಾವಣೆಗಾಗಿ ಕಾಂಗ್ರೆಸ್ ಪಕ್ಷ ಬಿಡುಗಡೆ ಮಾಡಿದ ಪ್ರಣಾಳಿಕೆಯ ಯಾವ ಪುಟದಲ್ಲಿ ಈ ಭರವಸೆ ಇದೆ. ಯಾವ ಹಿರಿಯ ನಾಯಕರು ಇದನ್ನು ಹೇಳಿದ್ದಾರೆ? ದಯವಿಟ್ಟು ತಿಳಿಸಿ. ಇಲ್ಲವೆಂದಾದರೆ, ಈ ಸುಳ್ಳು ಆರೋಪಕ್ಕೆ ಕನಿಷ್ಠ ವಿಷಾದವನ್ನಾದರೂ ವ್ಯಕ್ತಪಡಿಸಿ’ ಎಂದಿದ್ದಾರೆ.

‘ಸ್ಯಾಮ್ ಪಿತ್ರೋಡಾ ಅವರು ಈ ವಿಷಯ ಪ್ರಸ್ತಾಪಿಸಿರುವುದು, ಅವರ ವೈಯಕ್ತಿಕ ಅಭಿಪ್ರಾಯ. ಪಿತ್ರಾರ್ಜಿತ ಆಸ್ತಿ ತೆರಿಗೆ ವಿಚಾರದ ಚರ್ಚೆ ಶುರು ಮಾಡಿರುವುದೇ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್. 2019ರ ಬಜೆಟ್‌ನಲ್ಲಿ ಇದನ್ನು ಸೇರಿಸುವ ಬಗ್ಗೆ ಚರ್ಚೆ ನಡೆದಿರುವುದಕ್ಕೆ ಆ ಕಾಲದ ಪತ್ರಿಕೆಗಳ ವರದಿಗಳೇ ಸಾಕ್ಷಿ. ಇದು ನಿಮ್ಮ ಗಮನಕ್ಕೆ ಬಂದಿರಲಿಲ್ಲವೇ? ಈಗ ನಿರ್ಮಲಾ ಸೀತಾರಾಮನ್ ಅವರನ್ನೂ ದೇಶದ್ರೋಹಿ ಪಟ್ಟಿಗೆ ಸೇರಿಸುವಿರಾ’ ಎಂದು ಮುಖ್ಯಮಂತ್ರಿ ಕೇಳಿದ್ದಾರೆ.

ಬಾಂಬ್ ಸ್ಫೋಟ: ಚೆನ್ನೈ ಹೋಟೆಲ್‌ನಲ್ಲಿ ಮಹಜರು

ಬೆಂಗಳೂರು: ದಿ ರಾಮೇಶ್ವರಂ ಕೆಫೆಯಲ್ಲಿ ನಡೆದಿದ್ದ ಬಾಂಬ್ ಸ್ಫೋಟದ ತನಿಖೆ ಕುರಿತು ಎನ್‌ಐಎ (ರಾಷ್ಟ್ರೀಯ ತನಿಖಾ ದಳ) ಅಧಿಕಾರಿಗಳು, ಬಂಧಿತ ಮುಸಾವೀರ್ ಹುಸೇನ್ ಶಾಜೀಬ್, ಅಬ್ದುಲ್ ಮಥೀನ್ ಅಹಮದ್ ತಾಹಾನನ್ನು ಚೆನ್ನೈಗೆ ಕರೆದೊಯ್ದು ಮಹಜರು ನಡೆಸಿದರು.

ಈ ಇಬ್ಬರನ್ನೂ ಕೋಲ್ಕತ್ತ ಬಳಿ ಏಪ್ರಿಲ್ 12ರಂದು ಬಂಧಿಸಲಾಗಿತ್ತು. ಇಬ್ಬರನ್ನೂ ಕೋರ್ಟ್‌ಗೆ ಹಾಜರುಪಡಿಸಿ ಹೆಚ್ಚಿನ ವಿಚಾರಣೆಗೆ ಕಸ್ಟಡಿಗೆ ಪಡೆದುಕೊಂಡಿದ್ದರು.

‘ಮುಸಾವೀರ್ ಹಾಗೂ ಅಬ್ದುಲ್ ತಾಹಾ, ಜನವರಿಯಲ್ಲಿ ಚೆನ್ನೈನ ಹೋಟೆಲ್‌ವೊಂದರಲ್ಲಿ ಕೆಲ ದಿನ ಉಳಿದಿದ್ದರು. ಚೆನ್ನೈನಲ್ಲಿ ಹಲವರನ್ನು ಭೇಟಿಯಾಗಿದ್ದರು. ಈ ಬಗ್ಗೆ ಪುರಾವೆಗಳು ಸಿಕ್ಕಿದ್ದವು’ ಎಂದು ತನಿಖಾ ಸಂಸ್ಥೆ ಮೂಲಗಳು ಹೇಳಿವೆ.

‘ಹೋಟೆಲ್‌ನಲ್ಲಿ ಕೊಠಡಿ ಪಡೆಯಲು ಶಂಕಿತರು, ಹಿಂದೂ ವ್ಯಕ್ತಿಗಳ ಗುರುತಿನ ಚೀಟಿಗಳನ್ನು ನೀಡಿದ್ದರು. ಹೋಟೆಲ್ ಸಿ.ಸಿ. ಟಿ.ವಿ ಕ್ಯಾಮೆರಾ ಪರಿಶೀಲಿಸಿದಾಗ, ಮುಸಾವೀರ್ ಹಾಗೂ ಅಬ್ದುಲ್ ತಾಹಾ ದೃಶ್ಯ ಸೆರೆಯಾಗಿತ್ತು. ಇದೇ ಪುರಾವೆ ಆಧರಿಸಿ ವಿಚಾರಣೆ ನಡೆಯಿತು. ಪ್ರತಿಯೊಂದು ಪ್ರಕ್ರಿಯೆಯನ್ನು ವಿಡಿಯೊ ಚಿತ್ರೀಕರಣ ಮಾಡಿಕೊಳ್ಳಲಾಗಿದೆ’ ಎಂದು ಹೇಳಿವೆ’ ಎಂದು ತಿಳಿಸಿವೆ.

ಐಇಡಿ ತಯಾರಿಸಿದ್ದ ಜಾಗ: ‘ಕೆಫೆಯಲ್ಲಿ ಸ್ಫೋಟಿಸಿದ್ದ ಕಚ್ಚಾ ಬಾಂಬ್ (ಐಇಡಿ) ತಯಾರಿಸಿದ್ದ ಜಾಗಕ್ಕೂ ಕರೆದೊಯ್ದು ಮಾಹಿತಿ ಕಲೆಹಾಕಲಾಗಿದೆ’ ಎಂದು ಮೂಲಗಳು ಹೇಳಿವೆ.

‘ಮೋದಿಗೆ ನಾಚಿಕೆಯೇ ಇಲ್ಲ’

ಒಂದನೇ ಪುಟದಿಂದ...

‘ಹಿಂದುಳಿದವರ ಮೀಸಲಾತಿ ಕಿತ್ತುಕೊಂಡು ಮುಸ್ಲಿಮರಿಗೆ ಕೊಡುತ್ತೇವೆ ಎಂದೂ ಮೋದಿ ಹೇಳಿದ್ದಾರೆ. ಯಪ್ಪ... ಯಪ್ಪ... ಇದೆಂಥ ಸುಳ್ಳು. ಈ ಮನುಷ್ಯನಿಗೆ ನಾಚಿಕೆನೇ ಇಲ್ಲ. ಸುಳ್ಳಿನ ಮಾರುಕಟ್ಟೆ ನಿರ್ಮಾಣ ಮಾಡಿಬಿಟ್ಟಿದ್ದಾರೆ’ ಎಂದೂ ಪದೇಪದೇ ಹೇಳಿದರು.

‘1994ರಲ್ಲಿ ದೇವೇಗೌಡರು ಮುಖ್ಯಮಂತ್ರಿ, ನಾನು ಹಣಕಾಸು ಸಚಿವ. ಆಗ ಮುಸಲ್ಮಾನರಿಗೆ ಶೇ 4ರಷ್ಟು ಮೀಸಲಾತಿ ತರಲಾಗಿದೆ. ಬಸವರಾಜ ಬೊಮ್ಮಾಯಿ ಅದನ್ನು ಕಿತ್ತುಕೊಂಡು ಲಿಂಗಾಯತರು, ಒಕ್ಕಲಿಗರಿಗೆ ಹಂಚಿದರು. ಮುಸ್ಲಿಂ ನಾಯಕರು ಇದನ್ನು ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನಿಸಿದರು. ಕೋರ್ಟ್ ಛೀಮಾರಿ ಹಾಕಿತು. ‘ಯಥಾವತ್ ಮುಂದುವರಿಸುತ್ತೇವೆ’ ಎಂದು ಇದೇ ಬೊಮ್ಮಾಯಿ ಮುಚ್ಚಳಿಕೆ ಬರೆದುಕೊಟ್ಟಿದ್ದಾರೆ’ ಎಂದರು.

‘ನೀವು 10 ವರ್ಷಗಳಲ್ಲಿ ಏನು ಸಾಧನೆ ಮಾಡಿದ್ದೀರಿ ಎಂಬುದನ್ನು ದೇಶದ ಜನರ ಮುಂದಿಡಬೇಕು. ಅದನ್ನು ಬಿಟ್ಟು ತಾಳಿ, ಬಳೆ, ಮುಸಲ್ಮಾನ ಧರ್ಮದ ವಿಚಾರ ಪ್ರಸ್ತಾಪ ಮಾಡುತ್ತೀರಲ್ಲ; ನಿಮಗೆ ನಾಚಿಕೆ ಆಗಬೇಕು. ಈ ದೇಶದ 140 ಕೋಟಿ ಜನರೆಲ್ಲ ಸಮಾನರು ಎಂದು ಸಂವಿಧಾನದಲ್ಲೇ ಹೇಳಿದ್ದಾರೆ. ಈಗಲೂ ಇವರು ಧರ್ಮ, ಮತದ ಮೇಲೆ ರಾಜಕೀಯ ಮಾಡುತ್ತಿದ್ದಾರೆ’ ಎಂದು ಅವರು ಖಂಡಿಸಿದರು.

ಕರ್ನಾಟಕ ಸರ್ಕಾರದ ಸಚಿವಾಲಯ
ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು-560 001.

ಸಂಖ್ಯೆ: ಆಇ/03/ಬಿಎಂಬಿ/2024 ದಿನಾಂಕ : 25-04-2024

ಪತ್ರಿಕಾ ಪ್ರಕಟಣೆ

ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಅಧಿಸೂಚನೆ ಸಂಖ್ಯೆ ಎಫ್.ಡಿ.01 ಬಿಎಂಬಿ 2014, **ದಿನಾಂಕ: 23ನೇ ಮೇ 2014** ನಿಬಂಧನೆಯ ಮೇರೆಗೆ ಹೊರಡಿಸಲಾದ **9.14%, ಕರ್ನಾಟಕ ಸರ್ಕಾರದ ಅಭಿವೃದ್ಧಿ ಸಾಲ 2024, (Karnataka SDL 2024)** ದಿನಾಂಕ: **27ನೇ ಮೇ 2024** ದಿನಾಂಕವೂ ಸೇರಿ ಅವರೆಗೆ ಸಲ್ಲತಕ್ಕ ಎಲ್ಲ ಬಡ್ಡಿ ಸಮೇತ, ದಿನಾಂಕ: **28ನೇ ಮೇ 2024**ರಂದು ನಮೂದು ಬೆಲೆಯಲ್ಲಿ ಸಂದಾಯ ಮಾಡಲಾಗುವುದೆಂದು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ನೆಗೋಷಿಯೇಬಲ್ ಇನಸ್ಟ್ರುಮೆಂಟ್ಸ್ ಅಕ್ಟ್ 1881ರ ರೀತ್ಯ ಮೇಲೆ ಹೇಳಲಾದ ದಿನಾಂಕದಂದು ರಾಜ್ಯ ಸರ್ಕಾರವು ರಜಾ ಘೋಷಿಸಿದ ಸಂದರ್ಭದಲ್ಲಿ ರಾಜ್ಯದಲ್ಲಿ ಪಾವತಿ ಕಛೇರಿಗಳು ಹಿಂದಿನ ದಿನವೇ ಸಾಲಗಳನ್ನು ಮರುಪಾವತಿ ಮಾಡುತ್ತವೆ. **28ನೇ ಮೇ 2024** ರಂದು ಮತ್ತು ಆ ತರುವಾಯ ಸದರಿ ಸಾಲದ ಮೇಲೆ ಯಾವುದೇ ಬಡ್ಡಿ ಪ್ರಾಪ್ತವಾಗುವುದಿಲ್ಲ.

2) ಸರ್ಕಾರದ ಸೆಕ್ಯೂರಿಟಿಗಳ ನಿಬಂಧನೆಗಳು, 2007ರ ಉಪ ನಿಬಂಧನೆ 24(2) ಮತ್ತು 24(3)ರನ್ವಯ ಸಬ್‌ಸಿಡರಿ ಜನರಲ್ ಲೆಡ್ಜರ್ ಅಥವಾ ಕನ್‌ಸ್ಟಿಟುಅಂಟ್ ಸಬ್‌ಸಿಡರಿ ಜನರಲ್ ಲೆಡ್ಜರ್ ಖಾತೆ ಅಥವಾ ಸ್ಟಾಕ್ ಸರ್ಟಿಫಿಕೇಟ್ ರೂಪದಲ್ಲಿ ಸರ್ಕಾರದ ಸೆಕ್ಯೂರಿಟಿಗಳನ್ನು ಹೊಂದಿದ ನೋಂದಾಯಿತ ಧಾರಕರುಗಳಿಗೆ, ಪರಿಪಕ್ವಗೊಂಡ ಉತ್ಪತ್ತಿಗಳನ್ನು ಅವರ ಬ್ಯಾಂಕ್ ಖಾತೆಯ ವಿವರಗಳನ್ನೊಳಗೊಂಡ ಪೇ ಆರ್ಡರ್ ಮೂಲಕ ಅಥವಾ ಅವರು ಇ ಬ್ಯಾಂಕಿಂಗ್ ಖಾತೆಯನ್ನು ಹೊಂದಿದ್ದಲ್ಲಿ, ಆ ಬ್ಯಾಂಕ್ ಖಾತೆಗೆ ಜಮೆ ಮಾಡುವ ಮೂಲಕ ಪಾವತಿಸಲಾಗುವುದು. ಸೆಕ್ಯೂರಿಟಿ ಮೊತ್ತವನ್ನು ಪಾವತಿಸಲು ಮೂಲ ವಂತಿಗೆದಾರರು ಅಥವಾ ತದನಂತರದ ಧಾರಕರು ಬ್ಯಾಂಕ್ ಅಥವಾ ಖಜಾನೆ ಮತ್ತು ಉಪ ಖಜಾನೆ ಅಥವಾ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆ, ಬಡ್ಡಿಯ ಸಂದಾಯಕ್ಕಾಗಿ ಮೊಹರೊತ್ತಲಾಗಿದೆಯೋ / ನೋಂದಾಯಿತವಾಗಿವೆಯೋ, ಅಂತಹ ಬ್ಯಾಂಕ್‌ಗಳಲ್ಲಿ, ಬ್ಯಾಂಕ್ ಖಾತೆಯ ವಿವರಗಳನ್ನು ಸಲ್ಲಿಸತಕ್ಕದ್ದು.

3) ಅದಾಗ್ಯೂ, ಬ್ಯಾಂಕ್ ಖಾತೆಯ ವಿವರಗಳು ಇಲ್ಲದ / ಎಲೆಕ್ಟ್ರಾನಿಕ್ ಬ್ಯಾಂಕಿಂಗ್ ಮೂಲಕ ವಂತಿಗೆಗಳ ಸ್ವೀಕೃತಿ ಸೌಲಭ್ಯವಿಲ್ಲದ ಸಂದರ್ಭಗಳಲ್ಲಿ ವಾಯಿದೆಯ ದಿನದಂದು ಮರುಸಂದಾಯವು ಅನುಕೂಲವಾಗುವಂತೆ, **9.14% ಕರ್ನಾಟಕ ಸರ್ಕಾರದ ಅಭಿವೃದ್ಧಿ ಸಾಲ 2024 (Karnataka SDL 2024)** ಹೊಂದಿದ ಧಾರಕರು ತಮ್ಮ ಸೆಕ್ಯೂರಿಟಿಗಳನ್ನು 20 ದಿನಗಳಿಗೆ ಮುಂಚಿತವಾಗಿ ಪಬ್ಲಿಕ್ ಡೆಟ್ ಆಫೀಸ್‌ಗಳಲ್ಲಿ ಒಪ್ಪಿಸತಕ್ಕದ್ದು, ಸೆಕ್ಯೂರಿಟಿಗಳ ಹಿಂಭಾಗದಲ್ಲಿ ಕೆಳಕಂಡಂತೆ ಯಥಾರೀತಿ ಬರೆದು ಮರುಸಂದಾಯಕ್ಕಾಗಿ ಅವುಗಳನ್ನು ಒಪ್ಪಿಸಬೇಕು.

“ಸರ್ಟಿಫಿಕೇಟ್ ಮೇಲೆ ಬಾಕಿಯಿರುವ ಅಸಲನ್ನು ಪಡೆಯಲಾಗಿದೆ .

4. ಭಾರತೀಯ ಸ್ಟೇಟ್ ಬ್ಯಾಂಕಿನ ಶಾಖೆಯ ಪೈಕಿ ಯಾವುದೇ ಬ್ಯಾಂಕಿನ ಶಾಖೆಯು ಖಜಾನೆ ಕೆಲಸವನ್ನು ನಡೆಸುವ ಸ್ಥಳಗಳಲ್ಲಿ ಸಾಲಪತ್ರಗಳು ಸ್ಟಾಕ್ ಸರ್ಟಿಫಿಕೇಟ್‌ಗಳ ರೂಪದಲ್ಲಿದ್ದರೆ, ಅವುಗಳನ್ನು ಸಂಬಂಧಪಟ್ಟ ಬ್ಯಾಂಕಿನ ಶಾಖೆಗೆ ಒಪ್ಪಿಸಬೇಕೆ ಹೊರತು ಖಜಾನೆಗೆ ಅಥವಾ ಉಪಖಜಾನೆಗೆ ಒಪ್ಪಿಸಕೂಡದು. ಈ ವಿಷಯವನ್ನು ವಿಶೇಷವಾಗಿ ಯಾವಾಗಲೂ ಗಮನದಲ್ಲಿಡಬೇಕು.

5. ಸಂದಾಯದ ಬಗ್ಗೆ ಸೆಕ್ಯೂರಿಟಿಗಳಿಗೆ ಎಲ್ಲಿ ಮೊಹರೊತ್ತಲಾಗಿದೆಯೋ ಆ ಸ್ಥಳಗಳಲ್ಲಿ ಹೊರತು ಬೇರೆ ಸ್ಥಳಗಳಲ್ಲಿ ಸಂದಾಯವನ್ನು ಪಡೆಯಬಯಸುವ ಧಾರಕರು, ಸಂಬಂಧಪಟ್ಟ ಸಾರ್ವಜನಿಕ ಋಣ ಕಛೇರಿಗೆ ಪಾವತಿಯಾಗಿರುವುದಾಗಿ ಯಥಾರೀತಿ ಬರೆದು ರಿಜಿಸ್ಟರ್ಡ್ ಮತ್ತು ವಿಮೆ ಮಾಡಿದ ಅಂಚೆ ಮೂಲಕ ಕಳುಹಿಸತಕ್ಕದ್ದು ಸಾರ್ವಜನಿಕ ಋಣ ಕಛೇರಿಯು ಡ್ರಾಫ್ಟ್ ಮೂಲಕ ಹಣ ಸಂದಾಯ ಮಾಡುತ್ತದೆ. ಅಂಥ ಡ್ರಾಫ್ಟ್‌ನ್ನು ಯಾವುದೇ ಖಜಾನೆ, ಉಪಖಜಾನೆ ಅಥವಾ ಕರ್ನಾಟಕ ರಾಜ್ಯದಲ್ಲಿ ಸರ್ಕಾರದ ಖಜಾನೆ ಕೆಲಸವನ್ನು ನಿರ್ವಹಿಸುವ ಭಾರತೀಯ ಸ್ಟೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಒಪ್ಪಿಸಿ ಹಣ ಪಡೆಯಬಹುದು.

ಸಹಿ/- (ಎಲ್. ಕೆ. ಅತೀಕ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಆರ್ಥಿಕ ಇಲಾಖೆ

DIPR/CP/RO37/AAPL/2024-25

‘ಬಿಜೆಪಿಗೂ ಜನ ಚೊಂಬು ಕೊಡುತ್ತಾರೆ’

ವೈಚಾರಿಕವಾಗಿ ರಾಜಕೀಯ ದಿವಾಳಿಯಾದ ಮೋದಿ–ಸುರ್ಜೇವಾಲಾ ಟೀಕೆ

ಪ್ರಜಾವಾಣಿ ವಾರ್ತೆ

ಬೀದರ್: ‘ಹತ್ತು ವರ್ಷಗಳಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ‘ಹೋಪ್ ಸೇ ಹೇಟ್ರೆಡ್’’ ಆಗಿ ಬದಲಾಗಿದ್ದಾರೆ. ಇದು ಅವರು ವೈಚಾರಿಕವಾಗಿ ರಾಜಕೀಯ ದಿವಾಳಿ ಆಗಿರುವುದು ತೋರಿಸುತ್ತದೆ’ ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಹೇಳಿದರು.

‘ಪ್ರಧಾನಿ ನರೇಂದ್ರ ಮೋದಿ ಅವರಿಗೆ ಹೇಳಲು ಏನೂ ಉಳಿದಿಲ್ಲ. ಮೋದಿಯವರ ಹತ್ತು ವರ್ಷಗಳ ಆಡಳಿತಕ್ಕೆ ಎಷ್ಟು ಅಂಕ ಕೊಡುವಿರಿ ಎಂದು ಯಾರೋ ಒಬ್ಬರು ಬಿಜೆಪಿಯ ಹಿರಿಯ ಮುಖಂಡ ಮುರಳಿ ಮನೋಹರ್ ಜೋಶಿ ಅವರಿಗೆ ಕೇಳಿದ್ದರು. ಅವರು ಏನಾದರೂ ಮಾಡಿದರೆ ತಾನೇ ನಾನು ಅವರಿಗೆ ಅಂಕ ಕೊಡುವುದು ಎಂದು ಜೋಶಿ ಮರು ಪ್ರಶ್ನೆ ಹಾಕಿದ್ದರು. ಅವರ ರಾಜಕೀಯ ಗುರುಗಳೇ ಅವರ ಕುರಿತು ಹೀಗೆ ಹೇಳಿದ್ದಾರೆ’ ಎಂದು ನಗರದಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಖಾಲಿಚೊಂಬು ಕೈಯಲ್ಲಿ ಹಿಡಿದುಕೊಂಡು ಆರೋಪಿಸಿದರು.

ಅತಿ ಹೆಚ್ಚು ತೆರಿಗೆ ಪಾವತಿಸುವ ರಾಜ್ಯಗಳಲ್ಲಿ ಒಂದಾದ ಕರ್ನಾಟಕಕ್ಕೆ ಬರ ಪರಿಹಾರ, ಆದಾಯದ ಪಾಲು ಸೇರಿದಂತೆ ಎಲ್ಲ ವಿಚಾರದಲ್ಲೂ ಘೋರ ಅನ್ಯಾಯ ಮಾಡಿ ಖಾಲಿ ಚೊಂಬು ನೀಡಿರುವ ಬಿಜೆಪಿಗೆ ಈ ಬಾರಿ ರಾಜ್ಯದ ಜನರು ಚುನಾವಣೆಯಲ್ಲಿ ಖಾಲಿ ಚೊಂಬನ್ನೇ ನೀಡುತ್ತಾರೆ ಎಂದು ಭವಿಷ್ಯ ನುಡಿದರು.

ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಸಚಿವರಾದ ಈಶ್ವರ ಬಿ. ಖಂಡ್ರೆ, ರಹೀಂ ಖಾನ್ ಅವರು ಬೀದರ್‌ನಲ್ಲಿ ಭಾನುವಾರ ಖಾಲಿ ಚೊಂಬು ಪ್ರದರ್ಶಿಸಿದರು

‘ಮೋದಿ ಡಿಎನ್‌ಎ ಕರ್ನಾಟಕ ವಿರೋಧಿ’

‘ಪ್ರಧಾನಿ ನರೇಂದ್ರ ಮೋದಿಯವರು ರಾಜ್ಯದ ಹಲವು ಕಡೆ ಚುನಾವಣಾ ಪ್ರಚಾರ ನಡೆಸುತ್ತಿದ್ದಾರೆ. ಆದರೆ, ‘ಮೋದಿ ಗೋ ಬ್ಯಾಕ್’ ಎಂಬ ಘೋಷಣೆಗಳು ಎಲ್ಲ ಕಡೆ ಕೇಳಿ ಬರುತ್ತಿವೆ. ಬರ ಪರಿಹಾರದ ವಿಷಯದಲ್ಲಿ ಕರ್ನಾಟಕದ ರೈತರಿಗೆ ಘೋರ ಅನ್ಯಾಯ ಮಾಡಿರುವ ಮೋದಿ ಅವರ ಡಿಎನ್‌ಎ ಕರ್ನಾಟಕ ವಿರೋಧಿಯಾಗಿದೆ. ಮೋದಿ ಹಾಗೂ ಗೃಹಸಚಿವ ಅಮಿತ್ ಷಾ ಅವರು ಕರ್ನಾಟಕದ ರೈತರಿಗೆ ಅನ್ಯಾಯ ಮಾಡಿದ್ದಾರೆ’ ಎಂದು ರಣದೀಪ್ ಸಿಂಗ್ ಸುರ್ಜೇವಾಲಾ ಟೀಕಿಸಿದರು. .

ರೇವಣ್ಣ, ಪ್ರಜ್ವಲ್ ವಿರುದ್ಧ ಎಫ್‌ಐಆರ್

ಒಂದನೇ ಪುಟದಿಂದ...

ಸರ್ಕಾರ ಶನಿವಾರ ಎಸ್‌ಐಟಿ ರಚಿಸಲು ನಿರ್ಧರಿಸಿತ್ತು. ಭಾನುವಾರವೇ ರೇವಣ್ಣ, ಪ್ರಜ್ವಲ್ ವಿರುದ್ಧ ಪ್ರಕರಣ ದಾಖಲಾಗಿದೆ.

ದೂರಿನಲ್ಲಿ ಏನಿದೆ?: ‘2019ರಲ್ಲಿ ಎಚ್.ಡಿ.ರೇವಣ್ಣ ಅವರ ಮನೆಯಲ್ಲಿ ಕೆಲಸಕ್ಕೆ ಸೇರಿ, ಮೂರೂವರೆ ವರ್ಷ ಕೆಲಸ ಮಾಡಿದ್ದೇನೆ. ಈ ವೇಳೆ ಎಚ್.ಡಿ.ರೇವಣ್ಣ ಅವರು ತಮ್ಮ ಕೊಠಡಿಗೆ ಬರುವಂತೆ ಆಹ್ವಾನಿಸುತ್ತಿದ್ದರು. ಸ್ಟೋರ್ ರೂಮ್‌ನಲ್ಲಿ ಕೈಹಿಡಿದು ಎಳೆಯುತ್ತಿದ್ದರು. ಮೈಮುಟ್ಟುತ್ತಿದ್ದರು. ಸೀರೆಯ ಪಿನ್ ಕಿತ್ತು ಲೈಂಗಿಕ ದೌರ್ಜನ್ಯ ನಡೆಸುತ್ತಿದ್ದರು’ ಎಂದು ಮಹಿಳೆ ದೂರಿನಲ್ಲಿ ತಿಳಿಸಿದ್ದಾರೆ.

‘ಪ್ರಜ್ವಲ್ ರೇವಣ್ಣ ಸಹ, ಅಡುಗೆ ಮನೆಯಲ್ಲಿದ್ದಾಗ ಹಿಂದಿನಿಂದ ಬಂದು ಮೈಮುಟ್ಟುತ್ತಿದ್ದರು. ಹಲವಾರು ಬಾರಿ ಲೈಂಗಿಕ ದೌರ್ಜನ್ಯ ನಡೆಸಿದ್ದಾರೆ. ಮನೆಯಲ್ಲಿದ್ದಾಗ ವಿಡಿಯೊ ಕಾಲ್ ಮಾಡಿ, ನನ್ನ ಮಗಳ ಜೊತೆಗೆ ಅಸಭ್ಯವಾಗಿ ಮಾತನಾಡುತ್ತಿದ್ದರು. ಇದರಿಂದ ಹೆದರಿ ಅವರ ನಂಬರ್ ಬ್ಲಾಕ್ ಮಾಡಿದ್ದೆ. ಅಲ್ಲದೇ ಅವರ ಮನೆಯ ಕೆಲಸ ಬಿಟ್ಟು ಹೊರಬಂದಿದ್ದೆ’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

‘ಇದೀಗ ಹಾಸನ ಜಿಲ್ಲೆಯಾದ್ಯಂತ ಪ್ರಜ್ವಲ್ ರೇವಣ್ಣ ನಡೆಸಿದ್ದಾರೆ ಎನ್ನಲಾಗುವ ಲೈಂಗಿಕ ದೌರ್ಜನ್ಯದ ವಿಡಿಯೊಗಳು ಹರಿದಾಡುತ್ತಿವೆ. ನನಗೂ ಕೆಲವು ವಿಡಿಯೊಗಳು ಬಂದಿವೆ. ನನ್ನ ಜೊತೆ ರೇವಣ್ಣ ಅವರ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಇನ್ನೊಬ್ಬ ಮಹಿಳೆಯ ಮೇಲೆ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ನಡೆಸಿರುವ ವಿಡಿಯೊ ಅದರಲ್ಲಿದೆ. ಇವುಗಳನ್ನು ನೋಡಿ ಭಯವಾಗಿದೆ. ಪತಿ ನನ್ನ ಶೀಲವನ್ನು ಶಂಕಿಸುತ್ತಿದ್ದಾರೆ. ನಿನ್ನ ವಿಡಿಯೊ ಬಂದರೆ ನಮ್ಮ ಗತಿ ಏನು ಎಂದು ಹೇಳುತ್ತಿದ್ದು, ಮಾನಸಿಕವಾಗಿ ಹಿಂಸೆಯಾಗಿದೆ. ಖಾಸಗಿ ವಾಹಿನಿಗೆ ಹೇಳಿಕೆ ನೀಡಿದ್ದರಿಂದ ಜೀವ ಭಯ ಉಂಟಾಗಿದೆ’ ಎಂದು ಹೇಳಿದ್ದಾರೆ.

‘ನನ್ನ ಹಾಗೂ ಮಗಳ ಇಚ್ಛೆಗೆ ವಿರುದ್ಧವಾಗಿ ಲೈಂಗಿಕ ದೌರ್ಜನ್ಯ ಎಸಗಿರುವ ಎಚ್.ಡಿ. ರೇವಣ್ಣ ಮತ್ತು ಪ್ರಜ್ವಲ್ ರೇವಣ್ಣ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ದೂರಿನಲ್ಲಿ ಒತ್ತಾಯಿಸಿದ್ದಾರೆ.

ಪ್ರತಿಕ್ರಿಯಿಸದ ಆರೋಪಿಗಳು: ಪ್ರಕರಣದ ಬಗ್ಗೆ, ಆರೋಪಿಗಳಾದ ಎಚ್.ಡಿ.ರೇವಣ್ಣ ಹಾಗೂ ಪ್ರಜ್ವಲ್ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಪ್ರಜ್ವಲ್ ವಿದೇಶಕ್ಕೆ ತೆರಳಿದ್ದಾರೆ ಎಂದು ಸರ್ಕಾರವೇ ಪ್ರಕಟಣೆ ಹೊರಡಿಸಿದೆ. ಅವರು ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮೂಲಕ ಜರ್ಮನಿಯ ಫ್ರಾಂಕ್‌ಫರ್ಟ್ ನಗರಕ್ಕೆ ತೆರಳಿದ್ದಾರೆ ಎಂಬ ಮಾಹಿತಿ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

ಪ್ರಕರಣ ದಾಖಲಾದ ಬಳಿಕ ಎಚ್.ಡಿ.ರೇವಣ್ಣ ಬಹಿರಂಗವಾಗಿ ಕಾಣಿಸಿಕೊಂಡಿಲ್ಲ.

‘ತಪ್ಪು ಮಾಡಿದ್ದರೆ ಶಿಕ್ಷೆಯಾಗಲೇಬೇಕು’

ಒಂದನೇ ಪುಟದಿಂದ...

‘ನೆಲದ ಕಾನೂನಿನಲ್ಲಿ ತಪ್ಪು ಮಾಡಿದವರಿಗೆ ಶಿಕ್ಷೆ ಆಗುತ್ತದೆ. ತಪ್ಪು ಮಾಡಿದವರನ್ನು ಯಾವುದೇ ಕಾರಣಕ್ಕೂ ಕ್ಷಮಿಸುವುದಿಲ್ಲ. ನಾನಾಗಲೀ, ಎಚ್.ಡಿ. ದೇವೇಗೌಡರಾಗಲೀ ಸಂಕಷ್ಟ ಹೇಳಿಕೊಂಡು ಬಂದ ಮಹಿಳೆಯರನ್ನು ಗೌರವದಿಂದ ನಡೆಸಿಕೊಂಡಿದ್ದೇವೆ. ಮಹಿಳೆಯರ ಬಗ್ಗೆ ಸದಾ ಗೌರವದ ಭಾವನೆ ಹೊಂದಿದ್ದೇವೆ’ ಎಂದು ಹೇಳಿದರು.

ಪ್ರಜ್ವಲ್ ವಿದೇಶಕ್ಕೆ ಪರಾರಿಯಾದ ಕುರಿತು ಪ್ರಶ್ನಿಸಿದಾಗ, ‘ಪ್ರಜ್ವಲ್ ವಿದೇಶಕ್ಕೆ ಹೋಗಿದ್ದರೆ ಅದಕ್ಕೂ ನನಗೂ ಸಂಬಂಧ ಇಲ್ಲ. ಅವರು ತಪ್ಪಿಸಿಕೊಂಡಿದ್ದರೆ ಎಸ್‌ಐಟಿ ಅಧಿಕಾರಿಗಳು ಪತ್ತೆಹಚ್ಚಿ ಕರೆತರಲಿ. ಅದಕಾಗಿಯೇ ನೇಮಿಸಿರುವ ಅಧಿಕಾರಿಗಳಿದ್ದಾರೆ’ ಎಂದರು.

ತನಿಖೆ ಆರಂಭಿಸಿದ ಎಸ್‌ಐಟಿ

ಒಂದನೇ ಪುಟದಿಂದ...

ಅವರೊಂದಿಗೆ ಡಿಜಿಪಿ ಕಚೇರಿಯಲ್ಲಿ ಸಹಾಯಕ ಐಜಿಪಿ ಆಗಿರುವ ಐಪಿಎಸ್ ಅಧಿಕಾರಿ ಸುಮನ್ ಡಿ.ಪೆನ್ನೇಕರ್ ಮತ್ತು ಮೈಸೂರು ಎಸ್.ಪಿ ಆಗಿರುವ ಸೀಮಾ ಲಾಟ್ಕರ್ ಅವರನ್ನು ಸದಸ್ಯೆಯರನ್ನಾಗಿ ನೇಮಿಸಲಾಗಿದೆ. ‘ಸಿಐಡಿ ಪೊಲೀಸ್ ಮಹಾನಿರ್ದೇಶಕರ ಮೇಲ್ವಿಚಾರಣೆಯಲ್ಲಿಯೇ ಎಸ್‌ಐಟಿ ಕಾರ್ಯನಿರ್ವಹಿಸಲಿದೆ’ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ತಂಡಕ್ಕೆ ಅಗತ್ಯವಿರುವ ಅಧಿಕಾರಿಗಳು, ಸಿಬ್ಬಂದಿಯನ್ನು ಪೊಲೀಸ್ ಮಹಾನಿರ್ದೇಶಕರ ಅನುಮೋದನೆಯೊಂದಿಗೆ ನೇಮಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಲೈಂಗಿಕ ದೌರ್ಜನ್ಯ ಕುರಿತು ರಾಜ್ಯದ ಯಾವುದೇ ಠಾಣೆಯಲ್ಲಿ ದಾಖಲಾಗಿರುವ ಅಥವಾ ದಾಖಲಾಗಬಹುದಾದ ಪ್ರಕರಣಗಳನ್ನು ಎಸ್‌ಐಟಿಗೆ ವರ್ಗಾಯಿಸಲು ಆದೇಶಿಸಲಾಗಿದೆ.

‘ಹೊಳೆನರಸೀಪುರ ನಗರ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದಲ್ಲಿ ದೂರುದಾರರಾದ ಸಂತ್ರಸ್ತೆಯ ಹೇಳಿಕೆಯನ್ನು ಶೀಘ್ರದಲ್ಲಿ ದಾಖಲಿಸಲು ಎಸ್‌ಐಟಿ ಸಿದ್ಧತೆ ನಡೆಸಿದೆ. ವಿಡಿಯೊ ತುಣುಕುಗಳ ನೈಜತೆ ಪರೀಕ್ಷೆಗೂ ತಯಾರಿ ನಡೆದಿದೆ’ ಎಂದು ಮೂಲಗಳು ತಿಳಿಸಿವೆ.

ಸಂಕ್ಷಿಪ್ತ ಸುದ್ದಿ

ರಥದ ಚಕ್ರಕ್ಕೆ ಸಿಲುಕಿ ಇಬ್ಬರು ಸಾವು

ವಿಜಯಪುರ: ಇಂಡಿ ತಾಲ್ಲೂಕಿನ ಲಚ್ಯಾಣ ಗ್ರಾಮದ ಸಿದ್ಧಲಿಂಗ ಮಹಾರಾಜರ ರಥೋತ್ಸವದಲ್ಲಿ ಭಾನುವಾರ ನೂಕುನುಗ್ಗಲು ಉಂಟಾಗಿ ರಥದ ಚಕ್ರಕ್ಕೆ ಸಿಲುಕಿ ಇಬ್ಬರು ಮೃತಪಟ್ಟಿದ್ದಾರೆ. ಶೋಭು ಮಹಾದೇವ ಸಿಂಧೆ (52) ಮತ್ತು ಅಭಿಷೇಕ್ ಮುಜಗೊಂಡ (21) ಎಂಬುವರು ಮೃತಪಟ್ಟಿದ್ದಾರೆ. ಘಟನೆಯಲ್ಲಿ ನರೇಂದ್ರ ಶಿವಾಜಿ ಕಟಕಧೋಂಡ ಎಂಬುವರು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ವಿಷಾಹಾರ: ಇಬ್ಬರು ಮಕ್ಕಳು ಸಾವು

ಶಕ್ತಿನಗರ (ರಾಯಚೂರು ಜಿಲ್ಲೆ): ರಾಯಚೂರು ತಾಲ್ಲೂಕಿನ ವಡ್ಲೂರು ಗ್ರಾಮದಲ್ಲಿ ವಿಷಾಹಾರ ಸೇವಿಸಿ ಇಬ್ಬರು ಮಕ್ಕಳು ಮೃತಪಟ್ಟಿದ್ದಾರೆ.

ಆರತಿ (7) ಮತ್ತು ಪ್ರಿಯಾಂಕ (9) ಮೃತ ಮಕ್ಕಳು.

ಹುಸೇನಮ್ಮ (35), ಮಾರುತಿ (40) ಮತ್ತು ಲಕ್ಷ್ಮಣ (60) ಅಸ್ವಸ್ಥಗೊಂಡಿದ್ದಾರೆ. ಇವರು ಮೂಲತಃ ಲಿಂಗಸುಗೂರು ತಾಲ್ಲೂಕಿನ ಕಮಲದಿನ್ನಿ ಗ್ರಾಮದವರು. ವಡ್ಲೂರು ಗ್ರಾಮಕ್ಕೆ ಕೂಲಿ ಕೆಲಸಕ್ಕೆಂದು ಬಂದಿದ್ದರು.

ವಡ್ಲೂರಿನ ಬ್ರಿಕ್ಸ್ ತಯಾರಿಕಾ ಘಟಕದಲ್ಲಿ ಕೂಲಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದರು. ರಾತ್ರಿ ಊಟದ ಸಮಯದಲ್ಲಿ ಚಪಾತಿ, ಹೆಸರು ಕಾಳು, ಅನ್ನ-ಸಾಂಬಾರು ಸೇವಿಸಿದ್ದರು. ಆರೋಗ್ಯದಲ್ಲಿ ಏಕಾಏಕಿ ಏರುಪೇರಾಗಿದೆ. ಕೂಡಲೇ ಮಕ್ಕಳನ್ನು ರಿಮ್ಸ್ ಆಸ್ಪತ್ರೆಗೆ ಕರೆ ತರಲಾಗಿದೆ. ಆಸ್ಪತ್ರೆಯಲ್ಲಿ ಮಕ್ಕಳು ಮೃತಪಟ್ಟಿದ್ದಾರೆ.

ರಾಯಚೂರು ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಧರ್ಮಸ್ಥಳ: ಮೇ 1ಕ್ಕೆ ಸಾಮೂಹಿಕ ವಿವಾಹ

ಉಜಿರೆ: ಧರ್ಮಸ್ಥಳದಲ್ಲಿ ಮೇ 1ರಂದು ಸಂಜೆ 6.45ರ ಗೋಧೂಳಿ ಲಗ್ನದಲ್ಲಿ 52ನೇ ವರ್ಷದ ಉಚಿತ ಸಾಮೂಹಿಕ ವಿವಾಹ ನಡೆಯಲಿದೆ.

ಈಗಾಗಲೇ 123 ಜತೆ ವಧು-ವರರು ಹೆಸರು ನೋಂದಾಯಿಸಿದ್ದು, ಅವರು ನೀಡಿದ ದಾಖಲೆಗಳು ಕ್ರಮಬದ್ಧವಾಗಿದ್ದರೆ ಮದುವೆಗೆ ಸಾಮೂಹಿಕ ವಿವಾಹದಲ್ಲಿ ಅವಕಾಶ ನೀಡಲಾಗುವುದು. ಅಂದು ಬೆಳಿಗ್ಗೆಯಿಂದಲೇ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಅವರು ವಧು-ವರರಿಗೆ ಸೀರೆ, ರವಿಕೆ ಕಣ, ಧೋತಿ ಮತ್ತು ಶಾಲು ವಿತರಿಸುವರು.

ಸಂಜೆ 5 ಗಂಟೆಗೆ ವಧು- ವರರು ಮೆರವಣಿಗೆಯಲ್ಲಿ ದೇವಸ್ಥಾನಕ್ಕೆ ಪ್ರದಕ್ಷಿಣೆ ಬಂದು, ಅಮೃತವರ್ಷಿಣಿ ಸಭಾಭವನಕ್ಕೆ ತೆರಳುವರು. ಅಲ್ಲಿ ಅವರವರ ಸಂಪ್ರದಾಯದಂತೆ ಒಂದೇ ಮುಹೂರ್ತದಲ್ಲಿ ವಿವಾಹ ನಡೆಯುವುದು. ಸಿನಿಮಾ ನಟ ದೊಡ್ಡಣ್ಣ, ಜನಪ್ರತಿನಿಧಿಗಳು ಭಾಗವಹಿಸುವರು.

ಬಳಿಕ ನೂತನ ದಂಪತಿ ದೇವರ ದರ್ಶನ ಮಾಡಿ, ಅನ್ನಪೂರ್ಣ ಭೋಜನಾಲಯದಲ್ಲಿ ಊಟ ಸ್ವೀಕರಿಸಿ ಊರಿಗೆ ತೆರಳುವರು. ಸಾಮೂಹಿಕ ವಿವಾಹದಲ್ಲಿ ಮದುವೆ ಆದವರಿಗೆ ಸರ್ಕಾರದ ವತಿಯಿಂದ ವಿವಾಹ ನೋಂದಣಿ ಪ್ರಮಾಣ ಪತ್ರ ನೀಡಲಾಗುವುದು.

ವರದಕ್ಷಿಣೆ ಹಾಗೂ ದುಂದುವೆಚ್ಚ ತಡೆಯಲು ಧರ್ಮಸ್ಥಳದಲ್ಲಿ 1972ರಿಂದ ಉಚಿತ ಸಾಮೂಹಿಕ ವಿವಾಹ ನಡೆಯುತ್ತಿದೆ. ಕಳೆದ ವರ್ಷದವರೆಗೆ 12,777 ವಿವಾಹಗಳು ನಡೆದಿವೆ.

‘ಪ್ರಜ್ವಲ್ ಕುಟುಂಬದವರೇ ಉತ್ತರಿಸಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಹಿಳೆಯರ ಮೇಲೆ ಪ್ರಜ್ವಲ್ ರೇವಣ್ಣ ಅತ್ಯಾಚಾರ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದೆ. ಇದು, ಪ್ರಪಂಚದ ಅತಿ ದೊಡ್ಡ ಲೈಂಗಿಕ ಹಗರಣ. ಈ ಬಗ್ಗೆ ಪ್ರಜ್ವಲ್ ರೇವಣ್ಣನ ಕುಟುಂಬದವರೇ ಉತ್ತರ ಕೊಡಬೇಕು’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಆಗ್ರಹಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಪ್ರಜ್ವಲ್ ರೇವಣ್ಣನ ತಾತ ದೇವೇಗೌಡರು, ಚಿಕ್ಕಪ್ಪ ಎಚ್.ಡಿ. ಕುಮಾರಸ್ವಾಮಿ, ತಂದೆ ಎಚ್.ಡಿ.ರೇವಣ್ಣ, ತಾಯಿ ಭವಾನಿ ಉತ್ತರಿಸಬೇಕು’ ಎಂದು ಸವಾಲು ಹಾಕಿದರು.

‘ಮಹಿಳೆಯರು ದಾರಿ ತಪ್ಪುತ್ತಿದ್ದಾರೆ ಎಂದು ಎಚ್.ಡಿ.ಕುಮಾರಸ್ವಾಮಿ ಹೇಳಿದ್ದರಲ್ಲ, ಈಗ ಹೇಳಿ ಯಾರು ದಾರಿ ತಪ್ಪಿದ್ದು’ ಎಂದು ಕುಮಾರಸ್ವಾಮಿಯನ್ನು ಅವರು ಪ್ರಶ್ನಿಸಿದರು.

‘ಮನೆಯಲ್ಲೇ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ, ಅತ್ಯಾಚಾರ ನಡೆಯುತ್ತಿದ್ದರೂ ಸುಮ್ಮನಿದ್ದ ನೀವು ಈ ಅಪರಾಧದಲ್ಲಿ ಭಾಗಿ ಆಗಿದ್ದೀರಿ’ ಎಂದು ದೇವೇಗೌಡ ಕುಟುಂಬವನ್ನು ತರಾಟೆಗೆ ತೆಗೆದುಕೊಂಡ ಸಚಿವರು, ‘ತನಿಖೆಯಿಂದ ಸತ್ಯಾಂಶ ಹೊರಗಡೆ ಬರಲಿ. ತಪ್ಪು ಮಾಡಿದವರಿಗೆ ಶಿಕ್ಷೆಯಾಗಲಿ’ ಎಂದರು.

‘ನಾನು ವಿಶ್ವಗುರು ಎಂದು ಮೋದಿ ಹೇಳಿಕೊಳ್ಳುತ್ತಿದ್ದಾರಲ್ಲ, ವಿಶ್ವದಲ್ಲಿ ಎಲ್ಲೇ ಇದ್ದರೂ ಪ್ರಜ್ವಲ್ ರೇವಣ್ಣನನ್ನು ಪತ್ತೆ ಮಾಡಲಿ. ಮೋದಿಯವರ ಬಳಿ ಸಿಬಿಐ, ಇ.ಡಿ, ಐ.ಟಿ ಮುಂತಾದ ಏಜೆನ್ಸಿಗಳಿವೆಯಲ್ಲ. ಮಾಂಗಲ್ಯ ಕಿತ್ತವರನ್ನು ರಕ್ಷಣೆ ಮಾಡಲು ಈ ಏಜೆನ್ಸಿಗಳಿವೆಯೇ? ಮಹಿಳೆಯರ ಮಾಂಗಲ್ಯ ಕಿತ್ತ ಈ ಪ್ರಕರಣವನ್ನು ಮುಚ್ಚಿ ಹಾಕಲು ಯತ್ನಿಸುತ್ತಿದ್ದಾರಲ್ಲ. ಈ ಹಗರಣದ ಬಗ್ಗೆ ಬಿಜೆಪಿ ನಾಯಕರು ಬಾಯಿ ಬಿಡುತ್ತಿಲ್ಲವಲ್ಲ. ನಿಮಗೆ ನಾಚಿಗೆ ಆಗುವುದಿಲ್ಲವೇ’ ಎಂದೂ ಪ್ರಶ್ನಿಸಿದರು.

EXAM DH ಪ್ರಜಾವಾಣಿ MASTERMIND™

ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ

ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ.... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ

ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ www.exammastermind.comಗೆ ಭೇಟಿ ಕೊಡಿ

ವಿದ್ಯಾರ್ಥಿ ವೇತನ ಕೈಪಿಡಿ

ನೀಟ್- ಪಿಯುಸಿ ಪರೀಕ್ಷೆ ದಿಕ್ಸೂಚಿ

NEET BIOLOGY

49) In the diagram of the portion of the TS of the helianthus leaf passing through the midrib given below, certain parts have been indicated by alphabets choose the answer in which these alphabets have been correctly matched with the parts which they indicate.



a) A = Epidermis, B = Palisade parenchyma, C = Spongy parenchyma, D = Stomata, E = Guard cells, F = Endodermis, G = Xylem, H = Phloem

b) A = Epidermis, B = Palisade parenchyma, C = Spongy parenchyma, D = Stomata, E = Guard cells, F = Phloem, G = Metaxylem, H = Protoxylem.

c) A = Epidermis, B = Spongy parenchyma, C = Palisade parenchyma, D = Stomata, E = Guard cells, F = Phloem, G = Metaxylem, H= Protoxylem.

d) A = Epidermis, B = Palisade parenchyma, C = Spongy parenchyma, D = Substomatal cavity, E = Guard cells, F = Phloem, G=Metaxylem, H = Protoxylem.

Ans:- d;

50) Given below is the floral diagram of a flower. Which of the following descriptions of the flower matches the floral diagram?



a) Homochlamydeous, gamopetalous, pentamerous and bisexual

b) Heterochlamydeous, gamopetalous, tetramerous and unisexual

c) Heterochlamydeous, gamopetalous, tetramerous and bisexual

d) Homochlamydeous, polypetalous, pentamerous and bisexual

Ans:- c;

Expln- Heterochlamydeous – having botgh the perianth segments, sepals and petals in distinct whorls.

Gamopetalous – all the petals of the flower are fused.

Tetramerous and bisexual – having both the male and female sex organs.

51) The sequence of nitrogenous bases in one strand of DNA are 3' TAC GCG ACG 5'. The complementary DNA strand should have

a) 5' AUG CGC TGC 3'
b) 3' ATG CGC TGC 5'
c) 5' UAC GCG ACG 3'
d) 5' ATG CGC TGC 3'

Ans:- d;

Expln- the two strands of DNA have opposite polarity and the DNA dependent RNA polymerase also catalyse the polymerisation in only one direction, that is 5' → 3', the strand that has the polarity 3' → 5' acts as a template

52) In a condensed schematic representation of dark reaction of photosynthesis given below, steps are indicated by alphabets. Select the option, where the alphabets are correctly identified.



a) A – CO_2 fixation, B – Phosphorylation, C – Regeneration, D - Reduction

b) A – CO_2 fixation, B – Reduction, C – Phosphorylation, D – Regeneration

c) A–Regeneration, B-CO_2 fixation, C – Reduction, D – Phosphorylation

d) A–CO_2 fixation, B–Phosphorylation, C – Reduction, D–Regeneration

Ans:- d;

53) Mosses and ferns are ....

a) thallophytes of plant kingdom
b) Angiosperms of plant kingdom
c) Gymnosperms of plant kingdom
d) Amphibians of plant kingdom

Ans:- a;

Expln- Thallophytes include bryophytes and pteridophytes. Moss is a bryophyte having thallus-like body, which lacks true roots, stem or leaves. Fern belongs to pteridophytes. They are free living but reduced and thalloid, resembling bryophytes.

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC MATHS

DIFFERENTIABILITY

24) If $y=\left(x+\sqrt{a^2+x^2}\right)^n$;

Show that $\left(a^2+x^2\right)y_1^2=n^2y^2$

Soln :– Given that $y=\left(x+\sqrt{a^2+x^2}\right)^n$ ....(1)

$$\frac{dy}{dx}=n\left(x+\sqrt{a^2+x^2}\right)^{n-1}.\left(1+\frac{1}{2\sqrt{a^2+x^2}}.2x\right)$$

$$=n\left(x+\sqrt{a^2+x^2}\right).\left(\frac{\sqrt{a^2+x^2}+x}{\sqrt{a^2+x^2}}\right)$$

$$=\frac{n\left(\sqrt{a^2+x^2}+x\right)^n}{\sqrt{a^2+x^2}}=\frac{ny}{\sqrt{a^2+x^2}}$$

by using (1) we have, $\sqrt{a^2+x^2}\,y_1=ny$

Squaring both sides, we get

$\left(a^2+x^2\right)\left(y_1^2\right)=n^2y^2$; hence proved.

25) If $y=\tan^{-1}\sqrt{\frac{1-Cosx}{1+Cosx}}$, find $\frac{d^2y}{dx^2}$.

Soln :– Given that $y=\tan^{-1}\sqrt{\frac{1-Cosx}{1+Cosx}}$

$$=\tan^{-1}\sqrt{\frac{2Sin^2(x/2)}{2Cos^2(x/2)}}=\tan^{-1}\sqrt{\tan^2(x/2)}$$

$$=\tan^{-1}(\tan x/2)=x/2$$

$$\Rightarrow\frac{dy}{dx}=\frac{d}{dx}\left(\frac{x}{2}\right)=\frac{1}{2};$$

$$\therefore\frac{d^2y}{dx^2}=\frac{d}{dx}\left(\frac{1}{2}\right)=0$$

26) Differentiate $\sqrt{\frac{1-\tan x}{1+\tan x}}$ w.r.t x.

Soln :– Let $y=\sqrt{\frac{1-\tan x}{1+\tan x}}$

$$\frac{dy}{dx}=\frac{\left[\sqrt{1+\tan x}.\frac{1}{2\sqrt{1-\tan x}}.(-\sec^2x)-\sqrt{1-\tan x}.\frac{1}{2\sqrt{1+\tan x}}.(\sec^2x)\right]}{\left(\sqrt{1+\tan x}\right)^2}$$

$$=\frac{(1+\tan x)(-\sec^2x)-(1-\tan x)\sec^2x}{2\sqrt{1-\tan x}\,\sqrt{1+\tan x}\,(1+\tan x)}$$

$$=\frac{\sec^2(-1-\tan x-1+\tan x)}{2\sqrt{1-\tan x}\,(1+\tan x)^{\frac{3}{2}}}$$

$$=\frac{-2\sec^2x}{2\sqrt{1-\tan x}\,(1+\tan x)^{\frac{3}{2}}}$$

$$\therefore\frac{dy}{dx}=\frac{-2\sec^2x}{2\sqrt{1-\tan x}\,(1+\tan x)^{\frac{3}{2}}}$$

27) If $y=\sqrt{Cosx+\sqrt{Cosx+\sqrt{Cosx+.....+\infty}}}$; find $\frac{dy}{dx}$

Soln :–Given, $y=\sqrt{Cosx+\sqrt{Cosx+\sqrt{Cosx+...+\infty}}}$

$y=\sqrt{Cosx+y}$

Squaring both sides we get

$$y^2=\left(\sqrt{Cosx+y}\right)^2\Rightarrow y^2=Cosx+y$$

$$\frac{dy}{dx}(y^2)=\frac{d}{dx}Cos\,x+\frac{dy}{dx}$$

$$2y\frac{dy}{dx}=-Sin\,x+\frac{dy}{dx}$$

$$2y\frac{dy}{dx}-\frac{dy}{dx}=-Sin\,x$$

$$(2y-1)\frac{dy}{dx}=-Sinx\Rightarrow\frac{dy}{dx}=\frac{-Sinx}{2y-1}$$

$$\therefore\frac{dy}{dx}=\frac{Sinx}{1-2y}$$

28) Find $\frac{dy}{dx}$, if $y=(Cosx)^x+x^{Sinx}$.

Soln :–Given, $y=(Cosx)^x+x^{Sinx}$

Let $u=(Cosx)^x$ and $v=x^{Sinx}$

Then $y=u+v\Rightarrow\frac{du}{dx}+\frac{dv}{dx}$ ....(i)

Consider, $u=(Cosx)^x$

Taking logarithms on both sides, we have

$$\log u=\log(Cosx)^x=x\log(Cosx)$$

$$\frac{d}{dx}(\log u)=\frac{d}{dx}(x\log Cosx)$$

$$\frac{1}{u}.\frac{du}{dx}=x.\frac{1}{Cosx}(-Sinx)+\log(Cosx).1$$

$$=-x\tan x+\log(Cosx)$$

$$\therefore\frac{du}{dx}=u\left[-x\tan x+\log(Cosx)\right]$$

$$=(Cosx)^x\left[-x\tan x+\log(Cosx)\right]$$

Now consider, $v=x^{Sinx}$

taking Logarithms on both sides, we get

$$\log v=Sin\,x\log x$$

$$\frac{d}{dx}(\log v)=\frac{d}{dx}(Sinx.\log x)$$

$$\frac{1}{v}.\frac{dv}{dx}=Sinx.\frac{1}{x}+\log x.Cosx$$

$$\therefore\frac{dv}{dx}=v\left(\frac{Sinx}{x}+\log x.Cosx\right)$$

$$=x^{Sinx}\left(\frac{Sinx}{x}+\log x\,.\,Cosx\right)$$

Substituting for $\frac{du}{dx}$ and $\frac{dv}{dx}$ in (1)

$$\frac{dy}{dx}=(Cosx)^x\left[-x\tan x+\log(Cosx)\right]+x^{Sinx}\left(\frac{Sinx}{x}+\log x\,.\,Cosx\right)$$

29) Differentiate $\tan^{-1}\left(\frac{\sqrt{1+x^2}-1}{x}\right)$ w.r.t $Cos^{-1}\left(\frac{1-x^2}{1+x^2}\right)$

Soln :–Let $y=\tan^{-1}\left(\frac{\sqrt{1+x^2}-1}{x}\right)$.....(1) and

$z=Cos^{-1}\left(\frac{1-x^2}{1+x^2}\right)$......(2)

Put $x=\tan\theta$ & $\theta=\tan^{-1}x$ in eqn (1)

(Contd...)

ದ ಕೇಡೆನ್ಸ್ ಸ್ಕಾಲರ್‌ಶಿಪ್

- **ವಿವರ:** ಕೇಡೆನ್ಸ್ ಡಿಸೈನ್ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್ ಅಂಡ್ ಕನ್ಸರ್ನ್ ಇಂಡಿಯಾ ಫೌಂಡೇಷನ್ ಬೆಂಗಳೂರು, ಪುಣೆ, ದೆಹಲಿ, ಅಹಮದಾಬಾದ್‌ನಲ್ಲಿ ನೆಲೆಸಿರುವ ಪದವಿಪೂರ್ವ ಅಥವಾ ಸ್ನಾತಕೋತ್ತರ ಕೋರ್ಸ್‌ಗಳನ್ನು ಮಾಡುತ್ತಿರುವ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.
- **ಅರ್ಹತೆ:** ಭಾರತೀಯ ಪ್ರಜೆಗಳಿಗೆ ಮಾತ್ರ.
- **ಆರ್ಥಿಕ ಸಹಾಯ:** ಪ್ರಮುಖ ಶೈಕ್ಷಣಿಕ ವೆಚ್ಚಗಳಿಗೆ ಹಣಕಾಸಿನ ಬೆಂಬಲ ನೀಡಲಿದೆ.
- **ಅರ್ಜಿ ಸಲ್ಲಿಸಲು ಕೊನೆ ದಿನ:** 30-05-2024
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.
- **ಹೆಚ್ಚಿನ ಮಾಹಿತಿಗೆ:** Short Url:www.b4s.in/praja/TCSP4

ಸಿಡ್ನಿ ಸ್ಕಾಲರ್ಸ್ ಇಂಡಿಯಾ

- **ವಿವರ:** ಸಿಡ್ನಿಯಲ್ಲಿ ಪದವಿಪೂರ್ವ ಅಥವಾ ಸ್ನಾತಕೋತ್ತರ ಪದವಿ ಪಡೆಯಲು ಬಯಸುವಂಥ ಭಾರತೀಯ ವಿದ್ಯಾರ್ಥಿಗಳಿಗೆ ಸಿಡ್ನಿ ವಿಶ್ವವಿದ್ಯಾಲಯವು ನೀಡುವ ಅವಕಾಶವಾಗಿದೆ.
- **ಅರ್ಹತೆ:** ಉನ್ನತ ಶಿಕ್ಷಣ ಬೆಂಬಲ ಕಾಯ್ದೆ 2003ರಲ್ಲಿ ವಿವರಿಸಿರುವ ವ್ಯಾಖ್ಯಾನದ ಅಡಿಯಲ್ಲಿ ಅಂತರರಾಷ್ಟ್ರೀಯ ವಿದ್ಯಾರ್ಥಿಗಳೆಂದು ವರ್ಗೀಕರಿಸಲ್ಪಟ್ಟ ಭಾರತೀಯ ನಾಗರಿಕರಿಗೆ ಮುಕ್ತವಾಗಿರುತ್ತದೆ. ಅರ್ಜಿದಾರರು ಸಿಡ್ನಿ ವಿಶ್ವವಿದ್ಯಾಲಯದಲ್ಲಿ ಪದವಿಪೂರ್ವ ಅಥವಾ ಸ್ನಾತಕೋತ್ತರ ಅಧ್ಯಯನ ಕೋರ್ಸ್‌ಗೆ ಅರ್ಜಿ ಸಲ್ಲಿಸಿರಬೇಕು. ಆದರೆ ಅಧ್ಯಯನವು ಇನ್ನೂ ಪ್ರಾರಂಭವಾಗಿರಬಾರದು.
- **ಆರ್ಥಿಕ ಸಹಾಯ:** ವಾರ್ಷಿಕ $40,000ದವರೆಗೆ
- **ಅರ್ಜಿ ಸಲ್ಲಿಸಲು ಕೊನೆ ದಿನ:** 02-06-2024
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.
- **ಹೆಚ್ಚಿನ ಮಾಹಿತಿಗೆ:** Short Url: www.b4s.in/praja/SSIS4

ಆ್ಯಸ್ಪೈರ್ ಲೀಡರ್ಸ್ ಪ್ರೋಗ್ರಾಂ

- **ವಿವರ:** ಆ್ಯಸ್ಪೈರ್ ಲೀಡರ್ಸ್ ಕಾರ್ಯಕ್ರಮವು ಆ್ಯಸ್ಪೈರ್ ಇನ್‌ಸ್ಟಿಟ್ಯೂಟ್ ನೀಡುವ ಸಂಪೂರ್ಣ ಧನಸಹಾಯದ 14 ವಾರಗಳ ನಾಯಕತ್ವ ತರಬೇತಿ. ಇದು ಆನ್‌ಲೈನ್ ಕಾರ್ಯಕ್ರಮವಾಗಿದ್ದು, ಸುಸಜ್ಜಿತ ವೃತ್ತಿಪರರಾಗುವಂತೆ ಮಾಡುವ ನಿಟ್ಟಿನಲ್ಲಿ ವಿನ್ಯಾಸಗೊಳಿಸಲಾಗಿದೆ.
- **ಅರ್ಹತೆ:** 18-29 ವರ್ಷ ವಯಸ್ಸಿನೊಳಗಿನ ವಿದ್ಯಾರ್ಥಿಗಳಿಗೆ ಮುಕ್ತವಾಗಿದೆ. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯ ₹8,00,000ಕ್ಕಿಂತ ಕಡಿಮೆ ಇರಬೇಕು. ಮೂರು ವರ್ಷಗಳಲ್ಲಿ ಪದವಿಪೂರ್ವ ಕೋರ್ಸ್‌ಗೆ ದಾಖಲಾದ ಅಥವಾ ಪೂರ್ಣಗೊಳಿಸಿದವರು ಅರ್ಜಿ ಸಲ್ಲಿಸಬಹುದು. ಅರ್ಜಿದಾರರು ಇಂಗ್ಲಿಷ್‌ನಲ್ಲಿ ಮಧ್ಯಂತರ ಮಟ್ಟದ ಪ್ರಾವೀಣ್ಯತೆ ಪಡೆದಿರಬೇಕು.
- **ಸಹಾಯ:** ತರಬೇತಿ ಮಾಡ್ಯೂಲ್‌ಗಳಿಗೆ ಉಚಿತ ಪ್ರವೇಶ, ಹಾವರ್ಡ್ ಅಧ್ಯಾಪಕರಿಂದ ಲೈವ್ ಸೆಷನ್‌ಗಳು .
- **ಅರ್ಜಿ ಸಲ್ಲಿಸಲು ಕೊನೆ ದಿನ:** 03-07-2024
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.
- **ಹೆಚ್ಚಿನ ಮಾಹಿತಿಗೆ:** Short Url: www.b4s.in/praja/ALPS1

CMR UNIVERSITY
Private University Estd in Karnataka State by Act No. 45 of 2013
BENGALURU



SCAN TO UNLOCK A DEDUCTION OF 25% IN APPLICATION FEES

Create The Future

20+ INSTITUTIONS | 75+ ACADEMIC DEPARTMENTS | 1000+ WORLD CLASS FACULTY | STUDENTS OF 45+ NATIONALITIES | 20000+ ALUMNI ACROSS THE GLOBE

CMRU Accelerated Credits
STAY AHEAD OF THE COMPETITION
APPLY TODAY
to get trained and certified for FREE in niche courses

SCHOOL OF ARCHITECTURE
B.Arch.

SCHOOL OF ENGINEERING & TECHNOLOGY
B.Tech.
• Computer Science & Engineering
• Computer Science & Engineering (Artificial Intelligence & Machine Learning)
• Computer Science & Engineering (Data Science)
• Computer Engineering NEW
• Computer Science and Technology NEW
• Information Technology
• Electronics and Communication Engineering
M.Tech. (For Regular and Professionals)
• Computer Science & Engineering
• Artificial Intelligence
Ph.D.
• Computer Science and Engineering (Artificial Intelligence & Machine Learning, Networking and Cloud Computing, Data Analytics, Cyber Security, Data Science and Internet of Things)
• ECE • Mechanical Engineering

SCHOOL OF DESIGN
B.Des.
• Communication Design • Product Design
• Fashion Design • Interior Design

PGCET code: MBA (City Campus) - B150
MBA (OMBR Campus) - B149 | MBA (Lakeside Campus) - B395 | MCA (OMBR Campus) - C527
MCA (Lakeside Campus) - C521

SCHOOL OF LIBERAL STUDIES (Formerly School of Social Science & Humanities)
B.A. / B.A (Hons)* (Major + Minor)
• Psychology • English • Journalism
• Economics • Political Science
• History • Sociology • Media Studies
• Travel & Tourism
B.Sc. | Psychology
M.Sc. | Psychology
• Clinical • Counselling • Human Resource Development and Management
Ph.D.
• Psychology

SCHOOL OF ECONOMICS & COMMERCE
B.Com. / B.Com. (Hons.)*
• General • International Accounting & Finance • Professional - CA Integrated
• Data Science NEW • Certified Management Accountant (US CMA) NEW
Ph.D.
• Economics • Commerce

SCHOOL OF LEGAL STUDIES
B.A., LL.B. (Hons.)
B.B.A., LL.B. (Hons.)
LL.B.
LL.M.
• Constitutional Law • Commercial Law
• Criminal Law NEW
Ph.D. | Law

CET codes: B.Tech. - E257 | B.Arch. - E245

SCHOOL OF SCIENCE & COMPUTER STUDIES (Formerly School of Science Studies)
BCA / BCA (Hons)*
• General • Cloud Computing
• Data Science • Game Development
B.Sc.
• Sound Engineering • Visual Effects & Animation • Information Technology NEW
M.Sc.
• Information Technology in Data Science NEW
MCA
Ph.D. | Computer Application

SCHOOL OF MANAGEMENT
BBA / BBA (Hons.)*
• General • Digital Marketing
• Business Analytics
MBA with Dual Specialisation in
• Marketing • HR • Finance
• Business Analytics • Digital Marketing
• Supply Chain Management
MBA | Business Analytics & Business Intelligence NEW
Executive MBA | Product Leadership
Ph.D. | Management

*Honours degree is 4 years and optional, subjected to government norms.

200+ recruiters
BOSCH KPMG Capgemini EY IBM zomato amazon Deloitte. and many more..

CELEBRATING 30 YEARS
CMRIT
CMR INSTITUTE OF TECHNOLOGY, BENGALURU.
NAAC A++ | NBA | AICTE | nirf RANKED

CMR INSTITUTE OF TECHNOLOGY
Permanently affiliated to VTU | Approved by AICTE | Recognised by the Govt. of Karnataka | Accredited by NAAC with A++ grade | NBA Accredited | NIRF Ranked

BACHELOR OF ENGINEERING
CSE | CSE (AI & ML) | AI & DS | AI & ML | CSE (Data Science) | ISE | ECE

MBA | MCA

PH.D. CSE | ECE | EEE | Mechanical | Civil | Physics | Mathematics | Chemistry | Business Administration | Computer Applications

B.E : CET code - E097 | ComedK code - E032
PGCET code : MCA - C420MC | MBA - B151MB

CMRIT OPEN DAY 2024
CMRIT invites students and parents to the OPEN DAY
Date: 11 May 2024 | Timings: 10:00 am to 4:30pm
Venue: #132, AECS Layout, IT Park Road, Bengaluru 560037
SCAN FOR DETAILS
www.cmrit.ac.in | admission@cmrit.ac.in

Registrations Open CMRUAT | Providing opportunities to get scholarship worth 12 Crores

Admissions Open AY 2024-25

+91 93429 00666

www.cmr.edu.in
admissions@cmr.edu.in

Lakeside Campus: Off Hennur-Bagalur Main Road, Chagalahatti, Bengaluru - 562 149
City Campus: #2, 3rd Cross, 6th A Main, HRBR Layout, Bengaluru - 560 043
OMBR Campus: No.5, Bhuvanagiri, OMBR Layout, Bengaluru - 560 043
CMRIT Campus: 132, AECS Layout, ITPL Main Road, Kundalahalli, Bengaluru - 560 037

ಸುಭಾಷಿತ

ನಾವು ಜೀವಿಸುವುದಕ್ಕಾಗಿ ಸಂಪಾದಿಸಬೇಕೇ ವಿನಾ ಸಂಪಾದನೆಯೇ ಜೀವನ ಆಗಬಾರದು.

–ಸರ್ ಎಂ.ವಿಶ್ವೇಶ್ವರಯ್ಯ

ಮೋದಿ, ರಾಹುಲ್‌ಗೆ ಆಯೋಗದ ನೋಟಿಸ್ ಸಮತೋಲನಕ್ಕಿಂತ ವಸ್ತುನಿಷ್ಠ ನಿಲುವು ಅಗತ್ಯ

ಮಾದರಿ ನೀತಿ ಸಂಹಿತೆ ಉಲ್ಲಂಘನೆಯ ಆರೋಪದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ಚುನಾವಣಾ ಆಯೋಗವು ಕೊನೆಗೂ ನೋಟಿಸ್ ಜಾರಿ ಮಾಡಿದೆ. ಆದರೆ, ನೋಟಿಸ್ ಕೊಟ್ಟ ರೀತಿಯು 'ಕೊಂಕಣ ಸುತ್ತಿ ಮೈಲಾರಕ್ಕೆ' ಎಂಬ ನಾಣ್ಣುಡಿಗೆ ಅನುಗುಣವಾಗಿಯೇ ಇದೆ. ಆಯೋಗವು ಮೋದಿ ಅವರಿಗೆ ನೇರವಾಗಿ ನೋಟಿಸ್ ಕೊಟ್ಟಿಲ್ಲ; ಬದಲಿಗೆ, ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಅವರಿಗೆ ನೋಟಿಸ್ ನೀಡಿದೆ. ಈ ಬಳಸು ಮಾರ್ಗದ ಪ್ರಕ್ರಿಯೆಯನ್ನು ಅನುಸರಿಸಲು ಕಾರಣವೇನು ಎಂಬುದು ಸ್ಪಷ್ಟವಾಗಿಲ್ಲ. ಹಾಗೆಯೇ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೂ ಚುನಾವಣಾ ಆಯೋಗವು ಇದೇ ರೀತಿಯ ನೋಟಿಸ್ ಕೊಟ್ಟಿದೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ವಿರುದ್ಧ ದಾಖಲಾದ ದೂರುಗಳಿಗೆ ಸಂಬಂಧಿಸಿ ಈ ನೋಟಿಸ್ ನೀಡಲಾಗಿದೆ. ಎರಡೂ ಪಕ್ಷಗಳ ಮುಖ್ಯಸ್ಥರು ಸೋಮವಾರದ ಒಳಗೆ ಪ್ರತಿಕ್ರಿಯೆ ನೀಡಬೇಕೆಂದು ಸೂಚಿಸಲಾಗಿದೆ. ಕಾಂಗ್ರೆಸ್ ಪಕ್ಷವು ತಾನು ಅಧಿಕಾರಕ್ಕೆ ಬಂದರೆ ಜನರ ಆಸ್ತಿಯನ್ನು ಕಿತ್ತುಕೊಂಡು ಅದನ್ನು 'ಹೆಚ್ಚು ಮಕ್ಕಳನ್ನು ಹೊಂದಿರುವ' ಮುಸ್ಲಿಮರಿಗೆ ಹಂಚುವುದಾಗಿ ತನ್ನ ಪ್ರಣಾಳಿಕೆಯಲ್ಲಿ ಹೇಳಿದೆ ಎಂದು ಮೋದಿ ಅವರು ಭಾಷಣದಲ್ಲಿ ಹೇಳಿದ್ದಾರೆ ಎಂದು ಆರೋಪಿಸಲಾಗಿದೆ; ಇದರ ವಿರುದ್ಧ ಕಾಂಗ್ರೆಸ್ ನೀಡಿದ ದೂರಿನ ಆಧಾರದಲ್ಲಿ ನಡ್ಡಾ ಅವರಿಗೆ ನೋಟಿಸ್ ನೀಡಲಾಗಿದೆ. 'ಒಂದು ದೇಶ, ಒಂದು ಭಾಷೆ ಮತ್ತು ಒಂದು ಧರ್ಮ' ಎಂದು ಮೋದಿ ಅವರು ಪ್ರತಿಪಾದಿಸುತ್ತಿದ್ದಾರೆ ಎಂದು ರಾಹುಲ್ ಅವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ ಎಂದು ಬಿಜೆಪಿ ನೀಡಿದ ದೂರಿನ ಆಧಾರದಲ್ಲಿ ಖರ್ಗೆ ಮತ್ತು ರಾಹುಲ್ ಅವರಿಗೆ ನೋಟಿಸ್ ನೀಡಲಾಗಿದೆ.

ಈ ಇಬ್ಬರೂ ನಾಯಕರಿಗೆ ಸಂಬಂಧಿಸಿದಂತೆ, ಅವರು ಪ್ರತಿನಿಧಿಸುವ ಪಕ್ಷದ ಮುಖ್ಯಸ್ಥರಿಗೆ ಏಕಕಾಲದಲ್ಲಿ ಒಂದೇ ರೀತಿಯ ನೋಟಿಸ್‌ಗಳನ್ನು ನೀಡಿರುವ ವಿಚಾರವು ಹಲವು ಪ್ರಶ್ನೆಗಳನ್ನು ಎತ್ತಿದೆ

ಯಾವ ವ್ಯಕ್ತಿಗಳ ಮೇಲೆ ದೂರು ದಾಖಲಾದವೋ ಅಂತಹ ವ್ಯಕ್ತಿಗಳಿಗೆ ನೋಟಿಸ್ ನೀಡುವುದರಿಂದ ಆಯೋಗವು ಹಿಂದೇಟು ಹಾಕುತ್ತಿರುವುದಕ್ಕೆ ಕಾರಣವೇನು ಎಂಬುದು ತಿಳಿದಿಲ್ಲ. ಆಯೋಗವು ಇದೇ ಮೊದಲ ಬಾರಿಗೆ ಈ ರೀತಿಯ ಪ್ರಕ್ರಿಯೆ ಅನುಸರಿಸಿದೆ. ಆದರೆ, ಆಯೋಗದ ಈ ರೀತಿಯ ನಡವಳಿಕೆಯ ವಿರುದ್ಧ ಭಾರಿ ಆಕ್ರೋಶ ವ್ಯಕ್ತವಾಗಿದೆ. ನೇರವಾಗಿ ಮೋದಿ ಅವರಿಗೆ ನೋಟಿಸ್ ಕೊಡುವುದಕ್ಕೆ ಆಯೋಗಕ್ಕೆ ಭೀತಿ ಇದೆ ಅಥವಾ ಈ ವಿಚಾರದಲ್ಲಿ ಆಯೋಗವು 'ಅತಿ ಜಾಗರೂಕತೆ' ವಹಿಸಿದೆ ಎಂದು ಟೀಕಾಕಾರರು ಹೇಳಿದ್ದಾರೆ. ಕಾಂಗ್ರೆಸ್ ನಾಯಕಿ ಸುಪ್ರಿಯಾ ಶ್ರೀನೇತ್, ಬಿಜೆಪಿಯ ದಿಲೀಪ್ ಘೋಷ್ ಸೇರಿದಂತೆ ಹಲವರಿಗೆ ಮಾದರಿ ನೀತಿ ಸಂಹಿತೆ ಉಲ್ಲಂಘನೆಗೆ ಸಂಬಂಧಿಸಿದ ನೋಟಿಸನ್ನು ಈ ಹಿಂದೆ ನೀಡಲಾಗಿದೆ. ತಾವು ಆಡುವ ಮಾತುಗಳಿಗೆ ಪಕ್ಷಗಳ ತಾರಾ ಪ್ರಚಾರಕರೇ ಹೊಣೆಗಾರರು ಮತ್ತು ಉನ್ನತ ಸ್ಥಾನಗಳಲ್ಲಿ ಇರುವವರು ಅತಿರೇಕದ ಮಾತುಗಳನ್ನು ಆಡಿದರೆ ಇನ್ನೂ ಹೆಚ್ಚಿನ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂದು ಹೇಳಲಾಗಿದೆ. ಹೊಣೆಗಾರಿಕೆಯು ವೈಯಕ್ತಿಕವಾಗಿ ನಾಯಕರ ಮೇಲೆಯೇ ಇರುವಾಗ ಶಿಕ್ಷೆಯನ್ನು ಕೂಡ ಅವರೇ ಅನುಭವಿಸಬೇಕಾಗುತ್ತದೆ. ಹೀಗಿರುವಾಗ, ಪಕ್ಷದ ಮುಖ್ಯಸ್ಥರನ್ನು ಇಲ್ಲಿ ಎಳೆದು ತರುವ ಅಗತ್ಯ ಏನಿತ್ತು?

ಎರಡು ಪ್ರಮುಖ ರಾಷ್ಟ್ರೀಯ ಪಕ್ಷಗಳ ಮುಖ್ಯಸ್ಥರಿಗೆ ಏಕಕಾಲದಲ್ಲಿ ಒಂದೇ ರೀತಿಯ ನೋಟಿಸ್‌ಗಳನ್ನು ನೀಡಿರುವ ವಿಚಾರವು ಹಲವು ಪ್ರಶ್ನೆಗಳನ್ನು ಎತ್ತಿದೆ. ಇದು ಎರಡೂ ಪಕ್ಷಗಳನ್ನು ಸಮಾನವಾಗಿ ನೋಡಲಾಗಿದೆ ಎಂಬುದರ ಸಂಕೇತ ಎಂದು ಹೇಳಬಹುದು. ಆದರೆ, ಇದು ಖಚಿತತೆ ಇಲ್ಲದ, ಅಸಮಾನರ ನಡುವೆ ಕೃತಕ ಸಮತೋಲನ ತರುವ ಯತ್ನ ಎಂಬಂತೆ ಕಾಣುತ್ತದೆ. ಮೋದಿ ಅವರಿಗೆ ಒಂದು ನೋಟಿಸ್ ನೀಡಿದ ನಂತರ ರಾಹುಲ್ ಗಾಂಧಿ ಅವರಿಗೂ ಒಂದು ಇರಲಿ ಎಂಬ, ಸಮತೋಲನ ಕಾಯ್ದುಕೊಳ್ಳುವ ಮನೋಭಾವವು ಇಲ್ಲಿ ಕಾಣಬಹುದು ಎಂದೂ ಟೀಕಿಸಲಾಗಿದೆ. ಮೋದಿ ಅವರ ವಿರುದ್ಧ 2014ರ ನಂತರ ಸಲ್ಲಿಕೆಯಾದ ಯಾವುದೇ ದೂರಿಗೆ ಸಂಬಂಧಿಸಿ ಆಯೋಗವು ಕ್ರಮ ಕೈಗೊಂಡಿದ್ದೇ ಇಲ್ಲ. 2019ರಲ್ಲಿ, ಒಂದು ಪ್ರಕರಣದಲ್ಲಿ ಅವರನ್ನು ಆಯೋಗವು ದೋಷಮುಕ್ತಗೊಳಿಸಿತ್ತು. ಆದರೆ, ಆ ಆಯುಕ್ತರಲ್ಲಿ ಅಶೋಕ್ ಲವಾಸಾ ಅವರು ಆಯೋಗದ ನಿಲುವಿಗೆ ಭಿನ್ನಮತ ವ್ಯಕ್ತಪಡಿಸಿದ್ದರು ಮತ್ತು ನಂತರದಲ್ಲಿ ಅವರು ಆಯೋಗದ ಹುದ್ದೆಗೆ ರಾಜೀನಾಮೆ ನೀಡಿದ್ದರು. ರಾಹುಲ್ ಗಾಂಧಿ ವಿರುದ್ಧ ಇರುವ ದೂರಿಗೆ ಹೋಲಿಸಿದರೆ ಮೋದಿ ವಿರುದ್ಧ ಇರುವ ದೂರುಗಳ ಸಂಖ್ಯೆ ಹೆಚ್ಚು ಮತ್ತು ಅವು ಹೆಚ್ಚು ಗಂಭೀರವಾದ ಪ್ರಕರಣಗಳು. ಹಾಗಾಗಿಯೇ ಆಯೋಗವು ಇಬ್ಬರೂ ನಾಯಕರನ್ನು ಸಮಾನವಾಗಿ ನೋಡಿದ್ದು ಏಕೆ ಎಂಬ ಪ್ರಶ್ನೆ ಹುಟ್ಟಿಕೊಂಡಿದೆ. ಇಲ್ಲಿ ಒಂದು ಅಂಶವನ್ನು ಮತ್ತೆ ಮತ್ತೆ ಹೇಳಲೇಬೇಕಾಗಿದೆ: ನೀವು ಎಷ್ಟೇ ದೊಡ್ಡ ಹುದ್ದೆಯಲ್ಲಿಯಾದರೂ ಇರಬಹುದು, ಕಾನೂನು, ಅದರಲ್ಲೂ ವಿಶೇಷವಾಗಿ ಚುನಾವಣಾ ಕಾನೂನು ನಿಮಗಿಂತ ಮೇಲೆಯೇ ಇರಬೇಕು.

ರಾಜ್ಯದ ಫಲಿತಾಂಶವು ರಾಷ್ಟ್ರ ರಾಜಕಾರಣದ ಮೇಲೆ ನಿರ್ಣಾಯಕ ಪರಿಣಾಮ ಬೀರಲಿದೆ

ಚುನಾವಣೆ ಒಂದು, ಪ್ರಭಾವ ಹಲವು

ಜನರಾಜಕಾರಣ

ಪ್ರೊ. ಸಂದೀಪ್ ಶಾಸ್ತ್ರಿ

ಕರ್ನಾಟಕದ 14 ಲೋಕಸಭಾ ಕ್ಷೇತ್ರಗಳ ಮತದಾರರು ಮಹತ್ವದ ಚುನಾವಣೆಯಲ್ಲಿ ಶುಕ್ರವಾರ ತಮ್ಮ ಹಕ್ಕು ಚಲಾಯಿಸಿದ್ದಾರೆ. ಅಂದರೆ, ರಾಜ್ಯದ ಒಟ್ಟು ಲೋಕಸಭಾ ಕ್ಷೇತ್ರಗಳ ಪೈಕಿ ಅರ್ಧದಷ್ಟು ಕ್ಷೇತ್ರಗಳ ಜನ ತಮ್ಮ ತೀರ್ಮಾನವನ್ನು ದಾಖಲಿಸಿದ್ದಾರೆ. ರಾಜ್ಯದ ಮೂರೂ ಪ್ರಮುಖ ರಾಜಕೀಯ ಪಕ್ಷಗಳ ಪಾಲಿಗೆ ಈ ಕ್ಷೇತ್ರಗಳ ಮತದಾರರ ತೀರ್ಮಾನವು ದೂರಗಾಮಿ ಪರಿಣಾಮಗಳನ್ನು ಉಂಟುಮಾಡಲಿದೆ.

ವಿಂಧ್ಯ ಪರ್ವತದ ದಕ್ಷಿಣಕ್ಕೆ ತನ್ನ ನೆಲೆಯನ್ನು ವಿಸ್ತರಿಸಿಕೊಳ್ಳುವ ಯತ್ನದ ಭಾಗವಾಗಿ ಬಿಜೆಪಿಯು ರಾಜ್ಯದಲ್ಲಿ 2019ರ ಸಾಧನೆಯನ್ನು ಪುನರಾವರ್ತಿಸಲು ಎಲ್ಲ ಪ್ರಯತ್ನಗಳನ್ನೂ ಮಾಡಿದೆ. ತನ್ನ ಮಿತ್ರಪಕ್ಷ ಆಗಿರುವ ಜೆಡಿಎಸ್, ಸೀಟು ಹಂಚಿಕೆಯ ಭಾಗವಾಗಿ ಅದಕ್ಕೆ ಸಿಕ್ಕಿರುವ ಎಲ್ಲ ಸ್ಥಾನಗಳಲ್ಲಿ ಒಳ್ಳೆಯ ಸಾಧನೆ ತೋರಲಿದೆ, ಹಾಗಾಗಿ ರಾಜ್ಯದಲ್ಲಿ ತನಗೆ 'ಕ್ಲೀನ್ ಸ್ವೀಪ್' ಸಾಧ್ಯವಾಗಲಿದೆ ಎಂದು ಬಿಜೆಪಿ ನಂಬಿದೆ.

ಆದರೆ ಕಾಂಗ್ರೆಸ್ಸಿನಿಂದ ಪ್ರಬಲ ಪೈಪೋಟಿ ಎದುರಾಗಿರುವ ಕಾರಣ ಈ ಗುರಿ ತಲುಪುವುದು ಬಿಜೆಪಿಗೆ ಬಹಳ ತ್ರಾಸದಾಯಕ. ಕಾಂಗ್ರೆಸ್ ಪಾಲಿಗೆ, 2023ರ ವಿಧಾನಸಭಾ ಚುನಾವಣೆಯ ಹೊತ್ತಿನಲ್ಲಿ ಇದ್ದಂತಹ ಉತ್ಸಾಹವನ್ನು ಕಾಯ್ದುಕೊಳ್ಳುವುದು ಬಹಳ ಮುಖ್ಯವಾಗುತ್ತದೆ. ಲೋಕಸಭಾ ಚುನಾವಣೆಯಲ್ಲಿ ಹೆಚ್ಚು ಸ್ಥಾನಗಳನ್ನು ಗೆದ್ದುಕೊಳ್ಳುವುದಕ್ಕೆ ಹಾಗೂ ರಾಜ್ಯ ಸರ್ಕಾರಕ್ಕೆ ಯಾವುದೇ ರಾಜಕೀಯ ಅಡ್ಡಿ ಎದುರಾಗದಂತೆ ನೋಡಿಕೊಳ್ಳುವುದಕ್ಕೆ ಇದು ಅವಶ್ಯ. ಮೊದಲ ಹಂತದ ಚುನಾವಣೆಯಲ್ಲಿ ದಾಖಲಾಗಿರುವ ಮತದಾನದ ಪ್ರಮಾಣವು ಫಲಿತಾಂಶದ ದಿಕ್ಕನ್ನು ಹೇಳುವ ವಿಚಾರವಾಗಿ ಯಾವುದೇ ಸೂಚನೆ ನೀಡುತ್ತಿಲ್ಲ. ಬೆಂಗಳೂರಿನ ಮತದಾರರ ಉದಾಸೀನ ಧೋರಣೆಯು ಎದ್ದುಕಾಣುವಂತಿದೆ.

ಮೊದಲ ಹಂತದಲ್ಲಿ ಚುನಾವಣೆ ನಡೆದ 14 ಲೋಕಸಭಾ ಕ್ಷೇತ್ರಗಳ ಪೈಕಿ 11ರಲ್ಲಿ ಬಿಜೆಪಿಯು ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿದ್ದು, ಅಲ್ಲಿ ಅದರ ಅಭಿಯಾನ ಕಾರ್ಯತಂತ್ರವು ಬಹಳ ಸ್ಪಷ್ಟವಾಗಿತ್ತು. ಅಲ್ಲಿ ಬಿಜೆಪಿ ಅಭ್ಯರ್ಥಿಗಳು ಪ್ರಧಾನಿ ನರೇಂದ್ರ ಮೋದಿ ಅವರ ಹೆಸರಿನಲ್ಲಿಯೇ ಮತ ಯಾಚಿಸಿದರು. ಮೋದಿ ಅವರನ್ನು ಮೂರನೆಯ ಬಾರಿಗೆ ಪ್ರಧಾನಿಯನ್ನಾಗಿಸಲು ತಾವು ಅಭ್ಯರ್ಥಿಯಾಗಿರುವುದಾಗಿ ಅವರೆಲ್ಲ ಬಹಳ ಸ್ಪಷ್ಟವಾಗಿ ಹೇಳಿದರು. ಮಾರ್ಚ್ ಕೊನೆಯ ವಾರ ಹಾಗೂ ಏಪ್ರಿಲ್ ಆರಂಭದಲ್ಲಿ ಚುನಾವಣಾ ಪೂರ್ವ ಸಮೀಕ್ಷೆ ನಡೆಸಿದ ಲೋಕನೀತಿ– ಸಿಎಸ್‌ಡಿಎಸ್ ಸಂಸ್ಥೆ, ಸಮೀಕ್ಷೆಯಲ್ಲಿ ಪಾಲ್ಗೊಂಡವರಲ್ಲಿ ಶೇಕಡ 50ಕ್ಕಿಂತ ಹೆಚ್ಚಿನವರು ಪ್ರಧಾನಿಯಾಗಿ ಮೋದಿ ಅವರನ್ನು ಬಯಸುವುದಾಗಿ ಹೇಳಿದುದನ್ನು ದಾಖಲಿಸಿದೆ. ಕರ್ನಾಟಕದಲ್ಲಿ ಶೇಕಡ 25ಕ್ಕಿಂತ ತುಸು ಹೆಚ್ಚಿನವರು ರಾಹುಲ್ ಗಾಂಧಿ ಅವರು ಪ್ರಧಾನಿಯಾಗಬೇಕೆಂದು ಬಯಸುವುದಾಗಿ ಹೇಳಿದರು.

ಪ್ರಧಾನಿಯವರನ್ನು ಚುನಾವಣಾ ಅಭಿಯಾನದ ಕೇಂದ್ರಕ್ಕೆ ತರುವ ಮೂಲಕ ಬಿಜೆಪಿಯು ತನಗೆ ವಿರುದ್ಧವಾಗಿದ್ದ ಹಲವು ವಿಚಾರಗಳನ್ನು ಗೌಣವಾಗಿಸುವ ಯತ್ನ ನಡೆಸಿತು. ಅವುಗಳಲ್ಲಿ ಕೆಲವು ವಿಚಾರಗಳು ಇವು: ರಾಜ್ಯದಲ್ಲಿ 2019ರಿಂದ 2023ರವರೆಗಿನ ಬಿಜೆಪಿ ಆಡಳಿತದ ನೆನಪುಗಳು; ನಿರುದ್ಯೋಗ ಹಾಗೂ ಬೆಲೆ ಏರಿಕೆಯ ಪರಿಣಾಮವಾದ ಆರ್ಥಿಕ ಸಂಕಷ್ಟ, ಅದರಲ್ಲೂ ಮುಖ್ಯವಾಗಿ ಆರ್ಥಿಕವಾಗಿ ದುರ್ಬಲರಾಗಿ ಇರುವವರ ಮೇಲೆ ಅದರಿಂದ ಆಗಿರುವ ಪರಿಣಾಮಗಳು; ಬಿಜೆಪಿಯ ರಾಜ್ಯ ಘಟಕದಲ್ಲಿ ವಿವಿಧ ಕಾರಣಗಳಿಂದ ಉಂಟಾದ ಅತೃಪ್ತಿ. ಈ ಅತೃಪ್ತಿಯು ಹಲವು ಸಂದರ್ಭಗಳಲ್ಲಿ ಬಹಿರಂಗವಾಗಿ ವ್ಯಕ್ತವಾಯಿತು, ಇನ್ನು ಕೆಲವೆಡೆ ಅದು ಅವ್ಯಕ್ತವಾಗಿತ್ತು.

ರಾಜ್ಯದಲ್ಲಿ ಬಿಜೆಪಿ ಈ ಬಾರಿ ಭಾರಿ ಸವಾಲು ಎದುರಿಸುತ್ತಿದೆ. ಹಿಂದಿನ ಲೋಕಸಭಾ ಚುನಾವಣೆಯಲ್ಲಿ ಪಕ್ಷವು 25 ಸ್ಥಾನಗಳನ್ನು ಗೆದ್ದಿತ್ತು, ಈ ಬಾರಿ ಅದು 25 ಸ್ಥಾನಗಳಲ್ಲಿ ಮಾತ್ರ ಸ್ಪರ್ಧಿಸುತ್ತಿದೆ. ಅಂದರೆ, ಪಕ್ಷವು ಹಿಂದಿನ ಚುನಾವಣೆಯ ಸಾಧನೆಯನ್ನು ಕಾಯ್ದುಕೊಳ್ಳಬೇಕು ಎಂದಾದರೆ, ಸ್ಪರ್ಧಿಸಿರುವ ಅಷ್ಟೂ ಕಡೆ ಗೆಲುವು ಸಾಧಿಸಬೇಕು! ಪಕ್ಷವು ಹಿಂದಿನ ಲೋಕಸಭಾ ಚುನಾವಣೆಯಲ್ಲಿ ಗೆದ್ದುಕೊಂಡಷ್ಟು ಸ್ಥಾನಗಳನ್ನು ಈ ಬಾರಿಯ ಚುನಾವಣೆಯಲ್ಲಿ ಗೆಲ್ಲಲಿಕ್ಕಿಲ್ಲ ಎಂಬ ಸಂದೇಶವನ್ನು ಪ್ರಚಾರದ ಸಂದರ್ಭದಲ್ಲಿನ ಸೂಚನೆಗಳು ನೀಡುತ್ತಿದ್ದವು. ಎಷ್ಟು ಸ್ಥಾನಗಳು ಕಡಿಮೆ ಆಗಬಹುದು ಎಂಬ ಪ್ರಶ್ನೆ ಈಗ ಉಳಿದಿದೆ.

ಬಿಜೆಪಿಯು ಸೀಟು ಹಂಚಿಕೆಯ ಭಾಗವಾಗಿ ಜೆಡಿಎಸ್‌ಗೆ ಮೂರು ಸ್ಥಾನಗಳನ್ನು ಬಿಟ್ಟುಕೊಟ್ಟಿದೆ. ಈ ಪೈಕಿ ಒಂದು ಸ್ಥಾನವು ಜೆಡಿಎಸ್ ಪಾಲಿನ ಸಾಂಪ್ರದಾಯಿಕ ಭದ್ರಕೋಟೆ ಎಂದು ಪರಿಗಣಿತವಾಗಿರುವ ಹಾಸನ. ಹಿಂದಿನ ಬಾರಿಯ ಚುನಾವಣೆಯಲ್ಲಿ ಜೆಡಿಎಸ್ ಪಕ್ಷವು ಈ ಸ್ಥಾನವನ್ನು ಗೆದ್ದುಕೊಂಡಿತ್ತು. ಜೆಡಿಎಸ್ ನಾಯಕ, ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರು ಒಕ್ಕಲಿಗರ ಭದ್ರಕೋಟೆಯಂತೆ ಇರುವ ಮಂಡ್ಯ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದಾರೆ. ಜೆಡಿಎಸ್ ಪಕ್ಷಕ್ಕೆ ಕೋಲಾರ ಲೋಕಸಭಾ ಕ್ಷೇತ್ರ ಕೂಡ ಸಿಕ್ಕಿದೆ. ಜೆಡಿಎಸ್ ಮತ್ತು ಬಿಜೆಪಿ ನಾಯಕರು ಒಟ್ಟಾಗಿ ಪ್ರಚಾರ ನಡೆಸಿದ್ದಾರಾದರೂ, ಇಬ್ಬರು ಸಾಂಪ್ರದಾಯಿಕ ಎದುರಾಳಿಗಳು ಮೈತ್ರಿ ಮಾಡಿಕೊಂಡಾಗ ಆಗುವ ಸಂಘರ್ಷಗಳು ತಳಮಟ್ಟದಲ್ಲಿ ಕಂಡುಬಂದಿವೆ. ಮೈತ್ರಿ ಮಾಡಿಕೊಂಡಿರುವ ಪಕ್ಷಗಳು ತಮ್ಮ ಮತಬ್ಯಾಂಕ್ ಅನ್ನು ಮಿತ್ರಪಕ್ಷಕ್ಕೆ ವರ್ಗಾಯಿಸುವಲ್ಲಿ ಸಫಲವಾಗುತ್ತವೆಯೇ ಎಂಬುದು ಮಹತ್ವದ ವಿಚಾರ.

ರಾಜ್ಯದ ಆಡಳಿತಾರೂಢ ಪಕ್ಷವಾಗಿರುವ ಕಾಂಗ್ರೆಸ್, ಬಿಜೆಪಿ–ಜೆಡಿಎಸ್ ಮೈತ್ರಿಗೆ ಪ್ರಬಲ ಪೈಪೋಟಿ ನೀಡಲು ಒಗ್ಗಟ್ಟಿನ ಯತ್ನ ನಡೆಸಿದೆ. ಸ್ಥಳೀಯ ಮಟ್ಟದ ಚುನಾವಣಾ ಅಭಿಯಾನದ ಮೇಲೆ ಕಾಂಗ್ರೆಸ್ ಗಮನ ಕೇಂದ್ರೀಕರಿಸಿದೆ. ಚುನಾವಣಾ ಅಭಿಯಾನದ ನೇತೃತ್ವ ವಹಿಸುವುದಕ್ಕೆ ಹಾಗೂ ಅಭಿಯಾನವನ್ನು ಮುಂದಕ್ಕೆ ಒಯ್ಯುವುದಕ್ಕೆ ಪಕ್ಷವು ರಾಜ್ಯದ ನಾಯಕರನ್ನೇ ಹೆಚ್ಚಾಗಿ ನೆಚ್ಚಿಕೊಂಡಿದೆ. ರಾಜ್ಯದಲ್ಲಿ ಕಾಂಗ್ರೆಸ್ ಅನುಷ್ಠಾನಕ್ಕೆ ತಂದಿರುವ ಗ್ಯಾರಂಟಿಗಳು ಪಕ್ಷದ ಅಭಿಯಾನದ ಕೇಂದ್ರವಾಗಿವೆ.

ಚುನಾವಣೆಗೂ ಮೊದಲು ಪಕ್ಷದ ಕೆಲವು ಹಿರಿಯ ನಾಯಕರು ಸ್ಪರ್ಧಿಸಲು ಹಿಂದೇಟು ಹಾಕಿದ್ದೂ ಇತ್ತು. ಹಲವು ಕ್ಷೇತ್ರಗಳಲ್ಲಿ ಪ್ರಮುಖ ನಾಯಕರು ಸೂಚಿಸಿದ ವ್ಯಕ್ತಿಗಳನ್ನು ಕಣಕ್ಕೆ ಇಳಿಸಲಾಗಿದೆ. ಹಾಗೆ ಕಣಕ್ಕೆ ಇಳಿದವರಲ್ಲಿ ಹಲವರು ಚುನಾವಣಾ ರಾಜಕಾರಣಕ್ಕೆ ಹೊಸಬರು. ಅಭಿಯಾನವು ಬಿರುಸು ಪಡೆದಂತೆಲ್ಲ, ಕಾಂಗ್ರೆಸ್ಸಿಗರಲ್ಲಿ ಹೆಚ್ಚಿನ ಒಗ್ಗಟ್ಟು ಕಂಡುಬಂತು. ಅಲ್ಲದೆ, ಐದು ಗ್ಯಾರಂಟಿಗಳ ಸುತ್ತ ಒಂದು ಸಂಕಥನವನ್ನು ಕಟ್ಟುವ ಯತ್ನವೊಂದು ಪಕ್ಷದ ಕಡೆಯಿಂದ ನಡೆಯಿತು. ಇವೆಲ್ಲವೂ ಲೋಕಸಭಾ ಚುನಾವಣೆಯಲ್ಲಿ ಮತದಾರರ ನಡುವೆ ಎಷ್ಟರಮಟ್ಟಿಗೆ ಪ್ರತಿಧ್ವನಿಸಲಿವೆ ಎಂಬುದು ಈಗ ಚರ್ಚೆಯ ವಸ್ತು.

ಮತದಾರರ ತೀರ್ಪು ಏನು ಎಂಬುದು ಜೂನ್ 4ರಂದು ಪ್ರಕಟವಾಗಲಿದೆ. ಕರ್ನಾಟಕದ ಮತದಾರರ ಒಲವನ್ನು ಸೆಳೆದದ್ದು ಯಾವ ಆಯ್ಕೆ ಎಂಬುದು ಅಂದು ಗೊತ್ತಾಗಲಿದೆ. ಮತದಾರರು ಮಾಡಿರುವ ಆಯ್ಕೆಯು ರಾಷ್ಟ್ರ ರಾಜಕಾರಣದ ಸ್ಪರ್ಧಾತ್ಮಕ ಪರಿಸರದ ಮೇಲೆ ನಿರ್ಣಾಯಕ ಪರಿಣಾಮವನ್ನು ಉಂಟುಮಾಡಲಿದೆ. ಹಾಗೆಯೇ, ಅದು ರಾಜ್ಯದ ರಾಜಕಾರಣದ ಗತಿಯ ಮೇಲೆಯೂ ನಿರ್ಣಾಯಕ ಪ್ರಭಾವ ಬೀರಲಿದೆ.

ಬಿಜೆಪಿಯು ರಾಷ್ಟ್ರ ಮಟ್ಟದಲ್ಲಿ ತನಗೆ ತಾನೇ ನಿಗದಿ ಮಾಡಿಕೊಂಡಿರುವ ಗುರಿಯನ್ನು ತಲುಪಬೇಕು ಎಂದಾದಲ್ಲಿ, ಅಲ್ಲಿ ಕರ್ನಾಟಕವು ನೀಡುವ ಕೊಡುಗೆಯು ಬಹಳ ದೊಡ್ಡದಾಗಿರುತ್ತದೆ. ಇನ್ನೊಂದೆಡೆ, ಕಾಂಗ್ರೆಸ್ ಪಕ್ಷವು ಲೋಕಸಭೆಯಲ್ಲಿ ತನ್ನ ಸ್ಥಾನಗಳನ್ನು ಹೆಚ್ಚು ಮಾಡಿಕೊಳ್ಳಲು ಹಾಗೂ ರಾಜ್ಯದಲ್ಲಿನ ತನ್ನ ನೇತೃತ್ವದ ಸರ್ಕಾರಕ್ಕೆ ಹೆಚ್ಚಿನ ಸ್ಥಿರತೆ ತಂದುಕೊಳ್ಳಲು ರಾಜ್ಯದ ಫಲಿತಾಂಶವನ್ನು ನೆಚ್ಚಿಕೊಂಡಿದೆ.

ಚುರುಮುರಿ

ನಮ್ ಮಾಮ ಗ್ರೇಟು!

• ಸುಮಂಗಲಾ

'ಬೆಂಗಳೂರಿಗೆ ಈ ಸಲನೂ ಕನಿಷ್ಠ ಮತದಾನದ ಕಿರೀಟ ಸಿಕ್ಕೈತಿ. ಈ ವ್ಯಾಪ್ತಿಯ ಮೂರು ಎಂ.ಪಿ. ಕ್ಷೇತ್ರದಾಗೂ ಕಡಿಮೆ ಮತದಾನ' ಎಂದೆ ಬೇಸರದಿಂದ.

'ಐ.ಟಿ ನಗರಿ ಮಣ್ಣುಮಸಿ ಅಂತೆಲ್ಲ ಹಾರಾಡ್ತೀರಲ್ಲ, ಈಗ ಗೊತ್ತಾತೇನ್ ನಿಮ್ಮ ಅಸಲಿಯತ್ತು. ಅದೇ ನೋಡು... ಈ ಹುಡುಗಿ ಲಂಡನ್ನಿಂದ ಮಂಡ್ಯಕ್ಕೆ ವೋಟು ಮಾಡಕ್ಕೆ ಅಂತನೇ ಬಂದಾಳಂತೆ' ಬೆಕ್ಕಣ್ಣ ಹೆಮ್ಮೆಯಿಂದ ಸುದ್ದಿ ಓದಿತು.

'ಮಂಡ್ಯದ ಎನ್‌ಆರ್‌ಐಗಳು ಭಾಳ ಮಂದಿ ಹಿಂಗೆ ವೋಟ್ ಮಾಡಕ್ಕೆ ಅಂತನೇ ವಾಪಸು ಬಂದಿರಬಕು, ಅದಕ್ಕೇ ಮಂಡ್ಯದಾಗೆ ಶೇ 81 ಮತದಾನ ಆಗ್ಯೆತಿ' ಎಂದೆ.

'ಏನಿಲ್ಲ... ನಮ್ ಕುಮಾರಣ್ಣ ತೆಲಿಮ್ಯಾಗೆ ಕಮಲ ಹೊತ್ತುಕೊಂಡು ಪ್ರಚಾರ ಮಾಡಿದ್ದಕ್ಕೆ ಅಲ್ಲಿ ಮತದಾನ ಅಷ್ಟು ಪ್ರಮಾಣದಲ್ಲಿ ಆಗ್ಯೆತಿ!' ಬೆಕ್ಕಣ್ಣ ಮೀಸೆ ತಿರುವಿತು.

'ಮಂಡ್ಯದ ಮಂದಿ ಶಾಣ್ಯಾರು, ಮತದಾನ ಮಾಡ್ಯಾರೆ. ಅದ್ರಾಗೆ ಕುಮಾರಣ್ಣನ ಕರಾಮತ್ತು ಏನೈತಲೇ?'

'ಚುನಾವಣೆದಾಗೆ ಗೆದ್ದು ಕೃಷಿ ಮಂತ್ರಿಯಾಗಿ, ಮೋದಿಮಾಮನ ಜೋಡಿ ಸೇರಿ ರೈತರ ಸೇವಾ ಮಾಡತೀನಿ ಅಂತ ಮಾತು ಕೊಟ್ಟಿದ್ದಕ್ಕೆ ಭಾಳ ಮಂದಿ ಮತದಾನ ಮಾಡ್ಯಾರೆ' ಬೆಕ್ಕಣ್ಣ ಉಲಿಯಿತು.

'ಅಲ್ಲಲೇ... ಕರುನಾಡಿಂದ ಅಷ್ಟೊಂದು ಮಂದಿ ಲೋಕಸಭೆಗೆ, ರಾಜ್ಯಸಭೆಗೆ ಆಯ್ಕೆಯಾಗಿ ಹೋಗಿದ್ರೂ ನಮಗೆ ಬರ ಪರಿಹಾರ ಕೊಡಿಸಲಿಲ್ಲ. ನಿರ್ಮಲಕ್ಕನ್ನ ಎರಡು ಸಲ ಇಲ್ಲಿಂದನೇ ರಾಜ್ಯಸಭೆಗೆ ಕಳಿಸಿದ್ರೂ ಏನೂ ಉಪಯೋಗಿಲ್ಲ. ಇನ್ನು ರೈತರಿಗೆ ಕುಮಾರಣ್ಣ-ಮೋದಿಮಾಮನ ಜೋಡಿ ಸೇವೆಯೊಂದು ಬಾಕಿ ಉಳಿದೈತಿ'.

'ನೀ ಸುಮ್‌ಸುಮ್ನೆ ಹಂಗಿಸಬ್ಯಾಡ. ಚುನಾವಣೆ ನೀತಿ ಸಂಹಿತೆ ಜಾರಿಲಿದ್ರೂ ಮೋದಿಮಾಮ ಕರ್ನಾಟಕಕ್ಕೆ ಈಗ ಸುಮಾರು ಮೂರೂವರೆ ಸಾವಿರ ಕೋಟಿ ಬರ ಪರಿಹಾರದ ರೊಕ್ಕ ಕೊಟ್ಟಿಲ್ಲೇನ್?'

'ಅವರು ತಮ್ಮ ಕಿಸೆದಾಗಿಂದ ತೆಗೆದು ಕೊಟ್ಟಾರೇನು? ಸುಪ್ರೀಂ ಕೋರ್ಟು ಚಲೋತ್ನಾಗೆ ಚಾಟಿ ಬೀಸಿದ ಮ್ಯಾಗೆ ಕೊಟ್ಟಾರೆ. ಇಷ್ಟಾಗಿ, ನಾವು ಕೇಳಿದ್ದರಲ್ಲಿ ಕಾಲುಭಾಗನೂ ಕೊಟ್ಟಿಲ್ಲ'.

'ಕೋರ್ಟು ಹೇಳಿದ್ದನ್ನು ಒಪ್ಯಾರೆ ಅಂದ್ರೆ ನಮ್ ಮೋದಿಮಾಮ ಎಷ್ಟ್ ಗ್ರೇಟು ಹೌದಿಲ್ಲೋ' ಬೆಕ್ಕಣ್ಣನ ವಿತಂಡವಾದಕ್ಕೆ ನಾನು ಬೆಪ್ಪಾದೆ!

ದಿನದ ಟ್ವೀಟ್

ಸಂಘರ್ಷ ತಪ್ಪಲಿ

ಆನೆಗಳು ಸ್ವಭಾವತಃ ಆಕ್ರಮಣಕಾರಿ ಮನೋಭಾವದ ಜೀವಿಗಳಲ್ಲ, ಅವುಗಳನ್ನು ಆಕ್ರಮಣಕಾರಿಯಾಗಿ ಮಾಡುವುದು ದುಷ್ಟ ಮನುಷ್ಯರು!

ಸುಬ್ರಹ್ಮಣ್ಯ, ಐ.ಟಿ. ಉದ್ಯೋಗಿ

ಕಿಡಿನುಡಿ

5ನೇ ತರಗತಿಯ ಮಕ್ಕಳಿಗೆ ಪಬ್ಲಿಕ್ ಎಕ್ಸಾಂ ಅನ್ನುವ ವಿಷಯದಲ್ಲೂ ಹೀಗೆಯೇ ಗೊಂದಲವೋ ಗೊಂದಲ ಆಗುವಂತೆ ಮಾಡಿದರು. ಈಗ ಸಿಇಟಿ ಇನ್ನೊಮ್ಮೆ ಅಂತೆ. ಮಕ್ಕಳಿಗೆ ಇದು ಎಂತಹ ಮಾನಸಿಕ ಒತ್ತಡ ಉಂಟು ಮಾಡುತ್ತದೆ ಅನ್ನುವ ಕಾಮನ್‌ಸೆನ್ಸ್ ಈ ಅಧಿಕಾರಿಗಳಿಗೆ ಬೇಡವೇ? ಸಿಲೆಬಸ್‌ನಲ್ಲೇ ಇಲ್ಲದ ಪ್ರಶ್ನೆಗಳು ಪ್ರಶ್ನೆಪತ್ರಿಕೆಯಲ್ಲಿ ಬರುವುದು ಅಂದರೆ ತಮಾಷೆನಾ? ಇದಕ್ಕೆಲ್ಲ ಯಾರೂ ಹೊಣೆಯಾಗುವುದಿಲ್ಲವೇ?

ವಸಂತ ಶೆಟ್ಟಿ, ಬರಹಗಾರ

25 ವರ್ಷಗಳ ಹಿಂದೆ

ಗುರುವಾರ, 29-4-1999

• ಮೈಸೂರು ಕಾರಿಡಾರ್ ಯೋಜನೆ ರೈತರಿಗೆ ಸೂಕ್ತ ಪರಿಹಾರದ ಭರವಸೆ

ಬೆಂಗಳೂರು, ಏ. 28– ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆಯಿಂದ ಭೂಮಿ ಕಳೆದುಕೊಳ್ಳುವ ರೈತರಿಗೆ ನಷ್ಟವಾಗದ ರೀತಿಯಲ್ಲಿ ಪರಿಹಾರ ನೀಡುವುದಾಗಿ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಇಂದು ಇಲ್ಲಿ ಭರವಸೆ ನೀಡಿದರು.

ಸುಮಾರು ಎರಡು ಸಾವಿರ ಕೋಟಿ ರೂಪಾಯಿ ವೆಚ್ಚದ 111 ಕಿ.ಮೀ ಉದ್ದದ ನಾಲ್ಕು ಸಾಲುಗಳ ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆಗೆ ಕೆಂಗೇರಿ ಬಳಿ ಭೂಮಿಪೂಜೆ ನೆರವೇರಿಸಿ ಮಾತನಾಡಿದರು.

• ವೀರಪ್ಪನ್‌ನಿಂದ ತಮಿಳುನಾಡು ಅರಣ್ಯ ಸಿಬ್ಬಂದಿ ಅಪಹರಣ

ಮೈಸೂರು, ಏ. 28– ಹಣ ನೀಡುವಂತೆ ಒತ್ತಾಯಿಸಿ ನರಹಂತಕ ವೀರಪ್ಪನ್ ಗುಂಪಿನವರು ತಮಿಳುನಾಡು ಅರಣ್ಯ ಇಲಾಖೆಗೆ ಸೇರಿದ ಮೂವರನ್ನು ಒತ್ತೆಯಾಳುಗಳನ್ನಾಗಿ ಸೆರೆ ಹಿಡಿದಿದ್ದು, ಹೊಸ ಬಿಕ್ಕಟ್ಟೊಂದನ್ನು ಸೃಷ್ಟಿಸುವ ಸಾಧ್ಯತೆ ಕಾಣಿಸಿಕೊಂಡಿದೆ.

ಅಭಿಮನ್ಯು ಎಂಬ ಒಬ್ಬ ಗಾರ್ಡ್, ಸಿ. ಪಳನಿ ಹಾಗೂ ಸದಾಶಿವನ್ ಎಂಬ ಇಬ್ಬರು ವಾಚರ್‌ಗಳನ್ನು ಭಾನುವಾರ ಹೊಗೇನಕಲ್ ಜಲಪಾತಕ್ಕೆ ಸಮೀಪದ ಪೆನ್ನ ಗ್ರಾಮದ ಬಳಿ ವೀರಪ್ಪನ್ ಗುಂಪು ತನ್ನ ವಶಕ್ಕೆ ತೆಗೆದುಕೊಂಡಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

50 ವರ್ಷಗಳ ಹಿಂದೆ

ಸೋಮವಾರ, 29-4-1974

• ಜನಬಳಕೆಯ 10 ವಸ್ತುಗಳು ಸರ್ಕಾರದ ಹತೋಟಿಗೆ: ದಾರಿಯಾ ಸಮಿತಿ ಶಿಫಾರಸು

ನವದೆಹಲಿ, ಏ. 28– ಜನಬಳಕೆಯ ಹತ್ತು ವಸ್ತುಗಳನ್ನು ಕಾಲಕ್ರಮದಲ್ಲಿ ಸಾರ್ವಜನಿಕ ವಿತರಣೆ ವ್ಯವಸ್ಥೆಗೆ ಸರ್ಕಾರ ಒಳಪಡಿಸಬೇಕೆಂದು ಅಗತ್ಯ ವಸ್ತುಗಳನ್ನು ಕುರಿತ ದಾರಿಯಾ ಸಮಿತಿ ಶಿಫಾರಸು ಮಾಡಿದೆ.

ಒರಟುಧಾನ್ಯ, ಬೇಳೆಗಳು, ಸಕ್ಕರೆ, ವನಸ್ಪತಿ ಮತ್ತು ಸಂಸ್ಕರಿತ ಖಾದ್ಯ ತೈಲಗಳು, ಹಾಲು, ಸಾಮಾನ್ಯ ಬಟ್ಟೆ, ಪಾದರಕ್ಷೆಗಳು, ಸೀಮೆಎಣ್ಣೆ ಮತ್ತು ಮನೆಬಳಕೆಯ ಇಂಧನಗಳು, ಸಾಮಾನ್ಯ ಸಾಬೂನು ಇತ್ಯಾದಿ ವಸ್ತುಗಳು ಮತ್ತು ಶಾಲಾ ಪಠ್ಯಪುಸ್ತಕಗಳು – ಇವು ಸಮಿತಿಯು ಶಿಫಾರಸು ಮಾಡಿರುವ ವಸ್ತುಗಳು. ಮಾರುಕಟ್ಟೆಯ ಪ್ರಭಾವಕ್ಕೆ ಶ್ರೀಸಾಮಾನ್ಯನ ಹಣಬರಹ ಹಾಗೂ ಅಭಿವೃದ್ಧಿ ಕ್ರಮಗಳನ್ನು ಗುರಿ ಮಾಡಬಾರದೆಂಬ ನಿರ್ಣಯಕ್ಕೆ ಸಮಿತಿ ಬಂದಿದೆ.

• ಆರ್ಥಿಕ ಪರಿಸ್ಥಿತಿಯ ಕೂಲಂಕಷ ವಿಮರ್ಶೆಗೆ 12 ಮಂದಿಯ ಸಮಿತಿ

ನವದೆಹಲಿ, ಏ. 28– ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ದೇಶದಲ್ಲಿನ 'ಉತ್ಕಟ ಆರ್ಥಿಕ ಪರಿಸ್ಥಿತಿ'ಯ ಬಗ್ಗೆ ತನ್ನ ತೀವ್ರ ಕಳವಳ ವ್ಯಕ್ತಪಡಿಸಿ, 'ನಮ್ಮ ಕೆಲವು ನೀತಿಗಳು ಅಸಮರ್ಪಕವಾಗಿದ್ದು, ಅವುಗಳ ಅನುಷ್ಠಾನದಲ್ಲಿ ದೋಷಗಳು ಕಂಡುಬಂದಿವೆ' ಎಂದು ಇಂದು ಒಪ್ಪಿಕೊಂಡಿತು.

ಕೃಷಿ ಉತ್ಪಾದನೆಯಲ್ಲಿ ಗಮನಾರ್ಹ ಚೇತರಿಕೆ ಕಂಡುಬಂದಿದ್ದರೂ ಹಣದುಬ್ಬರದ ಒತ್ತಡಗಳನ್ನು ತಡೆಯಲು ಸಾಧ್ಯವಾಗಿಲ್ಲ ಎಂದು ಕಾರ್ಯಕಾರಿ ಸಮಿತಿಯು ರಾಜಕೀಯ ಪರಿಸ್ಥಿತಿ ಕುರಿತ ತನ್ನ ಆರು ಪುಟಗಳ ನಿರ್ಣಯದಲ್ಲಿ ಹೇಳಿದೆ.

ಸಂಗತ

ಅದ್ದೂರಿ ಮದುವೆ, ಅಗೋಚರ ಪ್ರಭಾವ

ಉಳ್ಳವರು ಖರ್ಚು ಮಾಡುವುದರಿಂದ ಉದ್ಯೋಗಾವಕಾಶಗಳು ಸೃಷ್ಟಿಯಾಗುತ್ತವೆ ಎಂಬ ವಾದವನ್ನು ಒಪ್ಪುವ ಮೊದಲು, ಅದರಿಂದಾಗುವ ಅಗೋಚರ ಪರಿಣಾಮಗಳ ಕುರಿತೂ ಯೋಚಿಸಬೇಕಿದೆ

• ದೀಪಾ ಹಿರೇಗುತ್ತಿ

ಭಾರತದ ಅತ್ಯಂತ ಸಿರಿವಂತ ಕುಟುಂಬ ಈಚೆಗೆ ನಡೆಸಿದ, ಸುಮಾರು ಸಾವಿರದ ಇನ್ನೂರು ಕೋಟಿ ರೂಪಾಯಿ ವೆಚ್ಚದ ಪ್ರೀ ವೆಡ್ಡಿಂಗ್ ಹತ್ತಾರು ಬಗೆಯ ಚರ್ಚೆಗಳಿಗೆ ಕಾರಣವಾಯಿತು. ಇದು, ದೇಶದಲ್ಲಿರುವ ಬಡತನ ಮತ್ತು ಸಿರಿತನದ ನಡುವಿನ ವೈರುಧ್ಯವನ್ನು ತೋರಿಸುತ್ತದೆ ಎಂಬುದು ಒಂದು ಅಭಿಪ್ರಾಯವಾದರೆ, ಅದೆಷ್ಟೋ ಮಂದಿಗೆ ಉದ್ಯೋಗ, ವ್ಯವಹಾರ ಸಿಕ್ಕಿತು ಎನ್ನುವುದು ಮತ್ತೊಂದು ಅಭಿಪ್ರಾಯ. ಇನ್ನು, 'ಅವರ ದುಡ್ಡು ಅವರು ಖರ್ಚು ಮಾಡಿಕೊಂಡರೆ ನಿಮಗೇನು ನಷ್ಟ?' ಎಂಬುದು ಮತ್ತೊಂದು ವಾದ. ಇವೆಲ್ಲವನ್ನೂ ಬದಿಗಿಟ್ಟು ನೋಡಿದಾಗ, ಈ ಹೊಸ ಕಾರ್ಯಕ್ರಮ ಮಧ್ಯಮ ವರ್ಗಕ್ಕೆ ತರಲಿರುವ ಹೊಸ ಸಮಸ್ಯೆಯ ಬಗ್ಗೆ ಯೋಚಿಸುವಂತಾಗಿ ಒಂದು ಕ್ಷಣ ಗಾಬರಿಯಾಯಿತು.

ನಮ್ಮ ದೇಶದ ಶ್ರೀಮಂತರು ಸಾಮಾನ್ಯವಾಗಿ ಸೆಲೆಬ್ರಿಟಿಗಳನ್ನು ಅನುಕರಿಸುತ್ತಾರೆ, ಶ್ರೀಮಂತರನ್ನು ಮಧ್ಯಮ ವರ್ಗದವರು, ಮಧ್ಯಮವರ್ಗದವರನ್ನು ಬಡವರು ಅನುಕರಣೆ ಮಾಡುತ್ತಾರೆ. ಅದರಲ್ಲೂ ಮದುವೆಯಂತಹ ವಿಚಾರದಲ್ಲಿ ಈ ಅನುಕರಣೆ ಜೋರಾಗಿಯೇ ನಡೆಯುತ್ತದೆ. ಮೊದಲು ಮದುವೆಯ ದಿನ ಮಾತ್ರ ಅದ್ದೂರಿಯಾದ ಕಾರ್ಯಕ್ರಮ ನಡೆಯುತ್ತಿತ್ತು. ಮದುವೆ ಹಿಂದಿನ ದಿನ ಉಂಗುರ ಬದಲಾಯಿಸಿಕೊಂಡು ನಿಶ್ಚಿತಾರ್ಥದ ಶಾಸ್ತ್ರ ಮಾಡುತ್ತಿದ್ದರು. ನಂತರ ಬೀಗರೂಟ ಇರುತ್ತಿತ್ತು. ಮದುವೆಯ ಹಿಂದಿನ ದಿನ ಅರಸಿನ, ಬಳೆಶಾಸ್ತ್ರದಂತಹ ಸಂಪ್ರದಾಯಗಳು ಅವುಗಳ ಪಾಡಿಗೆ ಅವು ನಡೆದುಕೊಂಡು ಹೋಗುತ್ತಿದ್ದವು.

ಕೆಲ ವರ್ಷಗಳಿಂದ ನಿಶ್ಚಿತಾರ್ಥವೂ ಮದುವೆಯಷ್ಟೇ ಭರ್ಜರಿಯಾಗಿ ಆಗಲು ಪ್ರಾರಂಭವಾಯಿತು. ಕಾಲ ಕಳೆದಂತೆ ಹೊಸ ಹೊಸ ಆಚರಣೆಗಳು ಸೇರಿಕೊಳ್ಳುತ್ತಾ ಮದುವೆ ಎನ್ನುವುದು ಒಂದೆರಡು ಕಾರ್ಯಕ್ರಮಗಳಿಗೆ ಸೀಮಿತವಾಗದೆ ಹಲವಾರು ಕಾರ್ಯಕ್ರಮಗಳ ಒಟ್ಟು ಮೊತ್ತ ಎನ್ನುವಂತಾಗಿದೆ. ಈಗಂತೂ ಪ್ರೀವೆಡ್ಡಿಂಗ್ ಶೂಟ್ ಆಗಬೇಕು, ಸಂಗೀತ್ ಕಾರ್ಯಕ್ರಮ, ಮೆಹಂದಿ, ಮದುವೆ ದಿನ ಒಂದು ರಿಸೆಪ್ಷನ್, ನಂತರ ಒಂದು ರಿಸೆಪ್ಷನ್! ಅಷ್ಟೇ ಅಲ್ಲ ಆಯಾ ಕಾರ್ಯಕ್ರಮಕ್ಕೆ ತಕ್ಕಂತೆ ಉಡುಗೆ ತೊಡುಗೆ, ಪ್ರತಿಯೊಂದಕ್ಕೂ ವಿಡಿಯೊ, ಫೋಟೊ...

ಮೊದಲೆಲ್ಲ ಹೆಚ್ಚೆಂದರೆ ಐವತ್ತು ಮಂದಿಯನ್ನು ಒಳಗೊಂಡು ಈ ಕಾರ್ಯಕ್ರಮಗಳು ನಡೆದುಹೋಗುತ್ತಿದ್ದವು. ಈಗ ಎಲ್ಲ ಕಾರ್ಯಕ್ರಮಗಳೂ ಭರ್ಜರಿಯಾಗಿಯೇ ನಡೆಯಬೇಕು. ಪ್ರತಿ ಕಾರ್ಯಕ್ರಮಕ್ಕೂ ವಿವಿಧ ಬಗೆಯ ಊಟದ ಮೆನು, ದುಬಾರಿ ಉಡುಗೆಯ ಖರ್ಚು, ಮೇಕಪ್ ಖರ್ಚು... ಬಂಗಾರದ ಬೆಲೆಯಂತೂ ದಿನದಿನಕ್ಕೂ ಏರುತ್ತಲೇ ಇದೆ. ಇನ್ನು ಉಳ್ಳವರು ಮಾಡುವ ಡೆಸ್ಟಿನೇಶನ್ ವಿವಾಹವನ್ನು ಮೇಲ್ಮಧ್ಯಮ ವರ್ಗದವರು ಸಾಲಸೋಲ ಮಾಡಿಕೊಂಡು ಮಾಡುತ್ತಾರೆ. ಹೀಗಾಗಿ, ಒಂದು ಮದುವೆ ಮಾಡಿ ಮುಗಿಸುವಷ್ಟರಲ್ಲಿ ಹೆಣ್ಣು ಹೆತ್ತವರು ಮಾತ್ರವಲ್ಲ ಗಂಡು ಹೆತ್ತವರೂ ಸುಸ್ತಾಗಿ ಹೋಗುತ್ತಾರೆ. ಹೀಗಾಗಿಯೇ ಕುಟುಂಬವು ಹೊರಲಾರದಷ್ಟು ಸಾಲದ ಹೊರೆಯನ್ನು ಹೊರಬೇಕಾಗುತ್ತದೆ. ಕೆಲವರಂತೂ ಚೇತರಿಸಿಕೊಳ್ಳುವುದಕ್ಕೇ ಕಷ್ಟವಾಗುವ ಮಟ್ಟದಲ್ಲಿ ಸಾಲದ ಶೂಲಕ್ಕೆ ಸಿಕ್ಕಿಹಾಕಿಕೊಂಡು ಬಿಡುತ್ತಾರೆ.

ಇದಕ್ಕೆಲ್ಲ ಕಾರಣ ಸಮಾಜದ ಕಾಣದ ಒತ್ತಡ! ದಿನಬೆಳಗಾದರೆ ಒಬ್ಬೊಬ್ಬ ಸೆಲೆಬ್ರಿಟಿ ಒಂದೊಂದು ರೀತಿಯಲ್ಲಿ ವಿವಾಹವಾದ ಸುದ್ದಿಗಳು ವಿಡಿಯೊ, ಫೋಟೊಗಳೊಂದಿಗೆ ಸಾಮಾಜಿಕ ಜಾಲತಾಣಗಳಲ್ಲಿ ಬಂದು ಬೀಳುತ್ತಿರುತ್ತವೆ. ಊರಿನಲ್ಲೇ ಯಾರದ್ದೋ ಮಗಳ ಭರ್ಜರಿ ಮದುವೆಯ ಚಿತ್ರಗಳು ಸಂಬಂಧಿಕರ ವಾಟ್ಸ್‌ಆ್ಯಪ್ ಸ್ಟೇಟಸ್ಸಿನಲ್ಲಿ ಎಲ್ಲರಿಗೂ ಪ್ರದರ್ಶಿತವಾಗುತ್ತಿರುತ್ತವೆ. ನೆನಪಿರಲಿ, ಕರ್ನಾಟಕದಲ್ಲಿ ಈ ಮೊದಲು ಮೆಹಂದಿ, ಸಂಗೀತ್‌ದಂತಹ ಕಾರ್ಯಕ್ರಮಗಳು ಇರಲಿಲ್ಲ. ಹಿಂದಿ ಸಿನಿಮಾ, ಧಾರಾವಾಹಿಗಳನ್ನು ಕನ್ನಡದವರೂ ನಕಲು ಮಾಡಿದ್ದರ ಫಲವಾಗಿ, ಇಂದು ಮದುವೆಗಳಲ್ಲಿ ಇಂತಹ ಕಾರ್ಯಕ್ರಮಗಳು ಇರಲೇಬೇಕು ಎನ್ನುವಂತಾಗಿದೆ.

ಹೀಗಿರುವಾಗ, ಮದುವೆಯ ಕೆಲ ತಿಂಗಳ ಮೊದಲೇ ಪ್ರೀ ವೆಡ್ಡಿಂಗ್ ಎಂಬ ಹೊಸ ಪದ್ಧತಿ ಶುರು ಮಾಡಿದ ಕುಟುಂಬದ ನಡೆ ಅವರಿಗೆ ಮಾತ್ರ ಸಂಬಂಧಪಟ್ಟಿದ್ದಲ್ಲ. ಕ್ರಮೇಣ ಶ್ರೀಮಂತ ಕುಟುಂಬಗಳು ಇದನ್ನು ಶುರು ಮಾಡುತ್ತವೆ. ಈಗಾಗಲೇ ಇಷ್ಟು ಕಾರ್ಯಕ್ರಮಗಳಿರುವಾಗ ಮತ್ತೊಂದು ಕಾರ್ಯಕ್ರಮದ ಸೇರ್ಪಡೆ ಮತ್ತಷ್ಟು ಹೊರೆಯೇ. ಹೀಗೆ ಮಧ್ಯಮವರ್ಗದವರ ಮೇಲೆ ಮತ್ತೊಂದು ಕಾರ್ಯಕ್ರಮವನ್ನು ಆಯೋಜಿಸಲೇಬೇಕಾದ ಒತ್ತಡ ಬೀಳುತ್ತದೆ. ಮಧ್ಯಮ ವರ್ಗ, ಕೆಳಮಧ್ಯಮ ವರ್ಗ, ಬಡವರು ಎಲ್ಲರೂ ಈ ತಳವಿಲ್ಲದ ಕೂಪದಲ್ಲಿ ಬೀಳುತ್ತಾ ಹೋಗುತ್ತಾರೆ. ಉಳ್ಳವರ ಇಂತಹ ಒಂದೊಂದು ನಡೆಯೂ ಗೊತ್ತೇ ಆಗದ ರೀತಿಯಲ್ಲಿ ಮಧ್ಯಮ, ಬಡ ವರ್ಗದವರನ್ನು ಸಂಕಷ್ಟಕ್ಕೆ ಸಿಲುಕಿಸುತ್ತದೆ.

ಉಳ್ಳವರು ಖರ್ಚು ಮಾಡುವುದರಿಂದ ಉದ್ಯೋಗ ಅವಕಾಶಗಳು ಸೃಷ್ಟಿಯಾಗುತ್ತವೆ ಎಂಬ ಜನಪ್ರಿಯ ವಾದವನ್ನು 'ಹೌದಲ್ಲವೇ?' ಎಂದು ಒಪ್ಪುವ ಮೊದಲು, ಗೋಚರಿಸದ ಈ ರೀತಿಯ ಪರಿಣಾಮಗಳ ಕುರಿತೂ ಯೋಚಿಸಬೇಕಿದೆ. ಅಂಬಾನಿ ಅವರಂತಹವರು ಸಾವಿರಾರು ಕೋಟಿ ರೂಪಾಯಿ ಖರ್ಚು ಮಾಡಿದರೂ ಅದು ಅವರ ಆದಾಯದ ಶೇಕಡ 1ಕ್ಕಿಂತಲೂ ಕಡಿಮೆ ಪ್ರಮಾಣ ಆಗಿರುತ್ತದೆ. ಆದರೆ ತಮ್ಮ ಜೀವಮಾನದ ಉಳಿತಾಯವೂ ಸಾಲದೆ ಸಾಲ ಮಾಡಿ ಅದ್ದೂರಿಯಾಗಿ ಮದುವೆ ಮಾಡುವ ಜನರಿಗೆ ಅದು ಅರ್ಥವಾಗುವುದೇ ಇಲ್ಲ. ಅರ್ಥವಾದರೂ ಸಾಮಾಜಿಕ ಒತ್ತಡ ಅವರ ಕೈಕಟ್ಟಿ ಹಾಕಿಬಿಡುತ್ತದೆ!

ಮದುವೆ ಎನ್ನುವುದು ದೊಡ್ಡಸ್ತಿಕೆಯ ಪ್ರದರ್ಶನ ಆಗಿ, ಸಮಾಜದಲ್ಲಿ ಒಳಗೊಳಗೇ ಸ್ಪರ್ಧೆಯಾಗಿ ಮಾರ್ಪಡುತ್ತಿದೆ. ಹೀಗಾಗಿ, ಯಾರಿಗೆ ಬೇಕೋ ಅವರು ಅದ್ದೂರಿಯಾಗಿ ಮಾಡಿಕೊಳ್ಳಲಿ, ಬೇಡದವರು ಸುಮ್ಮನಿದ್ದರಾಯಿತು ಎನ್ನುವಷ್ಟು ಈ ಸಂಗತಿ ಸರಳವಲ್ಲ.

ವಾಚಕರ ವಾಣಿ

'ಬದಲಾದ ಭಾರತ': ಅರ್ಥೈಸುವುದು ಹೇಗೆ?

'ಬದಲಾದ ಭಾರತ'ದ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಅನೇಕ ಬಗೆಯ ಸಂದೇಶಗಳು ಹರಿದಾಡುತ್ತಿವೆ. ನಿಜ, ಎಳನೀರು, ಸೀಬೇಕಾಯಿ ಮಾರುವಂತಹವರು ಸಹ ಡಿಜಿಟಲ್ ವಹಿವಾಟು ನಡೆಸುವುದು ಸಾಮಾನ್ಯವಾಗಿದೆ. ವಿಮಾನ ನಿಲ್ದಾಣಗಳಲ್ಲಿನ ಜನಸಂದಣಿಯು ಬಸ್ ನಿಲ್ದಾಣ, ರೈಲು ನಿಲ್ದಾಣಗಳಲ್ಲಿನ ಜನಸಂದಣಿಯನ್ನು ನೆನಪಿಸುವಂತೆ ಇರುತ್ತದೆ. ದೇಶ, ವಿದೇಶಗಳಿಗೆ ಪ್ರವಾಸ ತೆರಳುವವರ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿದೆ. ಅತಿ ವೇಗದ ಐಷಾರಾಮಿ ರೈಲುಗಳು, ಫ್ಲೈಓವರ್‌ಗಳು, ಸುಸಜ್ಜಿತ ವಿಮಾನ ನಿಲ್ದಾಣಗಳು, ವಿಶಾಲವಾದ ರಸ್ತೆಗಳು ಕಾಣುತ್ತಿವೆ. ವೈರುಧ್ಯವೆಂದರೆ, ಇಷ್ಟೆಲ್ಲಾ ಬೆಳವಣಿಗೆ ಕಾಣುತ್ತಿದ್ದರೂ ವ್ಯಾಸಂಗಕ್ಕಾಗಿ ಹಾಗೂ ಉದ್ಯೋಗದ ಸಲುವಾಗಿ ವಿದೇಶಗಳಿಗೆ ಹೋಗುವ ಹಪಹಪಿ ಮಾತ್ರ ನಮ್ಮ ದೇಶದ ಯುವಜನ ಹಾಗೂ ಪೋಷಕರಲ್ಲಿ ಕಡಿಮೆಯಾಗಿಲ್ಲ. ಬದಲಿಗೆ ಮತ್ತಷ್ಟು ಹೆಚ್ಚಾಗಿದೆ. ಅಮೆರಿಕಕ್ಕೆ ಅಕ್ರಮವಾಗಿ ವಲಸೆ ಹೋಗುವ ಭಾರತೀಯರ ಬಗ್ಗೆಯೂ ವರದಿಯಾಗುತ್ತಿರುತ್ತದೆ. ಒಂದೆಡೆ, ನಮ್ಮ ದೇಶ ಇದೀಗ ಜಗತ್ತಿನ ಯಾವ ದೇಶಕ್ಕೂ ಕಡಿಮೆಯಿಲ್ಲ ಎಂದು ಹೆಮ್ಮೆಪಡುವ ಮನಃಸ್ಥಿತಿ, ಮತ್ತೊಂದೆಡೆ, ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇರುವ ವಿದೇಶಿ ವ್ಯಾಮೋಹ. ಈ ವಿಪರ್ಯಾಸವನ್ನು ಯಾವ ರೀತಿ ಅರ್ಥೈಸುವುದು?

ಟಿ.ಜಯರಾಂ, ಕೋಲಾರ

ಚೊಂಬು– ಚಿಪ್ಪು

ಪ್ರಸಕ್ತ ಲೋಕಸಭಾ
ಚುನಾವಣೆಯಲ್ಲಿ
ರಾಜ್ಯದ ರಾಜಕಾರಣಿಗಳ
ಪ್ರಚಾರದ ಪ್ರಮುಖ ಅಸ್ತ್ರ
ಚೊಂಬು ಮತ್ತು ಚಿಪ್ಪು,
ಜೂನ್ 4ರವರೆಗೆ
ಕಾಯಲೇಬೇಕು ಅರಿಯಲು
ಯಾರ ಪಾಲಿಗೆ
ಗೆಲುವಿನ ಕಪ್ಪು

ಶಾಂತಿನಾಥ ಕೆ. ಹೋತಪೇಟಿ, ಹುಬ್ಬಳ್ಳಿ

ಮತದಾನದ ಪ್ರಮಾಣ: ಸಂಶೋಧನೆ ನಡೆಯಲಿ

ರಾಜ್ಯದ 14 ಲೋಕಸಭಾ ಕ್ಷೇತ್ರಗಳಿಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಬೆಂಗಳೂರು ನಗರದ ಮತದಾರರು ಕಡಿಮೆ ಸಂಖ್ಯೆಯಲ್ಲಿ ಮತದಾನ ಮಾಡಿರುವುದು ವರದಿಯಾಗಿದೆ. ಸುಶಿಕ್ಷಿತ ಮತದಾರರು ತಮ್ಮ ಹಕ್ಕು ಚಲಾಯಿಸುವಲ್ಲಿ ಅಸಡ್ಡೆ ತೋರಿರುವುದು ತುಂಬಾ ಗಂಭೀರವಾದ ವಿಷಯ. ನಗರವಾಸಿಗಳ ಇಂತಹ ಧೋರಣೆಯ ಹಿಂದಿನ ಕಾರಣಗಳನ್ನು ನಮ್ಮ ಸಂಶೋಧಕರು ಪತ್ತೆ ಮಾಡಿ ವೈಜ್ಞಾನಿಕ ವರದಿ ಸಿದ್ಧಪಡಿಸಲಿ. ಅದರ ಅನುಸಾರ, ಮತದಾನದ ಶೇಕಡಾವಾರು ಪ್ರಮಾಣವನ್ನು ಹೆಚ್ಚಿಸಲು ಸಲಹೆ, ಸೂಚನೆಗಳನ್ನು ನೀಡಲಿ. ಮುಂಬರುವ ಚುನಾವಣೆಗಳಲ್ಲಿ ಮತದಾನದ ಪ್ರಮಾಣ ಹೆಚ್ಚಳಕ್ಕೆ ಅದರಿಂದ ಅನುಕೂಲವಾಗಬಹುದು.

ಗಿರಿಯಪ್ಪ ಕೊಳ್ಳಣ್ಣವರ, ತುಮಕೂರು

ದೂರ ಉಳಿದರು... ದೂರದಿಂದ ಬಂದರು!

ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಚಿತ್ರನಟಿ ರಮ್ಯಾ ಅವರು ಮಂಡ್ಯ ಕ್ಷೇತ್ರದಲ್ಲಿ ಮತದಾನ ಮಾಡದೆ ದೂರ ಉಳಿದರು ಎಂಬ ವರದಿಯನ್ನು ಓದಿ ಬೇಸರದ ಜೊತೆಗೆ ಕೋಪವೂ ಬಂದಿತು. ಒಬ್ಬ ವಿದ್ಯಾವಂತೆ, ಹಿಂದೆ ಸಂಸದೆಯೂ ಆಗಿದ್ದವರು ಮತದಾನ ಮಾಡಲು ಬೇಜವಾಬ್ದಾರಿತನ ತೋರಿದ್ದು ದುರದೃಷ್ಟಕರ. ಮತ್ತೊಂದೆಡೆ, ಅದೇ ಮಂಡ್ಯದ ಯುವತಿಯೊಬ್ಬರು ಲಂಡನ್‌ನಿಂದ ಬಂದು ಮತದಾನ ಮಾಡಿದ ವಿಚಾರವನ್ನು ಟಿ.ವಿ.ಯಲ್ಲಿ ನೋಡಿ, ಆ ಯುವತಿಯ ಬಗ್ಗೆ ಹೆಮ್ಮೆಯೆನಿಸಿತು.

ಮಂಜುನಾಥ್ ಜೈನ್ ಎಂ.ಪಿ., ಮಂಡ್ಯ

ಮತದಾರರ ಹೀಯಾಳಿಕೆ ಸಲ್ಲ

ಪ್ರತಿ ಬಾರಿ ಸಾರ್ವತ್ರಿಕ ಚುನಾವಣೆ ನಡೆದಾಗಲೂ ಸಾಮಾನ್ಯವಾಗಿ ಕಡಿಮೆ ಪ್ರಮಾಣದಲ್ಲಿ ಮತದಾನ ದಾಖಲಾಗುವ ಬೆಂಗಳೂರಿನ ನಾಗರಿಕರನ್ನು ಅದಕ್ಕಾಗಿ ಹೀಯಾಳಿಸುವುದು ಒಂದು ರೂಢಿಯಾಗಿಬಿಟ್ಟಿದೆ. ಸರಿಯಾಗಿ ಪರಿಷ್ಕರಣೆಯಾಗದ ಮತದಾರರ ಪಟ್ಟಿಯೂ ಇಂತಹ ಸ್ಥಿತಿಗೆ ಒಂದು ಕಾರಣ ಆಗಿರಬಹುದು. ಪರಿಷ್ಕರಣೆ ಎಂದರೆ ಬರೀ ಮತದಾರರ ಸೇರ್ಪಡೆಯಲ್ಲ. ಬೇರೆ ಊರುಗಳಿಗೆ ವಾಸಕ್ಕಾಗಿ ತೆರಳಿದವರ ಹೆಸರುಗಳನ್ನು ತೆಗೆದುಹಾಕಬೇಕಾಗುತ್ತದೆ. ಹಾಗೆ ಮಾಡದಿದ್ದರೆ ಶೇಕಡಾವಾರು ಮತದಾನದ ಪ್ರಮಾಣ ಕಡಿಮೆ ಇರುತ್ತದೆ. ಇದರ ನಡುವೆಯೂ ಎಷ್ಟೋ ಮತದಾರರು ಚುನಾವಣೆಯ ಸಲುವಾಗಿಯೇ ಪರವೂರುಗಳಿಂದ ಬಂದು ಮತ ಚಲಾಯಿಸಿ ಹೋಗುತ್ತಾರೆ. ಕಡಿಮೆ ಪ್ರಮಾಣದ ಮತದಾನಕ್ಕೆ ಕಾರಣ ಹುಡುಕಿ ಲೋಪದೋಷ ಸರಿಪಡಿಸುವ ಬದಲು, ಬಾಯಿಗೆ ಬಂದಂತೆ ಜರಿಯುವುದು ಎಷ್ಟು ಸರಿ?

ಗ್ರಾಮಾಂತರ ಪ್ರದೇಶದಲ್ಲಿ ಕೆಲವು ಮತದಾರರಿಗೆ ನಾನಾ ಬಗೆಯ ಆಮಿಷಗಳನ್ನು ಒಡ್ಡಿ ಮತ ಹಾಕಿಸುವ ಸಾಧ್ಯತೆ ಇರುತ್ತದೆ. ಆದರೆ ಅಂತಹ ಕೆಲಸವನ್ನು ಬೆಂಗಳೂರಿನಂತಹ ನಗರದಲ್ಲಿ ಮಾಡುವುದು ಸುಲಭವಲ್ಲ. ಪವಿತ್ರ ಮತ, ಚುನಾವಣೆ, ಹಕ್ಕು, ಕರ್ತವ್ಯ ಇವೆಲ್ಲ ಮತದಾರನಿಗೆ ಮಾತ್ರವೇ? ರಾಜಕಾರಣಿಗಳಿಗೆ ಇಲ್ಲವೇ?

ಟಿ.ವಿ.ಬಿ. ರಾಜನ್, ಬೆಂಗಳೂರು

ಮಹಿಳೆಯರ ಬಗೆಗಿನ ಧೋರಣೆ ಬದಲಾಗಲಿ

ಸರ್ಕಾರಗಳು ಮಹಿಳೆಯರ ಪರವಾಗಿ ಕೆಲವು ಯೋಜನೆಗಳನ್ನು ಜಾರಿಗೆ ತಂದಂತೆ ಮೇಲ್ನೋಟಕ್ಕೆ ಕಂಡರೂ ರಾಜಕಾರಣಿಗಳಿಗೆ ಹೆಣ್ಣಿನ ಬಗ್ಗೆ ಇರುವ ಕೀಳರಿಮೆ ಹಲವಾರು ಸಂದರ್ಭಗಳಲ್ಲಿ ಹೇಗೆ ಪ್ರಕಟ ಆಗಿಬಿಡುತ್ತದೆ ಎಂಬುದನ್ನು ಸಿ.ಜಿ.ಮಂಜುಳಾ ತಮ್ಮ ಲೇಖನದಲ್ಲಿ (ಪ್ರ.ವಾ., ಏ. 27) ಚೆನ್ನಾಗಿ ಅನಾವರಣಗೊಳಿಸಿದ್ದಾರೆ. ಮಹಿಳೆಯು ಸಾರ್ವಜನಿಕವಾಗಿ ಪುರುಷರ ಜೊತೆ ಹೆಚ್ಚು ವ್ಯಾವಹಾರಿಕವಾದ ಒಡನಾಟ ಇಟ್ಟುಕೊಂಡರೂ ಅವಳ ಶೀಲದ ಬಗ್ಗೆ ಅನುಮಾನಪಡುವುದು, ಅತ್ಯಾಚಾರ ಪ್ರಕರಣಗಳಲ್ಲಿ ಅವಳನ್ನೇ ಆರೋಪಿ ಸ್ಥಾನದಲ್ಲಿಟ್ಟು ನೋಡುವಂತಹ ಕ್ರಿಯೆಗಳು ಪುರುಷಪ್ರಧಾನ ಮನಃಸ್ಥಿತಿಯನ್ನು ಬಿಂಬಿಸುತ್ತವೆ. ಇಂತಹ ಧೋರಣೆ ಆಮೂಲಾಗ್ರವಾಗಿ ಬದಲಾಗಬೇಕು. ಅದಿಲ್ಲದೆ ಮಹಿಳೆಯರ ಪರವಾಗಿ ನಾವು ಎಂತಹ ಮಾತುಗಳನ್ನು ಆಡಿದರೂ ಪ್ರಯೋಜನವಿಲ್ಲ.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮುತ್ತೂರು, ಕೊಪ್ಪ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬೀದಿ ಬೀದಿಯಲ್ಲಿ ಪೆನ್‌ಡ್ರೈವ್ ಹೆಣ್ಣಿನ ಮಾನವೂ ಬೀದಿಗೆ...

● ಸುಕೃತ ಎಸ್.

ಹಾಸನದ ಬೀದಿ ಬೀದಿಗಳಲ್ಲಿ ಪೆನ್‌ಡ್ರೈವ್‌ಗಳನ್ನು ಬಿಸಾಡಲಾಗಿತ್ತು. ಬಿಕರಿಗೆ ಇಟ್ಟ ವಸ್ತುವಿನಂತೆ ಜನರು ಸಾಮಾಜಿಕ ಜಾಲತಾಣಗಳಲ್ಲಿ ಪೆನ್‌ಡ್ರೈವ್‌ನಲ್ಲಿನ ದೃಶ್ಯಗಳನ್ನು, ವಿಡಿಯೊಗಳನ್ನು ಹಂಚಿಕೊಂಡರು. ಯಾಕಾಗಿ ಇಂಥ ಪೆನ್‌ಡ್ರೈವ್‌ಗಳನ್ನು ಹಂಚಲಾಯಿತೊ, ಇದರ ಹಿಂದಣ 'ರಾಜಕಾರಣ'ವು ಎಂಥದ್ದೇ ಆಗಿರಲಿ. ಆದರೆ, ಬೀದಿ ಬೀದಿಗಳಲ್ಲಿ ಬಿದ್ದಿದ್ದ ಪೆನ್‌ಡ್ರೈವ್‌ಗಳು ನೂರಾರು ಹೆಣ್ಣುಮಕ್ಕಳ ಬದುಕನ್ನು ಬೀದಿಗೆ ತಂದಿದ್ದು ಮಾತ್ರ ಕೌರ್ಯ.

ಈ ಪ್ರಕರಣದ ಸುತ್ತ ಹಲವು ಆರೋಪಗಳು, ಹಲವು ವಿಷಯಗಳು ಚರ್ಚೆಯಾಗುತ್ತಿದೆ. ಕೆಲವು ವರ್ಷಗಳ ಹಿಂದಿನ ವಿಡಿಯೊಗಳು ಇವು ಎಂದೂ ಹೇಳಲಾಗುತ್ತಿದೆ. ಅತ್ಯಾಚಾರಕ್ಕೆ, ದೌರ್ಜನ್ಯಕ್ಕೆ ಒಳಗಾಗಿ ಆ ತಲ್ಲಣದಿಂದ ಹೊರಬರುತ್ತಿದ್ದ ಹೆಣ್ಣುಮಕ್ಕಳು, ಈಗ ಮತ್ತೊಂದು ಆಘಾತಕ್ಕೆ ಒಳಗಾಗುವಂತಾಗಿದೆ. ವಿಡಿಯೊಗಳನ್ನು ಲಕ್ಷಾಂತರ ಸಂಖ್ಯೆಯಲ್ಲಿ ಹಂಚಿಕೊಳ್ಳಲಾಗುತ್ತಿದೆ. ಆರೋಪಿಯು ಪ್ರಭಾವಿ ವ್ಯಕ್ತಿ. ವಿದೇಶಕ್ಕೂ ಹೋಗಿಬಿಡಬಹುದು. ಆದರೆ, ಈ ಹೆಣ್ಣುಮಕ್ಕಳು ಮಾತ್ರ ಇದೇ ಸಮಾಜದಲ್ಲಿ, ಇದೇ ಜನರ ಮಧ್ಯೆಯೇ ಬದುಕಬೇಕು. 'ಇಂಥ ಪ್ರಕರಣಗಳಲ್ಲಿ ಮಹಿಳೆಯರ ಮೇಲೆಯೇ ಹೆಚ್ಚು ಪರಿಣಾಮ ಉಂಟಾಗುತ್ತದೆ' ಎನ್ನುತ್ತಾರೆ ಮನೋವೈದ್ಯ ಡಾ. ಸಿ.ಆರ್. ಚಂದ್ರಶೇಖರ್.

'ಇಂಥ ಪ್ರಕರಣಗಳಲ್ಲಿ ಅಪರಾಧಭಾವ ಮತ್ತು ಅಪಮಾನ– ಇವೆರಡು ಮಹಿಳೆಯನ್ನು ಗಾಢವಾಗಿ ಕಾಡುತ್ತವೆ. ದೌರ್ಜನ್ಯ, ಅತ್ಯಾಚಾರಗಳಿಂದಾದ ಆಘಾತವು ಹೆಣ್ಣುಮಕ್ಕಳ ಜೀವನದುದ್ದಕ್ಕೂ ಇದ್ದುಬಿಡುತ್ತದೆ. ಇದಕ್ಕಾಗಿ ಅವರಿಗೆ ಆಪ್ತ ಸಮಾಲೋಚನೆಯ ಅವಶ್ಯಕತೆ ಇದೆ' ಎನ್ನುತ್ತಾರೆ ಅವರು.

'ದೌರ್ಜನ್ಯ ನಡೆದದ್ದು, ಅದರ ವಿಡಿಯೊಗಳು ಹರಿದಾಡುತ್ತಿರುವುದು ಹೆಣ್ಣುಮಕ್ಕಳನ್ನು ಖಿನ್ನತೆಗೆ ದೂಡುತ್ತದೆ. ನಕಾರಾತ್ಮಕ ಆಲೋಚನೆಗಳು ಕಾಡುತ್ತವೆ. ತನ್ನ ಮೇಲೆಯೇ ತಪ್ಪು ಹೊರಿಸಿಕೊಳ್ಳುವುದು, ಭಯ ಪಡುವುದು, ಕೋಪ ಬರುವುದು, ದುಃಖವಾಗುವುದು– ಹೀಗೆ ಎಲ್ಲಾ ಭಾವನೆಗಳು ಒಮ್ಮೆಲೆ ದಾಳಿ ಮಾಡುತ್ತವೆ. ಸಮಾಜದಿಂದ ತಾನು ದೂರಾಗಿದ್ದೇನೆ ಅಥವಾ ನನ್ನನ್ನೂ ದೂರವಿಡಲಾಗಿದೆ ಎಂಬೆಲ್ಲಾ ಆಲೋಚನೆಗಳು ಹೆಣ್ಣುಮಕ್ಕಳನ್ನು ಹೈರಾಣಾಗಿಸುತ್ತವೆ' ಎನ್ನುತ್ತಾರೆ ಅವರು.

'ಇಂಥ ಹೆಣ್ಣುಮಕ್ಕಳಿಗೆ ಹೆಚ್ಚಿನ ಸಹಾನುಭೂತಿ ತೋರಿಸಿದರೂ ಕಷ್ಟವೇ, ಕಡಿಮೆ ಮಾಡಿದರೂ ಕಷ್ಟವೇ. ಕುಟುಂಬವಾಗಿ, ಸಮಾಜವಾಗಿ ನಾವೆಲ್ಲರೂ ಸಂತ್ರಸ್ತೆಯರ ಸಹಾಯಕ್ಕೆ ನಿಲ್ಲಬೇಕಾಗಿದೆ. ಅವರನ್ನು ಇಂಥ ಆಲೋಚನೆಗಳಿಂದ ದೂರ ಮಾಡಬೇಕಾಗಿದೆ. ಜೊತೆಯಲ್ಲಿಯೇ ಇದ್ದು, ಅವರ ಭಾವತೀವ್ರತೆಯನ್ನು ಅರ್ಥಮಾಡಿಕೊಳ್ಳ ಬೇಕಾಗುತ್ತದೆ. ಸಂಗೀತ, ಸಾಹಿತ್ಯ ಇಂಥ ಆಲೋಚನೆಗಳನ್ನು ದೂರಮಾಡಬಲ್ಲವು' ಎಂದು ಅವರು ಸಲಹೆ ನೀಡುತ್ತಾರೆ.

ಗೌಪ್ಯವಾಗಿರಲಿ ಆಪ್ತ ಸಮಾಲೋಚನೆ: 'ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಸಂತ್ರಸ್ತೆಯರಿದ್ದಾರೆ. ಇವರೆಲ್ಲರಿಗೂ ಆಪ್ತ ಸಮಾಲೋಚನೆ ಅತ್ಯಗತ್ಯ. ಸರ್ಕಾರವು ಈ ಎಲ್ಲ ಹೆಣ್ಣುಮಕ್ಕಳಿಗೆ ಆಪ್ತ ಸಮಾಲೋಚನೆ ಒದಗಿಸುವ ವ್ಯವಸ್ಥೆ ಮಾಡಬೇಕು ಮತ್ತು ಇದು ಗೌಪ್ಯವಾಗಿರಬೇಕು. ಆಪ್ತ ಸಮಾಲೋಚನೆಗೆ ಒಳಗಾಗುವುದು ಎಂದರೆ, ಅದು ಹುಚ್ಚರಿಗೆ ಮಾತ್ರ, ಅದೊಂದು ಕಳಂಕ ಎನ್ನುವ ಅಭಿಪ್ರಾಯ ಜನರಲ್ಲಿದೆ. ಆದ್ದರಿಂದ, ಎಲ್ಲವೂ ಗೌಪ್ಯವಾಗಿರಬೇಕು. ಅವರಿಗೆ ಅಗತ್ಯ ಔಷದೋಪಚಾರಕ್ಕೂ ವ್ಯವಸ್ಥೆಯಾಗಬೇಕು' ಎಂದು ಅವರು ಹೇಳುತ್ತಾರೆ.



ಧೈರ್ಯ ಬೆಳೆಸಿಕೊಳ್ಳಬೇಕು. ನಾನು ಇದನ್ನು ಎದುರಿಸಿ ಬದುಕಬಲ್ಲೆ ಎಂದು ಮನನ ಮಾಡಿಕೊಳ್ಳಬೇಕು. ನಾನು ಇದರಲ್ಲಿ ಸಂತ್ರಸ್ತೆ ಮಾತ್ರ. ನಾನು ತಪ್ಪಿತಸ್ಥೆ ಅಲ್ಲ ಎಂದು ಧೈರ್ಯ ತಂದುಕೊಳ್ಳಬೇಕು. ನನ್ನಿಂದಲೇ ತಪ್ಪಾಗಿದೆ ಎನ್ನುವಂಥ ಆಲೋಚನೆಗಳನ್ನು ನಾವೇ ಗೆಲ್ಲಬೇಕು. ಆಪ್ತ ಸಮಾಲೋಚನೆ ಇವುಗಳಿಂದ ಹೊರಬರಲು ಸಹಾಕರ ನೀಡುತ್ತದೆ. ಅತ್ಯಾಚಾರ, ದೌರ್ಜನ್ಯದಂಥ ಪ್ರಕರಣಗಳಲ್ಲಿ ವಿಚಾರಣೆ ಎನ್ನುವುದು ಮಹಿಳೆಯರಿಗೆ ದುಃಸ್ವಪ್ನ ಇದ್ದಂತೆ. ಹಾಗಾಗಿ, ನ್ಯಾಯಾಲಯದಲ್ಲಿ ನ್ಯಾಯಾಧೀಶರು ಮಹಿಳೆಯೇ ಆಗಿರುವಂತೆ, ವಕೀಲರು ಕೂಡ ಮಹಿಳೆಯರೇ ಆಗಿರುವಂತೆ ನೋಡಿಕೊಳ್ಳಬೇಕು

ಡಾ. ಸಿ.ಆರ್. ಚಂದ್ರಶೇಖರ್, ಮನೋವೈದ್ಯ

'ಸಮರ್ಥನೆ ಮತ್ತು ಮೌನ ಅತ್ಯಂತ ಅಪಾಯಕಾರಿ'

ಇಂತಹ ಲೈಂಗಿಕ ದೌರ್ಜನ್ಯವನ್ನು ಭ್ರಷ್ಟಾಚಾರದಿಂದ ಬೇರ್ಪಡಿಸಲು ಸಾಧ್ಯವೇ ಇಲ್ಲ. ಭ್ರಷ್ಟ ಮನಸ್ಸುಗಳು ಮಾತ್ರ ಇಂತಹ ಕೃತ್ಯ ಎಸಗುತ್ತವೆ. ರಾಜಕಾರಣಿಗಳು ಲೈಂಗಿಕ ದೌರ್ಜನ್ಯವನ್ನು ಎಸಗಿದಾಗ ಅದನ್ನು ಸಮರ್ಥಿಸುವುದು ಅಥವಾ ಮೌನವಹಿಸುವುದು, ರಾಜಕಾರಣಿಗಳು ಇದೆಲ್ಲಾ ಮಾಡೇ ಮಾಡುತ್ತಾರೆ ಎನ್ನುವಂತಹ ಮನಃಸ್ಥಿತಿ ಸಮಾಜದಲ್ಲಿ ಸಾಮಾನ್ಯ ಎನ್ನುವಂತಾದರೆ, ಅದಕ್ಕಿಂತ ದೊಡ್ಡ ಅಪಾಯ ಮತ್ತೊಂದಿಲ್ಲ. ಅತ್ಯಾಚಾರ ಕೃತ್ಯ ಸಾಬೀತಾದಂತಹ ಅತ್ಯಾಚಾರಿಗಳನ್ನು ಅವಧಿಗೂ ಮುನ್ನ ಬಿಡುಗಡೆ ಮಾಡಿದಾಗಲೂ ಈ ಸಮಾಜ ಮೌನವಾಗಿಯೇ ಇತ್ತು. ಇಂತಹ ಕೃತ್ಯಗಳಲ್ಲಿ ಲೈಂಗಿಕ ದೌರ್ಜನ್ಯ ಎಸಗುವವರ ಕೇಡು ಎಷ್ಟರಮಟ್ಟಿಗೆ ಇದೆಯೋ, ಅಂಥದ್ದನ್ನು ಪ್ರತಿಭಟಿಸದೇ ಇರುವ ನಮ್ಮ ಕೇಡೂ ಅಷ್ಟೇ ಇದೆ.

ಆರ್ಥಿಕ ಭ್ರಷ್ಟಾಚಾರ ಎಸಗಿದ ಸ್ಥಿತಿಯಲ್ಲಿ ಜನರು, ಕಷ್ಟಪಟ್ಟು, ಇದ್ದುದ್ದರಲ್ಲೇ ಬದುಕಿಕೊಳ್ಳಬಹುದೇನೋ. ಆದರೆ ಲೈಂಗಿಕ ದೌರ್ಜನ್ಯ ಎಸಗುವುದಿದೆಯಲ್ಲಾ, ಜನರು ಘನತೆಯಿಂದ ಬದುಕುವುದೂ ಸಾಧ್ಯವಿಲ್ಲ ಎಂಬಂತಹ ಸ್ಥಿತಿಯನ್ನು ತಂದುಬಿಡುತ್ತದೆ. ತನ್ನ ಬದುಕನ್ನು ಸ್ವಾಭಿಮಾನದಿಂದ, ನಿರ್ಭೀತಿಯಿಂದ ಬದುಕುತ್ತೇನೆ ಎನ್ನುವ ಸಾಧ್ಯತೆಯನ್ನೂ ಇದು ನಾಶಮಾಡಿಬಿಡುತ್ತದೆ. ಭ್ರಷ್ಟಾಚಾರವನ್ನು ಸಮರ್ಥಿಸಲಾಗದು, ಭ್ರಷ್ಟಾಚಾರವೂ ಅಪಾಯಕಾರಿಯೇ.

ಆದರೆ ಲೈಂಗಿಕ ದೌರ್ಜನ್ಯ ಎಂಬುದು ಅಪಾಯಕಾರಿ ಮಾತ್ರವಲ್ಲ, ಅದೊಂದು ಕೇಡೂ ಹೌದು. ಇಂತಹ ಕೇಡನ್ನು ಎಸಗುವವರನ್ನು ನಾವು ವಿರೋಧಿಸದೇ ಹೋದರೆ, ಪ್ರತಿಭಟಿಸದೇ ಹೋದರೆ ಆ ಕೇಡಿನಲ್ಲಿ ನಾವೂ ಭಾಗಿಯಾದಂತೆ ಆಗುತ್ತದೆ. ನಮ್ಮ ದೇಶದ ಜನರು ಈಚಿನ ವರ್ಷಗಳಲ್ಲಿ ಇಂತಹ ಲೈಂಗಿಕ ದೌರ್ಜನ್ಯ, ಅತ್ಯಾಚಾರ ಪ್ರಕರಣಗಳ ಬಗ್ಗೆ ನಿರ್ಲಿಪ್ತರಾಗುತ್ತಿದ್ದಾರೆ. ಇದು ನಮ್ಮ ಸಮಾಜದ ಒಂದು ರೋಗ ಲಕ್ಷಣ. ಪ್ರಭಾವಿ ರಾಜಕಾರಣಿಗಳು ಇಂಥದ್ದನ್ನೆಲ್ಲಾ ಎಸಗಲು ಸಮಾಜದಿಂದ 'ಪರ್ಮಿಷನ್' ತೆಗೆದುಕೊಂಡುಬಿಟ್ಟಿದ್ದಾರೆ ಎಂಬಂತಾಗಿದೆ. ಇಂತಹವರು ಪ್ರಭಾವಿಗಳಾಗಿದ್ದೇ ಭ್ರಷ್ಟಾಚಾರದಿಂದ. ಭ್ರಷ್ಟಾಚಾರ ಮಾಡುತ್ತಾರೆ ಎಂದು ಗೊತ್ತಿದ್ದೂ ಜಾತಿ–ಧರ್ಮ ಮತ್ತು ಆ ಕ್ಷಣಕ್ಕೆ ತಮಗೆ ದೊರೆಯುವ ಲಾಭದ ಕಾರಣಕ್ಕೆ ಇಂತಹವರನ್ನು ಆಯ್ಕೆ ಮಾಡಿದರೆ, ಅದಕ್ಕೆ ಹುಸಿ ಭಾವಾವೇಶದಲ್ಲಿ ನೈಜತೆಯನ್ನು ಮರೆತದ್ದೇ ಕಾರಣ. ಹೀಗಾಗಿಯೇ ಇಂತಹವರಿಗೆ ಇಷ್ಟೆಲ್ಲಾ ಧೈರ್ಯ ಬಂದಿರುವುದು. ವಿದ್ಯಾವಂತರು, ವಿದ್ಯೆ ಇಲ್ಲದವರು ಎಲ್ಲರೂ ಮೂಢರ ರೀತಿಯಲ್ಲಿ ಯೋಚನೆ ಮಾಡುತ್ತಿದ್ದಾರೆ. ವ್ಯಕ್ತಿಪೂಜೆ, ಪಕ್ಷಪೂಜೆ, ಜಾತಿಧರ್ಮದ ಆಧಾರದಲ್ಲಿ ಮತ್ತು ಜಾತಿ–ಧರ್ಮ ರಕ್ಷಿಸುತ್ತವೆ ಎಂದು ಬೆಂಬಲ ನೀಡುವುದರ ಪರಿಣಾಮವೇ ಇಂತಹ ಕೃತ್ಯಗಳು.

ಈ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ದೌರ್ಜನ್ಯ ನಡೆಸಿದವರು ಮತ್ತು ದೌರ್ಜನ್ಯಕ್ಕೆ ಒಳಗಾದವರು ಒಂದೇ ಧರ್ಮದವರು ಅಲ್ಲವೇ? ಹಾಗಿದ್ದಲ್ಲಿ ಇವರ ಧರ್ಮ ರಕ್ಷಣೆ ಎಲ್ಲಾಯಿತು? ಬೇರೆ ಧರ್ಮದವರು ಇಂತಹ ಕೃತ್ಯ ಎಸಗಿದಾಗ ಅದು ಲೈಂಗಿಕ ದೌರ್ಜನ್ಯ ಎಂಬಂತೆ ಕಾಣುತ್ತದೆ. ಅದೇ ಧರ್ಮದವರು ಎಸಗಿದಾಗ ಅದು ಲೈಂಗಿಕ ದೌರ್ಜನ್ಯವಾಗುವುದಿಲ್ಲವೇ? ಅಂದರೆ ಇವರಿಂದ ಧರ್ಮ ರಕ್ಷಣೆ ಸಾಧ್ಯವಿಲ್ಲ ಎಂಬುದು ಸ್ಪಷ್ಟವಾಯಿತು. ಇಂತಹ ಕೃತ್ಯ ಎಸಗಿದವರೇನೋ ವಿದೇಶಕ್ಕೆ ಪರಾರಿಯಾಗಿಬಿಡುತ್ತಾರೆ. ಆದರೆ ಇಲ್ಲೇ ಉಳಿಯುವ ಸಂತ್ರಸ್ತ ಹೆಣ್ಣುಮಕ್ಕಳ ಬಗ್ಗೆ ಯಾರು ಯೋಚಿಸುತ್ತಾರೆ? ತಮ್ಮ ಧರ್ಮಕ್ಕೆ ಬೇರೆಯವರಿಂದ ಅಪಾಯ ಬಂದಿದೆ ಎಂಬ ಸುಳ್ಳು ಸಂಕಥನಗಳನ್ನು ನಂಬಿಕೊಂಡು, ತಮ್ಮದೇ ಧರ್ಮದ ಭ್ರಷ್ಟರಿಂದ ಹೆಣ್ಣುಮಕ್ಕಳಿಗೆ ಅಪಾಯವಿದೆ ಎಂಬುದನ್ನು ಅರಿತುಕೊಳ್ಳದೇ ಮತ ನೀಡುವ ವಿದ್ಯಾವಂತರೇ ಇದಕ್ಕೆಲ್ಲಾ ಕಾರಣ.

ಸಬಿತಾ ಬನ್ನಾಡಿ, ಲೇಖಕಿ

'ರೋಗಗ್ರಸ್ಥ ಸಮಾಜದ ಸಂಕೇತ'

ಪ್ರಭಾವಿ ರಾಜಕಾರಣಿಯೊಬ್ಬರದು ಎನ್ನಲಾದ ಅಶ್ಲೀಲ ವಿಡಿಯೊ ಒಳಗೊಂಡ ಪೆನ್‌ಡ್ರೈವ್ ಹಾಸನದ ಬೀದಿ ಬೀದಿಗಳಲ್ಲಿ ಹಂಚಿಕೆಯಾಗುತ್ತಿರುವುದು ಇಡೀ ನಾಗರಿಕ ಸಮಾಜವೇ ತಲೆ ತಗ್ಗಿಸುವ ಸಂಗತಿ. ಒಂದೆಡೆ ವಿಡಿಯೊದ ಸತ್ಯಾಸತ್ಯತೆಯ ಕುರಿತು ಇನ್ನಷ್ಟೇ ತನಿಖೆಯಾಗಬೇಕಿದೆ. ಆದರೆ, ಮತ್ತೊಂದೆಡೆ ಸಾರ್ವಜನಿಕ ವಲಯದಲ್ಲಿ ಸಂತ್ರಸ್ತೆಯ ಖಾಸಗಿತನದ ಹಕ್ಕಿನ ಉಲ್ಲಂಘನೆ ಯಾಗುತ್ತಲೇ ಇದೆ.

ಒಂದು ವೇಳೆ ವಿಡಿಯೊದಲ್ಲಿ ಕಿಂಚಿತ್ತಾದರೂ ಸತ್ಯಾಂಶವಿದ್ದರೆ, ಅದಾಗಲೇ ದೈಹಿಕವಾಗಿ ಮತ್ತು ಮಾನಸಿಕವಾಗಿ ಜರ್ಜರಿತಳಾಗಿ ಅಸಹಾಯಕ ಸ್ಥಿತಿಯಲ್ಲಿರುವ ಸಂತ್ರಸ್ತೆಯ ಮನಸ್ಸಿನ ಮೇಲೆ ಮತ್ತೊಮ್ಮೆ ಪ್ರಹಾರ ಮಾಡುವಂತಹ ಕೊಳಕು ಮನಃಸ್ಥಿತಿಗೆ ತಲುಪಿರುವುದು ರೋಗಗ್ರಸ್ಥ ಸಮಾಜದ ಲಕ್ಷಣವಲ್ಲದೆ ಮತ್ತೇನೂ ಅಲ್ಲ.

ಸಾಮಾಜಿಕ ಮಾಧ್ಯಮ ವೇದಿಕೆಗಳಲ್ಲಿ, ವೆಬ್ ತಾಣಗಳಲ್ಲಿ ಯಾವುದೇ ಅಡೆತಡೆಯಿಲ್ಲದೆ, ಕಾನೂನಿನ ನಿಯಂತ್ರಣವಿಲ್ಲದೆ ಇಂಥಾ ಸಾವಿರಾರು ಅಶ್ಲೀಲ ವಿಡಿಯೋಗಳು ಅಪ್ ಲೋಡ್ ಆಗುತ್ತಲೇ ಇವೆ. ಐಪಿಸಿ ಸೆಕ್ಷನ್ 354ಸಿ ಪ್ರಕಾರ ಯಾವುದೇ ವ್ಯಕ್ತಿ, ಮಹಿಳೆಯು ಲೈಂಗಿಕ ಕ್ರಿಯೆಯಲ್ಲಿ ತೊಡಗಿರುವ ದೃಶ್ಯಗಳನ್ನು ಸೆರೆಹಿಡಿಯುವುದಾಗಲೀ, ಅಥವಾ ಸೆರೆಹಿಡಿದ ದೃಶ್ಯಗಳನ್ನು ಯಾವುದೇ ಮಾದರಿಯಲ್ಲಿ ಹಂಚುವುದು ಮತ್ತು ಪ್ರಸಾರ ಮಾಡುವುದು ಅಪರಾಧವಾಗಿದ್ದು, ಇಂಥ ಪ್ರಕರಣಗಳಲ್ಲಿ ತಪ್ಪಿತಸ್ಥರಿಗೆ ಮೂರು ವರ್ಷದವರೆಗೆ ಕಠಿಣ ಶಿಕ್ಷೆ ವಿಧಿಸಬಹುದು. ಕಾನೂನಿನ ನಿಬಂಧನೆಗಳೇನೇ ಇದ್ದರೂ ಒಟ್ಟಾರೆ ಸಮಾಜದ ವಿಕೃತ ಲೈಂಗಿಕತೆಯ (Voyeuristic) ಧೋರಣೆ ಮತ್ತು ಪುರುಷ ನೋಟದ (male gaze) ಕಣ್ಗಾವಲಿನಿಂದ ಮಹಿಳೆಯರು ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲದ ಅನಾರೋಗ್ಯಕರ ಸ್ಥಿತಿಗೆ ತಲುಪಿದ್ದೇವೆ.

ಪ್ರಕರಣದ ಕುರಿತ ಮುಖ್ಯಮಂತ್ರಿಗಳ ಟ್ವೀಟ್‌ಗೆ ಬಳಕೆದಾರರ ಪ್ರತಿಕ್ರಿಯೆಗಳನ್ನು ನೋಡಿದರೆ ಸಾಕು ಸಮಾಜದ ರೋಗಗ್ರಸ್ಥ ಮನಃಸ್ಥಿತಿಯ ಅನಾವರಣವಾಗುತ್ತದೆ. ಓರ್ವ ಬಳಕೆದಾರ 'ಸರ್ ಲಿಂಕ್ ಕೊಡಿ' ಎಂದು ಪ್ರತಿಕ್ರಿಯಿಸಿರುವುದನ್ನು ನೋಡಿದರೆ ಎಲ್ಲರಿಗೂ ಅಸಹ್ಯ ಎನಿಸುವುದರ ಜೊತೆಗೆ ಭೀತಿ ಹುಟ್ಟುತ್ತದೆ. ಇನ್ನೊಂದು ಆಘಾತಕಾರಿ ವಿಚಾರವೇನೆಂದರೆ, ಇಂಥ ಪ್ರತಿಕ್ರಿಯೆ ನೀಡುವ ಸಭ್ಯತೆಯ ಮುಖವಾಡ ತೊಟ್ಟ ಜನರು ನಮ್ಮ ನೆರೆಹೊರೆಯವರಾಗಿರಲೂಬಹುದು, ಅಥವಾ ಪರಿಚಿತರಾಗಿರಲೂಬಹುದು. ಇದೂ ಒಂದು ರೀತಿಯ ಲೈಂಗಿಕ ದೌರ್ಜನ್ಯ ಎಂದರೆ ತಪ್ಪಾಗಲಾರದು. ನಾಲ್ಕು ಗೋಡೆಗಳ ಮಧ್ಯೆ ಹರಣವಾದ ಗೌರವಕ್ಕೆ ಮತ್ತೆ ಸಾರ್ವಜನಿಕವಾಗಿ ಚ್ಯುತಿ ತರುವುದು ನಿಜಕ್ಕೂ ಅನಾಗರಿಕತೆಯ ಸಂಕೇತ.

ಸತ್ಯಪ್ರಕಾಶ್ ಎಂ.ಆರ್.
ಸಹ ಪ್ರಾಧ್ಯಾಪಕ, ಕುವೆಂಪು ವಿಶ್ವವಿದ್ಯಾಲಯ

'ಚುನಾವಣಾ ಆಯೋಗವೂ ಕ್ರಮ ತೆಗೆದುಕೊಳ್ಳಬೇಕಿತ್ತು'



ಇಂತಹ ಪ್ರಕರಣಗಳಲ್ಲಿ ಯಾರೋ ದೂರು ನೀಡಲಿ ಎಂದು ಕಾಯುತ್ತಾ ಕೂರುವ ಅವಶ್ಯಕತೆ ಇರಲಿಲ್ಲ. ಇದೆಲ್ಲಾ ನೂರಾರು ಹೆಣ್ಣುಮಕ್ಕಳ ಮೇಲೆ ನಡೆದ ದೌರ್ಜನ್ಯ ಮತ್ತು ಅವೆಲ್ಲವೂ ಈಗ ಜಗಜ್ಜಾಹೀರಾಗಿದೆ. ಇಂತಹ ಸಂದರ್ಭದಲ್ಲಿ ಸರ್ಕಾರವು ಸ್ವಯಂಪ್ರೇರಿತವಾಗಿಯೇ ಕ್ರಮ ತೆಗೆದುಕೊಳ್ಳಬೇಕಿತ್ತು. ಪೊಲೀಸ್ ಇಲಾಖೆ ಸಿಬ್ಬಂದಿ ಸಮವಸ್ತ್ರದಲ್ಲಿ ಇದ್ದಾಗಲೇ ಇಂತಹ ಕೃತ್ಯ ನಡೆದಿದೆ. ಅದನ್ನು ಪೊಲೀಸ್ ಇಲಾಖೆಯೂ ಗಂಭೀರವಾಗಿ ಪರಿಗಣಿಸಿ, ಸ್ವಯಂಪ್ರೇರಿತವಾಗಿ ಕ್ರಮ ತೆಗೆದುಕೊಳ್ಳಬೇಕಿತ್ತು. ಇದು ಚುನಾವಣೆಯ ಸಂದರ್ಭದಲ್ಲಿ ಬಹಿರಂಗವಾಗಿರುವ ಕಾರಣ ಚುನಾವಣಾ ಆಯೋಗವೂ ದೂರು ದಾಖಲಿಸಿಕೊಳ್ಳಬೇಕಿತ್ತು.

ಏನೇ ಆಗಿದ್ದರೂ ಅಂತಿಮವಾಗಿ ಇದು ಹೆಣ್ಣುಮಕ್ಕಳ ಘನತೆಗೆ ಕುಂದು ತಂದಿರುವ ಪ್ರಕರಣ. ಆರೋಪಿಯು ಪ್ರತಿ ಮಹಿಳೆಯ ವಿಡಿಯೊ ಕರೆಯನ್ನೂ ಸ್ಕ್ರೀನ್ ರೆಕಾರ್ಡ್ ಮಾಡಿಕೊಂಡಿದ್ದಾನೆ ಎಂಬುದು ಆತನಿಗೆ ಮಾನಸಿಕ ಸಮಸ್ಯೆ ಇದೆ ಎಂಬುದನ್ನು ತೋರಿಸುತ್ತದೆ. 55-60 ವರ್ಷದ ಮನೆಗೆಲಸದ ಮಹಿಳೆಯ ಮೇಲೂ ದೌರ್ಜನ್ಯ ಎಸಗಲಾಗಿದೆ. ಎಫ್‌ಐಆರ್ ಸಹ ದಾಖಲಾಗಿದೆ. ಇದನ್ನಂತೂ ಗಂಭೀರವಾಗಿ ಪರಿಗಣಿಸಲೇಬೇಕು. ಇಲ್ಲೆಲ್ಲಾ ವಿಡಿಯೊಗಳೇ ದಾಖಲೆಗಳಾಗಿ ನಿಲ್ಲುತ್ತಿರುವಾಗ ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಳ್ಳಬೇಕಿತ್ತು.

ಇಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವಿದೆ. ಇಲ್ಲಿ ಎಲ್ಲಾ ಹೆಣ್ಣುಮಕ್ಕಳೂ ಸಂತ್ರಸ್ತೆಯರೇ ಆಗಿದ್ದಾರೆ ಎನ್ನಲಾಗದು. ಸರ್ಕಾರಿ ಅಧಿಕಾರಿಗಳು, ರಾಜಕಾರಣಿಯ ಇಂತಹ ಕೃತ್ಯಕ್ಕೆ 'ಬಲಿ'ಯಾಗುತ್ತಾರೆ ಎಂಬುದು ಅಮಾಯಕತೆ ಆಗಿರಲಾರದು. ಭ್ರಷ್ಟಾಚಾರದ ಭಾಗವಾಗಿ ಸರ್ಕಾರಿ ಅಧಿಕಾರಿಗಳು ಇಂಥದ್ದರಲ್ಲಿ ಭಾಗಿಯಾಗಿರಬಹುದು. ಈ ಬಗ್ಗೆ ತನಿಖೆಯಾಗಬೇಕು. ಆ ವಿಡಿಯೊಗಳನ್ನು ಒಳಗೊಂಡ ಪೆನ್‌ಡ್ರೈವ್‌ಗಳನ್ನು ಸಾರ್ವಜನಿಕವಾಗಿ ಎಸೆದ ಕೃತ್ಯವೂ ಅತ್ಯಾಚಾರಕ್ಕೆ ಸಮಾನಾದ ಕೃತ್ಯವೇ ಹೌದು. ಇದಕ್ಕೂ ತಕ್ಕ ಶಿಕ್ಷೆಯಾಗಬೇಕು.

ಸ್ಟ್ಯಾನ್ಲಿ, 'ಒಡನಾಡಿ' ಸೇವಾ ಸಂಸ್ಥೆ ಸಂಚಾಲಕ

ಅತಿರೇಕದ ಪ್ರತಿಕ್ರಿಯೆ ಅಪಾಯಕಾರಿ

ನುಡಿ ಬೆಳಗು



ಎಚ್.ಎಸ್.ನವೀನಕುಮಾರ್ ಹೊಸದುರ್ಗ

ಬಹು ದೊಡ್ಡ ಸಂಸ್ಥೆಯ ಮುಖ್ಯಸ್ಥನೊಬ್ಬ ಕೋಪದಲ್ಲಿ ದೂರ್ವಾಸ ಮುನಿ ಎಂದೇ ಹೆಸರಾಗಿದ್ದ. ಜೊತೆಗೆ ತಾನೊಬ್ಬನೇ ಸರಿಯಾಗಿ ಕೆಲಸ ಮಾಡುವವನು, ತನ್ನ ಕೈ ಕೆಳಗಿನವರೆಲ್ಲ ಸೋಮಾರಿಗಳು, ಏನೂ ಕೆಲಸ ಮಾಡದೇ ಸುಮ್ಮನೆ ಸಂಬಳ ತೆಗೆದುಕೊಳ್ಳುತ್ತಾರೆ ಎನ್ನುವ ಭಾವ ಅವನಲ್ಲಿ. ಹೀಗಾಗಿ ಯಾವುದೇ ಸನ್ನಿವೇಶವಿರಲಿ ಅದಕ್ಕೆ ಅತಿಯಾಗಿ ಪ್ರತಿಕ್ರಿಯಿಸುತ್ತಿದ್ದ. ವೃಥಾ ತನ್ನ ಸಹೋದ್ಯೋಗಿಗಳ ಮೇಲೆ ಕಂಡಾಪಟ್ಟೆ ರೇಗುತ್ತಿದ್ದ. ಇಂಗ್ಲೀಷಿನಲ್ಲಿ ಇದಕ್ಕೆ over reacting to the situation ಎನ್ನುತ್ತಾರೆ. ಕಚೇರಿ ಸಮಯದಲ್ಲಿ ಕಾರಿಡಾರ್‌ನಲ್ಲಿ ಯಾರಾದರೂ ಓಡಾಡುತ್ತಿದ್ದರಂತೂ ಈತನಿಗೆ ಕೆಂಡದಂಥ ಕೋಪ. ಆಗಾಗ ಏಕಾಏಕಿ ತನ್ನ ಚೇಂಬರ್ ನಿಂದ ಹೊರಗೆ ಬಂದು ಆ ರೀತಿಯ ವ್ಯಕ್ತಿಗಳು ಸಿಕ್ಕಿದರೆ ಅವರಿಗೆ ಶಿಕ್ಷೆ ಕೊಡುವುದು ಅವನ ಅಭ್ಯಾಸ.

ಒಮ್ಮೆ ಹೀಗಾಯಿತು... ಈ ದೂರ್ವಾಸ ಮುನಿ ತನ್ನ ಚೇಂಬರ್‌ನಿಂದ ಹೊರಗೆ ಬಂದ. ಅಲ್ಲಿ ನೋಡಿದರೆ ಒಬ್ಬ ವ್ಯಕ್ತಿ ಕಾರಿಡಾರ್‌ನಲ್ಲಿ ನಡೆದು ಬರುತ್ತಿದ್ದಾನೆ. ಇವನಿಗೆ ಇನ್ನಿಲ್ಲದ ಕೋಪ ಬಂದಿತು. ತಕ್ಷಣ ಅವನನ್ನು ಹತ್ತಿರಕ್ಕೆ ಕರೆದು 'ಏಯ್.. .ನಾನು ಹೇಳಿರಲಿಲ್ಲವೇ, ಕಛೇರಿಯ ಸಮಯದಲ್ಲಿ ಸುಮ್ಮನೆ ಹೊರಗೆ ಅಡ್ಡಾಡ ಬಾರದೆಂದು? ಸೋಂಬೇರಿ, ಹೇಳು, ನಿನ್ನ ಸಂಬಳವೆಷ್ಟು?' ಎಂದು ಗುಡುಗಿದ. ಆ ವ್ಯಕ್ತಿ '₹10,000 ಸಾರ್' ಎಂದ. ಆಗ ನಮ್ಮ ದೂರ್ವಾಸ 'ನಿನ್ನನ್ನು ಈ ಕ್ಷಣದಿಂದಲೇ ಕೆಲಸದಿಂದ ತೆಗೆದು ಹಾಕುತ್ತಿದ್ದೇನೆ. ನಮ್ಮ ಕಂಪನಿಯ ನಿಯಮದಂತೆ ನಿನಗೆ ಮೂರು ತಿಂಗಳ ಸಂಬಳ ಕೊಡ್ತಾ ಇದ್ದೀನಿ. ತಗೋ ಈ ₹30,000... ತಕ್ಷಣ ಇಲ್ಲಿಂದ ಹೊರಡು' ಎಂದು ಆದೇಶಿಸಿದ. ₹30,000 ರೂಪಾಯಿಗಳನ್ನು ಅವನ ಕೈಲಿತ್ತ.

ಆ ವ್ಯಕ್ತಿ ಮುಗುಳ್ನಗುತ್ತಲೇ ಅದನ್ನು ಸ್ವೀಕರಿಸಿ ಅಲ್ಲಿಂದ ಹೊರಟ. ತಕ್ಷಣ ನಮ್ಮ ದೂರ್ವಾಸ, ತನ್ನ ಸೆಕ್ರೆಟರಿಯ ಬಳಿ 'ಈ ವ್ಯಕ್ತಿ ಯಾವ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ' ಎಂದು ಪ್ರಶ್ನಿಸಿದ. ಆಗ ಸೆಕ್ರೆಟರಿ 'ಯಾವ ವಿಭಾಗದಲ್ಲೂ ಇಲ್ಲ ಸರ್. ಅಂದ ಹಾಗೆ ಅವನು ನಮ್ಮ ಕಂಪನಿಯ ಕೆಲಸಗಾರನೇ ಅಲ್ಲ. ಅವನೊಬ್ಬ ಕೊರಿಯರ್ ಬಾಯ್. ನಾನು ಹೇಳೋಣ ಎಂದು ಬಾಯಿ ತೆರೆಯುವುದರ ಒಳಗೆ ನೀವು ನಿಮ್ಮ ಕೆಲಸ ಮುಗಿಸಿ ಬಿಟ್ಟಿದ್ದಿರಿ' ಎಂದಾಗ ಕಚೇರಿ ಮುಖ್ಯಸ್ಥ ಪೆಚ್ಚಾದ.

ಈ ಥರದ ವ್ಯಕ್ತಿಗಳನ್ನು ನಾವು ನಮ್ಮ ಬದುಕಿನಲ್ಲಿ ನೋಡುತ್ತಿರುತ್ತೇವೆ. ಸಂದರ್ಭ ಏನೆಂದು ಅರ್ಥ ಮಾಡಿಕೊಳ್ಳದೇ ತಾಳ್ಮೆ ಕಳೆದುಕೊಂಡು ಅತಿರೇಕದಿಂದ ವರ್ತಿಸಿದರೆ ಇಂತಹ ಸನ್ನಿವೇಶ ಕಟ್ಟಿಟ್ಟ ಬುತ್ತಿ. ಅದಕ್ಕೆ 'ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡು' ಎಂಬ ಗಾದೆ ಮಾತಿರುವುದು. ಕೆಲವೊಮ್ಮೆ ನಾವು ಕೇಳಿದ್ದು ನೋಡಿದ್ದು ಎಲ್ಲವೂ ಕೂಡ ಸುಳ್ಳಾಗಿರಬಹುದು. ನಿಧಾನಿಸಿ ಯೋಚಿಸಿದಾಗ ಮಾತ್ರ ನಿಜವೇನೆಂದು ಅರ್ಥವಾಗುತ್ತದೆ. ಹಾಗಾಗಿ ಯಾವುದೇ ಸನ್ನಿವೇಶಕ್ಕೆ ಅತಿರೇಕದ ಪ್ರತಿಕ್ರಿಯೆ ಎಂದಿಗೂ ಒಳ್ಳೆಯದಲ್ಲ.

'ಉತ್ತರಕಾಂಡ'ದಲ್ಲಿ ಶಿವಣ್ಣ ಖಳನಾಯಕ?

ಡಾಲಿ ಧನಂಜಯ

ಡಾಲಿ ಧನಂಜಯ ನಟನೆಯ 'ಉತ್ತರಕಾಂಡ' ಸಿನಿಮಾದಲ್ಲಿ ನಟಿಸುತ್ತಿರುವ ನಟರ ಪಟ್ಟಿ ದಿನದಿಂದ ದಿನಕ್ಕೆ ಬೆಳೆಯುತ್ತಲೇ ಇದೆ. ಶಿವರಾಜ್‌ಕುಮಾರ್, ದಿಗಂತ್, ರಂಗಾಯಣ ರಘು, ಚೈತ್ರಾ ಆಚಾರ್, ಉಮಾಶ್ರೀ, ಗೋಪಾಲಕೃಷ್ಣ ದೇಶಪಾಂಡೆ ಮೊದಲಾದವರು ಈಗಾಗಲೇ ರೋಹಿತ್ ಪದಕಿ ನಿರ್ದೇಶನದ ಈ ಚಿತ್ರದ ತಂಡವನ್ನು ಸೇರಿಕೊಂಡಿದ್ದಾರೆ.

ವಿಭಿನ್ನ ಹೆಸರು ಮತ್ತು ಗೆಟಪ್‌ನೊಂದಿಗೆ ಕೆಲವು ನಟರ ಫಸ್ಟ್‌ಲುಕ್ ಅನ್ನು ಕೂಡ ರಿವೀಲ್ ಮಾಡಲಾಗಿದೆ. ಹೀಗಾಗಿ ಇಷ್ಟೆಲ್ಲ ಸ್ಟಾರ್ ನಟರಿಗೆ ಚಿತ್ರದಲ್ಲಿ ಯಾವ ರೀತಿ ಪಾತ್ರಗಳಿರಬಹುದೆಂದು ಕುತೂಹಲ ಮೂಡುವುದು ಸಹಜ. ಶಿವರಾಜ್‌ಕುಮಾರ್ ನಟನೆಯ 'ಟಗರು' ಚಿತ್ರದಲ್ಲಿ ಧನಂಜಯ 'ಡಾಲಿ'ಯಾಗಿ ಮಿಂಚಿದ್ದರು. ಉತ್ತರ ಕರ್ನಾಟಕದ ಕಥೆಯನ್ನು ಹೊಂದಿರುವ 'ಉತ್ತರಕಾಂಡ'ದಲ್ಲಿ ಶಿವಣ್ಣ ಖಳನಾಯಕರ ಗುಂಪಿನ ನಾಯಕನಾಗಿರುತ್ತಾನೆ ಎನ್ನುತ್ತಿದೆ ಚಿತ್ರತಂಡದ ಮೂಲಗಳು.

ಕೆ.ಆರ್.ಜಿ.ಸ್ಟೂಡಿಯೋಸ್ ನಿರ್ಮಾಣದ ಈ ಚಿತ್ರ ಎರಡು ಭಾಗಗಳಲ್ಲಿ ಬರುವುದು ಖಾತ್ರಿಯಾಗಿದೆ. 'ಒಳ್ಳೆಯವರು ಹಾಗೂ ಕೆಟ್ಟವರ ಗುಂಪಿನ ನಡುವಿನ ಕದನದ ಕಥೆಯನ್ನು ಹೊಂದಿರುವ ಚಿತ್ರದಲ್ಲಿ ಧನಂಜಯ ಒಳ್ಳೆಯವರ ಗುಂಪನ್ನು ಮುನ್ನಡೆಸಿದರೆ, ಶಿವರಾಜ್‌ಕುಮಾರ್ ದುಷ್ಟರ ಗುಂಪಿನ ನಾಯಕನಾಗಿರುತ್ತಾರೆ' ಎನ್ನುತ್ತಿವೆ ಮೂಲಗಳು.

ಚಿತ್ರದ ಮೊದಲ ಹಂತದ ಚಿತ್ರೀಕರಣ ವಿಜಯಪುರದಲ್ಲಿ ನಡೆಯುತ್ತಿದೆ. ಬಹುಭಾಷಾ ನಟಿ ಐಶ್ವರ್ಯ ರಾಜೇಶ್ ಧನಂಜಯಗೆ ಜೋಡಿಯಾಗಿ ನಟಿಸಲಿದ್ದಾರೆ. ನಿರ್ದೇಶಕ ಯೋಗರಾಜ್ ಭಟ್ ಕೂಡ ಜವಾರಿ ಭಾಷೆಯ ಸಿನಿಮಾದಲ್ಲಿ ಬಣ್ಣ ಹಚ್ಚುತ್ತಿದ್ದಾರೆ.

ಭರದಿಂದ ಸಾಗಿದ 'ಸಿದ್ಲಿಂಗು'

ಸೋನುಗೌಡ, ಯೋಗಿ

ಲೂಸ್ ಮಾದ ಯೋಗಿ, ರಮ್ಯಾ ಜೋಡಿಯಾಗಿ ನಟಿಸಿದ್ದ 'ಸಿದ್ಲಿಂಗು' ಹೊಸ ರೀತಿಯ ನಿರೂಪಣೆಯಿಂದ ಜನಮನ್ನಣೆ ಗಳಿಸಿತ್ತು. ಆ ಸಿನಿಮಾ ತೆರೆಕಂಡು 12 ವರ್ಷಗಳ ಬಳಿಕ 'ಸಿದ್ಲಿಂಗು-2' ಸೆಟ್ಟೇರಿತ್ತು. ಚಿತ್ರೀಕರಣ ಭರದಿಂದ ಸಾಗಿದ್ದು, ಚಿತ್ರದ ಎರಡನೇ ಹಂತದ ಚಿತ್ರೀಕರಣ ಇತ್ತೀಚೆಗಷ್ಟೇ ಮುಕ್ತಾಯಗೊಂಡಿದೆ.

'ತೋತಾಪುರಿ' ಬಳಿಕ ನಿರ್ದೇಶಕ ವಿಜಯ್ ಪ್ರಸಾದ್ 'ಸಿದ್ಲಿಂಗು' ಸೀಕ್ವೆಲ್ ಕಥೆಯನ್ನು ಕೈಗೆತ್ತಿಕೊಂಡಿದ್ದಾರೆ. 'ಜಮಾಲಿಗುಡ್ಡ' ಚಿತ್ರದ ನಿರ್ಮಾಪಕ ಶ್ರೀಹರಿ ರೆಡ್ಡಿ ನಿಹಾರಿಕಾ ಫಿಲ್ಮ್ಸ್ ಅಡಿಯಲ್ಲಿ ಈ ಚಿತ್ರಕ್ಕೆ ಬಂಡವಾಳ ಹೂಡುತ್ತಿದ್ದಾರೆ.

ಅಂದಹಾಗೆ ಈ ಚಿತ್ರದಲ್ಲಿ ರಮ್ಯಾ ಜಾಗಕ್ಕೆ 'ಕಿರಗೂರಿನ ಗಯ್ಯಾಳಿಗಳು' ಖ್ಯಾತಿಯ ಸೋನುಗೌಡ ಬಂದಿದ್ದಾರೆ. 'ಸಿದ್ಲಿಂಗು ಹಾಸ್ಯ, ಸಂಬಂಧಗಳು, ಪ್ರೀತಿ, ಭಾವನೆಗಳಿಂದ ಜನರ ಮೆಚ್ಚುಗೆ ಗಳಿಸಿತ್ತು. ಇಲ್ಲಿ ಬರೀ ಮೀನಿಂಗ್ ಇರಲಿದೆ. ನನ್ನ ಹಿಂದಿನ ಸಿನಿಮಾಗಳಂತೆ ಡಬಲ್ ಮೀನಿಂಗ್ ಇರುವುದಿಲ್ಲ' ಎನ್ನುತ್ತಾರೆ ನಿರ್ದೇಶಕ.

ಅನೂಪ್ ಸೀಳಿನ್ ಸಂಗೀತ, ಅರಸು ಅಂತಾರೆ ಸಾಹಿತ್ಯ ಚಿತ್ರಕ್ಕಿರ-ಲಿದ್ದು, ಪದ್ಮಜಾ ರಾಜ್, ಆಂಟೋನಿ ಕಮಲ್, ಮಹಾಂತೇಶ್ ಸೇರಿದಂತೆ ದೊಡ್ಡ ತಾರಾಗಣವಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಸೋಮವಾರ ಏಪ್ರಿಲ್ 29, 2024

ಶ್ರೀಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಕೃಷ್ಣ ಪಂಚಮಿ ಗಂ. 7-58 ನಕ್ಷತ್ರ: ಪೂರ್ವಾಷಾಢ ಗಂ. 28-43 ಯೋಗ: ಸಿದ್ಧ ಗಂ. 24-26 ಕರಣ: ತೈತಿಲ ಗಂ. 7-58, ಮೇಷ ಮಾಸದ 17 ನೇ ದಿನ, ಮಳೆನಕ್ಷತ್ರ: ಭರಣಿ 1.
ರಾಹುಕಾಲ: ಬೆಳಿಗ್ಗೆ 07-30 - 09-00
ಸೂರ್ಯೋದಯ: 06-13 ಸೂರ್ಯಾಸ್ತ: 06-42
ಮುಸ್ಲಿಂ ದಿನಾಂಕ: 19 ಶವ್ವಾಲ್
ಅದೃಷ್ಟ ಸಂಖ್ಯೆ: 2, 11

ಮೇಷ: ಬೇಡಿಕೆ ಕಡಿಮೆ ಆಗಿರುವ ವಿದ್ವಾಂಸರಿಗೆ ಶಿಷ್ಯರ ಮೂಲಕ ಹೆಚ್ಚಿನ ಮನ್ನಣೆ, ಗೌರವ ಸಿಗುವ ಸಾಧ್ಯತೆ ಇದೆ. ಒಂಟಿತನ ಹೋಗಲಾಡಿಸಿಕೊಳ್ಳಲು ಕ್ರಿಯಾತ್ಮಕ ಕೆಲಸಗಳತ್ತ ಮನಸ್ಸು ಹರಿಸುವಿರಿ.

ವೃಷಭ: ಯುವಕ–ಯುವತಿಯರು ರಾಜಕೀಯ ಪಕ್ಷಗಳ ಹಿಂದೆ ಬಿದ್ದು ಕಾಲಹರಣ ಮಾಡದೆ ಕಾರ್ಯಗಳ ಮೇಲೆ ಗಮನಹರಿಸುವುದು ಉತ್ತಮ. ಮಗನ ಕಾರ್ಯಸಿದ್ಧಿಗೆ ಗಣೇಶನಿಗೆ ಪೂಜೆ ಮಾಡಿಸಿ.

ಮಿಥುನ: ಅಂದುಕೊಂಡ ಕಾರ್ಯದ ವಿಘ್ನಗಳನ್ನು ಸಂಘಟನೆಯಿಂದ ಪರಿಹರಿಸಿಕೊಂಡು ಪೂರ್ಣವಾಗಿದ್ದನ್ನು ಕಂಡು ಹರ್ಷವಾಗುವುದು. ಕ್ರೀಡಾಪಟುಗಳಿಗೆ ಮಾರ್ಗದರ್ಶಕರ ಸಹಾಯ ಸಿಗುತ್ತದೆ.

ಕರ್ಕಾಟಕ: ಅಕ್ಕ ಪಕ್ಕದವರ ಭಿನ್ನಾಭಿಪ್ರಾಯಗಳಿಗೆ ಪ್ರತಿಕ್ರಿಯಿಸುವುದು ಸಮಂಜಸವಲ್ಲ. ಭಾರದ ವಸ್ತುಗಳನ್ನು ಎತ್ತಿ ಇಳಿಸುವಂಥ ಕೆಲಸಗಳನ್ನು ಮಾಡಲು ಹೋಗಿ ದೇಹದ ಭಾಗಗಳನ್ನು ಉಳುಕಿಸಿಕೊಳ್ಳುತ್ತೀರಿ.

ಸಿಂಹ: ಮಾಡದೆ ಇರುವ ತಪ್ಪುಗಳ ಆಪಾದನೆ ಬಂದು ಅದನ್ನು ನಿವಾರಿಸಿಕೊಳ್ಳಲಾಗದೇ ತೊಳಲಾಡಬೇಕಾಗುವುದು. ಇತರರ ಬಗ್ಗೆ ಗೌರವ, ತಾಳ್ಮೆ ಹೊಂದಿರುವುದು ಬಹಳ ಮುಖ್ಯವಾಗುತ್ತದೆ.

ಕನ್ಯಾ: ಸುತ್ತಿಬಳಸಿ ವಿಷಯಗಳನ್ನು ಕುಟುಂಬದ ಎದುರು ಇಡುವುದಕ್ಕಿಂತ ಆಕಾಂಕ್ಷೆಗಳನ್ನು ನೇರವಾಗಿ ತಿಳಿಸಿದರೆ ಫಲಿತಾಂಶವು ದೊರೆಯುವುದು. ದಿನಸಿ ವ್ಯಾಪಾರಿಗಳಿಗೆ ಲಾಭ ಸಿಗುತ್ತದೆ.

ತುಲಾ: ಪರಿಸ್ಥಿತಿ ಹಾಗೂ ಅವಕಾಶಗಳನ್ನು ಜಾಣತನದಿಂದ ಉಪಯೋಗಿಸಿ-ಕೊಂಡಲ್ಲಿ ಸ್ಥಿರತೆ ಪ್ರಾಪ್ತಿ. ಏಕಾಗ್ರತೆಯ ಕೊರತೆಯಿಂದ ಕೆಲಸದಲ್ಲಿ ಏನಾದರೂ ತಪ್ಪುಗಳಾಗುತ್ತಲೇ ಇರುತ್ತದೆ.

ವೃಶ್ಚಿಕ: ಕುಟುಂಬದವರು ಬಯಸುವ ಜವಾಬ್ದಾರಿಯನ್ನು ಸರಿಯಾಗಿ ನಿಭಾಯಿಸುವ ಕಡೆ ಗಮನಹರಿಸಿ. ಕೃಷ್ಣ–ಸುಧಾಮರಂಥ ಸ್ನೇಹಕ್ಕೆ ಇಲ್ಲದ ವಿಚಾರಗಳಿಗೆ ಜಗಳವೇಳುವ ಸಾಧ್ಯತೆಗಳಿವೆ.

ಧನು: ಸಿಮೆಂಟ್ ಕಾರ್ಖಾನೆಗಳಲ್ಲಿ ಕೆಲಸ ಮಾಡುವವರಿಗೆ ಶ್ವಾಸಕೋಶದ ಸಮಸ್ಯೆಗಳು ಎದುರಾಗಬಹುದು. ಮನೋಕಾಮನೆಗಳನ್ನು ಪೂರೈಸಿಕೊಳ್ಳಲು ಪ್ರಯತ್ನಿಸಿ. ಹಣದ ಅಡಚಣೆ ಇರುವುದಿಲ್ಲ.

ಮಕರ: ವ್ಯಕ್ತಿಗಳ ಸ್ನೇಹವನ್ನು ಬೆಳೆಸಿ ವ್ಯವಹರಿಸುವಾಗ ಸರಿಯಾಗಿ ಯೋಚಿಸಿ ನಿರ್ಧಾರ ತೆಗೆದುಕೊಳ್ಳಿ. ಜನರ ಎದುರು ಕಣ್ಣೀರು ಹಾಕಿ ದುಃಖವನ್ನು ವ್ಯಕ್ತಪ-ಡಿಸಬೇಡಿ. ಉಷ್ಣದಿಂದ ಸಮಸ್ಯೆಗಳಾಗಬಹುದು.

ಕುಂಭ: ಮನೆಯ ಜಾನುವಾರು, ಸಾಕುಪ್ರಾಣಿಗಳ ಆರೋಗ್ಯದ ವಿಷಯವಾಗಿ ತಲೆಕೆಡಿಸಿಕೊಳ್ಳಬೇಕಾದ ಪರಿಸ್ಥಿತಿ ಎದುರಾಗುವುದು. ಲಾಭದ ಹಾದಿಯಲ್ಲೇ ಬಂದ ಸಣ್ಣ ನಷ್ಟವು ಒಮ್ಮೆ ಎಡವಿದಂತಾಗಬಹುದು.

ಮೀನ: ಹತ್ತಿರದ ವ್ಯಕ್ತಿಯೊಂದಿಗಿನ ವಾಗ್ವಾದವು ಮನಸ್ಸನ್ನು ಗಾಸಿಗೊಳಿಸು-ತ್ತದೆ. ಮನೆಯವರೆದುರು ಇರುವ ಉದ್ಧಟತನವು ಮೂರನೆ ವ್ಯಕ್ತಿಗಳ ಎದುರು ಪ್ರದರ್ಶನವಾಗುವುದು ಬೇಡ.

ಪದಬಂಧ 5665

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಅಭಾವ ಕಾಲದಲ್ಲಿ ಬಂದಿರುವ ಅಕ್ಕನ ಗಂಡ (2)
3.ಪ್ರಯಾಸದಿಂದಾದ ಹೆರಿಗೆ (3)
6.ವಿಷಯಾಸಕ್ತ ಇಲ್ಲಿದ್ದಾನೆ (3)
8.ತೀಡಿ ತೀಡಿ ಮಾಡಿದ ಸುಧಾರಣೆ (4)
10.ವರ ನೀಡಿರುವ ವಿಸ್ತಾರವಾದ ಹೇಳಿಕೆ (3)
11.ಮರದ ಪಾದರಕ್ಷೆ (3)
12.ಕಲ್ಲಿನ ಆಯುಧಗಳು ಬಳಕೆಯಲ್ಲಿದ್ದ ಕಾಲ (4)
15.ಮರದ ಹತ್ತಿರವಿರುವ ಮೊಸಳೆ (3)
17.ಚೋರ ಇಲ್ಲಿಗೆ ಬಂದಿದ್ದಾನಲ್ಲಾ? (3)
18.ಜನನಿ ನುಡಿದ ಸತ್ಯ (2)

ಮೇಲಿಂದ ಕೆಳಕ್ಕೆ
2.ವರನ ನಡುವೆ ನುಸುಳಿ ತೋರಿದ ಬೆಡಗು (3)
3.ಚಿಹ್ನೆ ಇಲ್ಲಿದೆ (3)
4.ಗತಿಸಿದ ಮಹಾಪುರುಷರ ಹುಟ್ಟುಹಬ್ಬ (3)
5.ಸುತ್ತಲೂ ನೀರುಳ್ಳ ಎತ್ತರವಾದ ಭೂಭಾಗ (2)
7.ತಾರ ನುಡಿಸಿದ ತಂತಿ ವಾದ್ಯ (3)
9.ಕೊನೆಗೆ ತಾಪವಿದ್ದರೂ ತೋರಿದ ಬಾಹ್ಯ ಸೌಂದರ್ಯ (3)
10.ಬೇರೆ ದೇಶದಿಂದ ಬಂದವನು (3)
11.ನೇಯುವ ಸಾಧನ (3)
13.ಆನೆ ಕುದುರೆಗಳನ್ನು ಕಟ್ಟುವ ಜಾಗ (2)
14.ಅಗಣಿತ ಸಂಖ್ಯೆಗಳಿರುವ ಲೆಕ್ಕಶಾಸ್ತ್ರ (3)
15.ದ್ವೇಷ ಹೀಗೆ ಬಂದಿದೆ (3)
16.ರಜವಿದ್ದಾಗಿನ ಇರುಳು (3)



5664ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಿದ್ಯಮಾನ 3.ಅಧರ
4.ವ್ಯವಧಾನ 6.ಒಮ್ಮತ
8.ನಕ್ತಂಚರ 9.ವಸ್ತುಕೋಶ
11.ಟಗರು 14.ಪರಾಜಿತ
16.ಕಲಹ 17.ಮಹಾದ್ವಾರ

ಮೇಲಿಂದ ಕೆಳಕ್ಕೆ:
1.ವಿರಕ್ತ 2.ನವ್ಯ
3.ಅನುಮಾನ 5.ನಸ್ಯ
6.ಒರಟ 7.ತವರು
10.ಶಯ್ಯಾಗೃಹ 12.ಶಾಪ
13.ಸಂಕರ 15.ತಮ

ಸುಡೊಕು 6050

		4		7	1	2		3
						6		
5	2		8		9		4	7
		5	4			3		
	6			9			7	
3		7			8	5		9
4	1			8			3	
		2	7		4	9		1
7		9		3			2	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6049 ಸುಡೊಕು

2	4	8	3	7	1	5	6	9
9	5	6	4	8	2	3	7	1
7	3	1	9	5	6	2	8	4
6	9	4	1	3	8	7	5	2
5	7	2	6	4	9	1	3	8
8	1	3	7	2	5	9	4	6
3	6	7	2	1	4	8	9	5
4	2	5	8	9	3	6	1	7
1	8	9	5	6	7	4	2	3

ಮೊದಲ ಮತದ ಸಂಭ್ರಮ

ಮನೋಜ ಮೇಘರಾಜ, ಗಜೇಂದ್ರಗಡ, ಗದಗ ಜಿಲ್ಲೆ
ಚುನಾವಣೆಗಳಲ್ಲಿ ಸೂಕ್ತ ಜನಪ್ರತಿನಿಧಿಯನ್ನು ಆಯ್ಕೆ ಮಾಡಲು ಸಂವಿಧಾನವು ನಮಗೆ ಮತದಾನದ ಹಕ್ಕು ನೀಡಿದೆ. ಇಂತಹ ಅಮೂಲ್ಯವಾದ ಹಕ್ಕು ಚಲಾಯಿಸುವ ಅವಕಾಶ ಮೊದಲ ಬಾರಿಗೆ ಲಭಿಸುತ್ತಿರುವುದು ಖುಷಿ ತಂದಿದೆ. ಸುಭದ್ರ ದೇಶ ಕಟ್ಟುವ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆ ಗಟ್ಟಿಗೊಳಿಸುವ ನಿಟ್ಟಿನಲ್ಲಿ ಚುನಾವಣೆ ಪ್ರಮುಖ ಪಾತ್ರ ವಹಿಸುತ್ತದೆ. ಮತಗಟ್ಟೆಯಲ್ಲಿ ಮತಯಂತ್ರ ಹೇಗಿರುತ್ತದೆ ಎಂಬ ಕುತೂಹಲ ಹೆಚ್ಚಿದೆ.

ಮತ ಆಮಿಷ: ಆಯೋಗದ ವಶ

₹96 ಕೋಟಿ ನಗದು

ಉಚಿತ ಉಡುಗೊರೆ ಮತ್ತು ಇತರೆ	₹81.19 ಕೋಟಿ
ಮದ್ಯ	₹178.32 ಕೋಟಿ (1.47 ಕೋಟಿ ಲೀ)
ಮಾದಕವಸ್ತು	₹11.36 ಕೋಟಿ (548.17 ಕೆ.ಜಿ.)
ಚಿನ್ನ	₹76.75 ಕೋಟಿ (137.25 ಕೆ.ಜಿ.)
ಬೆಳ್ಳಿ	₹1.18 ಕೋಟಿ (302.37 ಕೆ.ಜಿ.)

ಎಂಥಾ ಮಾತು!

ಭಾರತವು ವೇಗವಾಗಿ ಮುನ್ನಡೆದಿದೆ. ಇದು ಕೆಲ ದೇಶಗಳು, ಕೆಲವು ಸಂಘಟನೆಗಳಿಗೆ ಇಷ್ಟವಾಗುತ್ತಿಲ್ಲ. ಭಾರತವು ದುರ್ಬಲವಾಗಿದ್ದರೆ ಪ್ರಯೋಜನ ಪಡೆಯಬಹುದೆಂದು ಕೆಲವರು ಭಾವಿಸುತ್ತಾರೆ. 2014ಕ್ಕೆ ಮೊದಲು ದೆಹಲಿಯ ರಾಜನೀತಿಯು ದಲ್ಲಾಳಿಗಳ ಕೈಯಲ್ಲಿತ್ತು. 2014ರ ಬಳಿಕ ದಲ್ಲಾಳಿಗಳು ದೆಹಲಿ ಬಿಟ್ಟು ರಾಜ್ಯಗಳಲ್ಲಿ ಅಂಗಡಿ ತೆರೆದಿದ್ದಾರೆ

ನರೇಂದ್ರ ಮೋದಿ, ಪ್ರಧಾನಿ

2014ರಲ್ಲಿ ಮೋದಿಯವರು ಹೊಸ ಆಶಾಭಾವ ಮೂಡಿಸಿದ್ದರು. ಈಗ ದ್ವೇಷದ ಮಾತುಗಳನ್ನು ಆಡುತ್ತಿದ್ದಾರೆ. ಹಿಂದೂ ಮುಸ್ಲಿಂ ವಿಭಜನೆಯ ಮಾತುಗಳನ್ನು ಆಡುತ್ತಿದ್ದಾರೆ. ಕಾಂಗ್ರೆಸ್ ಪಕ್ಷವನ್ನು ಬಯ್ಯುತ್ತಿದ್ದಾರೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರ ಸಾಂವಿಧಾನಿಕ ಅಧಿಕಾರಗಳನ್ನು ಮೊಟಕುಗೊಳಿಸುವ ಮಾತುಗಳನ್ನು ಆಡುತ್ತಿದ್ದಾರೆ

ರಣದೀಪ್‌ಸಿಂಗ್ ಸುರ್ಜೇವಾಲಾ, ಕಾಂಗ್ರೆಸ್‌ನ ಕರ್ನಾಟಕ ಉಸ್ತುವಾರಿ

‘ಮಲೆನಾಡು ಸಂಪರ್ಕ ವ್ಯವಸ್ಥೆ ಬಲಪಡಿಸುವೆ’

• ವೆಂಕಟೇಶ ಜಿ.ಎಚ್

ಶಿವಮೊಗ್ಗ ಲೋಕಸಭಾ ಕ್ಷೇತ್ರದಲ್ಲಿ ಈ ಬಾರಿ ಗೀತಾ ಶಿವರಾಜ್‌ಕುಮಾರ್ ಕಾಂಗ್ರೆಸ್‌ನಿಂದ ಕಣಕ್ಕಿಳಿದಿದ್ದಾರೆ. ಗೀತಾ, ಮಾಜಿ ಮುಖ್ಯಮಂತ್ರಿ ಎಸ್.ಬಂಗಾರಪ್ಪ ಅವರ ಪುತ್ರಿ. ಪಕ್ಷದ ಸಂಘಟನೆ, ಅಪ್ಪನ ನಾಮಬಲ, ಪತಿ, ನಟ ಶಿವರಾಜ್‌ಕುಮಾರ್ ಅವರ ತಾರಾವರ್ಚಸ್ಸು, ಜಿಲ್ಲಾ ಉಸ್ತುವಾರಿ ಸಚಿವರೂ ಆದ ಸಹೋದರ ಮಧು ಬಂಗಾರಪ್ಪ ಬೆನ್ನಿಗೆ ನಿಂತಿರುವುದು ಅವರಿಗೆ ಬಲ ತಂದಿದೆ. ಶಿವರಾಜ್‌ಕುಮಾರ್, ಕಳೆದೊಂದು ತಿಂಗಳಿಂದ ಪತ್ನಿ ಗೀತಾ ಪರ ಶಿವಮೊಗ್ಗದಲ್ಲಿ ಪ್ರಚಾರ ಕಾರ್ಯದಲ್ಲಿ ತೊಡಗಿದ್ದಾರೆ. ಹಳ್ಳಿಹಳ್ಳಿಯಲ್ಲೂ ‘ಶಿವಣ್ಣ’ನ ನೋಡಲು ಜನರು ದೊಡ್ಡ ಸಂಖ್ಯೆಯಲ್ಲಿ ಸೇರುತ್ತಿದ್ದಾರೆ. ಅಭಿಮಾನಿಗಳು ‘ಸೆಲ್ಫಿ’ಗೂ ಮುಗಿಬೀಳುತ್ತಿದ್ದಾರೆ. ಪ್ರಚಾರದ ನಡುವೆ, ಗೀತಾ ಮತ್ತು ಶಿವರಾಜ್ ಕುಮಾರ್ ಅವರು ‘ಪ್ರಜಾವಾಣಿ’ಗೆ ನೀಡಿದ ಸಂದರ್ಶನದ ಆಯ್ದ ಭಾಗ ಇಲ್ಲಿದೆ:

ಪ್ರಜಾವಾಣಿ ಸಂದರ್ಶನ

ಗೀತಾ ಶಿವರಾಜ್‌ಕುಮಾರ್, ಶಿವರಾಜ್‌ಕುಮಾರ್

• ಪ್ರಚಾರ ಹೇಗಿದೆ. ಜನರ ಸ್ಪಂದನೆ ಬಗ್ಗೆ ಹೇಳಿ?

ಕ್ಷೇತ್ರದ ಎಲ್ಲ ಕಡೆಯೂ ಜನರ ಬಳಿಗೆ ಹೋಗಿದ್ದೇವೆ. ಪ್ರಚಾರ ಬಿರುಸಿನಿಂದ ಸಾಗಿದೆ. ಎಲ್ಲಿಗೆ ಹೋದರೂ ಜನರು ಅಭಿಮಾನ, ಪ್ರೀತಿ ತೋರುತ್ತಿದ್ದಾರೆ. ಅಕ್ಕನೋ, ತಂಗಿಯೋ, ಮಗಳೋ ಮನೆಗೆ ಬಂದಷ್ಟು ವಾತ್ಸಲ್ಯ ತೋರುತ್ತಿದ್ದಾರೆ. ವಿಶೇಷವಾಗಿ ಹೆಣ್ಣುಮಕ್ಕಳಿಂದ ಹೆಚ್ಚು ಬೆಂಬಲ ಸಿಗುತ್ತಿದೆ.

• ಅಪ್ಪನ (ಎಸ್.ಬಂಗಾರಪ್ಪ) ರಾಜಕಾರಣ ನೋಡುತ್ತಾ ಅವರ ನೆರಳಲ್ಲಿ ಬೆಳೆದವರು ನೀವು. ಈಗ ಅವರ ಅನುಪಸ್ಥಿತಿ ಕಾಡುತ್ತಿದೆಯೇ?

ಬಾಲ್ಯದಲ್ಲಿ ಅಪ್ಪ ನಾಮಪತ್ರ ಸಲ್ಲಿಸುವಾಗ ನಾನು ಜೊತೆಗೆ ಹೋಗಿದ್ದ ನೆನಪು... ದೊಡ್ಡವಳಾದಂತೆ ರಾಜಕೀಯ ಕ್ಷೇತ್ರ ಅರ್ಥವಾಗತೊಡಗಿತು. ಪ್ರಮುಖ ರಾಜಕೀಯ ನಿರ್ಧಾರಗಳನ್ನು ತೆಗೆದುಕೊಳ್ಳುವ ಮುನ್ನ ಅಪ್ಪ ನನಗೆ ಹಾಗೂ ಅಕ್ಕನಿಗೆ (ಸುಜಾತಾ) ಆ ಕುರಿತು ಹೇಳುತ್ತಿದ್ದರು. ಬಾಲ್ಯದಲ್ಲಿ ಮಲೆನಾಡಿನ ಸಾಮಾಜಿಕ ಬದುಕನ್ನು ಅರ್ಥೈಸುತ್ತಿದ್ದರು. ಈಗ ಅವರು ಇಲ್ಲ ಅನಿಸುತ್ತಿಲ್ಲ. ಅವರ ದೊಡ್ಡ ಬೆಂಬಲಿಗರ ಬಳಗದಲ್ಲಿ ಈಗಲೂ ಜೀವಂತವಾಗಿದ್ದಾರೆ. ಪ್ರಚಾರಕ್ಕೆ ಹೋದಾಗ ಜನರು ಅವರೊಂದಿಗಿನ ಒಡನಾಟ, ನೆನಪುಗಳನ್ನು ಹಂಚಿಕೊಳ್ಳುತ್ತಾರೆ. ಇದು ನನಗೆ ಹಾಗೂ ಪಕ್ಷಕ್ಕೆ ಸಕಾರಾತ್ಮಕ ಸಂಗತಿ.

• ಕ್ಷೇತ್ರದಲ್ಲಿ ಪ್ರಮುಖವಾಗಿ ಏನು ಸಮಸ್ಯೆಗಳನ್ನು ಗುರುತಿಸಿದ್ದೀರಿ?

ಮಲೆನಾಡಿನಲ್ಲಿ ಕಾಡಂಚಿನ ಬಹುತೇಕ ಗ್ರಾಮಗಳಿಗೆ ರಸ್ತೆ, ಕಾಲುಸಂಕದಂತಹ ಮೂಲ ಸೌಕರ್ಯ ಇಲ್ಲ. ಹೀಗಾಗಿ ಮಕ್ಕಳನ್ನು ಓದಿಸಲು ಪೋಷಕರು, ನೆಂಟರ ಮನೆಗೆ ಇಲ್ಲವೇ ಹಾಸ್ಟೆಲ್‌ಗೆ ಬಿಡುತ್ತಿದ್ದಾರೆ. ಎಳವೆಯಲ್ಲಿ ಅಪ್ಪ–ಅಮ್ಮನೊಂದಿಗೆ ಇದ್ದು ಬೆಳೆಯಬೇಕಾದ ಮಕ್ಕಳು ಅವರಿಂದ ದೂರ ಹೋಗುತ್ತಿರುವ ವಿಚಾರ ಕೇಳಿ ಮನ ಕಲಕಿತು. ಗೆದ್ದರೆ ಮೊದಲು ಸಂಪರ್ಕ ವ್ಯವಸ್ಥೆ ಬಲಪಡಿಸುವೆ. ಮೊಬೈಲ್ ನೆಟ್‌ವರ್ಕ್ ಸಮಸ್ಯೆ ಪರಿಹರಿಸಲು ಒತ್ತು ನೀಡುತ್ತೇನೆ.

ಶರಾವತಿ ಮುಳುಗಡೆ ಪ್ರದೇಶದಿಂದ ಬಂದವರು ಅರಣ್ಯ ಪ್ರದೇಶದಲ್ಲಿ ವಾಸವಿದ್ದಾರೆ. ಅರಣ್ಯ ಇಲಾಖೆಯವರು ಅದು ನಮ್ಮ ಜಮೀನು ಎನ್ನುತ್ತಾರೆ. ಸಂತ್ರಸ್ತರು ಇದು ನಮ್ಮದು ಅನ್ನುತ್ತಾರೆ. ಇದು ಹಗ್ಗಜಗ್ಗಾಟ. ಅಲ್ಲಿ ನೆಲೆಸಿರುವವರು ಸಂತ್ರಸ್ತರಾಗಿರುವುದರಿಂದ ಅವರಿಗೆ ಜಮೀನು ಕೊಡಲೇಬೇಕು... ಹೀಗಾಗಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡಲಿದ್ದೇನೆ.

• ಗ್ಯಾರಂಟಿ ಯೋಜನೆಗಳು ನಿಮಗೆ ವರವಾಗಲಿವೆಯೇ?

ಖಂಡಿತ. ಈಗ ರಾಜ್ಯದಲ್ಲಿ ಬರಗಾಲ ಇದೆ. ಮನೆ ನಿರ್ವಹಣೆ ವೆಚ್ಚ ಭರಿಸಲು ಮಹಿಳೆಯರಿಗೆ ₹2,000 ನೆರವಾಗಿದೆ. ಹೆಣ್ಣುಮಕ್ಕಳು ಕಾಲೇಜಿಗೆ ಹೋಗಲು ಉಚಿತ ಬಸ್ ಪ್ರಯಾಣ ನೆರವಾಗಿದೆ. ಅದನ್ನು ಕಾಲೇಜು ಹುಡುಗರಿಗೂ ವಿಸ್ತರಿಸುವುದು ಅಗತ್ಯ ಅನಿಸುತ್ತಿದೆ. 200 ಯೂನಿಟ್‌ವರೆಗಿನ ಉಚಿತ ವಿದ್ಯುತ್ ಜನರ ಜೇಬಿನ ಹೊರೆ ತಪ್ಪಿಸಿದೆ.

• ರಾಜ್ಯದಲ್ಲಿ ಜನರು ಕಾಂಗ್ರೆಸ್‌ಗೆ ಏಕೆ ಮತ ಹಾಕಬೇಕು?

ಗ್ಯಾರಂಟಿ ಯೋಜನೆಗಳ ನಂಬಿ ಕಳೆದ ವಿಧಾನಸಭೆ ಚುನಾವಣೆಯಲ್ಲಿ ಜನರು ನಮಗೆ ಮತ ಹಾಕಿದ್ದರು. ಐದಾರು ತಿಂಗಳಲ್ಲಿ ‘ಗ್ಯಾರಂಟಿ’ ಅನುಷ್ಠಾನಗೊಳಿಸಿ ಕೊಟ್ಟ ಮಾತು, ಜನರ ನಂಬಿಕೆ ಎರಡನ್ನೂ ಉಳಿಸಿಕೊಂಡಿದ್ದೇವೆ. ರಾಷ್ಟ್ರ ಮಟ್ಟದಲ್ಲೂ ಈಗ ಘೋಷಿಸಿರುವ ಗ್ಯಾರಂಟಿಗಳಿಂದ ಜನರಿಗೆ ಅನುಕೂಲವಾಗಲಿದೆ. ಕಾಂಗ್ರೆಸ್ ಪಕ್ಷ ಮಾತ್ರ ಜನರಿಗೆ ನೆರವಾಗಲಿದೆ. ಜೊತೆಗೆ ಕರ್ನಾಟಕವು ಸರ್ವಜನಾಂಗದ ಶಾಂತಿಯ ತೋಟ. ಎಲ್ಲಾ ಜಾತಿ–ಜನಾಂಗದವರನ್ನು ಒಗ್ಗೂಡಿಸಿ ಒಟ್ಟಿಗೆ ಕರೆದೊಯ್ಯಲು ಕಾಂಗ್ರೆಸ್‌ನಿಂದ ಮಾತ್ರ ಸಾಧ್ಯ ಎಂಬುದನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತೋರಿಸಿಕೊಟ್ಟಿದ್ದಾರೆ.

ಗೀತಾ ಶಿವರಾಜ್‌ಕುಮಾರ್ ಅವರು ಸಿರಿಗೆರೆಯ ತರಳಬಾಳು ಬೃಹನ್ಮಠದ ಶಿವಮೂರ್ತಿ ಶಿವಾಚಾರ್ಯ ಅವರನ್ನು ಭಾನುವಾರ ಭೇಟಿ ಮಾಡಿ ಆಶೀರ್ವಾದ ಪಡೆದರು. ಶಿವರಾಜ್‌ಕುಮಾರ್ ಇದ್ದರು

ಶಿವಮೊಗ್ಗ ಯಾರ ಭದ್ರಕೋಟೆಯೂ ಅಲ್ಲ...

• ಗೀತಾ, ಬಂಗಾರಪ್ಪ ಅವರ ಪುತ್ರಿ. ರಾಜಕೀಯ ಕುಟುಂಬದಿಂದ ಬಂದವರು. ಅದರ ಹೊರತಾಗಿ ಅವರಲ್ಲಿ ಏನು ಸಾಮರ್ಥ್ಯ ಗುರುತಿಸಿದ್ದೀರಿ?

ರಾಜಕೀಯಕ್ಕೆ ಬರಲು ರಾಜಕೀಯ ಜ್ಞಾನ ಇರಲೇಬೇಕು ಅಂತೇನೂ ಇಲ್ಲ. ಬದುಕಿನ ಅನುಭವವೇ ಸಾಕು. ಗೀತಾ ಮದುವೆ ಆದ ನಂತರ ಸಂಸಾರ ಚೆನ್ನಾಗಿ ನಿಭಾಯಿಸಿದ್ದಾರೆ. ಸಮಸ್ಯೆಗಳು ಬಂದಾಗ ಎದೆಗುಂದಿಲ್ಲ. ಕುಟುಂಬದ ಆದಾಯ, ಖರ್ಚು–ವೆಚ್ಚ ಎಲ್ಲವನ್ನೂ ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ಮೈಸೂರಿನ ಶಕ್ತಿಧಾಮಕ್ಕೆ ವಿಶೇಷ ರೂಪು ಕೊಟ್ಟು ಹೆಣ್ಣುಮಕ್ಕಳಿಗೆ ನೆರವು ಕೊಡುವ ಸಾಮಾಜಿಕ ಕಾರ್ಯದಲ್ಲೂ ತೊಡಗಿದ್ದಾರೆ. ಆ ಮಕ್ಕಳನ್ನು ತಾಯಿಯಂತೆ ನೋಡಿ ಅವರನ್ನು ಸ್ವಾವಲಂಬಿಯಾಗಿಸುವ ಕೆಲಸ ಮಾಡಿದ್ದಾರೆ. ಅಷ್ಟೊಂದು ಸಾಮರ್ಥ್ಯ ಅವರಲ್ಲಿ ಇದೆ. ವಾತ್ಸಲ್ಯ, ಅಂತಃಕರಣ ಸಹಜವಾಗಿಯೇ ಇದೆ. ರಾಜಕಾರಣಿ ಆಗಿ ಕ್ಷೇತ್ರವನ್ನು ಚೆನ್ನಾಗಿ ನಿಭಾಯಿಸಬಲ್ಲರು. ಜೊತೆಗೆ ಶಿಕ್ಷಿತೆ. ಇಂಗ್ಲಿಷ್, ಹಿಂದಿ ಚೆನ್ನಾಗಿ ಮಾತಾಡುತ್ತಾರೆ. ಧೈರ್ಯವಿದೆ. ಜನರೊಂದಿಗೆ ಬೆರೆಯುತ್ತಾರೆ.

• ಶಿವಮೊಗ್ಗದ ಜನರು ಗೀತಾ ಅವರನ್ನೇ ಏಕೆ ಆಯ್ಕೆ ಮಾಡಬೇಕು?

ರಾಜಕೀಯ ಇಂದು ವ್ಯವಹಾರ ಆಗಿದೆ. ಆದರೆ ನಮ್ಮ ಕುಟುಂಬ ಮೊದಲಿನಿಂದಲೂ ಚಿತ್ರೋದ್ಯಮದ ವ್ಯವಹಾರದಲ್ಲಿ ತೊಡಗಿಕೊಂಡಿದೆ. ರಾಜಕೀಯವನ್ನು ವ್ಯವಹಾರ ಮಾಡಿಕೊಂಡು ಆದಾಯ ಪಡೆಯುವ ಅಗತ್ಯ ಇಲ್ಲ. ನಮಗೆ ಜನರು ಸ್ಥಾನಮಾನ ಕೊಟ್ಟಿದ್ದಾರೆ. ತಾರಾ ವರ್ಚಸ್ಸು ಕೊಟ್ಟಿದ್ದಾರೆ. ರಾಜ್‌ಕುಮಾರ್ ಅವರ ಕುಟುಂಬ ಅಂದರೆ ಅದಕ್ಕೊಂದು ಗೌರವ ಇದೆ. ಅದನ್ನು ಉಳಿಸಿಕೊಳ್ಳಬೇಕು. ಹೀಗಾಗಿ ಲಾಭದ ಅಪೇಕ್ಷೆ ಇಲ್ಲದೇ ಕೆಲಸ ಮಾಡಬೇಕು. ಗೀತಾ ಆಯ್ಕೆಯಾದರೆ ಜನರಿಗೆ ಹೆಚ್ಚು ಲಾಭವಾಗಲಿದೆ.

• ಪತ್ನಿ ಪರ ಪ್ರಚಾರ ಕಾರ್ಯದಲ್ಲಿ ತೊಡಗಿದ್ದೀರಿ, ಮುಖ್ಯವಾಗಿ ಏನು ಗುರುತಿಸಿದ್ದೀರಿ?

ಮದುವೆ ಆಗಿ 38 ವರ್ಷಗಳ ನಂತರ ಮಾವನವರು (ಎಸ್. ಬಂಗಾರಪ್ಪ) ಮಾಡಿರುವ ಜನಪರ ಕೆಲಸಗಳು ಗೊತ್ತಾಗುತ್ತಿವೆ. ಅವರಲ್ಲಿ ಆ ಕಾಲದಲ್ಲಿಯೇ ಎಂತಹ ದೂರದೃಷ್ಟಿ ಇತ್ತು. ಬಂಗಾರಪ್ಪನವರ ಆಶ್ರಯ, ಆರಾಧನಾ, ಅಕ್ಷಯ ಯೋಜನೆಗಳೇ ಇಂದಿನ ಗ್ಯಾರಂಟಿ ಯೋಜನೆಗಳಿಗೂ ಸ್ಫೂರ್ತಿ. ❖

₹4.80 ಕೋಟಿ ವಶ: ಸ್ವಪಕ್ಷೀಯರಿಂದಲೇ ಅಧಿಕಾರಿಗಳಿಗೆ ಮಾಹಿತಿ?

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ. ಕೆ. ಸುಧಾಕರ್ ಅವರಿಗೆ ಸೇರಿದೆ ಎನ್ನಲಾದ ₹4.80 ಕೋಟಿ ಹಣವನ್ನು ಜಪ್ತಿ ಮಾಡಿದ ಆದಾಯ ತೆರಿಗೆ ಅಧಿಕಾರಿಗಳು ಮತ್ತು ಚುನಾವಣಾ ಅಧಿಕಾರಿಗಳಿಗೆ ಈ ಹಣದ ಬಗ್ಗೆ ಸುಳಿವು ನೀಡಿದ್ದೇ ಬಿಜೆಪಿ ಮುಖಂಡರು ಎನ್ನುವ ಸುದ್ದಿಯೊಂದು ಹರಿದಾಡುತ್ತಿದೆ.

‘ಚುನಾವಣೆ ಸಂದರ್ಭದಲ್ಲಿ ಮತದಾರರಿಗೆ ಹಂಚಲು ಸಂಗ್ರಹಿಸಲಾಗಿತ್ತು’ ಎನ್ನಲಾದ ₹ 4.80 ಕೋಟಿಯನ್ನು ಆದಾಯ ತೆರಿಗೆ ಮತ್ತು ಚುನಾವಣಾ ಅಧಿಕಾರಿಗಳು ಚುನಾವಣೆ ಹಿಂದಿನ ದಿನ ಬೆಂಗಳೂರಿನ ಮನೆಯೊಂದರಿಂದ ಜಪ್ತಿ ಮಾಡಿದ್ದರು. ಈ ಹಣವನ್ನು ವಾಪಸು ಕೊಡಿಸುವಂತೆ ಡಾ. ಕೆ. ಸುಧಾಕರ್, ಅಧಿಕಾರಿಗಳ ಮೇಲೆ ಪ್ರಭಾವ ಬೀರಲು ಯತ್ನಿಸಿದ್ದ ಕುರಿತು ಮಾದನಾಯಕನಹಳ್ಳಿ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು.

‘ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಮತದಾರರಿಗೆ ಹಂಚಲು ಬೆಂಗಳೂರಿನ ಮನೆಯೊಂದರಲ್ಲಿ ₹10 ಕೋಟಿ ಸಂಗ್ರಹಿಸಲಾಗಿದೆ’ ಎಂದು ಚುನಾವಣಾ ಅಧಿಕಾರಿಗಳಿಗೆ ವ್ಯಕ್ತಿಯೊಬ್ಬರು ಕರೆ ಮಾಡಿ ಮಾಹಿತಿ ನೀಡಿದ್ದರು. ಈ ಆಧಾರದಲ್ಲಿ ಚುನಾವಣಾ ಅಧಿಕಾರಿಗಳು ದಾಳಿ ನಡೆಸಿದ್ದರು.

ಮತದಾರರಿಗೆ ಹಂಚಲು ಬೆಂಗಳೂರಿನ ಮನೆಯೊಂದರಲ್ಲಿ ಹಣ ಸಂಗ್ರಹಿಸಿ ಇಡಲಾದ ಬಗ್ಗೆ ಸುಧಾಕರ್ ವಿರೋಧಿ ಬಣದ ಬಿಜೆಪಿ ನಾಯಕರೊಬ್ಬರಿಗೆ ಖಚಿತ ಮಾಹಿತಿ ಇತ್ತು. ಆ ನಾಯಕರೇ ದಾಳಿಯ ಹಿಂದಿನ ಹಿಂದಿನ ಸೂತ್ರಧಾರ ಎನ್ನುವ ಮಾತು ಚಿಕ್ಕಬಳ್ಳಾಪುರ ಬಿಜೆಪಿ ವಲಯದಲ್ಲಿ ಕೇಳಿ ಬರುತ್ತಿವೆ.

‘ಲೋಕಸಭೆ ಚುನಾವಣೆಯಲ್ಲಿ ಮೇಲ್ನೋಟಕ್ಕೆ ಜೊತೆಯಲ್ಲಿಯೇ ಇದ್ದರೂ ಬಿಜೆಪಿಯ ಕೆಲವು ಮುಖಂಡರು ಡಾ.ಕೆ. ಸುಧಾಕರ್ ಪರವಾಗಿ ಕೆಲಸ ಮಾಡಲಿಲ್ಲ. ಬಿಜೆಪಿಯ ಪ್ರಮುಖ ನಾಯಕರಿಗಷ್ಟೇ ಹಣದ ಬಗ್ಗೆ ಮಾಹಿತಿ ಇತ್ತು. ಹಿರಿಯ ಆದಾಯ ತೆರಿಗೆ ಮತ್ತು ಚುನಾವಣಾ ಅಧಿಕಾರಿಗಳ ಮೊಬೈಲ್ ಸಂಖ್ಯೆಗೆ ಮಾಹಿತಿ ನೀಡಿರುವುದೂ ಅವರೇ’ ಎಂದು ಬಿಜೆಪಿ ಅಭ್ಯರ್ಥಿಯ ಆಪ್ತ ವಲಯದವರೊಬ್ಬರು ತಿಳಿಸಿದ್ದಾರೆ.

ಮೇ 4ರಂದು ಗದಗಕ್ಕೆ ಪ್ರಿಯಾಂಕಾ ಗಾಂಧಿ

ಗದಗ: ಹಾವೇರಿ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಆನಂದಸ್ವಾಮಿ ಗಡ್ಡದೇವರಮಠ ಅವರ ಪರ ಪ್ರಚಾರಕ್ಕಾಗಿ ಕಾಂಗ್ರೆಸ್ ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಮೇ 4ರಂದು ಗದಗಕ್ಕೆ ಬರಲಿದ್ದಾರೆ’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ತಿಳಿಸಿದರು.

ನಗರದಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಮೇ 4ರಂದು ಸಂಜೆ 4.30ಕ್ಕೆ ನಗರದ ಮುನ್ಸಿಪಲ್ ಹೈಸ್ಕೂಲ್ ಮೈದಾನದಲ್ಲಿ ಆಯೋಜಿಸಲಿರುವ ಪ್ರಚಾರ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಅವರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಸೇರಿ ಹಲವರು ಭಾಗವಹಿಸಲಿದ್ದಾರೆ’ ಎಂದರು.

ಅಭ್ಯರ್ಥಿಗಳೇ ಇಲ್ಲದೇ ಕಾಂಗ್ರೆಸ್ ಪ್ರಚಾರ!

ಪ್ರಜಾವಾಣಿ ವಾರ್ತೆ

ಬೆಳಗಾವಿ: ಜಿಲ್ಲೆಯ ಯರಗಟ್ಟಿ ಮತ್ತು ಉಗಾರ ಖುರ್ದದಲ್ಲಿ ಭಾನುವಾರ ನಡೆದ ‘ಕಾಂಗ್ರೆಸ್ ಪ್ರಜಾಧ್ವನಿ–2’ ಪ್ರಚಾರ ಕಾರ್ಯಕ್ರಮದಲ್ಲಿ ಅಭ್ಯರ್ಥಿಗಳೇ ಕಾಣಿಸಲಿಲ್ಲ. ಅವರ ಭಾವಚಿತ್ರ, ಬ್ಯಾನರ್, ಕಟೌಟ್ ಯಾವುದೂ ಇರಲಿಲ್ಲ. ಭಾಷಣದಲ್ಲೂ ಕೂಡ ಯಾವ ನಾಯಕರೂ ಅಭ್ಯರ್ಥಿಗಳ ಹೆಸರನ್ನು ನೇರವಾಗಿ ಹೇಳಲಿಲ್ಲ! ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರು, ಶಾಸಕರು ವೇದಿಕೆಯಲ್ಲಿ ಮಾತನಾಡಿದರು. ಬೆಳಗಾವಿ ಕ್ಷೇತ್ರದ ಅಭ್ಯರ್ಥಿ ಮೃಣಾಲ್ ಹೆಬ್ಬಾಳಕರ, ಚಿಕ್ಕೋಡಿ ಅಭ್ಯರ್ಥಿ ಪ್ರಿಯಾಂಕಾ ಜಾರಕಿಹೊಳಿ ಹತ್ತಿರವೂ ಸುಳಿಯಲಿಲ್ಲ. ‘ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅವರ ಪುತ್ರ, ಸಚಿವ ಸತೀಶ ಜಾರಕಿಹೊಳಿ ಅವರ ಪುತ್ರಿಗೆ ಮತ ಹಾಕಿ’ ಎಂದಷ್ಟೇ ಮುಖಂಡರು ಪ್ರಚಾರ ಮಾಡಿದರು.

‘ಅಭ್ಯರ್ಥಿಗಳು ಭಾಗಿಯಾದರೆ ಅಥವಾ ಅವರ ಹೆಸರು ಹೇಳಿದರೆ ಸಮಾವೇಶದ ವೆಚ್ಚವು ಆಯಾ ಅಭ್ಯರ್ಥಿಗಳ ಚುನಾವಣಾ ವೆಚ್ಚಕ್ಕೆ ಸೇರುತ್ತದೆ. ಪಕ್ಷದ ಖಾತೆಯಲ್ಲಿ ವೆಚ್ಚ ಪರಿಗಣನೆ ಆಗಬೇಕು ಎಂಬ ಕಾರಣಕ್ಕೆ ಅಭ್ಯರ್ಥಿಗಳನ್ನು ಮರೆಮಾಚಲಾಗಿದೆ’ ಎಂದು ಕಾಂಗ್ರೆಸ್ ಮುಖಂಡರು ‘ಪ್ರಜಾವಾಣಿ’ಗೆ ತಿಳಿಸಿದರು. ಆದರೆ, ಬೆಳಗಾವಿ ನಗರದಲ್ಲಿ ಭಾನುವಾರ ನಡೆದ ಪ್ರಧಾನಿ ನರೇಂದ್ರ ಮೋದಿ ಭಾಗಿಯಾದ ‘ಬಿಜೆಪಿ ವಿಜಯ ಸಂಕಲ್ಪ ಯಾತ್ರೆ’ಯಲ್ಲಿ ಬೆಳಗಾವಿ ಕ್ಷೇತ್ರದ ಅಭ್ಯರ್ಥಿ ಜಗದೀಶ ಶೆಟ್ಟರ್, ಚಿಕ್ಕೋಡಿಯ ಅಭ್ಯರ್ಥಿ ಅಣ್ಣಾಸಾಹೇಬ ಜೊಲ್ಲೆ ವೇದಿಕೆ ಹಂಚಿಕೊಂಡು ಮಾತನಾಡಿದರು.

ಕಾಗವಾಡ ತಾಲ್ಲೂಕಿನ ಉಗಾರ ಖುರ್ದ ಗ್ರಾಮದಲ್ಲಿ ಭಾನುವಾರ ನಡೆದ ಕಾಂಗ್ರೆಸ್ ಚುನಾವಣಾ ಪ್ರಚಾರ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ ಮಾತನಾಡಿದರು

ಕ್ಷೇತ್ರ ಸಮೀಕ್ಷೆ

‘ಬೀದರ್ ಕೋಟೆ’ ಖೂಬಾಗೊ, ಖಂಡ್ರೆಗೊ?

ಕಳೆದ ಚುನಾವಣೆಯಲ್ಲಿ ಮತದಾನವಾದ ಪ್ರಮಾಣ 62.58%



ಸಾಗರ್ ಖಂಡ್ರೆ (ಕಾಂಗ್ರೆಸ್)

ನಾನು ಕಾನೂನು ಪದವೀಧರ. ಸುಪ್ರೀಂ ಕೋರ್ಟ್‌ನ ನಿವೃತ್ತ ವಕೀಲರಿಂದ ಜ್ಞಾನ ಸಂಪಾದಿಸಿರುವೆ. ಗೆದ್ದರೆ ಜನರಿಗೆ ನ್ಯಾಯ ಒದಗಿಸುವೆ

- 👍 ಖಂಡ್ರೆ ಪರಿವಾರದ ಕುಡಿ ಎಂಬ ಗೌರವ
- 👍 ಕಾಂಗ್ರೆಸ್ ಸರ್ಕಾರದ ಗ್ಯಾರಂಟಿಗಳಿಗೆ ಜನರ ಮೆಚ್ಚುಗೆ
- 👎 ರಾಜಕೀಯ ಅನುಭವ, ವಯಸ್ಸಿನ ಪಕ್ವತೆ ಇಲ್ಲ ಎಂಬ ಭಾವನೆ ಮತದಾರರಲ್ಲಿ ಇದೆ
- 👎 ಕುಟುಂಬದ ಹಲವರು ರಾಜಕೀಯ ಹುದ್ದೆಗಳನ್ನು ಪಡೆದಿರುವುದರಿಂದ ಕುಟುಂಬ ರಾಜಕಾರಣದ ಆರೋಪ

ಭಗವಂತ ಖೂಬಾ (ಬಿಜೆಪಿ)

ಹತ್ತು ವರ್ಷಗಳಲ್ಲಿ ಕ್ಷೇತ್ರಕ್ಕೆ ₹1 ಲಕ್ಷ ಕೋಟಿಗೂ ಹೆಚ್ಚು ಅನುದಾನ ತಂದಿರುವೆ. ಬಹುತೇಕರಿಗೆ ಕೇಂದ್ರದ ಯೋಜನೆಗಳ ಲಾಭ ಸಿಕ್ಕಿದೆ

- 👍 ಎರಡು ಸಲ ಸಂಸದ, ಕೇಂದ್ರದಲ್ಲಿ ಸಚಿವರಾಗಿ ಅನುಭವ
- 👍 ರಾಷ್ಟ್ರೀಯ ಹೆದ್ದಾರಿಗಳು ಮೇಲ್ದರ್ಜೆಗೆ, ರೈಲು ಸೇವೆ ವಿಸ್ತರಣೆ ಮಾಡಿರುವ ಹೆಗ್ಗಳಿಕೆ
- 👎 ಸ್ವಪಕ್ಷದ ಐವರು ಶಾಸಕರಿದ್ದರೂ ಚುನಾವಣಾ ಪ್ರಚಾರದಲ್ಲಿ ಅವರಿಂದ ಅಸಹಕಾರ
- 👎 ನೇರ, ನಿಷ್ಠುರ ಮಾತುಗಾರಿಕೆ ಜನಕ್ಕೆ ಅಪಥ್ಯ

• ಶಶಿಕಾಂತ ಎಸ್. ಶೆಂಬೆಳ್ಳಿ

ಬೀದರ್

ಬೀದರ್: ಕರ್ನಾಟಕದ ಮುಕುಟ ಮಣಿ ಬೀದರ್ ಲೋಕಸಭಾ ಕ್ಷೇತ್ರವನ್ನು ತೆಕ್ಕೆಗೆ ತೆಗೆದುಕೊಳ್ಳಲು ಬಿಜೆಪಿ ಅಭ್ಯರ್ಥಿ ಭಗವಂತ ಖೂಬಾ ಹಾಗೂ ಕಾಂಗ್ರೆಸ್ ಅಭ್ಯರ್ಥಿ ಸಾಗರ್ ಖಂಡ್ರೆ ನಡೆಸುತ್ತಿರುವ ಪೈಪೋಟಿಯಿಂದಾಗಿ ಬಿಸಿಲಿನ ಜೊತೆಗೆ ಚುನಾವಣಾ ಕಾವು ಸಹ ಮತ್ತಷ್ಟು ಹೆಚ್ಚುತ್ತಿದೆ.

ಬೀದರ್ ಜಿಲ್ಲೆಯ ಆರು ಹಾಗೂ ಕಲಬುರಗಿ ಜಿಲ್ಲೆಯ ಎರಡು ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಿರುವ ಈ ಲೋಕಸಭಾ ಕ್ಷೇತ್ರದ ಚುನಾವಣೆಯೂ ‘ಮೋದಿ ನಾಮಬಲ’ ಹಾಗೂ ಖಂಡ್ರೆ ಪರಿವಾರದ ಪ್ರಭಾವ, ‘ಗ್ಯಾರಂಟಿ’ಗಳ ನಡುವಣ ಜಿದ್ದಾಜಿದ್ದಿಯ ಹೋರಾಟದ ಕಣವಾಗಿ ಮಾರ್ಪಟ್ಟಿದೆ.

ಹಿಂದಿನ ಎರಡು ಚುನಾವಣೆಗಳಲ್ಲಿ ಗೆದ್ದು ಕೇಂದ್ರ ಸಚಿವರೂ ಆಗಿರುವ ಭಗವಂತ ಖೂಬಾ ಅವರು ‘ಮೋದಿ ನಾಮಬಲ’ವನ್ನು ನಂಬಿಕೊಂಡು ‘ಹ್ಯಾಟ್ರಿಕ್’ ಗೆಲುವಿನ ಭರವಸೆಯಲ್ಲಿದ್ದಾರೆ. ನೇರ, ನಿಷ್ಠುರ ಮಾತುಗಾರಿಕೆ ಅವರಿಗೆ ಮುಳುವಾಗಿದೆ. ಸ್ವಪಕ್ಷೀಯ ಶಾಸಕರಾದ ಪ್ರಭು ಚವಾಣ್ ಅನಾರೋಗ್ಯದ ಕಾರಣ ಕೊಟ್ಟು ಪ್ರಚಾರದಿಂದ ದೂರ ಉಳಿದಿದ್ದಾರೆ. ಬಸವಕಲ್ಯಾಣ ಶಾಸಕ ಶರಣು ಸಲಗರ ಅರೆ ಮನಸ್ಸಿನಿಂದ ಪ್ರಚಾರದಲ್ಲಿ ತೊಡಗಿದ್ದಾರೆ. ಹೆಚ್ಚಿನ ಮುಖಂಡರು, ಕಾರ್ಯಕರ್ತರು ಇದೇ ಧೋರಣೆ ತಾಳಿದ್ದಾರೆ.

ಕಣದಲ್ಲಿ ಒಟ್ಟು 18 ಅಭ್ಯರ್ಥಿಗಳಿದ್ದಾರೆ. ಆದರೆ, ಬಿಜೆಪಿಯ ಭಗವಂತ ಖೂಬಾ ಹಾಗೂ ಕಾಂಗ್ರೆಸ್ಸಿನ ಸಾಗರ್ ಖಂಡ್ರೆ ನಡುವೆ ನೇರ ಸ್ಪರ್ಧೆ ಏರ್ಪಟ್ಟಿದೆ. ಬಂಡಾಯ ಅಭ್ಯರ್ಥಿಯಾಗಿ ಮರಾಠ ಸಮುದಾಯದ ಡಾ.ದಿನಕರ್ ಮೋರೆ ಪಕ್ಷೇತರರಾಗಿ ಕಣಕ್ಕಿಳಿದಿರುವುದು ಬಿಜೆಪಿಯ ಚಿಂತೆಯನ್ನು ಹೆಚ್ಚಿಸಿದೆ. ಕ್ಷೇತ್ರದಲ್ಲಿ ಲಿಂಗಾಯತರು, ಮರಾಠರು ಬಿಜೆಪಿಯ ಸಾಂಪ್ರದಾಯಿಕ ಬೆಂಬಲಿಗರು. ಮರಾಠ ಮತಗಳು ಚದುರಿದರೆ ಬಿಜೆಪಿಗೆ ಸಂಕಷ್ಟ ಎದುರಾಗಬಹುದು.

26 ವರ್ಷ ವಯಸ್ಸಿನ ಸಾಗರ್ ಖಂಡ್ರೆ ಅವರಿಗೆ ಇದು ಮೊದಲ ಚುನಾವಣೆ. ಕಾನೂನು ಪದವೀಧರರಾಗಿರುವ ಅವರು, ಬದಲಾವಣೆ ಬಯಸಿ ಜನರಿಂದ ಮತ ಕೇಳುತ್ತಿದ್ದಾರೆ. ಉದ್ಯೋಗ ಸೃಷ್ಟಿಯ ಮಾತುಗಳನ್ನು ಆಡುತ್ತಿದ್ದಾರೆ. ಜಿಲ್ಲೆಯಲ್ಲಿ ಪ್ರಭಾವ ಹೊಂದಿರುವ ಖಂಡ್ರೆ ಪರಿವಾರದ ಕುಡಿ ಎಂಬುದು ಅವರಿಗೆ ಸಕಾರಾತ್ಮಕ ಅಂಶ. ಸಾಗರ್ ಅವರ ತಂದೆ, ಪರಿಸರ ಖಾತೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ.ಖಂಡ್ರೆ ಅವರು ಮಗನನ್ನು ಗೆಲುವಿನ ದಡ ಸೇರಿಸಲು ಶತಾಯ ಗತಾಯ ಪ್ರಯತ್ನ ನಡೆಸಿದ್ದಾರೆ.

ಖೂಬಾ ಅವರು ಮೋದಿ ಹೆಸರನ್ನೇ ನೆಚ್ಚಿಕೊಂಡಿದ್ದಾರೆ. ಸಾಗರ್ ಅವರು ಖಂಡ್ರೆ ಮನೆತನದ ಕೊಡುಗೆಗಳು, ‘ಗ್ಯಾರಂಟಿ’ ಹೆಸರಲ್ಲಿ ಮತ ಯಾಚಿಸುತ್ತಿದ್ದಾರೆ. ಜಿಲ್ಲೆಯ ಇನ್ನೊಬ್ಬ ಸಚಿವ ರಹೀಂ ಖಾನ್ ಹಾಗೂ ಕಾಂಗ್ರೆಸ್ಸಿನ ಮುಖಂಡರು ಒಗ್ಗಟ್ಟಾಗಿ ಸಾಗರ್ ಪರ ಕೆಲಸ ಮಾಡುತ್ತಿದ್ದಾರೆ. ಈ ಒಗ್ಗಟ್ಟು ಬಿಜೆಪಿಯಲ್ಲಿ ಕಾಣಿಸುತ್ತಿಲ್ಲ. ಜೆಡಿಎಸ್–ಬಿಜೆಪಿ ಮೈತ್ರಿಯಿದ್ದರೂ ಕ್ಷೇತ್ರದಲ್ಲಿ ತೆನೆ ಹೊತ್ತ ಮಹಿಳೆ ಚಿಹ್ನೆ ಪಕ್ಷಕ್ಕೆ ಹೇಳಿಕೊಳ್ಳುವಂತಹ ನೆಲೆಯಿಲ್ಲ.

ಖೂಬಾ ಹಾಗೂ ಸಾಗರ್, ಲಿಂಗಾಯತ ಸಮುದಾಯಕ್ಕೆ ಸೇರಿದವರು. ಕ್ಷೇತ್ರದಲ್ಲಿ ಲಿಂಗಾಯತರು, ಮರಾಠರು, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಕುರುಬರು, ಮುಸ್ಲಿಂ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಖೂಬಾ ಹಾಗೂ ಸಾಗರ್ ಅವರು ಭವಿಷ್ಯದ ಯೋಜನೆಗಳ ಕುರಿತು ಸ್ಪಷ್ಟವಾಗಿ ಜನರಿಗೆ ಬಿಡಿಸಿ ಹೇಳುತ್ತಿಲ್ಲ. ಅದನ್ನು ಕೇಳಿಸಿಕೊಳ್ಳುವ ವ್ಯವಧಾನ ಮತದಾರರಲ್ಲೂ ಕಾಣಿಸುತ್ತಿಲ್ಲ. ಕೆಲವರು ‘ದೇಶಭಕ್ತಿ’ ಮೈಯಲ್ಲಿ ಉಕ್ಕಿ ಬಂದಂತೆ ಮಾತಾಡುತ್ತಿದ್ದರೆ, ಮತ್ತೆ ಕೆಲವು ಮಂದಿ ‘ಗ್ಯಾರಂಟಿ’ಯಿಂದ ಬದುಕಿಗೆ ಬೆಳಕಾಗುತ್ತಿದೆ ಎನ್ನುತ್ತಿದ್ದಾರೆ. ❖

ಮೋದಿ ಅಲೆಯೋ, ಗ್ಯಾರಂಟಿ ಸೆಲೆಯೋ?

• ಸಿದ್ದು ಆರ್.ಜಿ.ಹಳ್ಳಿ

ಹಾವೇರಿ

ಹಾವೇರಿ: ಹಿಂದಿನ ಮೂರು ಲೋಕಸಭಾ ಚುನಾವಣೆಗಳಲ್ಲಿ ‘ಹ್ಯಾಟ್ರಿಕ್ ಗೆಲುವು’ ಸಾಧಿಸಿರುವ ಬಿಜೆಪಿ ಪಾಲಿಗೆ ಹಾವೇರಿ ಲೋಕಸಭಾ ಕ್ಷೇತ್ರ ಭದ್ರಕೋಟೆ ಎನಿಸಿದೆ.

ಧಾರವಾಡ ದಕ್ಷಿಣ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿದ್ದ ಹಾವೇರಿ ಜಿಲ್ಲೆಯು, 2008ರಲ್ಲಿ ಕ್ಷೇತ್ರ ಪುನರ್ ವಿಂಗಡಣೆಯಾದ ಬಳಿಕ ಹಾವೇರಿ ಲೋಕಸಭಾ ಕ್ಷೇತ್ರ ಅಸ್ತಿತ್ವಕ್ಕೆ ಬಂತು. ಮೂರು ಚುನಾವಣೆಗಳಲ್ಲೂ ಜಯಭೇರಿ ಬಾರಿಸಿದ್ದ ಶಿವಕುಮಾರ ಉದಾಸಿ ಅವರು ಚುನಾವಣಾ ರಾಜಕೀಯದಿಂದ ನಿವೃತ್ತಿ ಘೋಷಿಸಿದ್ದಾರೆ. ಗೆಲುವಿನ ಓಟವನ್ನು ಮುಂದುವರಿಸಲು ಬಿಜೆಪಿಯು ಈ ಬಾರಿ ಹಾಲಿ ಶಾಸಕ, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಕಣಕ್ಕಿಳಿಸಿದೆ. 2008ರಿಂದ ಶಿಗ್ಗಾವಿ–ಸವಣೂರು ಕ್ಷೇತ್ರದಿಂದ ನಾಲ್ಕು ಬಾರಿ ಶಾಸಕರಾಗಿರುವ ಬೊಮ್ಮಾಯಿ ಅವರು ಸಚಿವರು ಮತ್ತು ಮುಖ್ಯಮಂತ್ರಿಯಾಗಿ ಕಾರ್ಯ ನಿರ್ವಹಿಸಿದ್ದಾರೆ. ಈಗ ರಾಜ್ಯ ರಾಜಕಾರಣದಿಂದ ಕೇಂದ್ರ ರಾಜಕಾರಣದತ್ತ ಮುಖ ಮಾಡಿದ್ದಾರೆ.

ಎರಡು ಬಾರಿ ಅಲ್ಪಸಂಖ್ಯಾತ ಸಮುದಾಯದ ಅಭ್ಯರ್ಥಿ ಮತ್ತು ಒಮ್ಮೆ ನಾಮಧಾರಿ ರೆಡ್ಡಿ ಸಮುದಾಯಕ್ಕೆ ಟಿಕೆಟ್ ನೀಡಿ ಕೈ ಸುಟ್ಟುಕೊಂಡ ಕಾಂಗ್ರೆಸ್ ಈ ಬಾರಿ ಪ್ರಬಲ ವೀರಶೈವ ಲಿಂಗಾಯತ ಸಮುದಾಯಕ್ಕೆ ಸೇರಿದ ಉದ್ಯಮಿ ಆನಂದಸ್ವಾಮಿ ಗಡ್ಡದೇವರಮಠ ಅವರನ್ನು ಸ್ಪರ್ಧೆಗಿಳಿಸಿದೆ. ಮಾಜಿ ಶಾಸಕ ಜಿ.ಎಸ್. ಗಡ್ಡದೇವರಮಠ ಅವರ ಪುತ್ರ ಆನಂದಸ್ವಾಮಿ ಅವರು ಇದೇ ಮೊದಲ ಬಾರಿಗೆ ಲೋಕಸಭಾ ಚುನಾವಣಾ ಕಣಕ್ಕೆ ಇಳಿದಿದ್ದಾರೆ.

ಕಣದಲ್ಲಿ 14 ಅಭ್ಯರ್ಥಿಗಳಿದ್ದರೂ, ಬಿಜೆಪಿ–ಕಾಂಗ್ರೆಸ್ ಅಭ್ಯರ್ಥಿಗಳ ನಡುವೆ ನೇರ ಹಣಾಹಣಿ ಏರ್ಪಟ್ಟಿದೆ. ಬೊಮ್ಮಾಯಿ–ಆನಂದಸ್ವಾಮಿ ಇವರಿಬ್ಬರೂ ಪರಸ್ಪರ ಆರೋಪ, ನಿಂದನೆ, ವಾಗ್ದಾಳಿ ನಡೆಸದೆ, ತಮ್ಮ ಸರ್ಕಾರದ ಅಭಿವೃದ್ಧಿ ಯೋಜನೆಗಳ ಮೇಲೆ ಮತ ಕೇಳುತ್ತಿದ್ದಾರೆ.

8 ವಿಧಾನಸಭಾ ಕ್ಷೇತ್ರಗಳ ಪೈಕಿ ಕೇವಲ ಒಂದು ಕ್ಷೇತದಲ್ಲಿ ಬಿಜೆಪಿ ಗೆದ್ದಿದ್ದು, ಉಳಿದ 7 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಶಾಸಕರಿದ್ದಾರೆ. ಬೊಮ್ಮಾಯಿ ಪ್ರತಿನಿಧಿಸುವ ಶಿಗ್ಗಾವಿ ಕ್ಷೇತ್ರ ಹಾವೇರಿ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಇಲ್ಲದಿರುವುದು ಗಮನಾರ್ಹ. ಶಾಸಕರ ಸಂಖ್ಯಾಬಲ ಕಾಂಗ್ರೆಸ್‌ಗೆ ಅನುಕೂಲಕರ ವಾತಾವರಣ ಕಲ್ಪಿಸಿದೆ. ‘ಈ ಸಂಖ್ಯಾಬಲ ಲೋಕಸಭಾ ಚುನಾವಣೆ ಫಲಿತಾಂಶದ ಮೇಲೆ ಪ್ರಭಾವ ಬೀರುವುದಿಲ್ಲ’ ಎಂಬುದು ಬಿಜೆಪಿಯವರ ವಾದ.

ಕ್ಷೇತ್ರದಲ್ಲಿ ಜೆಡಿಎಸ್ ಪ್ರಭಾವಳಿ ಇಲ್ಲದ ಕಾರಣ ಮೈತ್ರಿಯಿಂದ ಬಿಜೆಪಿಗೆ ಲಾಭವೂ ಇಲ್ಲ, ನಷ್ಟವೂ ಇಲ್ಲ ಎಂಬಂತಾಗಿದೆ. ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡಿರುವುದಕ್ಕೆ ಗದಗ ಜಿಲ್ಲೆಯ ಜೆಡಿಎಸ್‌ನ ಕೆಲ ನಿಷ್ಠಾವಂತ ಕಾರ್ಯಕರ್ತರು ಪಕ್ಷ ತೊರೆದಿದ್ದಾರೆ. ಕ್ಷೇತ್ರದಲ್ಲಿ ವೀರಶೈವ ಲಿಂಗಾಯತ ಮತದಾರರೇ ನಿರ್ಣಾಯಕ. ಇದೇ ಕಾರಣಕ್ಕೆ ಎರಡೂ ಪಕ್ಷಗಳು ಅದೇ ಸಮುದಾಯದ ಅಭ್ಯರ್ಥಿಗೆ ಮಣೆ ಹಾಕಿವೆ.

25 ವರ್ಷಗಳಿಂದ ಬೊಮ್ಮಾಯಿ ಅವರಿಗೆ ಕ್ಷೇತ್ರದ ಜತೆ ನಂಟಿದೆ. ಆನಂದಸ್ವಾಮಿ ಅವರು ಒಂದು ವರ್ಷದಿಂದ ಪಕ್ಷದ ಕಾರ್ಯಕರ್ತರೊಂದಿಗೆ ನಿರಂತರ ಸಂಪರ್ಕದಲ್ಲಿದ್ದಾರೆ.

‘ಹಾವೇರಿ ಜಿಲ್ಲೆಯ ಅಭಿವೃದ್ಧಿಗೆ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರ ಕೊಡುಗೆ ಶೂನ್ಯ’ ಎಂದು ಕಾಂಗ್ರೆಸ್ ನಾಯಕರು ಟೀಕಿಸುತ್ತಿದ್ದಾರೆ. ಇದಕ್ಕೆ ಬೊಮ್ಮಾಯಿಯವರು ‘ಏತ ನೀರಾವರಿ ಯೋಜನೆಗಳಿಂದ ಒಂದು ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಕಲ್ಪಿಸಿದ್ದೇವೆ’ ಎಂದು ತಿರುಗೇಟು ನೀಡುತ್ತಿದ್ದಾರೆ. ಬಿಜೆಪಿ– ಕಾಂಗ್ರೆಸ್ ನಡುವಿನ ಹಗ್ಗ–ಜಗ್ಗಾಟದಲ್ಲಿ ಗೆಲುವಿನ ಹೂ ಮಾಲೆ ಯಾರಿಗೆ ಎಂಬುದು ಕಾದು ನೋಡಬೇಕಿದೆ. ❖

ಕಳೆದ ಚುನಾವಣೆಯಲ್ಲಿ ಮತದಾನವಾದ ಪ್ರಮಾಣ 74.01%



ಹನಿ ನೀರಾವರಿ ಪದ್ಧತಿಗೆ ಅಳವಡಿಸುವ ಪೈಪ್‌ಗಳು ಮುಂಡರಗಿ ಪಟ್ಟಣದ ರೈತರೊಬ್ಬರ ಜಮೀನಿನಲ್ಲಿ ನಿರರ್ಥಕವಾಗಿ ಬಿದ್ದಿವೆ



ಬಸವರಾಜ ಬೊಮ್ಮಾಯಿ (ಬಿಜೆಪಿ)

ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಹತ್ತು ವರ್ಷಗಳ ಸಾಧನೆ ಮತ್ತು ನಾನು ಮುಖ್ಯಮಂತ್ರಿ ಆಗಿದ್ದಾಗ ಕೈಗೊಂಡ ಅಭಿವೃದ್ಧಿ ಕೆಲಸಗಳನ್ನು ನೋಡಿ ಜನ ಬಿಜೆಪಿಗೆ ಮತ ಹಾಕುವರು

- 👍 ಪ್ರಬಲ ಲಿಂಗಾಯತ ಸಮುದಾಯದ ಅನುಭವಿ ರಾಜಕಾರಣಿ
- 👍 ಜಲಸಂಪನ್ಮೂಲ ಸಚಿವ, ಗೃಹ ಸಚಿವ, ಮುಖ್ಯಮಂತ್ರಿಯಾದ ಹಿರಿಮೆ
- 👎 ಸಿ.ಎಂ ಆಗಿದ್ದಾಗ ಅಭಿವೃದ್ಧಿ ಕಾಣದ ಹಾವೇರಿ ಜಿಲ್ಲಾ ಕೇಂದ್ರ
- 👎 ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬೊಮ್ಮಾಯಿ ಸಾರಥ್ಯದ ಬಿಜೆಪಿಗೆ ಹಿನ್ನಡೆ

ಆನಂದಸ್ವಾಮಿ ಗಡ್ಡದೇವರಮಠ (ಕಾಂಗ್ರೆಸ್)

ಗ್ಯಾರಂಟಿ ಯೋಜನೆಗಳನ್ನು ತಲುಪಿಸಿದ ಹೆಗ್ಗಳಿಕೆ ಕಾಂಗ್ರೆಸ್ ಪಕ್ಷದ್ದು. ಕರ್ನಾಟಕಕ್ಕೆ ಅನ್ಯಾಯ ಮಾಡಿದ ಬಿಜೆಪಿಗೆ ತಕ್ಕ ಪಾಠ ಕಲಿಸಲು ಈ ಬಾರಿ ಮತದಾರರು ‘ಕೈ’ ಹಿಡಿಯುವರು

- 👍 ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳು
- 👍 ಮಾಜಿ ಶಾಸಕರ ಪುತ್ರ, 7 ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಶಾಸಕರ ಬಲ
- 👎 ಹಾವೇರಿ ಜಿಲ್ಲೆಗೆ ಅಪರಿಚಿತ, ಪಕ್ಷದಲ್ಲಿರುವ ಅಸಮಾಧಾನಿತರಿಂದ ಒಳೇಟಿನ ಭೀತಿ
- 👎 ಚುನಾವಣಾ ರಾಜಕಾರಣದಲ್ಲಿ ಹೊಸಬನಾಗಿರುವುದರಿಂದ ಅನುಭವದ ಕೊರತೆ

ಪ್ರಜಾ ಮತ 2024

ಜನತಂತ್ರದ ಹಬ್ಬ

ಬಿಜೆಪಿ ತಮ್ಮ ನಾಯಕರನ್ನು ರಾಜರನ್ನಾಗಿ ಮಾಡಲು ಹೊರಟಿದೆ: ರಾಹುಲ್ ಗಾಂಧಿ ವಾಗ್ದಾಳಿ

‘ಮೀಸಲಾತಿ ವಿರೋಧಿಸಿದ್ದ ಆರ್‌ಎಸ್‌ಎಸ್’

ನವದೆಹಲಿ (ಪಿಟಿಐ): ಆರ್‌ಎಸ್‌ಎಸ್ ಸದಾ ಮೀಸಲಾತಿಯನ್ನು ಬೆಂಬಲಿಸಿತ್ತು ಎನ್ನುವ ಮೋಹನ್ ಭಾಗವತ್ ಅವರ ಹೇಳಿಕೆಗೆ ತಿರುಗೇಟು ನೀಡಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಸಂಘದ ಮುಖ್ಯಸ್ಥರು ಈ ಹಿಂದೆ ಮೀಸಲಾತಿಯನ್ನು ವಿರೋಧಿಸಿದ್ದರು ಎಂದು ಭಾನುವಾರ ಹೇಳಿದರು.

ಕೇಂದ್ರಾಡಳಿತ ಪ್ರದೇಶವಾದ ದಾಮನ್‌ನಲ್ಲಿ ಚುನಾವಣಾ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಅವರು, ‘ಮೀಸಲಾತಿಯನ್ನು ವಿರೋಧಿಸಿದ್ದವರು ಅವರ ಪಕ್ಷವನ್ನು ಸೇರುತ್ತಿದ್ದು, ಅವರನ್ನು ಪಕ್ಷಕ್ಕೆ ಸೇರಿಸಿಕೊಳ್ಳಲಾಗುತ್ತಿದೆ. ಆದರೆ, ಅವರು ಈಗ ತಾವು ಮೀಸಲಾತಿ ವಿರೋಧಿಗಳಲ್ಲ ಎನ್ನುತ್ತಿದ್ದಾರೆ’ ಎಂದು ಟೀಕಿಸಿದರು.

‘ತಮ್ಮ ನಾಯಕರನ್ನು ದೇಶದ ‘ರಾಜ’ರನ್ನಾಗಿ ಮಾಡಲು ಬಿಜೆಪಿ ಮತ್ತು ಆರ್‌ಎಸ್‌ಎಸ್ ಸಂವಿಧಾನ ಮತ್ತು ವಿವಿಧ ಸಂಸ್ಥೆಗಳನ್ನು ನಾಶ ಮಾಡಲು ಹೊರಟಿವೆ’ ಎಂದು ಆರೋಪಿಸಿದರು.

‘ಆರ್‌ಎಸ್‌ಎಸ್ ಮತ್ತು ಬಿಜೆಪಿಯು ಸಂವಿಧಾನ ಮತ್ತು ವಿವಿಧ ಸಂಸ್ಥೆಗಳನ್ನು ರದ್ದುಪಡಿಸಿ ತಮ್ಮ ನಾಯಕರನ್ನು ದೇಶದ ರಾಜರನ್ನಾಗಿ ಮಾಡಲು ಮತ್ತು 20ರಿಂದ 22 ಮಂದಿ ಶತಕೋಟ್ಯಧಿಪತಿಗಳಿಗೆ ನೆರವಾಗಲು ಪ್ರಯತ್ನಿಸುತ್ತಿವೆ’ ಎಂದು ಹೇಳಿದರು.

‘ಮೂಲಭೂತವಾಗಿ ಇಬ್ಬರ ನಡುವಿನ ವ್ಯತ್ಯಾಸವೇನೆಂದರೆ, ನಾವು ಸಂವಿಧಾನವನ್ನು ಮತ್ತು ಅದು ದೇಶಕ್ಕೆ ಕೊಟ್ಟ ಎಲ್ಲವನ್ನೂ ಸಂರಕ್ಷಿಸುತ್ತಿದ್ದೇವೆ. ಇನ್ನೊಂದು ಕಡೆ, ಬಿಜೆಪಿ ಮತ್ತು ಆರ್‌ಎಸ್‌ಎಸ್ ಗುರಿ ಸಂವಿಧಾನವನ್ನು ಹೇಗಾದರೂ ನಾಶ ಮಾಡುವುದಾಗಿದೆ’ ಎಂದು ಪ್ರತಿಪಾದಿಸಿದರು.

‘ಕೇಂದ್ರಾಡಳಿತ ಪ್ರದೇಶವಾದ ದಾಮನ್, ದಿಯು, ದಾದ್ರಾ ಮತ್ತು ನಗರ ಹವೇಲಿಯ ಆಡಳಿತಾಧಿಕಾರಿ ಪ್ರಫುಲ್ ಪಟೇಲ್ ಅವರು ಮೋದಿ ಪ್ರತಿಷ್ಠಾಪಿಸಿರುವ ರಾಜ’ ಎಂದ ರಾಹುಲ್, ‘ಜನರಿಗೆ ತೊಂದರೆ ಕೊಡಲು, ಅವರ ಮನೆ ಧ್ವಂಸ ಮಾಡಲು ಅವರಿಗೆ ಮುಕ್ತ ಅವಕಾಶ ನೀಡಲಾಗಿದೆ. ಅವರು ಇಲ್ಲಿ ಏನು ಮಾಡುತ್ತಿದ್ದಾರೋ, ದೆಹಲಿಯಲ್ಲಿ ಮೋದಿ ಅದನ್ನೇ ಮಾಡುತ್ತಿದ್ದಾರೆ’ ಎಂದು ಆರೋಪಿಸಿದರು.

ದಿಯು ಮತ್ತು ದಾಮನ್ ಲೋಕಸಭಾ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿ, ಹಾಲಿ ಸಂಸದ ಲಾಲುಭಾಯ್ ಪಟೇಲ್ ವಿರುದ್ಧ ಕಾಂಗ್ರೆಸ್ ಅಭ್ಯರ್ಥಿಯಾಗಿ ಕೇತನ್ ಪಟೇಲ್ ಸ್ಪರ್ಧಿಸಿದ್ದಾರೆ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಒಡಿಶಾದ ಕಟಕ್‌ನಲ್ಲಿ ನಡೆದ ಲೋಕಸಭಾ ಚುನಾವಣೆಯ ಪ್ರಚಾರ ಸಭೆಯಲ್ಲಿ ಪಾಲ್ಗೊಂಡು, ಬೆಂಬಲಿಗರತ್ತ ಕೈ ಬೀಸಿದರು– ಪಿಟಿಐ ಚಿತ್ರ

> **‘ಮೋದಿ ಮತ್ತು ಆರ್‌ಎಸ್‌ಎಸ್ ದೇಶವನ್ನು ಹಿಂದಿನ ರಾಜರಂತೆ ಆಳಲು ಹೊರಟಿದ್ದು, ಅವರಿಗೆ ‘ಒಂದು ದೇಶ, ಒಂದು ಭಾಷೆ ಮತ್ತು ಒಬ್ಬ ನಾಯಕ’ ಬೇಕು’**
> **ರಾಹುಲ್ ಗಾಂಧಿ,** ಕಾಂಗ್ರೆಸ್ ನಾಯಕ

ಮೀಸಲಾತಿಗೆ ಬೆಂಬಲ: ಭಾಗವತ್



ಹೈದರಾಬಾದ್ (ಪಿಟಿಐ): ಸಂವಿಧಾನಬದ್ಧವಾದ ಮೀಸಲಾತಿಯನ್ನು ಸಂಘವು ಯಾವಾಗಲೂ ಬೆಂಬಲಿಸುತ್ತದೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ್ ಭಾಗವತ್ ಅವರು ಭಾನುವಾರ ಹೇಳಿದ್ದಾರೆ.

ಬಿಜೆಪಿ ಮತ್ತು ಆರ್‌ಎಸ್‌ಎಸ್ ಮೀಸಲಾತಿ ವಿರೋಧಿಯಾಗಿವೆ ಎಂದು ಪ್ರತಿಪಕ್ಷಗಳ ದಾಳಿಗೆ ಗುರಿಯಾಗುತ್ತಿರುವ ಮಧ್ಯೆ ಮೋಹನ್ ಭಾಗವತ್ ಅವರು ಈ ಸ್ಪಷ್ಟನೆ ನೀಡಿದ್ದಾರೆ. ಇಲ್ಲಿನ ಶಿಕ್ಷಣ ಸಂಸ್ಥೆಯೊಂದರ ಕಾರ್ಯಕ್ರಮದಲ್ಲಿ, ಮೀಸಲಾತಿ ವಿರುದ್ಧ ತಾವು ನೀಡಿರುವ ಹೇಳಿಕೆಯೊಂದರ ವಿಡಿಯೊ ಹರಿದಾಡುತ್ತಿರುವುದನ್ನು ಉಲ್ಲೇಖಿಸಿದ ಅವರು, ‘ಆರ್‌ಎಸ್‌ಎಸ್ ಮೀಸಲಾತಿಯನ್ನು ವಿರೋಧಿಸುತ್ತದೆ ಎಂಬುದು ಸುಳ್ಳು. ಮೀಸಲಾತಿ ಜಾರಿಯಾದ ದಿನದಿಂದಲೂ ಸಂಘವು ಸಂವಿಧಾನದ ಪ್ರಕಾರ ಮೀಸಲಾತಿಯನ್ನು ಸಂಪೂರ್ಣವಾಗಿಯೇ ಬೆಂಬಲಿಸಿಕೊಂಡು ಬಂದಿದೆ’ ಎಂದಿದ್ದಾರೆ.

ಆರ್‌ಎಸ್‌ಎಸ್-ಬಿಜೆಪಿ ಮೀಸಲಾತಿಯನ್ನು ವಿರೋಧಿಸುತ್ತಿವೆ ಎಂದು ತೆಲಂಗಾಣ ಮುಖ್ಯಮಂತ್ರಿ ಎ.ರೇವಂತ್ ರೆಡ್ಡಿ ಶನಿವಾರ ಆರೋಪಿಸಿದ್ದರು.

ರಾಮಮಂದಿರ: ವಿಪಕ್ಷಗಳ ವಿರುದ್ಧ ಶಾ ವಾಗ್ದಾಳಿ

ಕಾಸ್‌ಗಂಜ್, ಉತ್ತರ ಪ್ರದೇಶ (ಪಿಟಿಐ): ರಾಮಮಂದಿರದ ವಿಚಾರಕ್ಕೆ ಸಂಬಂಧಿಸಿದಂತೆ ವಿರೋಧ ಪಕ್ಷಗಳ ವಿರುದ್ಧ ವಾಗ್ದಾಳಿ ನಡೆಸಿದ ಕೇಂದ್ರ ಗೃಹ ಸಚಿವ ಅಮಿತ್ ಶಾ, ‘ಕರಸೇವಕರತ್ತ ಗುಂಡು ಹಾರಿಸಿದವರು ಮತ್ತು ರಾಮಮಂದಿರ ನಿರ್ಮಿಸಿದವರ ನಡುವಿನ ಆಯ್ಕೆ ಜನರ ಮುಂದಿದೆ’ ಎಂದು ಹೇಳಿದರು.

ಅವರು ಉತ್ತರ ಪ್ರದೇಶದ ಎಟಾ–ಕಾಸ್‌ಗಂಜ್ ಬಿಜೆಪಿ ಅಭ್ಯರ್ಥಿ ರಾಜ್‌ವೀರ್ ಸಿಂಗ್ ಪರವಾಗಿ ರ‍್ಯಾಲಿ ನಡೆಸಿ ಮಾತನಾಡಿದರು.

ಬಾಲರಾಮನ ಪ್ರಾಣ ಪ್ರತಿಷ್ಠಾಪನೆಗೆ ಹಾಜರಾಗದ ವಿರೋಧ ಪಕ್ಷಗಳನ್ನು ಟೀಕಿಸಿದ ಅವರು, ‘ರಾಮ ಮಂದಿರದ ಉದ್ಘಾಟನೆಗೆ ಹಾಜರಾಗದವರಿಗೆ ಗೊತ್ತು, ಕರಸೇವಕರತ್ತ ಗುಂಡು ಹಾರಿಸಿದವರು ಅವರೇ ಎನ್ನುವುದು’ ಎಂದು ಹೇಳಿದರು.

‘ಕಾಂಗ್ರೆಸ್, ರಾಹುಲ್ ‘ಬಾಬಾ’ ಮತ್ತು ಅಖಿಲೇಶ್ ಯಾದವ್ ಅವರ ಪಕ್ಷ (ಎಸ್‌ಪಿ) ರಾಮಮಂದಿರ ವಿವಾದವನ್ನು 70 ವರ್ಷಕ್ಕೂ ಹೆಚ್ಚು ಕಾಲ ಅನಿಶ್ಚಿತವಾಗಿಟ್ಟಿದ್ದವು. ನೀವು ಮೋದಿ ಅವರನ್ನು ಎರಡನೇ ಬಾರಿ ಪ್ರಧಾನಿ ಮಂತ್ರಿ ಮಾಡಿದಿರಿ. ಅವರು ಜೈ ಶ್ರೀರಾಮ್ ಎಂದು ಹೇಳಿ, ಜನವರಿ 22ರಂದು ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ನೆರವೇರಿಸಿದರು’ ಎಂದು ತಿಳಿಸಿದರು.

ವಿರೋಧ ಪಕ್ಷಗಳು ಹಿಂದುಳಿದ ಸಮುದಾಯಗಳ ಜನರನ್ನು ನಿರ್ಲಕ್ಷಿಸಿದವು. ಮೋದಿ ಅವರು ಪ್ರಧಾನಿಯಾದ ನಂತರ ಅವರಿಗೆ ಹಕ್ಕು ನೀಡಿದರು ಎಂದು ಪ್ರತಿಪಾದಿಸಿದರು.

ಮತದಾನ ಪ್ರಕ್ರಿಯೆಯಲ್ಲಿ ಅವ್ಯವಸ್ಥೆ ತನಿಖೆಗೆ ಕಾಂಗ್ರೆಸ್ ಒತ್ತಾಯ

ತಿರುವನಂತಪುರ (ಪಿಟಿಐ): ಕೇರಳದಲ್ಲಿ ಈಚೆಗೆ ನಡೆದ ಲೋಕಸಭಾ ಚುನಾವಣೆಯ ವೇಳೆ ಉಂಟಾಗಿದ್ದ ಅವ್ಯವಸ್ಥೆಗಳ ಕುರಿತು ತನಿಖೆ ನಡೆಸಬೇಕೆಂದು ಕಾಂಗ್ರೆಸ್, ಚುನಾವಣಾ ಆಯೋಗವನ್ನು ಒತ್ತಾಯಿಸಿದೆ.

ಹಲವು ಮತಗಟ್ಟೆಗಳಲ್ಲಿ ಅನಗತ್ಯವಾಗಿ ಮತದಾನ ವಿಳಂಬವಾಗಿತ್ತು. ಮತದಾರರು ನಾಲ್ಕು ಗಂಟೆ ಕಾಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿತ್ತು ಎಂದು ಕೇರಳ ವಿಧಾನಸಭೆಯ ವಿರೋಧ ಪಕ್ಷದ ನಾಯಕ ವಿ.ಡಿ. ಸತೀಶನ್ ಚುನಾವಣಾ ಆಯೋಗಕ್ಕೆ ಬರೆದ ಪತ್ರದಲ್ಲಿ ಆರೋಪಿಸಿದ್ದಾರೆ.

ಹಲವು ಮತದಾರರು 6 ಗಂಟೆಯ ಮೊದಲು ಮತಗಟ್ಟೆಗಳಿಗೆ ತಲುಪಿದ್ದರೂ ಅವರಿಗೆ ಮತದಾನ ಮಾಡಲು ಸಾಧ್ಯವಾಗಿಲ್ಲ ಎಂದು ಉಲ್ಲೇಖಿಸಿದ್ದಾರೆ. ಕೆಲವು ಕಡೆ ಅಧಿಕಾರಿಗಳು ನಿರ್ಲಕ್ಷ್ಯ ತೋರಿದ್ದಾರೆ ಎಂದೂ ಆರೋಪ ಮಾಡಿದ್ದಾರೆ.

ರಾಜ್ಯದಲ್ಲಿ ನಡೆದ ಚುನಾವಣಾ ಪ್ರಕ್ರಿಯೆಯು ತೃಪ್ತಿಕರವಾಗಿತ್ತು ಎಂದು ಮುಖ್ಯ ಚುನಾವಣಾ ಅಧಿಕಾರಿ ಹೇಳಿಕೆ ನೀಡಿದ ಮರುದಿನ ಸತೀಶನ್ ಅವರು ಈ ಆರೋಪ ಮಾಡಿದ್ದಾರೆ.

ದೆಹಲಿ ಕಾಂಗ್ರೆಸ್ ಅಧ್ಯಕ್ಷ ರಾಜೀನಾಮೆ

ಪ್ರಜಾವಾಣಿ ವಾರ್ತೆ

ನವದೆಹಲಿ: ದೆಹಲಿ ಕಾಂಗ್ರೆಸ್ ಘಟಕದ ಅಧ್ಯಕ್ಷ ಅರವಿಂದರ್ ಸಿಂಗ್ ಲವ್ಲಿ ಅವರು ಭಾನುವಾರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಈ ಬೆಳವಣಿಗೆಯು, ರಾಷ್ಟ್ರದ ರಾಜಧಾನಿಯಲ್ಲಿ ಲೋಕಸಭೆ ಚುನಾವಣೆಗೆ ಕಾಂಗ್ರೆಸ್ ನಡೆಸುತ್ತಿದ್ದ ಸಿದ್ಧತೆಗೆ ಹಿನ್ನಡೆ ಉಂಟುಮಾಡಿದೆ.

ಅರವಿಂದರ್ ಸಿಂಗ್ ಲವ್ಲಿ

ದೆಹಲಿ ಲೋಕಸಭಾ ಕ್ಷೇತ್ರಗಳಿಗೆ ಅಭ್ಯರ್ಥಿಗಳ ಆಯ್ಕೆಯ ವಿಚಾರದಲ್ಲಿ ಅಸಮಾಧಾನ ಮತ್ತು ಕಾಂಗ್ರೆಸ್‌ನ ದೆಹಲಿ ಉಸ್ತುವಾರಿ ದೀಪಕ್ ಬಾಬರಿಯಾ ಅವರ ನಡವಳಿಕೆಯನ್ನು ವಿರೋಧಿಸಿ ಅವರು ಈ ನಿರ್ಧಾರ ತೆಗೆದುಕೊಂಡಿದ್ದಾರೆ.

‘ನಾನು ದೆಹಲಿ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದೇನೆ. ಯಾವುದೇ ಪಕ್ಷವನ್ನು ಸೇರುತ್ತಿಲ್ಲ’ ಎಂದು ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ‘ಲವ್ಲಿ ಬಿಜೆಪಿ ಸೇರಲಿದ್ದು, ಪೂರ್ವ ದೆಹಲಿ ಲೋಕಸಭಾ ಕ್ಷೇತ್ರದಿಂದ ಆ ಪಕ್ಷವು ಅವರನ್ನು ಕಣಕ್ಕಿಳಿಸಲಿದೆ’ ಎಂದು ಕಾಂಗ್ರೆಸ್‌ನ ಮಾಜಿ ಶಾಸಕ ಆಸಿಫ್ ಮೊಹಮ್ಮದ್ ಖಾನ್ ಹೇಳಿಕೆ ನೀಡಿದ ಬೆನ್ನಲ್ಲೇ ಅವರು ಈ ಸ್ಪಷ್ಟೀಕರಣ ಕೊಟ್ಟಿದ್ದಾರೆ.

ದೆಹಲಿ ಕಾಂಗ್ರೆಸ್‌ನಲ್ಲಿ ತಲೆದೋರಿರುವ ಬಿಕ್ಕಟ್ಟು ಬಗೆಹರಿಸುವಂತೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪಕ್ಷದ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರಿಗೆ ಸೂಚಿಸಿದ್ದಾರೆ.

ಲವ್ಲಿ ಅವರು ಎಐಸಿಸಿ ಅಧ್ಯಕ್ಷರಿಗೆ ಬರೆದ ರಾಜೀನಾಮೆ ಪತ್ರದಲ್ಲಿ, ದೀಪಕ್ ಬಾಬರಿಯಾ ಅವರ ಕಾರ್ಯವೈಖರಿಯನ್ನು ಕಟುವಾಗಿ ಟೀಕಿಸಿದ್ದಾರೆ. ಅಭ್ಯರ್ಥಿಗಳ ಆಯ್ಕೆಯ ವೇಳೆ ದೆಹಲಿ ಘಟಕದ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ ಎಂದು ದೂರಿದ್ದಾರೆ.

ಲೋಕಸಭೆ ಚುನಾವಣೆಯಲ್ಲಿ ಎಎಪಿ ಜತೆ ಮೈತ್ರಿ ಮಾಡಿಕೊಳ್ಳುವುದಕ್ಕೆ ದೆಹಲಿ ಘಟಕದ ವಿರೋಧವಿತ್ತು ಎಂಬುದನ್ನೂ ಅವರು ನೆನಪಿಸಿದ್ದಾರೆ.

ವಾಯವ್ಯ ದೆಹಲಿ ಕ್ಷೇತ್ರದ ಅಭ್ಯರ್ಥಿ ಉದಿತ್ ರಾಜ್ ಅವರು ಪಕ್ಷದ ಕಾರ್ಯಕರ್ತರ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡಿರುವುದು ಮತ್ತು ಈಶಾನ್ಯ ದೆಹಲಿ ಅಭ್ಯರ್ಥಿ ಕನ್ಹಯ್ಯಾ ಕುಮಾರ್ ಅವರು ಎಎಪಿ ಸರ್ಕಾರ ಹಾಗೂ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ಹೊಗಳಿರುವುದನ್ನೂ ಪತ್ರದಲ್ಲಿ ಟೀಕಿಸಿದ್ದಾರೆ.

> **ಈ ವಿಷಯದ ಬಗ್ಗೆ ನಾನು ಪ್ರತಿಕ್ರಿಯಿಸುವುದು ಸೂಕ್ತ ಎನಿಸುವುದಿಲ್ಲ. ದೆಹಲಿಯ ಏಳು ಕ್ಷೇತ್ರಗಳಲ್ಲೂ ಜನರು ‘ಇಂಡಿಯಾ’ ಒಕ್ಕೂಟದ ಅಭ್ಯರ್ಥಿಗಳಿಗೆ ಮತ ಹಾಕುವ ವಿಶ್ವಾಸವಿದೆ**
> **ಸೌರಭ್ ಭಾರದ್ವಾಜ್,** ಎಎಪಿ ನಾಯಕ

ರೋಡ್ ಶೋ ಸಿಪಿಎಂ ಅಭ್ಯರ್ಥಿ ಸುಜನ್ ಚಕ್ರವರ್ತಿ ಪರ ಪಕ್ಷದ ಕಾರ್ಯಕರ್ತರು ಭಾನುವಾರ ಕೋಲ್ಕತ್ತದಲ್ಲಿ ರೋಡ್ ಶೋ ನಡೆಸಿದರು –ಪಿಟಿಐ ಚಿತ್ರ

‘ಎಎಪಿ ಪ್ರಚಾರ ಗೀತೆ ನಿಷೇಧ’

ನವದೆಹಲಿ (ಪಿಟಿಐ): ‘ಆಡಳಿತಾರೂಢ ಬಿಜೆಪಿ ಮತ್ತು ತನಿಖಾ ಸಂಸ್ಥೆಗಳನ್ನು ಕೆಟ್ಟ ರೀತಿಯಲ್ಲಿ ಬಿಂಬಿಸಲಾಗಿದೆ ಎಂಬ ಕಾರಣ ನೀಡಿ ಚುನಾವಣಾ ಆಯೋಗವು ಪಕ್ಷದ ಲೋಕಸಭಾ ಚುನಾವಣೆಯ ಪ್ರಚಾರ ಗೀತೆಯ ಮೇಲೆ ನಿಷೇಧ ಹೇರಿದೆ’ ಎಂದು ಎಎಪಿ ಭಾನುವಾರ ತಿಳಿಸಿದೆ.

ಪತ್ರಿಕಾಗೋಷ್ಠಿಯಲ್ಲಿ ಈ ವಿಚಾರ ತಿಳಿಸಿದ ಎಎಪಿ ಹಿರಿಯ ನಾಯಕಿ ಆತಿಶಿ, ‘ಚುನಾವಣಾ ಆಯೋಗವು ಪಕ್ಷವೊಂದರ ಪ್ರಚಾರ ಗೀತೆಯ ಮೇಲೆ ನಿಷೇಧ ಹೇರುತ್ತಿರುವುದು ಪ್ರಾಯಶಃ ಇದೇ ಮೊದಲ ಬಾರಿ’ ಎಂದರು.

‘ಗೀತೆಯಲ್ಲಿ ಬಿಜೆಪಿ ಕುರಿತ ಪ್ರಸ್ತಾಪವಿಲ್ಲ. ಮಾದರಿ ನೀತಿ ಸಂಹಿತೆಯನ್ನೂ ಉಲ್ಲಂಘಿಸಿಲ್ಲ. ಅದರಲ್ಲಿ ವಾಸ್ತವಾಂಶಗಳು, ವಿಡಿಯೊಗಳು ಇವೆ’ ಎಂದು ಹೇಳಿದರು.

‘ಬಿಜೆಪಿ ಸರ್ವಾಧಿಕಾರ ಮಾಡಿದರೆ, ಅದು ಸರಿ. ಆದರೆ, ಯಾರಾದರೂ ಅದನ್ನು ಪ್ರಶ್ನಿಸಿದರೆ, ಅದು ತಪ್ಪು. ಪ್ರಜಾಪ್ರಭುತ್ವ ಆತಂಕದಲ್ಲಿದೆ ಎನ್ನುವುದನ್ನು ಇದು ತೋರಿಸುತ್ತದೆ. ಬಿಜೆಪಿಯ ನೀತಿ ಸಂಹಿತೆ ಉಲ್ಲಂಘನೆಯ ಬಗ್ಗೆ ಕ್ರಮ ಜರುಗಿಸಬೇಕೇ ಹೊರತು ವಿರೋಧ ಪಕ್ಷಗಳ ಪ್ರಚಾರ ಗೀತೆಗಳನ್ನು ತಡೆಯಬಾರದು ಎಂದು ನಾನು ಆಯೋಗವನ್ನು ಒತ್ತಾಯಿಸುತ್ತೇನೆ’ ಎಂದು ಹೇಳಿದರು.

ಎಎಪಿಯ ಹಾಡನ್ನು ನಿಷೇಧ ಮಾಡಿಲ್ಲ ಎಂದು ಚುನಾವಣಾ ಆಯೋಗ ಸ್ಪಷ್ಟನೆ ನೀಡಿದೆ. ಆದರೆ, ಅದು ಆಯೋಗದ ಮಾರ್ಗಸೂಚಿ ಮತ್ತು ಜಾಹೀರಾತು ನಿಯಮಗಳನ್ನು ಉಲ್ಲಂಘಿಸುತ್ತಿದ್ದುದರಿಂದ ಹಾಡಿನ ವಸ್ತುವಿನಲ್ಲಿ ಬದಲಾವಣೆ ಮಾಡಲು ಸೂಚಿಸಿದ್ದಾಗಿ ತಿಳಿಸಿದೆ.

ಬಿಜೆಪಿಗೆ ಸಿಪಿಎಂ, ಕಾಂಗ್ರೆಸ್ ಸಹಾಯ: ಮಮತಾ ಬ್ಯಾನರ್ಜಿ

ಕಾಲಿಯಾಚಕ್, ಪಶ್ಚಿಮ ಬಂಗಾಳ (ಪಿಟಿಐ): ರಾಜ್ಯದಲ್ಲಿ ಸಿಪಿಎಂ ಮತ್ತು ಕಾಂಗ್ರೆಸ್ ಪಕ್ಷಗಳು ಬಿಜೆಪಿಗೆ ಸಹಾಯ ಮಾಡುತ್ತಿವೆ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಭಾನುವಾರ ಆರೋಪಿಸಿದರು.

ಮಾಲ್ದಾ ಜಿಲ್ಲೆಯಲ್ಲಿ ನಡೆದ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಅವರು, ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧ ಟಿಎಂಸಿಯು ಹೋರಾಟ ಮುಂದುವರಿಸಲಿದೆ ಮತ್ತು ಲೋಕಸಭಾ ಚುನಾವಣೆಯ ಬಳಿಕ ‘ಇಂಡಿಯಾ’ ಸರ್ಕಾರ ರಚನೆಯಾದರೆ ಅದರಲ್ಲಿ ಪ್ರಮುಖ ಪಾತ್ರ ವಹಿಸಲಿದೆ ಎಂದು ಹೇಳಿದರು.

ಚುನಾವಣಾ ಕಣದಲ್ಲಿ...

‘ಕಾಂಗ್ರೆಸ್ ಪ್ರಣಾಳಿಕೆಯ ನಿಜವಾದ ಅಂಶಗಳ ಬಗ್ಗೆ ಚರ್ಚಿಸಲಿ’

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ತಮಗೆ ಭಾಷಣ ಬರೆಯುವವರೊಬ್ಬರು ಬರೆದ ಕಾಂಗ್ರೆಸ್ ಪ್ರಣಾಳಿಕೆ ಕಲ್ಪಿಸಿಕೊಂಡಿದ್ದಾರೆ. ಅವರು ಕಾಂಗ್ರೆಸ್ ಪ್ರಣಾಳಿಕೆಯಲ್ಲಿನ ನಿಜವಾದ ಅಂಶಗಳ ಬಗ್ಗೆ ಚರ್ಚೆ ನಡೆಸಲಿ ಎಂದು ಪಕ್ಷದ ನಾಯಕ ಪಿ.ಚಿದಂಬರಂ ಭಾನುವಾರ ತಿಳಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರು ಆಸ್ತಿ ಹಂಚಿಕೆ ಮತ್ತು ಪಿತ್ರಾರ್ಜಿತ ಆಸ್ತಿ ತೆರಿಗೆಗೆ ಸಂಬಂಧಿಸಿದ ಕಾಂಗ್ರೆಸ್ ಪ್ರಣಾಳಿಕೆಯನ್ನು ಟೀಕಿಸಿದ ಬಗ್ಗೆ ಚಿದಂಬರಂ ‘ಎಕ್ಸ್’ ವೇದಿಕೆಯಲ್ಲಿ ಪ್ರತಿಕ್ರಿಯಿಸಿದ್ದಾರೆ. ಅವರು ಕಾಂಗ್ರೆಸ್ ಪ್ರಣಾಳಿಕೆ ರಚನಾ ಸಮಿತಿಯ ಅಧ್ಯಕ್ಷರಾಗಿದ್ದರು.

‘ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಇಲ್ಲದ ಪದಗಳನ್ನು, ವಾಕ್ಯಗಳನ್ನು ಪ್ರಧಾನಿ ನರೇಂದ್ರ ಮೋದಿ ಕಂಡುಹಿಡಿಯುತ್ತಿದ್ದಾರೆ. ಪಿತ್ರಾರ್ಜಿತ ಆಸ್ತಿ ತೆರಿಗೆ ಎನ್ನುವ ಪದ ಪ್ರಣಾಳಿಕೆಯಲ್ಲಿ ಎಲ್ಲೂ ಇಲ್ಲ’ ಎಂದು ಹೇಳಿದರು.

ಮಾತಿನಿಂದ ಪ್ರಧಾನಿ ಘನತೆಗೆ ಧಕ್ಕೆ: ಸಿಂಘ್ವಿ

ಅಹಮದಾಬಾದ್ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಮಾತುಗಳಿಂದಾಗಿ ತಮ್ಮ ಸ್ಥಾನದ ಘನತೆಯನ್ನು ಕಳೆದುಕೊಳ್ಳುತ್ತಿದ್ದಾರೆ ಎಂದು ಕಾಂಗ್ರೆಸ್ ಮುಖಂಡ ಅಭಿಷೇಕ್ ಮನು ಸಿಂಘ್ವಿ ಇಲ್ಲಿ ಹೇಳಿದರು.

ಬಿಜೆಪಿಯು ಹಣ, ಅಧಿಕಾರವನ್ನು ಬಳಸಿ ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುತ್ತಿದೆ ಎಂದು ಆರೋಪಿಸಿದರು. ‘ನರೇಂದ್ರ ಮೋದಿ ಅವರು ಪ್ರಚಾರದ ವೇಳೆ ಬಳಸಿರುವ ಪದಗಳನ್ನು ಕಳೆದ 75 ವರ್ಷಗಳಲ್ಲಿ ಯಾವ ಪ್ರಧಾನಿಯೂ ಬಳಸಿಲ್ಲ. ಆದರೆ ಅವರ ಸುಳ್ಳಿನ ಪ್ರಚಾರ ವಿಫಲವಾಗಲಿದೆ’ ಎಂದರು.

ಅಮೇಠಿ: ಬಿಎಸ್‌ಪಿ ಅಭ್ಯರ್ಥಿ ಮೌರ್ಯ

ಲಖನೌ (ಪಿಟಿಐ): ಬಹುಜನ ಸಮಾಜ ಪಕ್ಷವು (ಬಿಎಸ್‌ಪಿ) ಉತ್ತರ ಪ್ರದೇಶದ ಅಮೇಠಿ ಲೋಕಸಭಾ ಕ್ಷೇತ್ರದಿಂದ ರವಿಪ್ರಕಾಶ್ ಮೌರ್ಯ ಅವರನ್ನು ಕಣಕ್ಕಿಳಿಸಿದೆ. ಇದರೊಂದಿಗೆ ಮಾಯಾವತಿ ನೇತೃತ್ವದ ಪಕ್ಷವು ರಾಜ್ಯದ 80 ಕ್ಷೇತ್ರಗಳಲ್ಲಿ 71ಕ್ಕೆ ಅಭ್ಯರ್ಥಿಗಳನ್ನು ಘೋಷಿಸಿದಂತಾಗಿದೆ.

ಮೊದಲ ಎರಡು ಹಂತ: ಮಹಿಳೆಯರಿಗೆ ಸಿಗದ ಸೂಕ್ತ ಪ್ರಾತಿನಿಧ್ಯ

ಮಹಿಳಾ ಅಭ್ಯರ್ಥಿಗಳ ಪ್ರಮಾಣ ಶೇ 8

ನವದೆಹಲಿ (ಪಿಟಿಐ): ಲೋಕಸಭಾ ಚುನಾವಣೆಯ ಎರಡು ಹಂತಗಳ ಮತದಾನ ಪ್ರಕ್ರಿಯೆ ಕೊನೆಗೊಂಡಿದೆ. ಈ ಎರಡು ಹಂತಗಳಲ್ಲಿ ಒಟ್ಟು 2,823 ಅಭ್ಯರ್ಥಿಗಳು ಕಣದಲ್ಲಿದ್ದರು. ಇದರಲ್ಲಿ ಮಹಿಳಾ ಅಭ್ಯರ್ಥಿಗಳ ಪ್ರಮಾಣ ಶೇ 8ರಷ್ಟು ಮಾತ್ರ.

ಮಹಿಳಾ ಅಭ್ಯರ್ಥಿಗಳು ಕಡಿಮೆ ಸಂಖ್ಯೆಯಲ್ಲಿರುವುದು ಲಿಂಗ ಆಧಾರಿತ ತಾರತಮ್ಯದ ಆಳವಾದ ಸಮಸ್ಯೆಯನ್ನು ಪ್ರತಿಬಿಂಬಿಸುತ್ತದೆ ಎಂದು ರಾಜಕೀಯ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

ಏಪ್ರಿಲ್ 19ರಂದು ನಡೆದ ಮೊದಲ ಹಂತದಲ್ಲಿ 1,625 ಹಾಗೂ ಏಪ್ರಿಲ್ 26ರಂದು ನಡೆದ ಎರಡನೇ ಹಂತದಲ್ಲಿ ಒಟ್ಟು 1,198 ಅಭ್ಯರ್ಥಿಗಳು ಕಣದಲ್ಲಿದ್ದರು.

ಮೊದಲ ಹಂತದಲ್ಲಿ ಕಣದಲ್ಲಿದ್ದ 135 ಮಹಿಳಾ ಅಭ್ಯರ್ಥಿಗಳಲ್ಲಿ 76 ಮಂದಿ ತಮಿಳುನಾಡಿನಲ್ಲಿ ಸ್ಪರ್ಧಿಸಿದ್ದರು. ಅದರೆ, ಆ ರಾಜ್ಯದ ಒಟ್ಟು ಅಭ್ಯರ್ಥಿಗಳಿಗೆ ಹೋಲಿಸಿದರೆ ಮಹಿಳೆಯರ ಪ್ರಮಾಣ ಶೇ 8ರಷ್ಟು ಮಾತ್ರ. ತಮಿಳುನಾಡಿನ ಎಲ್ಲ ಕ್ಷೇತ್ರಗಳಿಗೂ ಮೊದಲ ಹಂತದಲ್ಲಿ ಮತದಾನ ನಡೆದಿತ್ತು. ಎರಡನೇ ಹಂತದಲ್ಲಿ ಅತಿಹೆಚ್ಚು ಮಹಿಳೆಯರು ಕೇರಳದಲ್ಲಿ (24) ಕಣಕ್ಕಿಳಿದಿದ್ದರು.

ಈ ಲಿಂಗ ಅಸಮಾನತೆಯನ್ನು ರಾಜಕೀಯ ವಿಶ್ಲೇಷಕರು ಟೀಕಿಸಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರಿಗೆ ಟಿಕೆಟ್ ನೀಡುವ ಅಭ್ಯಾಸವನ್ನು ಈಗಿನಿಂದಲೇ ರೂಢಿಸಿಕೊಳ್ಳುವ ಬದಲು ಮಹಿಳಾ ಮೀಸಲಾತಿ ಮಸೂದೆಯ ಜಾರಿಗಾಗಿ ಪಕ್ಷಗಳು ಏಕೆ ಕಾಯುತ್ತಿವೆ ಎಂದು ಪ್ರಶ್ನಿಸಿದ್ದಾರೆ.

ಮಹಿಳಾ ಉಮೇದುವಾರರ ಸಂಖ್ಯೆಯನ್ನು ಹೆಚ್ಚಿಸಲು ರಾಜಕೀಯ ಪಕ್ಷಗಳು ರಚನಾತ್ಮಕ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ದೆಹಲಿ ವಿಶ್ವ-ವಿದ್ಯಾಲಯದ ಜೀಸಸ್ ಮತ್ತು ಮೇರಿ ಕಾಲೇಜಿನ ಸಹ ಪ್ರಾಧ್ಯಾಪಕಿ ಸುಶೀಲಾ ರಾಮಸ್ವಾಮಿ ಹೇಳಿದ್ದಾರೆ.

ಬ್ರಿಟನ್‌ನಲ್ಲಿ ಲೇಬರ್ ಪಕ್ಷವು ಮಹಿಳೆಯರಿಗೆ ಇಂತಿಷ್ಟು ಸೀಟುಗಳನ್ನು ಮೀಸಲಿಟ್ಟಿರುವುದನ್ನು ಉಲ್ಲೇಖಿಸಿದ ಅವರು, ‘ರಾಜಕೀಯ ಪಕ್ಷಗಳು ಹೆಚ್ಚಿನ ಮಹಿಳಾ ಅಭ್ಯರ್ಥಿಗಳನ್ನು ಕಣಕ್ಕಿಳಿಸುವ ಉತ್ಸುಕತೆ ತೋರಬೇಕಿತ್ತು’ ಎಂದಿದ್ದಾರೆ.

‘ಪಕ್ಷಗಳು ತಮ್ಮ ಪ್ರಣಾಳಿಕೆಗಳಲ್ಲಿ ಮಹಿಳೆಯರಿಗಾಗಿ ಯೋಜನೆಗಳನ್ನು ಜಾರಿಗೊಳಿಸುವ ಭರವಸೆ ನೀಡಿದ್ದು, ಮಹಿಳಾ ಸಬಲೀಕರಣದ ಬಗ್ಗೆಯೂ ಧ್ವನಿ ಎತ್ತಿವೆ. ಅದರೆ, ಮಹಿಳಾ ಅಭ್ಯರ್ಥಿಗಳ ಕೊರತೆಯು ರಾಜಕೀಯ ವ್ಯವಸ್ಥೆಯಲ್ಲಿ ಲಿಂಗ ಅಸಮಾನತೆಯ ಆಳವಾದ ಸಮಸ್ಯೆಯನ್ನು ಪ್ರತಿಬಿಂಬಿಸುತ್ತದೆ’ ಎಂದು ಹೇಳುವರು.

ಭಾರತದ ಮತದಾರರಲ್ಲಿ ಅರ್ಧದಷ್ಟು ಮಹಿಳೆಯರೇ ಇದ್ದಾರೆ. ಹಾಗಿರುವಾಗ, ಅಭ್ಯರ್ಥಿಗಳಲ್ಲಿ ಅವರ ಪ್ರಾತಿನಿಧ್ಯವು ಕಡಿಮೆಯಿರುವುದು ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರ ಪೂರ್ಣಪ್ರಮಾಣದ ಭಾಗವಹಿಸುವಿಕೆಗೆ ಅಡ್ಡಿಯಾಗುವ ಅಂಶಗಳ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ ಎಂದು ಅಲೀಗಢ ಮುಸ್ಲಿಂ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಇಫ್ತಿಕಾರ್ ಅಹ್ಮದ್ ಅನ್ಸಾರಿ ಅಭಿಪ್ರಾಯಪಟ್ಟಿದ್ದಾರೆ.

> ಮಹಿಳೆಯರಿಗಾಗಿ ಇಂತಿಷ್ಟು ಸೀಟುಗಳನ್ನು ಮೀಸಲಿಟ್ಟರಷ್ಟೇ ಸಾಲದು. ಒಬ್ಬ ನಾಯಕಿಯಾಗಿ ಹಾಗೂ ನಿರ್ಧಾರ ಕೈಗೊಳ್ಳುವ ಸ್ಥಾನಗಳಲ್ಲಿ ಮಹಿಳೆಯರನ್ನು ಕಾಣುವಂತಹ ಸಾಂಸ್ಕೃತಿಕ ಬದಲಾವಣೆಯ ಅಗತ್ಯವಿದೆ ಎಂಬುದು ಬಿಜೆಡಿಯ ಬಿಜು ಮಹಿಳಾ ದಳದ ಉಪಾಧ್ಯಕ್ಷೆ ಮೀರಾ ಪರಿದಾ ಅವರ ಹೇಳಿಕೆ

ಮಹಿಳಾ ಅಭ್ಯರ್ಥಿಗಳು

235	135	100
ಮೊದಲ ಎರಡು ಹಂತಗಳಲ್ಲಿ ಕಣದಲ್ಲಿದ್ದ ಮಹಿಳಾ ಅಭ್ಯರ್ಥಿಗಳು	ಮೊದಲ ಹಂತದಲ್ಲಿ ಕಣದಲ್ಲಿದ್ದ ಮಹಿಳೆಯರು	ಎರಡನೇ ಹಂತದಲ್ಲಿ ಕಣದಲ್ಲಿದ್ದ ಮಹಿಳೆಯರು

44	69
ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿದ್ದ ಮಹಿಳೆಯರು	ಬಿಜೆಪಿ ಟಿಕೆಟ್‌ನಿಂದ ಸ್ಪರ್ಧಿಸಿದವರು

ಚುಟುಕು

ಎನ್‌ಡಿಎ ಅಧಿಕಾರಕ್ಕೆ ಬಂದರೆ ಹಜ್ ಯಾತ್ರಿಕರಿಗೆ ₹1 ಲಕ್ಷ: ನಾಯ್ಡು



ನೆಲ್ಲೂರು (ಆಂಧ್ರಪ್ರದೇಶ): ಆಂಧ್ರಪ್ರದೇಶದಲ್ಲಿ ಎನ್‌ಡಿಎ ಅಧಿಕಾರಕ್ಕೆ ಬಂದರೆ ಹಜ್ ಯಾತ್ರಿಕರಿಗೆ ₹1 ಲಕ್ಷ ನೆರವು ನೀಡಲಾಗುವುದು ಎಂದು ಟಿಡಿಪಿ ಮುಖ್ಯಸ್ಥ ಎನ್. ಚಂದ್ರಬಾಬು ನಾಯ್ಡು ಭಾನುವಾರ ಭರವಸೆ ನೀಡಿದರು.

ನೆಲ್ಲೂರಿನಲ್ಲಿ ಮುಸ್ಲಿಮರ ಜೊತೆಗೆ ನಡೆದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಟಿಡಿಪಿ ರಾಜ್ಯದಲ್ಲಿ ಅಧಿಕಾರದಲ್ಲಿದ್ದಾಗ ಮುಸ್ಲಿಮರ ಹಬ್ಬವಾದ ‘ರೋಟಿಯಾ ಕಿ ಈದ್’ಗೆ ರಾಜ್ಯ ಹಬ್ಬದ ಸ್ಥಾನಮಾನ ನೀಡಿದ್ದನ್ನು ಸ್ಮರಿಸಿದರು.

ಟಿಡಿಪಿಯು ಹಿಂದೆಯೂ ಎನ್‌ಡಿಎ ಜೊತೆ ಸೇರಿತ್ತು ಮತ್ತು ಮುಸ್ಲಿಮರಿಗೆ ಅನ್ಯಾಯವಾಗಲು ಬಿಡುತ್ತಿರಲಿಲ್ಲ ಎಂದರು. ಹೈದರಾಬಾದ್‌ನಲ್ಲಿ ಉರ್ದು ವಿಶ್ವವಿದ್ಯಾಲಯ ಮತ್ತು ಹಜ್ ಭವನವನ್ನು ಸ್ಥಾಪಿಸಿದ್ದನ್ನೂ ಅವರು ನೆನಪಿಸಿಕೊಂಡರು.

ಆಂಧ್ರಪ್ರದೇಶದಲ್ಲಿ ಟಿಡಿಪಿ ಮತ್ತು ಜನಸೇನಾ ಪಕ್ಷಗಳು ಎನ್‌ಡಿಎ ಒಕ್ಕೂಟದ ಜೊತೆಗಿವೆ. ಆಂಧ್ರಪ್ರದೇಶದ 175 ವಿಧಾನಸಭಾ ಕ್ಷೇತ್ರಗಳಿಗೆ ಮತ್ತು 25 ಲೋಕಸಭಾ ಕ್ಷೇತ್ರಗಳಿಗೆ ಮೇ 13ರಂದು ಮತದಾನ ನಡೆಯಲಿದೆ.

‘ಭದ್ರಾ ಮೇಲ್ದಂಡೆ ಯೋಜನೆ ತಡೆಹಿಡಿದಿರುವುದು ಏಕೆ?’

ನವದೆಹಲಿ (ಪಿಟಿಐ): ಲೋಕಸಭಾ ಚುನಾವಣೆಯ ಎರಡನೇ ಹಂತದಲ್ಲಿ ‘ಸಂಪೂರ್ಣ ವಿಫಲರಾಗಿರುವ’ ಪ್ರಧಾನಿ ಮೋದಿ ಹತಾಶರಾಗಿದ್ದು, ಭಯ ಹರಡುವುದರಲ್ಲಿ ತೊಡಗಿದ್ದಾರೆ ಎಂದು ಕಾಂಗ್ರೆಸ್ ಭಾನುವಾರ ಆರೋಪಿಸಿದೆ.



ಪ್ರಧಾನಿ ಮೋದಿ ಅವರ ಕರ್ನಾಟಕ ಪ್ರವಾಸದ ಹಿನ್ನೆಲೆಯಲ್ಲಿ ಅವರಿಗೆ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ‘ಎಕ್ಸ್’ ವೇದಿಕೆಯಲ್ಲಿ ಹಲವು ಪ್ರಶ್ನೆಗಳನ್ನು ಕೇಳಿದ್ದಾರೆ.

‘ಜನರ ಪ್ರತಿನಿಧಿಗಳಾಗಿ ಬಿಜೆಪಿ ಸಂಸದರು ಕಳಪೆ ಸಾಧನೆ ಮಾಡಿದ್ದು ಏಕೆ, ಏಳು ತಿಂಗಳ ವಿಳಂಬದ ನಂತರ, ಕೇಂದ್ರ ಸರ್ಕಾರವು ಕೇವಲ ಶೇ 20ಕ್ಕಿಂತ ಕಡಿಮೆ ಬರ ಪರಿಹಾರ ಬಿಡುಗಡೆ ಮಾಡಿದ್ದು ಏಕೆ, ಭದ್ರಾ ಮೇಲ್ದಂಡೆ ಯೋಜನೆಯನ್ನು ತಡೆಹಿಡಿದಿರುವುದು ಏಕೆ’ ಎಂದು ಪ್ರಶ್ನಿಸಿದ್ದಾರೆ.

‘ಸಂಸತ್‌ನಲ್ಲಿ ಸಂಸದರ ಸರಾಸರಿ ಹಾಜರಾತಿ ಶೇ 79 ಆಗಿದ್ದರೆ, ಕರ್ನಾಟಕದ 28 ಸಂಸದರ ಹಾಜರಾತಿ ಶೇ 71 ಆಗಿದೆ. ಜತೆಗೆ ಕರ್ನಾಟಕದ 26 ಸಂಸದರು ರಾಜ್ಯಕ್ಕೆ ಸಂಬಂಧಪಟ್ಟ ಸಮಸ್ಯೆಗಳ ಬಗ್ಗೆ ಎಂದೂ ಧ್ವನಿ ಎತ್ತಿಲ್ಲ. ಕರ್ನಾಟಕದ ಜನರ ವಿಚಾರದಲ್ಲಿ ಪ್ರಧಾನಿ ಮೋದಿ ಅವರಿಗೆ ಅಸಡ್ಡೆ ಏಕೆ’ ಎಂದು ಪ್ರಶ್ನಿಸಿದ್ದಾರೆ.

ಎಂಥಾ ಮಾತು!

ಸಂವಿಧಾನವನ್ನು ಬದಲಾಯಿಸುವ ಸಲುವಾಗಿ ಬಿಜೆಪಿಯು 400ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಗೆಲ್ಲಲು ಬಯಸುತ್ತಿದೆ. ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ಜೈಲಿಗೆ ಹಾಕಲಾಗಿದೆ. ಬಿಜೆಪಿಯವರು ಪ್ರಜಾಪ್ರಭುತ್ವವನ್ನು ನಾಶಗೊಳಿಸಲು ಪ್ರಯತ್ನಿಸುವ ಮೂಲಕ ಸರ್ವಾಧಿಕಾರಿಯ ಹಾದಿಯಲ್ಲಿ ಸಾಗುತ್ತಿದ್ದಾರೆ. ದೇಶವನ್ನು ರಕ್ಷಿಸಲು ಆ ಪಕ್ಷವನ್ನು ಸೋಲಿಸಬೇಕಾಗಿದೆ

ಶರದ್ ಪವಾರ್, ಎನ್‌ಸಿಪಿ ಶರದ್ ಪವಾರ್ ಬಣದ ಮುಖ್ಯಸ್ಥ

ಭಯೋತ್ಪಾದನೆಯ ಕುರಿತು ಮೃದು ಧೋರಣೆ ಇರುವ ಸರ್ಕಾರವು ಕೇಂದ್ರದಲ್ಲಿರಬೇಕೆಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಬಯಸುತ್ತಿದ್ದಾರೆ. ಪಶ್ಚಿಮ ಬಂಗಾಳ ಸರ್ಕಾರವು ಭ್ರಷ್ಟಾಚಾರ, ಸುಲಿಗೆ ಮತ್ತು ಪಕ್ಷಪಾತಕ್ಕೆ ಹೆಸರುವಾಸಿಯಾಗಿದೆ. ನುಸುಳುಕೋರರ ಪರವಾಗಿ ಮಮತಾ ಬ್ಯಾನರ್ಜಿ ಮಾಡುವ ಓಲೈಕೆ ರಾಜಕಾರಣವನ್ನು ನಾವು ವಿರೋಧಿಸುತ್ತೇವೆ

ಜೆ.ಪಿ. ನಡ್ಡಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ

ಕ್ಷೇತ್ರ ಮಹಾತ್ಮೆ

ಬಿಹಾರದ ದರ್ಭಂಗಾ ಲೋಕಸಭಾ ಕ್ಷೇತ್ರವು ಈ ಬಾರಿ ಬಿಜೆಪಿ ಮತ್ತು ರಾಷ್ಟ್ರೀಯ ಜನತಾ ದಳದ (ಆರ್‌ಜೆಡಿ) ಪ್ರಬಲ ಅಭ್ಯರ್ಥಿಗಳ ನಡುವಿನ ನೇರ ಹಣಾಹಣಿಗೆ ಸಾಕ್ಷಿಯಾಗಲಿದೆ. ಕಳೆದ ಬಾರಿ ಇಲ್ಲಿಂದ ಗೆಲುವಿನ ನಗೆ ಬೀರಿದ್ದ ಗೋಪಾಲ್ ಜೀ ಠಾಕೂರ್ ಅವರನ್ನೇ ಬಿಜೆಪಿಯು ಕಣಕ್ಕಿಳಿಸಿದರೆ, ಆರ್‌ಜೆಡಿಯು ಲಲಿತ್ ಕುಮಾರ್ ಯಾದವ್ ಅವರನ್ನು ಸ್ಪರ್ಧಿಯಾಗಿಸಿದೆ. 2019ರ ಚುನಾವಣೆಯಲ್ಲಿ ಗೋಪಾಲ್ ಅವರು 2,67,979 ಮತಗಳ ಅಂತರದಿಂದ ಆರ್‌ಜೆಡಿಯ ಅಬ್ದುಲ್ ಬಾರಿ ಸಿದ್ದೀಕ್ ಅವರನ್ನು ಪರಾಭವಗೊಳಿಸಿದ್ದರು. ಲಲಿತ್ ಅವರು ದರ್ಭಂಗಾ ಗ್ರಾಮೀಣ ಕ್ಷೇತ್ರದ ಶಾಸಕರಾಗಿದ್ದಾರೆ. ಆರ್‌ಜೆಡಿಯು ‘ಇಂಡಿಯಾ’ ಒಕ್ಕೂಟದ ಜೊತೆಗಿರುವುದು ಲಲಿತ್ ಅವರ ಗೆಲ್ಲುವ ವಿಶ್ವಾಸವನ್ನು ಹೆಚ್ಚಿಸಿದೆ. ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಜೆಡಿಯು ಮತ್ತೆ ಎನ್‌ಡಿಎ ಒಕ್ಕೂಟಕ್ಕೆ ಸೇರಿರುವುದರಿಂದ ಈ ಬಾರಿಯೂ ಗೋಪಾಲ್ ಅವರೇ ಗೆಲ್ಲುತ್ತಾರೆಂಬ ವಿಶ್ವಾಸ ಬಿಜೆಪಿ ಮುಖಂಡರಲ್ಲಿದೆ. ಮೊಹಮ್ಮದ್ ಶಮ್ಸ್ ತಬ್ರೇಜ್ ಎಂಬುವವರು ಈ ಕ್ಷೇತ್ರದಿಂದ ಪಕ್ಷೇತರರಾಗಿ ಸ್ಪರ್ಧಿಸುತ್ತಿದ್ದಾರೆ. ಮುಸ್ಲಿಂ ಪ್ರಾಬಲ್ಯವಿರುವ ಈ ಕ್ಷೇತ್ರದಿಂದ ತಬ್ರೇಜ್ ಅವರು ಸ್ಪರ್ಧಿಸುತ್ತಿರುವುದರಿಂದ ಆರ್‌ಜೆಡಿಯ ಮತಗಳು ವಿಭಜನೆಗೊಂಡು ಬಿಜೆಪಿ ಅಭ್ಯರ್ಥಿಗೆ ಅನುಕೂಲವಾಗಲಿದೆ ಎಂದು ರಾಜಕೀಯ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

ಮುಖಾಮುಖಿ

ಕನೌಜ್ (ಉತ್ತರ ಪ್ರದೇಶ)

ಅಖಿಲೇಶ್ ಯಾದವ್
(ಸಮಾಜವಾದಿ ಪಕ್ಷ)

ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ಮುಲಾಯಂ ಸಿಂಗ್ ಯಾದವ್ ಅವರ ಕುಟುಂಬದ ಪ್ರಭಾವವಿರುವ ಕನೌಜ್ ಲೋಕಸಭಾ ಕ್ಷೇತ್ರದಿಂದ ಈ ಬಾರಿ ಅವರ ಪುತ್ರ ಹಾಗೂ ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಅವರೇ ಕಣಕ್ಕಿಳಿದಿದ್ದಾರೆ. ಕಳೆದ ಚುನಾವಣೆಯಲ್ಲಿ ಅಖಿಲೇಶ್ ಅವರ ಪತ್ನಿ ಡಿಂಪಲ್ ಯಾದವ್ ಅವರು ಸ್ಪರ್ಧಿಸಿ ಪರಾಭವಗೊಂಡಿದ್ದರು. ಈ ಕ್ಷೇತ್ರಕ್ಕೆ ಸಮಾಜವಾದಿ ಪಕ್ಷವು ತೇಜ್ ಪ್ರತಾಪ್ ಯಾದವ್ ಅವರ ಹೆಸರನ್ನು ಆರಂಭದಲ್ಲಿ ಘೋಷಿಸಿತ್ತು. ಬಳಿಕ ಅವರನ್ನು ಬದಲಿಸಿ ಅಖಿಲೇಶ್ ಅವರೇ ಕಣಕ್ಕಿಳಿದಿದ್ದಾರೆ. ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ಅಖಿಲೇಶ್ ಅವರು ಈ ಕ್ಷೇತ್ರದಿಂದ ಎರಡು ಬಾರಿ ಲೋಕಸಭೆಗೆ ಆಯ್ಕೆಯಾಗಿದ್ದರು. ಮುಲಾಯಂ ಸಿಂಗ್ ಅವರು ಕೂಡ ಕ್ಷೇತ್ರವನ್ನು ಪ್ರತಿನಿಧಿಸಿದ್ದರು. ಡಿಂಪಲ್ ಅವರೂ ಎರಡು ಬಾರಿ ಇಲ್ಲಿಂದ ಲೋಕಸಭೆಗೆ ಆಯ್ಕೆಯಾಗಿದ್ದರು.

V/S

ಸುಬ್ರತ್ ಪಾಠಕ್
(ಬಿಜೆಪಿ)

ಕನೌಜ್ ಕ್ಷೇತ್ರದಿಂದ ಕಳೆದ ಬಾರಿ ಲೋಕಸಭೆಗೆ ಆಯ್ಕೆಯಾಗಿದ್ದ ಸುಬ್ರತ್ ಪಾಠಕ್ ಅವರನ್ನು ಬಿಜೆಪಿಯು ಈ ಬಾರಿಯೂ ಅಖಾಡಕ್ಕಿಳಿಸಿದೆ. 2019ರ ಚುನಾವಣೆಯಲ್ಲಿ ಸುಬ್ರತ್ ಅವರು, 12,353 ಮತಗಳ ಅಂತರದಿಂದ ಡಿಂಪಲ್ ಯಾದವ್ ಅವರನ್ನು ಪರಾಭವಗೊಳಿಸಿದ್ದರು. ಇವರು ಪಕ್ಷದ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿಯೂ ಹೌದು. 2014ರ ಚುನಾವಣೆಯಲ್ಲಿ ಇವರು ಈ ಕ್ಷೇತ್ರದಿಂದ ಡಿಂಪಲ್ ಅವರ ವಿರುದ್ಧ ಸ್ಪರ್ಧಿಸಿ ಸೋತಿದ್ದರು. ರಾಜ್ಯದ ಆಡಳಿತಾರೂಢ ಪಕ್ಷದ ಅಭಿವೃದ್ಧಿ ಕಾರ್ಯಗಳನ್ನು ಹಾಗೂ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ನಿರ್ಧಾರಗಳನ್ನು ಜನರ ಮುಂದಿರಿಸಿ ಸುಬ್ರತ್ ಅವರು ಮತಯಾಚಿಸುತ್ತಿದ್ದಾರೆ. ಬಿಎಸ್‌ಪಿ ಈ ಕ್ಷೇತ್ರದಿಂದ ಇಮ್ರಾನ್ ಬಿನ್ ಜಾಫರ್ ಅವರನ್ನು ಸ್ಪರ್ಧೆಗಿಳಿಸಿದೆ.

ಗೋಲ್ಡ್ ಸ್ಕೀಂ ಲಾಭವೋ ನಷ್ಟವೋ?

ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ಭಾರತೀಯರಿಗೆ ಚಿನ್ನದ ಮೇಲೆ ಹೆಚ್ಚು ವ್ಯಾಮೋಹ. ಬಂಗಾರ ಖರೀದಿಯಲ್ಲಿ ಭಾರತವು ವಿಶ್ವದಲ್ಲೇ ಅತಿಹೆಚ್ಚು ಗ್ರಾಹಕರನ್ನು ಹೊಂದಿರುವ ಎರಡನೇ ರಾಷ್ಟ್ರವಾಗಿದೆ. ದೇಶದ ಮಹಿಳೆಯರ ಬಳಿ ಸುಮಾರು 25,000 ಟನ್‌ನಷ್ಟು ಬಂಗಾರವಿದೆ. ಸರಸುಮಾರು 2.27 ಕೋಟಿ ಕೆ.ಜಿ. ಚಿನ್ನಾಭರಣ ಹೊಂದಿದ್ದಾರೆ.

ಜಗತ್ತಿನಲ್ಲಿರುವ ಶೇ 11ರಷ್ಟು ಚಿನ್ನ ಭಾರತೀಯ ಮಹಿಳೆಯರ ಬಳಿಯೇ ಇದೆ. ಅಮೆರಿಕ, ಸ್ವಿಟ್ಜರ್ಲೆಂಡ್, ಜರ್ಮನಿ ಮತ್ತು ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳು ಒಟ್ಟಾಗಿ ಹೊಂದಿರುವ ಚಿನ್ನದ ಪ್ರಮಾಣಕ್ಕಿಂತ ದೇಶದ ಮಹಿಳಾ ಮಣಿಗಳು ಹೊಂದಿರುವ ಹೊನ್ನಿನ ಪ್ರಮಾಣವೇ ಜಾಸ್ತಿ ಇದೆ.

ಹಬ್ಬ, ಮದುವೆ ಸಮಾರಂಭಗಳು ಬಂದರಂತೂ ಮಹಿಳೆಯರು ನಾ ಮುಂದು ತಾ ಮುಂದು ಅಂತ ಚಿನ್ನದ ಖರೀದಿಗೆ ನಿಲ್ಲುತ್ತಾರೆ. ಪ್ರತಿವರ್ಷ ಆಭರಣ ಖರೀದಿ ಮಾಡಲೇಬೇಕು ಎಂದು ಅನೇಕರು ಗೋಲ್ಡ್ ಸ್ಕೀಂಗೆ ಮೊರೆ ಹೋಗುತ್ತಾರೆ. ಹಲವು ದಶಕಗಳಿಂದ ದೇಶದಲ್ಲಿ ಆಭರಣ ಚಿನ್ನದ ಮಳಿಗೆಗಳ ಹೂಡಿಕೆ ಸ್ಕೀಂಗಳು ಚಾಲ್ತಿಯಲ್ಲಿವೆ.

ಆದರೆ, ಅಸಲಿಗೆ ಈ ಗೋಲ್ಡ್ ಸ್ಕೀಂಗಳಿಂದ ಲಾಭವಿದೆಯೇ? ಪ್ರತಿ ತಿಂಗಳ ಉಳಿತಾಯದ ಹಣವನ್ನು ಗೋಲ್ಡ್ ಸ್ಕೀಂಗೆ ಕಟ್ಟಿ ಬಂಗಾರ ಖರೀದಿಸುವುದು ಸರಿಯಾದ ಕ್ರಮವೇ? ಬನ್ನಿ ಈ ಬಗ್ಗೆ ವಿವರವಾಗಿ ಅವಲೋಕನ ಮಾಡೋಣ.

ಗೋಲ್ಡ್ ಸ್ಕೀಂ ಲೆಕ್ಕಾಚಾರ ಹೇಗಿರುತ್ತದೆ?: ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ದೇಶದ ಯಾವುದೇ ಭಾಗಕ್ಕೆ ಹೋದರೂ ಅಲ್ಲಿನ ಆಭರಣ ಅಂಗಡಿಗಳಲ್ಲಿ ಗೋಲ್ಡ್ ಸ್ಕೀಂ ಕೊಡುವುದನ್ನು ನೋಡಬಹುದು. ಪ್ರತಿ ತಿಂಗಳು ನಿರ್ದಿಷ್ಟ ಮೊತ್ತವನ್ನು ನಿಯಮಿತವಾಗಿ ಚಿನ್ನದ ಖರೀದಿಗೆ ಪಾವತಿಸುತ್ತಾ ಹೋಗುವುದೇ ಗೋಲ್ಡ್ ಸ್ಕೀಂ.

ಸಾಮಾನ್ಯವಾಗಿ ಆಭರಣ ಮಳಿಗೆಗಳಲ್ಲಿ 10ರಿಂದ 12 ತಿಂಗಳ ಅವಧಿಗೆ ಗೋಲ್ಡ್ ಸ್ಕೀಂಗಳು ಇರುತ್ತವೆ. ₹1 ಸಾವಿರ, ₹2 ಸಾವಿರ, ₹5 ಸಾವಿರ, ₹10 ಸಾವಿರ, ₹20 ಸಾವಿರ, ₹30 ಸಾವಿರ ಹೀಗೆ ನಿಮ್ಮ ಅನುಕೂಲಕ್ಕೆ ತಕ್ಕಂತೆ ನಿಗದಿತ ಮೊತ್ತವನ್ನು ಪ್ರತಿ ತಿಂಗಳು ಕಟ್ಟಲು ಇಲ್ಲಿ ಅವಕಾಶ ಇರುತ್ತದೆ.

ಗೋಲ್ಡ್ ಸ್ಕೀಂನ ಕೊನೆಯ ಕಂತನ್ನು ಚಿನ್ನದ ಅಂಗಡಿಯವರು ಸೇರಿಸುತ್ತಾರೆ. ಎಲ್ಲ ಕಂತು ಕಟ್ಟಿದ ಮೇಲೆ ಅದೇ ಅಂಗಡಿಯಲ್ಲಿ ಆಭರಣ ಖರೀದಿಸಬೇಕಾಗುತ್ತದೆ. ಆದರೆ, ವಿಷಯ ಏನು ಗೊತ್ತೆ? ನೀವು ಚಿನ್ನ ಕೊಳ್ಳುವುದು ಅಂದಿನ ಮಾರುಕಟ್ಟೆ ಬೆಲೆಯಲ್ಲಿ. ಗೋಲ್ಡ್ ಸ್ಕೀಂನ ಕಂತು ಕಟ್ಟಿದಾಗ ಇದ್ದ ಬೆಲೆಗೆ ಅಂಗಡಿಯವರು ಚಿನ್ನ ಕೊಡುವುದಿಲ್ಲ.

ಖರೀದಿಯ ದಿನ ಬಂಗಾರದ ಬೆಲೆ ಹೆಚ್ಚಳ ಅಥವಾ ಕಡಿಮೆ ಇರಲಿ ಅದು ಅನ್ವಯವಾಗುತ್ತದೆ. ನಿಮಗೆ ಗೊತ್ತಿರಲಿ, ಸಾಮಾನ್ಯವಾಗಿ ಒಂದು ವರ್ಷದ ಅವಧಿಯಲ್ಲಿ ಚಿನ್ನದ ಬೆಲೆ ಏರಿಕೆಯಾಗುವುದೇ ಹೊರತು ಇಳಿಕೆಯಾಗುವ ಸಾಧ್ಯತೆ ತೀರಾ ಕಡಿಮೆ.

ಉದಾಹರಣೆಗೆ 2023ರಲ್ಲಿ 24 ಕ್ಯಾರಟ್ 10 ಗ್ರಾಂ ಚಿನ್ನದ ಬೆಲೆ ₹65,330 ಆಸುಪಾಸಿನಲ್ಲಿತ್ತು. ಈಗ ₹73,000 ಸುತ್ತಮುತ್ತ ಇದೆ. ಹೀಗೆ ಚಿನ್ನದ ಬೆಲೆ ನಿರಂತರವಾಗಿ ಏರಿಕೆಯಾಗುವುದರಿಂದ ಗೋಲ್ಡ್ ಸ್ಕೀಂ ಕಟ್ಟಿದವರಿಗೆ ಲಾಭವಾಗುವ ಸಾಧ್ಯತೆ ತೀರಾ ಕಡಿಮೆ.

ಗೋಲ್ಡ್ ಸ್ಕೀಂಗಳಲ್ಲಿ ಚಿನ್ನದ ನಾಣ್ಯ ಅಥವಾ ಗಿಫ್ಟ್ ವೋಚರ್ ಕೊಡಲು ಆಭರಣ ಮಳಿಗೆಗಳು ಒಪ್ಪುವುದಿಲ್ಲ. ಅವರ ಬಳಿ ಚಿನ್ನ ಖರೀದಿಸುವುದಿಲ್ಲ ಎಂದರೆ ಕಟ್ಟಿರುವ ಹಣವನ್ನು ಮರಳಿಸುವುದಿಲ್ಲ. ಹಾಗಾಗಿ, ಅನಿವಾರ್ಯವಾಗಿ ಅಲ್ಲಿಯೇ ಚಿನ್ನ ಕೊಳ್ಳಬೇಕಾಗುತ್ತದೆ.

ಬಂಗಾರದ ಖರೀದಿ ವೇಳೆ ಮೇಕಿಂಗ್ ಶುಲ್ಕವೆಂದು ಶೇ15ರಿಂದ ಶೇ25ರವರೆಗೂ ಶುಲ್ಕ ವಿಧಿಸಲಾಗುತ್ತದೆ. ಇನ್ನು ಚಿನ್ನದ ಸ್ಕೀಂಗಳಲ್ಲಿ ಮೋಸವಾದರೆ, ಕಟ್ಟಿದ ಹಣವನ್ನು ಆಭರಣ ಮಳಿಗೆಯವರು ವಾಪಸ್ ಕೊಡದಿದ್ದರೆ ಅದನ್ನು ನಿಯಂತ್ರಿಸಲು ಯಾವುದೇ ಸಂಸ್ಥೆಗಳಿಲ್ಲ. ಹೀಗಿರುವಾಗ ದೂರು ನೀಡಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದು ಕಷ್ಟವಾಗುತ್ತದೆ.

ಸಾರಾಂಶ: ಆಭರಣ ಚಿನ್ನ ಖರೀದಿಗೆ ಶಿಸ್ತುಬದ್ಧವಾಗಿ ಹಣ ಉಳಿತಾಯ ಮಾಡಲಷ್ಟೇ ಗೋಲ್ಡ್ ಸ್ಕೀಂಗಳು ನೆರವಾಗುತ್ತವೆ. ಕೆಲ ಗೋಲ್ಡ್ ಸ್ಕೀಂಗಳಲ್ಲಿ ಪ್ರತಿ ಕಂತಿನ ಹಣ ಸಂದಾಯವಾದಾಗಲೂ ಆ ದಿನದ ಚಿನ್ನದ ಬೆಲೆ ಆಧರಿಸಿ ಅಷ್ಟು ಮೌಲ್ಯದ ಚಿನ್ನವನ್ನು ಫಲಾನುಭವಿಯ ಖಾತೆಗೆ ಸೇರಿಸಲಾಗುತ್ತದೆ ಮತ್ತು ಸ್ಕೀಂನಲ್ಲಿ ಇರುವವರಿಗೆ ಮೇಕಿಂಗ್ ಶುಲ್ಕ ಇರುವುದಿಲ್ಲ. ಇಂತಹ ಗೋಲ್ಡ್ ಸ್ಕೀಂಗಳಿಂದ ಸ್ವಲ್ಪ ಅನುಕೂಲವಾಗಬಹುದು.

ಒಟ್ಟಾರೆಯಾಗಿ ನೋಡಿದಾಗ ಬಂಗಾರದ ಮೇಲೆ ಹೂಡಿಕೆ ಮಾಡುತ್ತಿದ್ದೇವೆ ಎಂದುಕೊಂಡು ಗೋಲ್ಡ್ ಸ್ಕೀಂಗಳಲ್ಲಿ ಹಣ ತೊಡಗಿಸಿದರೆ ಯಾವುದೇ ಪ್ರಯೋಜನವಿಲ್ಲ. ಯಾಕೆಂದರೆ ಘನ ರೂಪದ ಚಿನ್ನ ಖರೀದಿ ಹೂಡಿಕೆಯಲ್ಲ. ಹೂಡಿಕೆ ಮಾಡಬೇಕಾದವರು ಸಾವರಿನ್ ಗೋಲ್ಡ್, ಗೋಲ್ಡ್ ಮ್ಯೂಚುಯಲ್ ಫಂಡ್, ಗೋಲ್ಡ್ ಇಟಿಎಫ್‌ಗಳನ್ನು ಪರಿಗಣಿಸುವುದು ಹೆಚ್ಚು ಅನುಕೂಲಕರ.

(ಲೇಖಕ: ಚಾರ್ಟರ್ಡ್ ಅಕೌಂಟೆಂಟ್)

ಉತ್ತಮ ಗಳಿಕೆ ದಾಖಲಿಸಿದ ಸೂಚ್ಯಂಕಗಳು

ಷೇರುಪೇಟೆ

ಏಪ್ರಿಲ್ 26ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಉತ್ತಮ ಗಳಿಕೆ ದಾಖಲಿಸಿವೆ.

73,730 ಅಂಶಗಳಲ್ಲಿ ವಹಿವಾಟು ಮುಗಿಸಿದ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 1ರಷ್ಟು ಗಳಿಸಿಕೊಂಡಿದೆ. 22,419ರಲ್ಲಿ ವಹಿವಾಟು ಪೂರ್ಣಗೊಳಿಸಿದ ನಿಫ್ಟಿ ಶೇ 1.25ರಷ್ಟು ಜಿಗಿದಿದೆ. ಕಂಪನಿಗಳ ತ್ರೈಮಾಸಿಕ ಸಾಧನೆ ವರದಿಯಲ್ಲಿ ಉತ್ತಮ ಫಲಿತಾಂಶ, ಇಸ್ರೇಲ್– ಇರಾನ್ ನಡುವಿನ ಬಿಕ್ಕಟ್ಟು ಶಮನಗೊಳ್ಳುವ ಸೂಚನೆ ಸೇರಿ ಹಲವು ಅಂಶಗಳು ಷೇರುಪೇಟೆ ಪುಟಿದೇಳಲು ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ಎಲ್ಲಾ 12 ವಲಯಗಳೂ ಹೆಚ್ಚಳ ಕಂಡಿವೆ. ನಿಫ್ಟಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 6.63, ರಿಯಲ್ ಎಸ್ಟೇಟ್ ಶೇ 4.62, ಲೋಹ ಶೇ 3.66, ಫಾರ್ಮಾ ಶೇ 5.51, ವಾಹನ ಸೂಚ್ಯಂಕ ಶೇ 2.47, ಎಫ್‌ಎಂಸಿಜಿ ಶೇ 2.35, ಮಾಧ್ಯಮ ಸೂಚ್ಯಂಕ ಶೇ 2.31, ಎನರ್ಜಿ ಶೇ 1.64, ಅನಿಲ ಮತ್ತು ತೈಲ ಶೇ 1.56, ಬ್ಯಾಂಕ್ ಸೂಚ್ಯಂಕ ಶೇ 1.51, ಮಾಹಿತಿ ತಂತ್ರಜ್ಞಾನ ಸೂಚ್ಯಂಕ ಶೇ 1.03 ಮತ್ತು ನಿಫ್ಟಿ ಫೈನಾನ್ಸ್ ಶೇ 1ರಷ್ಟು ಜಿಗಿದಿವೆ.

ಗಳಿಕೆ– ಇಳಿಕೆ: ವಾರದ ಅವಧಿಯಲ್ಲಿ ನಿಫ್ಟಿಯಲ್ಲಿ ಎಕ್ಸಿಸ್ ಬ್ಯಾಂಕ್ ಗರಿಷ್ಠ ಶೇ 9.39ರಷ್ಟು ಗಳಿಕೆ ಕಂಡಿದೆ. ಡಿವೀಸ್ ಲ್ಯಾಬೊರೇಟರೀಸ್ ಶೇ 9.39, ಟೆಕ್ ಮಹೀಂದ್ರ ಶೇ 7.13ರಷ್ಟು ಜಿಗಿದಿವೆ.

ಕೋಟಕ್ ಮಹೀಂದ್ರ ಶೇ 10.27ರಷ್ಟು ಕುಸಿತ ಕಂಡಿದ್ದರೆ, ಬಜಾಜ್ ಫೈನಾನ್ಸ್ ಶೇ 7.73ರಷ್ಟು ತಗ್ಗಿದೆ.

ಮುನ್ನೋಟ: ಈ ವಾರ ಅಲ್ಟ್ರಾ ಟೆಕ್ ಸಿಮೆಂಟ್, ಟ್ರೆಂಟ್, ಯುಕೊ ಬ್ಯಾಂಕ್, ಟಾಟಾ ಕೆಮಿಕಲ್ಸ್, ಜಿಲೆಟ್ ಇಂಡಿಯಾ, ಪಿಎನ್‌ಬಿ ಹೌಸಿಂಗ್ ಫೈನಾನ್ಸ್, ಕೆ ಫಿನ್ ಟೆಕ್ನಾಲಜೀಸ್, ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್, ಆರ್‌ಇಸಿ, ಇಂಡಿಯನ್ ಆಯಿಲ್ ಕಾರ್ಪೊರೇಷನ್, ಹ್ಯಾವೆಲ್ಸ್ ಇಂಡಿಯಾ, ಅದಾನಿ ಟೋಟಲ್ ಗ್ಯಾಸ್, ಎಕ್ಸೈಡ್ ಇಂಡಸ್ಟ್ರೀಸ್, ಸಿಂಫನಿ, ಅದಾನಿ ಎನರ್ಜಿ ಸಲ್ಯೂಷನ್ಸ್, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ, ಅದಾನಿ ಪವರ್, ಅದಾನಿ ವಿಲ್ಮಾರ್, ಗ್ರೀನ್ ಪ್ಯಾನಲ್ ಇಂಡಸ್ಟ್ರೀಸ್, ಕೋಲ್ ಇಂಡಿಯಾ, ಫೆಡರಲ್ ಬ್ಯಾಂಕ್, ಕೆಇಐ ಇಂಡಸ್ಟ್ರೀಸ್, ಡಾಬರ್ ಇಂಡಿಯಾ, ಸಿಯೆಟ್, ಟೈಟನ್, ಎಂಆರ್‌ಎಫ್, ರೇಮಂಡ್, ಕೋಟಕ್ ಮಹೀಂದ್ರ ಬ್ಯಾಂಕ್, ಸಿಡಿಎಸ್‌ಎಲ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ.

ತ್ರೈಮಾಸಿಕ ವರದಿಗಳು ಹಾಗೂ ಜಾಗತಿಕ ವಿದ್ಯಮಾನಗಳು ಷೇರುಪೇಟೆಯ ಮೇಲೆ ಪರಿಣಾಮ ಬೀರಲಿವೆ.

ಚೀನಾಕ್ಕೆ ಮಸ್ಕ್ ಅಚ್ಚರಿ ಭೇಟಿ

ಸ್ವಯಂಚಾಲಿತ ವಾಹನ ತಂತ್ರಜ್ಞಾನ ಪರಿಚಯ ಸಾಧ್ಯತೆ?

ಇಲಾನ್ ಮಸ್ಕ್

ಬೀಜಿಂಗ್ (ಪಿಟಿಐ): ಭಾರತಕ್ಕೆ ಭೇಟಿ ರದ್ದುಪಡಿಸಿದ ಬೆನ್ನಲ್ಲೇ ಅಮೆರಿಕದ ಟೆಸ್ಲಾ ಕಂಪನಿ ಅಧ್ಯಕ್ಷ ಇಲಾನ್ ಮಸ್ಕ್ ಅವರು, ಭಾನುವಾರ ಚೀನಾಕ್ಕೆ ಭೇಟಿ ನೀಡಿರುವುದು ಅಚ್ಚರಿ ಮೂಡಿಸಿದೆ.

ಎಲೆಕ್ಟ್ರಿಕ್ ಕಾರು ತಯಾರಿಕೆಯಲ್ಲಿ ಚೀನಾವು ಜಾಗತಿಕ ಮಟ್ಟದಲ್ಲಿ ಎರಡನೇ ಅತಿದೊಡ್ಡ ಮಾರುಕಟ್ಟೆಯಾಗಿದೆ. ಇಲ್ಲಿನ ವಾಹನ ಮಾರುಕಟ್ಟೆಯಲ್ಲಿ ಟೆಸ್ಲಾ ಕಂಪನಿಯು ತನ್ನ ಸಂಪೂರ್ಣ ಸ್ವಯಂಚಾಲಿತ ವಾಹನ ತಂತ್ರಜ್ಞಾನವನ್ನು ಪರಿಚಯಿಸುವ ಸಾಧ್ಯತೆಯಿದೆ. ಹಾಗಾಗಿ, ಮಸ್ಕ್ ಭೇಟಿ ನೀಡಿದ್ದಾರೆ ಎಂದು ಹೇಳಲಾಗಿದೆ.

ಭವಿಷ್ಯದಲ್ಲಿ ತನ್ನ ಕಂಪನಿಯ ಮಾರುಕಟ್ಟೆ ವಿಸ್ತರಣೆಗೆ ಸಂಬಂಧಿಸಿದಂತೆ ಚೀನಾ ಪ್ರಧಾನಿ ಲೀ ಕಿಯಾಂಗ್ ಅವರೊಟ್ಟಿಗೆ ಮಸ್ಕ್ ಚರ್ಚಿಸಿದ್ದಾರೆ. ಈ ಇಬ್ಬರ ಭೇಟಿ ಬಗ್ಗೆ ಸರ್ಕಾರಿ ಸ್ವಾಮ್ಯದ ಕ್ಸಿನ್ಹುವಾ ನ್ಯೂಸ್ ಏಜೆನ್ಸಿ ವರದಿ ಮಾಡಿದೆ.

ಅಂತರರಾಷ್ಟ್ರೀಯ ವ್ಯಾಪಾರಕ್ಕೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಚೀನಾದ ಆಹ್ವಾನದ ಮೇರೆಗೆ ಮಸ್ಕ್ ಭೇಟಿ ನೀಡಿದ್ದಾರೆ. ಚೀನಾ ಕೌನ್ಸಿಲ್ ಫಾರ್ ದಿ ಪ್ರಮೋಷನ್ ಆಫ್ ಇಂಟರ್ ನ್ಯಾಷನಲ್ ಟ್ರೇಡ್ (ಸಿಸಿಪಿಐಟಿ) ಅಧ್ಯಕ್ಷ ರೆನ್ ಹಾಂಗ್ಬಿನ್ ಅವರೊಟ್ಟಿಗೆ ಚರ್ಚಿಸಲಿದ್ದಾರೆ ಎಂದು ಹೇಳಲಾಗಿದೆ.

ಸದ್ಯ ಅಲ್ಲಿ ಬೀಜಿಂಗ್ ಆಟೊ ಶೋ ಆರಂಭವಾಗಿದೆ. ಇದರ ನಡುವೆಯೇ ಮಸ್ಕ್ ಭೇಟಿ ನೀಡಿದ್ದಾರೆ. ಚೀನಾದ ನೀತಿಗಳ ಬಗ್ಗೆ ಅಮೆರಿಕದಲ್ಲಿ ಕಳವಳ ವ್ಯಕ್ತವಾಗುತ್ತಿರುವ ನಡುವೆಯೇ ಅವರಿಗೆ ಕೆಂಪು ಹಾಸಿಗೆಯ ಸ್ವಾಗತ ಸಿಕ್ಕಿದೆ.

ನಿರ್ಬಂಧ ತೆರವಿಗೆ ಮನವಿ: ಸರ್ಕಾರಿ ಕಟ್ಟಡಗಳು ಸೇರಿ ಕೆಲವು ಪ್ರದೇಶಗಳಲ್ಲಿ ಟೆಸ್ಲಾ ಕಾರುಗಳಿಗೆ ಪ್ರವೇಶ ನಿರ್ಬಂಧಿಸಲಾಗಿದೆ. ಇದನ್ನು ತೆರವುಗೊಳಿಸುವ ಬಗ್ಗೆ ಮಸ್ಕ್, ಹಿರಿಯ ಅಧಿಕಾರಿಗಳೊಟ್ಟಿಗೆ ಚರ್ಚಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಟೆಸ್ಲಾ ಕಾರು ಮಾರಾಟ ಕುಸಿತ

ಭಾರತದಲ್ಲಿ ಟೆಸ್ಲಾ ಕಂಪನಿಯು ತನ್ನ ಘಟಕ ಸ್ಥಾಪಿಸಲು ನಿರ್ಧರಿಸಿದೆ. ಹಾಗಾಗಿ, ಏಪ್ರಿಲ್ 22ರಂದು ಮಸ್ಕ್ ಭಾರತಕ್ಕೆ ಭೇಟಿ ನೀಡಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಲಿದ್ದಾರೆ ಎಂದು ವರದಿಯಾಗಿತ್ತು. ಈ ಬಗ್ಗೆ ಮಸ್ಕ್ ಕೂಡ 'ಎಕ್ಸ್'ನಲ್ಲಿ ಖಚಿತಪಡಿಸಿದ್ದರು. ಕೊನೆಯ ಕ್ಷಣದಲ್ಲಿ ಅವರ ಭಾರತ ಪ್ರವಾಸ ರದ್ದಾಯಿತು.

ಚೀನಾದಲ್ಲಿ ಸ್ಥಳೀಯ ಕಂಪನಿಗಳು ಟೆಸ್ಲಾಗೆ ಸವಾಲೊಡ್ಡಿವೆ. ಹಾಗಾಗಿ, ಮಾರುಕಟ್ಟೆಯನ್ನು ಬಲಪಡಿಸುವ ಉದ್ದೇಶದಿಂದ ಅಲ್ಲಿಗೆ ಭೇಟಿ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕಳೆದ ಕೆಲವು ವರ್ಷಗಳಿಂದ ಚೀನಿ ಮಾರುಕಟ್ಟೆಯಲ್ಲಿ ಟೆಸ್ಲಾ ಸಾಕಷ್ಟು ಸವಾಲುಗಳನ್ನು ಎದುರಿಸುತ್ತಿದೆ. ಕಾರುಗಳ ಮಾರಾಟದಲ್ಲಿ ಕುಸಿತ ಕಂಡಿದೆ. ಹಾಗಾಗಿ, ಮಾರುಕಟ್ಟೆಯಲ್ಲಿ ಮುಂಚೂಣಿ ಸ್ಥಾನ ಕಾಯ್ದುಕೊಳ್ಳಲು ಶೇ 6ರಷ್ಟು ಮಾರಾಟ ದರವನ್ನು ಕಡಿತಗೊಳಿಸಿದೆ.

ಕಳೆದ ವರ್ಷ 3ಎಸ್ ಮತ್ತು ವೈಎಸ್ ಮಾದರಿಯ 6.03 ಲಕ್ಷ ಕಾರುಗಳನ್ನು ಮಾರಾಟ ಮಾಡಿದೆ. 2012ರಲ್ಲಿ ಅಲ್ಲಿನ ಮಾರುಕಟ್ಟೆ ಪ್ರವೇಶಿಸಿದ್ದ ಟೆಸ್ಲಾ, ಇಲ್ಲಿಯವರೆಗೆ 17 ಲಕ್ಷ ಕಾರುಗಳನ್ನು ಮಾರಾಟ ಮಾಡಿದೆ.

ಅನುಮಾನಾಸ್ಪದ ವ್ಯವಹಾರದ ಮೇಲೆ ನಿಗಾವಹಿಸಿ: ಎಫ್‌ಐಯು

ನವದೆಹಲಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ಮತ್ತು ಭಯೋತ್ಪಾದನೆಗೆ ಹಣಕಾಸಿನ ನೆರವು ನೀಡುವಂತಹ ಕೃತ್ಯಗಳಿಗೆ ಕಡಿವಾಣ ಹಾಕುವ ದೃಷ್ಟಿಯಿಂದ ಬಂಡವಾಳ ಮಾರುಕಟ್ಟೆಗಳಲ್ಲಿ ನಡೆಯುವ ಅನುಮಾನಾಸ್ಪದ ವ್ಯವಹಾರದ ಮೇಲೆ ಹಣಕಾಸು ಸಂಸ್ಥೆಗಳು ನಿಗಾವಹಿಸಬೇಕಿದೆ ಎಂದು ದೇಶದ ಹಣಕಾಸು ಗುಪ್ತಚರ ಘಟಕ (ಎಫ್‌ಐಯು) ಸೂಚನೆ ನೀಡಿದೆ.

ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ ಈ ಹೊಸ ಮಾರ್ಗಸೂಚಿ ಪ್ರಕಟಿಸಿದೆ.

ಬಂಡವಾಳ ಮಾರುಕಟ್ಟೆಗಳು, ವಿಮಾ ಕಂಪನಿಗಳು, ಆನ್‌ಲೈನ್ ಪೇಮೆಂಟ್ ಕಂಪನಿಗಳು ಮತ್ತು ಕ್ರಿಪ್ಟೊ ಕರೆನ್ಸಿ ಸೇವೆ ಒದಗಿಸುವವರು, ಸಂಶಯವಾಗಿ ನಡೆಯುವ ವ್ಯವಹಾರವನ್ನು ಕೂಲಂಕಷವಾಗಿ ಪರಿಶೀಲಿಸಬೇಕು ಎಂದು ಹೇಳಿದೆ.

ದೇಶದ ಹಿತದೃಷ್ಟಿಯಿಂದ ಇಂತಹ ಕೃತ್ಯಗಳಿಗೆ ಕಡಿವಾಣ ಹಾಕಬೇಕಿದೆ. ಹಾಗಾಗಿ, ಹಣಕಾಸು ಸಂಸ್ಥೆಗಳು ಮತ್ತು ಮಧ್ಯಸ್ಥಿಕೆದಾರರು, ಶಂಕಾಸ್ಪದ ವ್ಯವಹಾರಗಳ ಬಗ್ಗೆ ವರದಿ ಸಲ್ಲಿಸುವುದು ಕಡ್ಡಾಯ. ಇಂತಹ ವರದಿಗಳ ವಿಶ್ಲೇಷಣೆ ಮೂಲಕ ದೇಶದ ತನಿಖಾ ಸಂಸ್ಥೆಗಳು ಪರಿಶೀಲನೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮಕೈಗೊಳ್ಳಲು ಅನುಕೂಲವಾಗಲಿದೆ ಎಂದು ಹೇಳಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹435
12 ಕ್ಕೆ	₹60
ಮೈಸೂರು	
100ಕ್ಕೆ	₹438

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹288-465

ದ್ವಿತಳಿ (ಬಿ.ವಿ) ₹200-547

₹7 ಲಕ್ಷ ಕೋಟಿ ದಾಟಿದ ಎಸ್‌ಬಿಐ ಎಂ–ಕ್ಯಾಪ್

ನವದೆಹಲಿ (ಪಿಟಿಐ): ಕಳೆದ ವಾರದ ಷೇರು ವಹಿವಾಟಿನಲ್ಲಿ ದೇಶದ ಪ್ರಮುಖ 10 ಕಂಪನಿ ಗಳ ಪೈಕಿ ಆರು ಕಂಪನಿಗಳ ಮಾರುಕಟ್ಟೆ ಮೌಲ್ಯ (ಎಂ–ಕ್ಯಾಪ್) ₹1.30 ಲಕ್ಷ ಕೋಟಿಗೆ ಏರಿಕೆಯಾಗಿದೆ.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ (ಎಸ್‌ಬಿಐ) ಮಾರುಕಟ್ಟೆ ಮೌಲ್ಯಕ್ಕೆ ₹45,158 ಕೋಟಿ ಸೇರ್ಪಡೆಯಾಗಿದೆ. ಬ್ಯಾಂಕ್‌ನ ಒಟ್ಟು ಎಂ–ಕ್ಯಾಪ್ ₹7.15 ಲಕ್ಷ ಕೋಟಿಗೆ ಮುಟ್ಟಿದೆ.

ಐಸಿಐಸಿಐ ಬ್ಯಾಂಕ್ ₹28,726 ಕೋಟಿ, ಭಾರ್ತಿ ಏರ್‌ಟೆಲ್ ₹20,747 ಕೋಟಿ, ಐಟಿಸಿ ₹18,914 ಕೋಟಿ, ಎಲ್‌ಐಸಿ ₹9,487 ಕೋಟಿ ಮತ್ತು ಇನ್ಫೊಸಿಸ್ ಕಂಪನಿಯ ಮಾರುಕಟ್ಟೆ ಮೌಲ್ಯಕ್ಕೆ ₹7,699 ಕೋಟಿ ಸೇರ್ಪಡೆಯಾಗಿದೆ.

ರಿಲಯನ್ಸ್ ಇಂಡಸ್ಟ್ರೀಸ್ ₹26,115 ಕೋಟಿ, ಎಚ್‌ಡಿಎಫ್‌ಸಿ ಬ್ಯಾಂಕ್ ₹16,371 ಕೋಟಿ, ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ ₹5,282 ಕೋಟಿ ಮತ್ತು ಹಿಂದುಸ್ತಾನ್ ಯೂನಿಲಿವರ್ ಕಂಪನಿಯ ಎಂ–ಕ್ಯಾಪ್ ₹2,525 ಕೋಟಿ ಇಳಿಕೆಯಾಗಿದೆ.

ಮಸಾಲೆಯಲ್ಲಿ ಕೀಟನಾಶಕ ಅಂಶವಿಲ್ಲ: ಎಂಡಿಎಚ್

ನವದೆಹಲಿ (ಪಿಟಿಐ): 'ತನ್ನ ಮಸಾಲೆ ಪದಾರ್ಥಗಳಲ್ಲಿ ಯಾವುದೇ ಕೀಟನಾಶಕ ಅಂಶ ಇಲ್ಲ. ಗ್ರಾಹಕರ ಬಳಕೆಗೆ ಶೇ100ರಷ್ಟು ಸುರಕ್ಷಿತವಾಗಿವೆ' ಎಂದು ಎಂಡಿಎಚ್ ಪ್ರೈವೆಟ್ ಲಿಮಿಟೆಡ್ ಸ್ಪಷ್ಟಪಡಿಸಿದೆ.

ಎಂಡಿಎಚ್ ಬ್ರ್ಯಾಂಡ್‌ನ ಮದ್ರಾಸ್ ಕರಿ ಪೌಡರ್, ಸಾಂಬಾರ್ ಮಸಾಲೆ ಮಿಕ್ಸ್ಡ್ ಮಸಾಲೆ ಪೌಡರ್ ಹಾಗೂ ಕರಿ ಪೌಡರ್ ಮಿಕ್ಸ್ಡ್ ಮಸಾಲೆ ಪೌಡರ್‌ನಲ್ಲಿ ಕ್ಯಾನ್ಸರ್‌ಕಾರಕ ಎಥಿಲೀನ್ ಆಕ್ಸೈಡ್ ಅಂಶವಿದೆ ಎಂಬ ಆರೋಪದ ಮೇರೆಗೆ ಹಾಂಗ್‌ಕಾಂಗ್ ಮತ್ತು ಸಿಂಗಪುರದಲ್ಲಿ ಈ ಪದಾರ್ಥಗಳ ಬಳಕೆ ಮತ್ತು ಮಾರಾಟಕ್ಕೆ ನಿಷೇಧ ಹೇರಲಾಗಿದೆ.

'ಆದರೆ, ಈ ಎರಡು ದೇಶಗಳ ಆಹಾರ ಸುರಕ್ಷತೆ ಕೇಂದ್ರಗಳಿಂದ ಕೀಟನಾಶಕ ಅಂಶವಿರುವ ಬಗ್ಗೆ ಯಾವುದೇ ಮಾಹಿತಿ ಸ್ವೀಕರಿಸಿಲ್ಲ. ಈ ಆರೋಪ ಸತ್ಯಕ್ಕೆ ದೂರವಾದುದು. ಇದನ್ನು ಖುಜುವಾತುಪಡಿಸುವಂತಹ ಯಾವುದೇ ಪುರಾವೆಗಳಿಲ್ಲ' ಎಂದು ಕಂಪನಿಯು ಹೇಳಿಕೆಯಲ್ಲಿ ತಿಳಿಸಿದೆ.

ಅಲ್ಲದೆ, ಭಾರತೀಯ ಮಸಾಲೆ ಮಂಡಳಿ ಹಾಗೂ ಭಾರತದ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರಕ್ಕೂ (ಎಫ್‌ಎಸ್‌ಎಸ್‌ಎಐ) ಈ ದೇಶಗಳಿಂದ ಮಾಹಿತಿ ಅಥವಾ ಪರೀಕ್ಷಾ ಮಾದರಿಯ ವರದಿ ಸಲ್ಲಿಕೆಯಾಗಿಲ್ಲ' ಎಂದು ಹೇಳಿದೆ.

'ಮಸಾಲೆ ಸಂಗ್ರಹ, ಸಂಸ್ಕರಣೆ ಅಥವಾ ಪ್ಯಾಕಿಂಗ್ ವೇಳೆ ಕೀಟನಾಶಕ ಬಳಕೆ ಮಾಡುವುದಿಲ್ಲ. ಹಾಗಾಗಿ, ಮಾರಾಟಗಾರರು ಮತ್ತು ಗ್ರಾಹಕರು ಆತಂಕಪಡುವ ಅಗತ್ಯವಿಲ್ಲ' ಎಂದು ಹೇಳಿದೆ.

ದೇಶೀಯ ಮತ್ತು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಆರೋಗ್ಯ ಮತ್ತು ಸುರಕ್ಷತೆಗೆ ಕಂಪನಿಯು ಒತ್ತು ನೀಡಿದೆ. ಗ್ರಾಹಕರಿಗೆ ಗುಣಮಟ್ಟದ ಉತ್ಪನ್ನ ಪೂರೈಸುವುದಕ್ಕೆ ಬದ್ಧವಾಗಿದೆ ಎಂದು ಸ್ಪಷ್ಟಪಡಿಸಿದೆ.

ಇಪ್ಲೇನ್: ಎಲೆಕ್ಟ್ರಿಕ್ ಏರ್ ಟ್ಯಾಕ್ಸಿ ಅಭಿವೃದ್ಧಿ

ನವದೆಹಲಿ: ಮುಂದಿನ ವರ್ಷದ ಮಾರ್ಚ್ ವೇಳೆಗೆ ಎಲೆಕ್ಟ್ರಿಕ್ ಏರ್ ಟ್ಯಾಕ್ಸಿಯನ್ನು ಅಭಿವೃದ್ಧಿಪಡಿಸಲು ಚೆನ್ನೈ ಮೂಲದ ಸ್ಟಾರ್ಟ್‌ಅಪ್ (ನವೋದ್ಯಮ) ಇಪ್ಲೇನ್ ಕಂಪನಿ ನಿರ್ಧರಿಸಿದೆ.

ನಗರ ಪ್ರದೇಶದಲ್ಲಿನ ಸಂಚಾರ ದಟ್ಟಣೆ ತಗ್ಗಿಸುವ ನಿಟ್ಟಿನಲ್ಲಿ ಈ ಟ್ಯಾಕ್ಸಿಯನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ಹೇಳಿದೆ.

'ಎಲೆಕ್ಟ್ರಿಕ್ ವರ್ಟಿಕಲ್ ಟೇಕ್‌ಆಫ್ ಮತ್ತು ಲ್ಯಾಂಡಿಂಗ್ (ಇವಿಟಿಒಎಲ್) ಏರ್‌ಕ್ರಾಫ್ಟ್ ಅನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಮೂರು ಅಥವಾ ನಾಲ್ಕು ಆಸನ ಸಾಮರ್ಥ್ಯ ಇರುವ ಇದನ್ನು ಏರ್ ಆಂಬುಲೆನ್ಸ್ ಆಗಿಯೂ ಮಾರ್ಪಡಿಸಬಹುದಾಗಿದೆ' ಎಂದು ಕಂಪನಿಯ ಸಂಸ್ಥಾಪಕ ಮತ್ತು ಸಿಇಒ ಸತ್ಯ ಚಕ್ರವರ್ತಿ ತಿಳಿಸಿದ್ದಾರೆ.

ಮುಂದಿನ ವರ್ಷದ ಮಾರ್ಚ್ ವೇಳೆಗೆ ಏರ್‌ಕ್ರಾಫ್ಟ್‌ನ ಮೂಲ ಮಾದರಿ ಸಿದ್ಧವಾಗಲಿದೆ. ಬಳಿಕ ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯದ (ಡಿಜಿಸಿಎ) ಪ್ರಮಾಣೀಕರಣ ಕೋರಿ ಅರ್ಜಿ ಸಲ್ಲಿಸಲಾಗುವುದು ಎಂದು ತಿಳಿಸಿದ್ದಾರೆ.

ಕಂಪನಿಯ ವೆಬ್‌ಸೈಟ್‌ನ ಮಾಹಿತಿ ಪ್ರಕಾರ, ಜನರು ಸ್ವಂತ ವಾಹನದಲ್ಲಿ 60 ನಿಮಿಷದಲ್ಲಿ ಕ್ರಮಿಸಬಹುದಾದ ದೂರವನ್ನು ಏರ್‌ಕ್ರಾಫ್ಟ್ ಮೂಲಕ 14 ನಿಮಿಷದಲ್ಲಿ ತಲುಪಬಹುದಾಗಿದೆ. ಅಲ್ಲದೆ, ಕಂಪನಿಯು ಡ್ರೋನ್‌ಗಳನ್ನು ಅಭಿವೃದ್ಧಿಪಡಿಸಿದ್ದು, ಮುಂದಿನ ತಿಂಗಳಿನಿಂದ ಮಾರಾಟ ಆರಂಭವಾಗುವ ನಿರೀಕ್ಷೆಯಿದೆ.

ಪ್ರಾರ್ಥನೆ ಗುರು ತೇಜ್ ಬಹದ್ದೂರ್ ಅವರ ಜಯಂತ್ಯುತ್ಸವದ ಅಂಗವಾಗಿ ಅಮೃತಸರದ ಸ್ವರ್ಣ ಮಂದಿರದಲ್ಲಿ ಭಾನುವಾರ ಸಿಖ್ ಸಮುದಾಯದವರು ಪ್ರಾರ್ಥನೆ ಸಲ್ಲಿಸಿದರು –ಎಎಫ್‌ಪಿ ಚಿತ್ರ

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

ಪ್ರವಾಸ

Travel

★ಶ್ರೀಶ್ರೇಯಸ್ ಟೂರ್ಸ್★ 19.05.2024 12/15/20ದಿನಗಳು ದಿನಗಳು ಈಶಾನ್ಯರಾಜ್ಯಗಳ (ಸೆವೆನ್ ಸಿಸ್ಟರ್ಸ್)ನ 6ರಾಜ್ಯಗಳು ಅಸ್ಸಾಂ,ಅರುಣಾಚಲ ಮೇಘಾಲಯ,ನಾಗಲ್ಯಾಂಡ್, ತ್ರಿಪುರ,ಮಿಝೋರಾಂ, 20.05.2024 10ದಿನಗಳು ಅಖಂಡ ನೇಪಾಳ ರಾಷ್ಟ್ರ (ಮುಕ್ತಿನಾಥ)ಸಹಿತ 4ವಿಮಾನಗಳಲ್ಲಿ (ಕೆಲವೇ ಸೀಟುಗಳು ಲಭ್ಯತೆ), 26.06.2024,15.07.2024 6/12ದಿನಗಳು ಅಮರನಾಥಯಾತ್ರಾ ಸಹಿತ ಲೇ ಲಡಾಕ್,20.07.2024 15ದಿನಗಳು ಅಖಂಡ ಮಧ್ಯಪ್ರದೇಶ ರಾಜ್ಯಪ್ರವಾಸ, 09.09.2024,21.09.2024 12ದಿನಗಳು ಚಾರ್‌ದಾಮ್ ಯಾತ್ರಾ ವಿಶೇಷ, 24.07.2024,20.06.2024, 6ದಿನಗಳು ಭೂತಾನ್ ರಾಷ್ಟ್ರ ಪ್ರವಾಸ.9743351212, 9206979202, 8792319181

05.05.2024ರಿಂದ 25ದಿನಗಳ ಚಾರಧಾಮ್`ಸಮೇತ, ವೈಷ್ಣೋ ದೇವಿ,ಅಮೃತಸರ್`, ಕಾಶಿ, ಅಯೋಧ್ಯ, ಹರಿದ್ವಾರ್, ಆಗ್ರಾ ಇತ್ಯಾದಿ. 01.07.2024 ಮತ್ತು 12.07.2024ರಿಂದ 12ದಿನಗಳು ಅಮರನಾಥ್`ಸಮೇತ ಕಾಶ್ಮೀರ್, ಶ್ರೀನಗರ,ಗುಲ್ಮಾರ್ಗ್, ಅವಂತಿ ಪುರ,ವಾಘಬಾರ್ಡರ್`,ಇತ್ಯಾದಿ. ಏಷ್ಯನ್`ಟ್ರಾವಲ್`ಲೈನ್ಸ್, ನಂ.20,`ಆರ್.ವಿ.ರಸ್ತೆ, ಬೆಂಗಳೂರು-04. 8105657052, 9480182865.

ಉದ್ಯೋಗಾವಕಾಶ

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ,ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-ರಿಂದ 20,000/-. ESI,PF ಸೌಲಭ್ಯವಿರುತ್ತದೆ. ಬೆಂಗಳೂರು-76. ಸಂಪರ್ಕಿಸಿ: 7899235388, 9606385001

Part-Time Jobs

ಮನೆಯಿಂದಲೇ ಕುಳಿತು ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 18,000-20,000/- ವರೆಗೆ,ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 8050064327, 8050064328.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಅಣಬೆ ತರಬೇತಿ ಪಡೆದು ಮನೆಯಿಂದಲೇ ಅಣಬೆ ಬೆಳಸಿ ತಿಂಗಳಿಗೆ 30,000ಕ್ಕೂ ಹೆಚ್ಚು ಸಂಪಾದಿಸಿ ತರಬೇತಿಗಾಗಿ ಬೆಂಗಳೂರು 8095555516 ಶಿವ್ಮೊಗ 8095555517

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಹೆಸರು ಬದಲಾವಣೆ @50/-* PER WORDS
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
*Conditions apply
www.dhclassifieds.com ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
7795158424
9900428036

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಸಂಕ್ಷಿಪ್ತ ಸುದ್ದಿ

ಅಮೆರಿಕ ಡ್ರೋನ್ ಹೊಡೆದುರುಳಿಸಿದ ಹೌಥಿ ಬಂಡುಕೋರರು

ಜೆರುಸಲೇಂ (ಪಿಟಿಐ): 'ಅಮೆರಿಕ ಸೇನೆಯ ಎಂಕ್ಯೂ–9 ರೀಪರ್ ಎಂಬ ಮತ್ತೊಂದು ಡ್ರೋನ್‌ಅನ್ನು ಹೊಡೆದುರುಳಿಸಲಾಗಿದೆ' ಎಂದು ಯೆಮನ್‌ನ ಹೌಥಿ ಬಂಡುಕೋರರು ಶನಿವಾರ ತಿಳಿಸಿದ್ದಾರೆ.

ಡ್ರೋನ್‌ನ ಕೆಲವು ಅವಶೇಷಗಳ ದೃಶ್ಯಗಳನ್ನು ಹೌಥಿ ಬಂಡುಕೋರರು ಪ್ರಸಾರ ಮಾಡಿದ್ದಾರೆ.

'ಸಾದಾ ಪ್ರಾಂತ್ಯದಲ್ಲಿ ಈ ರೀಪರ್ ಡ್ರೋನ್‌ಅನ್ನು ಕ್ಷಿಪಣಿ ಮೂಲಕ ಹೊಡೆದುರುಳಿಸಲಾಗಿದೆ' ಎಂದು ಬಂಡುಕೋರರು ತಿಳಿಸಿದ್ದಾರೆ.

ಅಮೆರಿಕದ ರಕ್ಷಣಾ ಸಚಿವಾಲಯದ ವಕ್ತಾರರೂ ಆಗಿರುವ ವಾಯುಸೇನೆಯ ಲೆಫ್ಟಿನೆಂಟ್ ಕರ್ನಲ್ ಬ್ರೈಯಾನ್ ಜೆ. ಮೆಕ್‌ಗ್ಯಾರಿ ಅವರು, 'ಅಮೆರಿಕ ಸೇನೆಯ ಡ್ರೋನ್‌ಅನ್ನು ಯೆಮನ್‌ನಲ್ಲಿ ಹೊಡೆದುರುಳಿಸಲಾಗಿದೆ' ಎಂಬುದನ್ನು ಶನಿವಾರ ಒಪ್ಪಿ ಕೊಂಡಿದ್ದಾರೆ. ಡ್ರೋನ್ ನಾಶಕ್ಕೆ ಸಂಬಂಧಿಸಿದಂತೆ ತನಿಖೆ ಪ್ರಗತಿಯಲ್ಲಿದೆ ಎಂದು ಹೇಳಿರುವ ಬ್ರೈಯಾನ್ ಅವರು, ಘಟನೆ ಕುರಿತು ಹೆಚ್ಚಿನ ಮಾಹಿತಿಯನ್ನು ಬಹಿರಂಗಪಡಿಸಿಲ್ಲ.

ಪಾಕ್: ವಿದೇಶಿ ಸಂಸ್ಥೆಗಳ ನೇಮಕಾತಿ ನಿಯಮ ಸಡಿಲಿಕೆ

ಇಸ್ಲಾಮಾಬಾದ್ (ಪಿಟಿಐ): ವಿದೇಶಿ ಸಂಸ್ಥೆಗಳನ್ನು ನೇಮಿಸಿಕೊಳ್ಳಲು ಈಗಿರುವ ನಿಯಮಗಳನ್ನು ಪಾಕಿಸ್ತಾನ ಸಚಿವ ಸಂಪುಟ ಸಡಿಲಗೊಳಿಸಿದೆ.

ಕೌಶಲರಹಿತ ಅಧಿಕಾರಿಗಳ ಬದಲು ವಿದೇಶಿ ಪ್ರತಿಭೆಗೆ ಮನ್ನಣೆ ನೀಡುವುದು ಮತ್ತು ವಿವಿಧ ಯೋಜನೆಗಳಿಗೆ ಕೊಲ್ಲಿ ಮತ್ತು ಇತರೆ ರಾಷ್ಟ್ರಗಳಿಂದ ಹೆಚ್ಚು ಹೂಡಿಕೆಯನ್ನು ಆಕರ್ಷಿಸುವುದು ಈ ಯೋಜನೆಯ ಉದ್ದೇಶವಾಗಿದೆ.

'ವಿದೇಶಿ ಹೂಡಿಕೆಯನ್ನು ಆಕರ್ಷಿಸಲು ಕಳೆದ ವರ್ಷ ನಾಗರಿಕ ಸೇನಾ ಸಂಸ್ಥೆ ರಚಿಸಿದ್ದ ವಿಶೇಷ ಹೂಡಿಕೆ ಸೌಕರ್ಯ ಮಂಡಳಿಗೆ(ಎಸ್‌ಐಎಫ್‌ಸಿ) ಉತ್ತೇಜನ ನೀಡಲು ಈ ನಿರ್ಧಾರ ಕೈಗೊಳ್ಳಲಾಗಿದೆ' ಎಂದು ಎಕ್ಸ್‌ಪ್ರೆಸ್ ಟ್ರಿಬ್ಯೂನ್ ಪತ್ರಿಕೆ ವರದಿ ಮಾಡಿದೆ.

'ಯೋಜನೆಯನ್ನು ರೂಪಿಸಲು ಮತ್ತು ಅನುಷ್ಠಾನಗೊಳಿಸಲು ವಿಫಲವಾಗಿರುವ ಪಾಕಿಸ್ತಾನಿ ಅಧಿಕಾರಿಗಳ ಬದಲು ಈ ವಿದೇಶಿ ಸಂಸ್ಥೆಗಳನ್ನು ಐದು ವರ್ಷಗಳ ಅವಧಿಗೆ ನೇಮಿಸಿಕೊಳ್ಳಲಾಗುತ್ತಿದೆ ಎಂದು ಸರ್ಕಾರಿ ಮೂಲಗಳು ತಿಳಿಸಿವೆ' ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಅಧಿಕಾರಿಗಳ ವೈಫಲ್ಯಗಳ ಬಗ್ಗೆ ಎಸ್‌ಐಎಫ್‌ಸಿಯು ಸರ್ಕಾರಕ್ಕೆ ತಿಳಿಸಿದ್ದು, ಹೀಗಾಗಿ, ಸಚಿವ ಸಂಪುಟವು ಕೆಲ ನಿಯಮಗಳನ್ನು ಸಡಿಲಿಸಿದೆ.

ಪ್ಯಾಲೆಸ್ಟೀನ್ ಪರ ಪ್ರತಿಭಟನೆಗಳು ಶಾಂತಿಯುತವಾಗಿರಲಿ: ಶ್ವೇತಭವನ



ಜಾನ್ ಕಿರ್ಬಿ

ವಾಷಿಂಗ್ಟನ್ (ಎಎಫ್‌ಪಿ): ಹಮಾಸ್ ಮೇಲೆ ಇಸ್ರೇಲ್ ನಡೆಸುತ್ತಿರುವ ಯುದ್ಧ ನಿಲ್ಲಿಸುವಂತೆ ಒತ್ತಾಯಿಸಿ ಕೆಲವು ವಾರಗಳಿಂದ ದೇಶದಲ್ಲಿ ಪ್ಯಾಲೆಸ್ಟೀನ್ ಪರವಾದ ಪ್ರತಿಭಟನೆಗಳು ಹೆಚ್ಚುತ್ತಿದ್ದು, ಇದು ಅಮೆರಿಕದ ವಿಶ್ವ ವಿದ್ಯಾಲಯಗಳನ್ನು ಬೆಚ್ಚಿಬೀಳಿಸಿದೆ. ವಾರಾಂತ್ಯದಲ್ಲೇ ನಾಲ್ಕು ವಿ.ವಿ ಕ್ಯಾಂಪಸ್‌ಗಳಲ್ಲಿ ಪ್ಯಾಲೆಸ್ಟೀನ್ ಪರ ಪ್ರತಿಭಟನೆಗಳು ನಡೆದಿದ್ದು, ಸುಮಾರು 275 ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ.

ಈ ನಡುವೆ ಪ್ಯಾಲೆಸ್ಟೀನ್ ಪರವಾದ ಪ್ರತಿಭಟನೆಗಳು ಶಾಂತಿಯುತವಾಗಿರಬೇಕು. ದ್ವೇಷ ಭಾಷಣ ಮತ್ತು ಹಿಂಸಾಚಾರದ ಬೆದರಿಕೆಗಳನ್ನು ಸಹಿಸುವುದಿಲ್ಲ ಎಂದು ಶ್ವೇತಭವನವು ಭಾನುವಾರ ಎಚ್ಚರಿಸಿದೆ.

'ನಾವು ಖಂಡಿತವಾಗಿಯೂ ಶಾಂತಿಯುತ ಪ್ರತಿಭಟನೆಗಳನ್ನು ನಡೆಸುವ ಜನರ ಹಕ್ಕನ್ನು ಗೌರವಿಸುತ್ತೇವೆ. ಆದರೆ, ಯೆಹೂದಿ ವಿರೋಧಿ ಭಾಷೆಯನ್ನು ನಾವು ಸಂಪೂರ್ಣವಾಗಿ ಖಂಡಿಸುತ್ತೇವೆ' ಎಂದು ರಾಷ್ಟ್ರೀಯ ಭದ್ರತಾ ಮಂಡಳಿಯ ವಕ್ತಾರ ಜಾನ್ ಕಿರ್ಬಿ ಎಬಿಸಿಯ 'ದಿಸ್ ವೀಕ್'ಗೆ ತಿಳಿಸಿದರು.

ನ್ಯೂಯಾರ್ಕ್‌ನ ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಮೊದಲು ಶುರುವಾದ ಪ್ರತಿಭಟನೆಯ ಅಲೆಯು ಈಗ ದೇಶದಾದ್ಯಂತ ವೇಗವಾಗಿ ಹಬ್ಬಿದೆ. ಕೆಲವು ವಿ.ವಿ ಕ್ಯಾಂಪಸ್‌ಗಳಲ್ಲಿ ಪ್ರತಿಭಟನೆ ಶಾಂತವಾಗಿ ನಡೆದಿವೆ. ಕೆಲವೆಡೆ ಗಲಭೆಗಳನ್ನು ಹತ್ತಿಕ್ಕಲು ಪೊಲೀಸರು ಅಶ್ರುವಾಯು ಬಳಸಿದ್ದಾರೆ. ಬೋಸ್ಟನ್‌ನ ಈಶಾನ್ಯ ವಿಶ್ವವಿದ್ಯಾಲಯದಲ್ಲಿ 100, ಸೇಂಟ್ ಲೂಯಿಸ್‌ನ ವಾಷಿಂಗ್ಟನ್ ವಿಶ್ವವಿದ್ಯಾಲಯದಲ್ಲಿ 80, ಅರಿಜೋನಾ ಸ್ಟೇಟ್ ಯೂನಿವರ್ಸಿಟಿಯಲ್ಲಿ 72 ಮತ್ತು ಇಂಡಿಯಾನಾ ವಿಶ್ವವಿದ್ಯಾಲಯದಲ್ಲಿ 23 ಮಂದಿ ಪ್ರತಿಭಟನಕಾರರನ್ನು ಪೊಲೀಸರು ಬಂಧಿಸಿದ್ದಾರೆ.

ವಾಷಿಂಗ್ಟನ್ ವಿಶ್ವವಿದ್ಯಾಲಯದಲ್ಲಿ ಬಂಧಿಸಲ್ಪಟ್ಟವರಲ್ಲಿ ಗ್ರೀನ್ ಪಾರ್ಟಿಯ ಅಧ್ಯಕ್ಷೀಯ ಚುನಾವಣಾ ಅಭ್ಯರ್ಥಿ ಜಿಲ್ ಸ್ಟೈನ್ ಕೂಡ ಸೇರಿದ್ದಾರೆ.

'ರಫಾ ಆಕ್ರಮಣ ವಿಪತ್ತು ತಡೆ ಅಮೆರಿಕದಿಂದ ಮಾತ್ರ ಸಾಧ್ಯ'

ರಿಯಾದ್(ಎಎಫ್‌ಪಿ): ರಫಾ ಮೇಲಿನ ಇಸ್ರೇಲ್ ಆಕ್ರಮಣವು ಪ್ಯಾಲೆಸ್ಟೀನ್ ಇತಿಹಾಸದಲ್ಲಿ ಅತಿದೊಡ್ಡ ವಿಪತ್ತು. ಈ ವಿಪತ್ತು ತಡೆಯಲು ಸಾಮರ್ಥ್ಯವಿರುವ ಏಕೈಕ ರಾಷ್ಟ್ರವೆಂದರೆ ಅದು ಅಮೆರಿಕ ಮಾತ್ರ ಎಂದು ಪ್ಯಾಲೆಸ್ಟೀನ್ ಅಧ್ಯಕ್ಷ ಮಹಮೂದ್ ಅಬ್ಬಾಸ್ ಭಾನುವಾರ ಹೇಳಿದ್ದಾರೆ.

ಸೌದಿ ರಾಜಧಾನಿಯಲ್ಲಿ ನಡೆದ ಜಾಗತಿಕ ಆರ್ಥಿಕ ಶೃಂಗಸಭೆಯಲ್ಲಿ ಮಾತನಾಡಿದ ಅಬ್ಬಾಸ್, 'ರಫಾ ಮೇಲಿನ ಇಸ್ರೇಲ್ ಆಕ್ರಮಣ ನಿಲ್ಲಿಸುವಂತೆ ನಾವು ಅಮೆರಿಕಕ್ಕೆ ಮನವಿ ಮಾಡುತ್ತೇವೆ. ಏಕೆಂದರೆ ಇಸ್ರೇಲ್ ಈ ಅಪರಾಧ ಎಸಗದಂತೆ ತಡೆಯುವ ಏಕೈಕ ದೇಶ ಅಮೆರಿಕವಾಗಿದೆ' ಎಂದು ಹೇಳಿದರು.

ಉಕ್ರೇನ್: ಹೋಟೆಲ್ ಮೇಲೆ ರಷ್ಯಾ ಡ್ರೋನ್ ದಾಳಿ

ಕೀವ್ (ಎಪಿ): ಉಕ್ರೇನ್‌ನ ಮೈಕೊಲೈವ್ ನಗರದ ಮೇಲೆ ರಷ್ಯಾ ಭಾನುವಾರ ನಸುಕಿನಲ್ಲಿ ಡ್ರೋನ್ ದಾಳಿ ನಡೆಸಿದೆ.

ಈ ದಾಳಿಯಲ್ಲಿ ನಗರದ ಪ್ರಮುಖ ಹೋಟೆಲ್‌ವೊಂದು ಬೆಂಕಿ ಹೊತ್ತಿ ಉರಿದಿದೆ. ಅಲ್ಲದೆ, ಪ್ರಮುಖ ಇಂಧನ ಮೂಲ ಸೌಕರ್ಯಗಳು ಹಾನಿಗೊಂಡಿವೆ.

ಮೈಕೊಲೈವ್ ಪ್ರಾಂತ್ಯದ ಗವರ್ನರ್ ವಿಟಾಲಿ ಕಿಮ್, ರಷ್ಯಾದ ಡ್ರೋನ್‌ಗಳಿಂದ ರಾಜಧಾನಿಯ ಹೋಟೆಲ್‌ಗೆ ಹೊತ್ತಿಕೊಂಡಿದ್ದ ಬೆಂಕಿಯನ್ನು ನಂದಿಸಲಾಗಿದೆ. ಆದರೆ, ಈ ದಾಳಿಯಲ್ಲಿ ಹೋಟೆಲ್‌ಗೆ ಭಾರಿ ಹಾನಿ ಆಗಿದೆ. ಅಲ್ಲದೆ, ವಿದ್ಯುತ್ ಉತ್ಪಾದನೆಯ ಮೂಲಸೌಕರ್ಯಗಳಿಗೂ ಹಾನಿ ಉಂಟಾಗಿದೆ. ಆದರೆ, ಯಾವುದೇ ಸಾವು–ನೋವು ಸಂಭವಿಸಿಲ್ಲ ಎಂದು ತಿಳಿಸಿದ್ದಾರೆ.

ಡ್ರೋನ್‌ಗಳನ್ನು ಜೋಡಿಸಿದ್ದ ಹಡಗುಕಟ್ಟೆಯನ್ನು ಗುರಿಯಾಗಿಸಿ ಮೈಕೊಲೈವ್ ನಗರದ ಮೇಲೆ ದಾಳಿ ನಡೆಸಲಾಗಿದೆ. ಅಲ್ಲದೆ, ಉಕ್ರೇನ್ ಪರ ಯುದ್ಧ ಮಾಡಲು ಬಂದಿರುವ ವಿದೇಶಿ ಕೂಲಿ ಸೈನಿಕರು ಹೋಟೆಲ್‌ನಲ್ಲಿ ಬೀಡುಬಿಟ್ಟಿದ್ದರಿಂದ ಆ ಹೋಟೆಲ್ ಮೇಲೆ ದಾಳಿ ಮಾಡಲಾಗಿದೆ ಎಂದು ರಷ್ಯಾದ ಸುದ್ದಿಸಂಸ್ಥೆ 'ರಿಯಾ' ವರದಿ ಮಾಡಿದೆ.

ದೇಶದ ನೈರುತ್ಯದ ನಾಲ್ಕು ಪ್ರದೇಶಗಳಲ್ಲಿ ರಾತ್ರಿ ವೇಳೆ ಉಕ್ರೇನ್‌ನ 17 ಡ್ರೋನ್‌ಗಳನ್ನು ಹೊಡೆದುರುಳಿಸಲಾಗಿದೆ ಎಂದು ರಷ್ಯಾ ರಕ್ಷಣಾ ಸಚಿವಾಲಯ ಭಾನುವಾರ ಬೆಳಿಗ್ಗೆ ಹೇಳಿದೆ.

ಉಕ್ರೇನ್ ಗಡಿಯಿಂದ ಉತ್ತರಕ್ಕೆ 230 ಕಿ.ಮೀ. ದೂರದ ಕೈಗಾರಿಕಾ ಪಟ್ಟಣ ಲ್ಯುಡಿನೊವೊದಲ್ಲಿನ ತೈಲ ಸಂಗ್ರಹಾಗಾರದ ಬಳಿ 3 ಡ್ರೋನ್‌ಗಳನ್ನು ಹೊಡೆದುರುಳಿಸಲಾಗಿದೆ ಎಂದು ಗವರ್ನರ್ ವ್ಲಾಡಿಸ್ಲಾವ್ ಶಾಪ್ಶಾ ಹೇಳಿದ್ದಾರೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ

Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

₹600 ಕೋಟಿ ಮೌಲ್ಯದ ಮಾದಕವಸ್ತು ವಶ • 14 ಪಾಕ್ ಪ್ರಜೆಗಳ ಬಂಧನ

ಗುಜರಾತ್: 86 ಕೆ.ಜಿ ಹೆರಾಯಿನ್ ಜಪ್ತಿ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಪಾಕಿಸ್ತಾನದ ಹಡಗಿನಲ್ಲಿ ಸಾಗಿಸುತ್ತಿದ್ದ ₹600 ಕೋಟಿ ಮೌಲ್ಯದ ಸುಮಾರು 86 ಕೆ.ಜಿ. ಹೆರಾಯಿನ್ ಅನ್ನು ಭಾನುವಾರ ಜಪ್ತಿ ಮಾಡಲಾಗಿದ್ದು, ಪಾಕ್‌ನ 14 ಪ್ರಜೆಗಳನ್ನು ಬಂಧಿಸಲಾಗಿದೆ.

ಗುಜರಾತ್‌ನ ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ಮತ್ತು ಭಾರತೀಯ ಕರಾವಳಿ ಕಾವಲು ಪಡೆ (ಐಸಿಜಿ) ಇಲ್ಲಿನ ಪೋರಬಂದರ್ ತೀರದಲ್ಲಿ ಜಂಟಿ ಕಾರ್ಯಾಚರಣೆ ನಡೆಸಿದವು.

'ಈ ಹೆರಾಯಿನ್ ಅನ್ನು ಶ್ರೀಲಂಕಾಗೆ ಕಳ್ಳಸಾಗಣೆ ಮಾಡಲಾಗುತ್ತಿತ್ತು. ಅದಕ್ಕಾಗಿ, ಇದನ್ನು ತಮಿಳುನಾಡಿನ ಕೆಲವರಿಗೆ ತಲುಪಿಸಲು ಬಂಧಿತರು ತೆರಳುತ್ತಿದ್ದರು' ಎಂದು ಎಟಿಎಸ್ ಅಧಿಕಾರಿಗಳು ಹೇಳಿದ್ದಾರೆ.

ಮುಖ್ಯಾಂಶಗಳು

- ಎಟಿಎಸ್, ಎನ್‌ಸಿಬಿ ಜಂಟಿ ಕಾರ್ಯಾಚರಣೆ
- ಶ್ರೀಲಂಕಾಗೆ ಕಳ್ಳಸಾಗಣೆ ಎಂದ ಎಟಿಎಸ್ ಅಧಿಕಾರಿಗಳು
- ಗುಜರಾತ್‌ನ ಎನ್‌ಸಿಬಿಯಿಂದ ಹೆಚ್ಚಿನ ತನಿಖೆ

'ಹೆಚ್ಚಿನ ತನಿಖೆಗಾಗಿ ಪ್ರಕರಣವನ್ನು ಗುಜರಾತ್‌ನ ಮಾದಕವಸ್ತು ನಿಯಂತ್ರಣ ಘಟಕಕ್ಕೆ (ಎನ್‌ಸಿಬಿ) ವಹಿಸಲಾಗಿದೆ' ಎಂದು ಡಿಜಿಪಿ ವಿಕಾಸ್ ಸಹಾಯ್ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪಾಕಿಸ್ತಾನದ ಮೀನುಗಾರಿಕೆ ಹಡಗಿನಲ್ಲಿ ಮಾದಕವಸ್ತುವನ್ನು ತಮಿಳುನಾಡಿನ ವ್ಯಕ್ತಿಗೆ ತಲುಪಿಸಲು ಕೊಂಡೊಯ್ಯಲಾಗುತ್ತಿದೆ. 'ಅಲ್-ರಜಾ' ಹಡಗಿನ ರೇಡಿಯೊ ಕರೆಯ ಗುಪ್ತಸಂಕೇತ 'ಅಲಿ' ಎಂದಿದ್ದರೆ, ಅಪರಿಚಿತ ವ್ಯಕ್ತಿಯ ವಾಹನ ರೇಡಿಯೊ ಕರೆಯ ಗುಪ್ತ ಸಂಕೇತ 'ಹೈದರ್' ಎಂಬ ಮಾಹಿತಿಯು ಎಟಿಎಸ್‌ಗೆ ಲಭಿಸಿತ್ತು.

'ಮಾಹಿತಿ ಆಧರಿಸಿ ಎಟಿಎಸ್, ಐಸಿಜಿ ಮತ್ತು ಎನ್‌ಸಿಬಿ (ಕಾರ್ಯಾಚರಣೆ ವಿಭಾಗ) ಏ.26ರಂದು ಜಂಟಿ ಕಾರ್ಯಾಚರಣೆ ನಡೆಸಿದವು. ಪೋರಬಂದರ್‌ನ ಕರಾವಳಿಯಲ್ಲಿದ್ದ ಶಂಕಿತ ಹಡಗು ತಡೆದಾಗ ಹೆರಾಯಿನ್ ಪ್ಯಾಕೆಟ್‌ಗಳನ್ನು ಸಮುದ್ರಕ್ಕೆ ಎಸೆದ ಪಾಕಿಸ್ತಾನ ಪ್ರಜೆಗಳು ತಪ್ಪಿಸಿಕೊಳ್ಳಲು ಯತ್ನಿಸಿದರು. ಈ ಸಂದರ್ಭದಲ್ಲಿ ಐಸಿಜಿ ಅಧಿಕಾರಿ ಗುಂಡು ಹಾರಿಸಿದರು' ಎಂದು ಐಸಿಜಿ ಅಧಿಕಾರಿಗಳು ಹೇಳಿದ್ದಾರೆ.

'ಹಡಗಿನ ಕ್ಯಾಪ್ಟನ್ ನಾಜಿರ್ ಹುಸೇನ್ ಕೈಗೆ ಗುಂಡುತಗುಲಿದ್ದು, ಆತನಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಪ್ರಾಥಮಿಕ ತನಿಖೆ ಪ್ರಕಾರ, ಈ ಮಾದಕ ವಸ್ತುವನ್ನು ಬಲೂಚಿಸ್ತಾನದ ಹಾಜಿ ಅಸ್ಲಂ ಅಲಿಯಾಸ್ ಬಾಬು ಬಲೋಚ್ ಎಂಬಾತ ಕಳುಹಿಸಿದ್ದ' ಎಂದು ಎಟಿಎಸ್ ಮೂಲಗಳು ವಿವರಿಸಿವೆ.

ವಿವಿಧ ಇಲಾಖೆಗಳ ಸಮನ್ವಯದಿಂದ ಈ ಕಾರ್ಯಾಚರಣೆ ಯಶಸ್ವಿಯಾಗಿದೆ. ಕಳೆದ ಮೂರು ವರ್ಷಗಳಲ್ಲಿ ಈ ರೀತಿಯ 11 ಜಂಟಿ ಕಾರ್ಯಾಚರಣೆಗಳನ್ನು ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

18.5 ಅಡಿಯ ಕಾಳಿ ಮೂರ್ತಿ ಕೆತ್ತನೆ

ರಾಜಸ್ಥಾನದ ಜೈಪುರದಲ್ಲಿ ಏಕ ಅಮೃತಶಿಲೆಯಲ್ಲಿ ಕೆತ್ತನೆ ಮಾಡಿರುವ 18 ಅಡಿ ಎತ್ತರದ ಕಾಳಿ ಮೂರ್ತಿ – ಪಿಟಿಐ ಚಿತ್ರ

ಜೈಪುರ (ಪಿಟಿಐ): ರಾಜಸ್ಥಾನದ ಜೈಪುರದಲ್ಲಿ ಒಂದೇ ಅಮೃತಶಿಲೆಯಿಂದ 18.5 ಅಡಿ ಎತ್ತರದ ಕಾಳಿ ದೇವಿಯ ಮೂರ್ತಿ ಕೆತ್ತನೆ ಮಾಡಲಾಗಿದೆ.

ತಿರುವನಂತಪುರದ ಪೌರ್ಣಮಿ ಕಾವು ದೇವಾಲಯಕ್ಕೆ ಈ ಮೂರ್ತಿಯನ್ನು ಜೈಪುರದಿಂದ ಸೋಮವಾರ ರವಾನಿಸಲಾಗುತ್ತದೆ.

ಈ ಮೂರ್ತಿಯನ್ನು ಜೈಪುರದ ಪ್ರಸಿದ್ಧ ಶಿಲ್ಪಿ ಮುಕೇಶ್ ಭಾರದ್ವಜ್ ಅವರು ಕೆತ್ತನೆ ಮಾಡಿದ್ದು, ಇದು 40ರಿಂದ 50 ಟನ್ ತೂಕವಿದೆ. ಕಾಳಿ ದೇವಿ ಮೂರ್ತಿಯು, ಪೀಠವು ಸೇರಿದಂತೆ ಒಟ್ಟು 23 ಅಡಿ ಎತ್ತರವಿದೆ.

'12 ಅಡಿ ಎತ್ತರದ ದುರ್ಗಾ ಮತ್ತು ಮಾದಂಗಿ ಮೂರ್ತಿಯ ಜೊತೆ ಕಾಳಿ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗುತ್ತದೆ. ರಾಮ ಮಂದಿರ ಪ್ರಾಣಪ್ರತಿಷ್ಠಾಪನೆಯಂತೆ ಕಾರ್ಯಕ್ರಮ ನಡೆಯಲಿದೆ' ಎಂದು ಪೌರ್ಣಮಿಕಾವು ದೇವಳದ ಮೇಲ್ವಿಚಾರಕ ಭುವನಚಂದ್ರನ್ ತಿಳಿಸಿದ್ದಾರೆ.

ಕೇರಳದ ತಿರುವನಂತಪುರದಲ್ಲಿರುವ ಪೌರ್ಣಮಿಕಾವು ಬಾಲ ತ್ರಿಪುರ ಸುಂದರಿ ದೇವಿ ದೇವಳವನ್ನು ಜೀರ್ಣೋದ್ಧಾರಗೊಳಿಸಲಾಗುತ್ತಿದ್ದು, ನೂತನವಾಗಿ ವಿಶ್ವದ ಅತಿ ದೊಡ್ಡ ಪಂಚಮುಖಿ ಗಣೇಶನ ಮೂರ್ತಿ ಮತ್ತು 51 ಅಕ್ಷರ ದೇವತೆಗಳನ್ನು ಪ್ರತಿಷ್ಠಾಪಿಸಲಾಗುತ್ತದೆ.

ಕಾಳ್ಗಿಚ್ಚು: ಮುಂದುವರಿದ ಕಾರ್ಯಾಚರಣೆ

ಡೆಹ್ರಾಡೂನ್ (ಪಿಟಿಐ): ಉತ್ತರಾಖಂಡದ ಅರಣ್ಯ ಪ್ರದೇಶಗಳಲ್ಲಿ ವ್ಯಾಪಿಸಿರುವ ಕಾಳ್ಗಿಚ್ಚನ್ನು ವಾಯುಪಡೆಯ ಹೆಲಿಕಾಪ್ಟರ್ ನೆರವಿನಿಂದ ನಂದಿಸುವ ಕಾರ್ಯಾಚರಣೆ ಎರಡನೇ ದಿನವಾದ ಭಾನುವಾರವೂ ಮುಂದುವರಿದಿದ್ದು, ಹಲವು ಪ್ರದೇಶಗಳಲ್ಲಿ ಬೆಂಕಿಯನ್ನು ನಂದಿಸಲಾಗಿದೆ.

ನೈನಿತಾಲ್, ಹಲ್ದ್ವಾನಿ ಮತ್ತು ರಾಮನಗರ ಅರಣ್ಯ ವಿಭಾಗಗಳಲ್ಲಿ ಕಾಳ್ಗಿಚ್ಚು ತೀವ್ರವಾಗಿದ್ದು, ನಂದಿಸುವ ಕಾರ್ಯವೂ ಚುರುಕಿನಿಂದ ನಡೆಯುತ್ತಿದೆ ಎಂದು ಅರಣ್ಯ ಅಧಿಕಾರಿಗಳು ತಿಳಿಸಿದ್ದಾರೆ.

ರಾಜ್ಯದಲ್ಲಿ ಕಳೆದ 24 ಗಂಟೆಗಳಲ್ಲಿ ಹೊಸದಾಗಿ ಎಂಟು ಕಡೆ ಕಾಳ್ಗಿಚ್ಚು ಉಂಟಾಗಿರುವ ಕುರಿತು ವರದಿಯಾಗಿದ್ದು, 11.75 ಹೆಕ್ಟೇರ್ ಪ್ರದೇಶದಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಶುಕ್ರವಾರ ಸಂಜೆಯಿಂದ ಶನಿವಾರ ಸಂಜೆಯವರೆಗೆ 34.175 ಹೆಕ್ಟೇರ್ ಹಾನಿಯಾಗಿತ್ತು ಎಂದು ಅರಣ್ಯ ಇಲಾಖೆ ತಿಳಿಸಿದೆ.

ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು ಶನಿವಾರ ರಾತ್ರಿ ಕುಮಾನ್ ಪ್ರದೇಶದಲ್ಲಿ ಪರಿಸ್ಥಿತಿಯನ್ನು ಪರಿಶೀಲಿಸಿದ್ದಾರೆ. ಕಾರ್ಯಾಚರಣೆಗೆ ವಾಯುಪಡೆಯ ಹೆಲಿಕಾಪ್ಟರ್ ನಿಯೋಜಿಸಿದ ಬಳಿಕ ನೈನಿತಾಲ್ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ಕಾಳ್ಗಿಚ್ಚು ನಿಯಂತ್ರಣಕ್ಕೆ ಬರುತ್ತಿದೆ ಎಂದು ಅವರು ಹೇಳಿದ್ದಾರೆ.

ಭಾರತೀಯ ವಾಯುಪಡೆಯ ಎಂಐ–17 ಹೆಲಿಕಾಪ್ಟರ್ ಅನ್ನು ಬೆಂಕಿ ನಂದಿಸುವ ಕಾರ್ಯಕ್ಕೆ ಬಳಸಲಾಗುತ್ತಿದೆ. ಬೆಂಕಿ ವ್ಯಾಪಿಸಿರುವ ಪೈನ್ಸ್, ಭೂಮಿಯಾಧರ್, ನಾರಾಯಣ ನಗರ, ಭವಾಲಿ, ರಾಮಗಢ ಪ್ರದೇಶಗಳಲ್ಲಿ ಹೆಲಿಕಾಪ್ಟರ್ ನೆರವಿನಿಂದ ನೀರು ಸಿಂಪಡಿಸಲಾಗುತ್ತಿದೆ. ಭೀಮ್‌ತಾಲ್ ಕೆರೆಯಿಂದ ಈ ನೀರನ್ನು ಹೆಲಿಕಾಪ್ಟರ್ ಸಂಗ್ರಹಿಸುತ್ತಿದೆ. ಒಂದು ಬಕೆಟ್ ಸುಮಾರು 5,000 ಲೀಟರ್ ನೀರನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಹೊಂದಿದೆ.

ಉತ್ತರಾಖಂಡದ ನೈನಿತಾಲ್ ಜಿಲ್ಲೆಯ ಅರಣ್ಯದಲ್ಲಿ ವ್ಯಾಪಿಸಿರುವ ಕಾಳ್ಗಿಚ್ಚು ನಂದಿಸಲು ವಾಯುಪಡೆ ಹೆಲಿಕಾಪ್ಟರ್ ನೆರವು ಪಡೆಯಲಾಯಿತು –ಪಿಟಿಐ ಚಿತ್ರ

ನೌಕಾಪಡೆಯಿಂದ 22 ಭಾರತೀಯರೂ ಸೇರಿ 33 ಸಿಬ್ಬಂದಿಯ ರಕ್ಷಣೆ

ಹಡಗಿನ ಮೇಲೆ ಹೌಥಿ ದಾಳಿ– ರಕ್ಷಣೆ

ನವದೆಹಲಿ (ಪಿಟಿಐ): ಪನಾಮ ಧ್ವಜದೊಂದಿಗೆ ಕಚ್ಚಾ ತೈಲ ಹೊತ್ತು ಸಾಗುತ್ತಿದ್ದ ಸರಕು ಸಾಗಣೆ ಹಡಗಿನ ಮೇಲೆ ಹೌಥಿ ಬಂಡುಕೋರರು ಕ್ಷಿಪಣಿ ದಾಳಿ ನಡೆಸಿದ್ದು, ಭಾರತೀಯ ನೌಕಾಪಡೆಯು ತ್ವರಿತವಾಗಿ ಆ ಹಡಗಿನ ನೆರವಿಗೆ ಧಾವಿಸಿ ಅದರಲ್ಲಿದ್ದ 22 ಭಾರತೀಯರೂ ಸೇರಿದಂತೆ 33 ಸಿಬ್ಬಂದಿಯನ್ನು ರಕ್ಷಿಸಿದೆ.

ಎಂ.ವಿ ಆಂಡ್ರೊಮೆಡಾ ಸ್ಟಾರ್ ಹಡಗಿನ ಮೇಲೆ ಏಪ್ರಿಲ್ 26ರಂದು ದಾಳಿ ನಡೆದಿತ್ತು. ವಿಷಯ ಗೊತ್ತಾದ ಕೂಡಲೇ ಭಾರತೀಯ ನೌಕಾಪಡೆಯ ಐಎನ್‌ಎಸ್ ಕೊಚ್ಚಿ ಸಮರ ನೌಕೆಯು ತ್ವರಿತವಾಗಿ ಸ್ಪಂದಿಸಿತು. ಇದರ ಪರಿಣಾಮ ಆ ಹಡಗಿನಲ್ಲಿದ್ದ ಎಲ್ಲ ಸಿಬ್ಬಂದಿ ಸುರಕ್ಷಿತರಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೆಂಪು ಸಮುದ್ರದಲ್ಲಿ ಸಾಗುತ್ತಿದ್ದ ಸರಕು ಸಾಗಣೆ ಹಡಗುಗಳನ್ನು ಹೌಥಿ ಬಂಡುಕೋರರು ಮೂರು ಕ್ಷಿಪಣಿಗಳನ್ನು ಉಡಾವಣೆ ಮಾಡಿದ್ದರು. ಈ ದಾಳಿಯಿಂದ ಎಂ.ವಿ ಆಂಡ್ರೊಮೆಡಾ ಸ್ಟಾರ್ ಹಡಗಿಗೆ ಅಲ್ಪ ಪ್ರಮಾಣದ ಹಾನಿಯಾಗಿದೆ ಎಂದು ಅಮೆರಿಕದ ಸೆಂಟ್ರಲ್ ಕಮಾಂಡ್ ತಿಳಿಸಿದೆ.

ಕೂಡಲೇ ಅಲ್ಲಿಗೆ ಹೋದ ಐಎನ್‌ಎಸ್ ಕೊಚ್ಚಿ ರಕ್ಷಣಾ ಕಾರ್ಯದಲ್ಲಿ ನಿರತವಾಯಿತು. ಹೆಲಿಕಾಪ್ಟರ್ ಕಾರ್ಯಾಚರಣೆಯನ್ನೂ ಕೈಗೊಂಡು ಹಡಗಿನಲ್ಲಿದ್ದವರನ್ನು ರಕ್ಷಿಸಲಾಯಿತು ಎಂದು ನೌಕಾಪಡೆ ಪ್ರಕಟಣೆಯಲ್ಲಿ ತಿಳಿಸಿದೆ.

ಹೌಥಿ ಬಂಡುಕೋರರು ಕ್ಷಿಪಣಿ ದಾಳಿಗೆ ಒಳಗಾಗಿದ್ದ ಕಚ್ಚಾ ತೈಲ ಹಡಗಿನ ನೆರವಿಗೆ ಧಾವಿಸಿದ್ದ ಭಾರತೀಯ ನೌಕಾಪಡೆಯು, 22 ಭಾರತೀಯರೂ ಸೇರಿದಂತೆ 33 ಸಿಬ್ಬಂದಿಯನ್ನು ರಕ್ಷಿಸಿದೆ

ಪೋರ್ಟಲ್‌ಗಳ ಲಿಂಕ್ ಮಾಡಲು ಸೂಚನೆ

ನವದೆಹಲಿ (ಪಿಟಿಐ): ಆಯುಷ್ಮಾನ್ ಭಾರತ್ ಆರೋಗ್ಯ ಖಾತೆಯನ್ನು (ಎಬಿಎಚ್‌ಎ) ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ (ಆರ್‌ಸಿಎಚ್) ಹಾಗೂ ರಾಷ್ಟ್ರೀಯ ಕ್ಷಯರೋಗ ನಿರ್ಮೂಲನೆ ಕಾರ್ಯಕ್ರಮ (ನಿಕ್ಷಯ) ಪೋರ್ಟಲ್‌ಗಳ ಜತೆಗೆ ಸಂಪರ್ಕ ಕಲ್ಪಿಸಲು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಅಗತ್ಯ ಕ್ರಮ ತೆಗೆದುಕೊಳ್ಳಬೇಕು ಎಂದು ಕೇಂದ್ರ ಆರೋಗ್ಯ ಕಾರ್ಯದರ್ಶಿ ಸೂಚಿಸಿದ್ದಾರೆ.

ಆಯುಷ್ಮಾನ್ ಭಾರತ್ ಡಿಜಿಟಲ್ ಮಿಷನ್ ಡ್ಯಾಶ್‌ಬೋರ್ಡ್ ಪ್ರಕಾರ, 2024ರ ಏಪ್ರಿಲ್‌ನಲ್ಲಿ ದೇಶದಲ್ಲಿ ಒಟ್ಟು 5,894.60 ಲಕ್ಷಗಳಷ್ಟು ಎಬಿಎಚ್‌ಎ ಖಾತೆಗಳಿವೆ ಎಂದು ಆರೋಗ್ಯ ಕಾರ್ಯದರ್ಶಿ ಅಪೂರ್ವ ಚಂದ್ರ ತಿಳಿಸಿದ್ದಾರೆ. ಈ ರೀತಿ ಸಂಪರ್ಕ ಕಲ್ಪಿಸಿದರೆ ರೋಗಿಗಳಿಗೆ ಮತ್ತು ಮಧ್ಯಸ್ಥಗಾರರಿಗೆ ಡಿಜಿಟಲ್ ಆರೋಗ್ಯ ದಾಖಲೆಗಳನ್ನು ಪಡೆಯುವುದು ಸುಲಭವಾಗುತ್ತದೆ ಎಂದು ಅವರು ಹೇಳಿದ್ದಾರೆ.

ಹಿಂದೂ ಮಹಾಸಾಗರ: ಏರುತ್ತಿದೆ ತಾಪಮಾನ

ನವದೆಹಲಿ (ಪಿಟಿಐ): ಹಿಂದೂ ಮಹಾಸಾಗರದಲ್ಲಿನ ತಾಪಮಾನವು 2020ರಿಂದ 2100ರ ನಡುವೆ 1.4 ಡಿಗ್ರಿ ಸೆಲ್ಸಿಯಸ್‌ನಿಂದ 3 ಡಿಗ್ರಿ ಸೆಲ್ಸಿಯಸ್‌ವರೆಗೂ ಏರಿಕೆಯಾಗುವ ಸಾಧ್ಯತೆ ಇದೆ ಎಂದು ಅಧ್ಯಯನವೊಂದು ತಿಳಿಸಿದೆ.

ಇದರಿಂದಾಗಿ ಶಾಶ್ವತ ಉಷ್ಣ ಅಲೆಯ ಪರಿಸ್ಥಿತಿ ಉಂಟಾಗಬಹುದು. ಅದರಿಂದ ಚಂಡಮಾರುತಗಳು ತೀವ್ರಗೊಂಡು, ಮುಂಗಾರಿನ ಮೇಲೆ ಪರಿಣಾಮ ಬೀರುತ್ತದೆ. ಅಲ್ಲದೆ ಅದು ಸಮುದ್ರ ಮಟ್ಟದಲ್ಲಿ ಏರಿಕೆಗೂ ಕಾರಣವಾಗುತ್ತದೆ ಎಂದು ಈ ಅಧ್ಯಯನ ಹೇಳುತ್ತದೆ.

ಪುಣೆ ಮೂಲದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟ್ರಾಪಿಕಲ್ ಮೆಟಿಯರಾಲಜಿಯ (ಐಐಟಿಎಂ) ಹವಾಮಾನ ವಿಜ್ಞಾನಿ ರಾಕ್ಸಿ ಮ್ಯಾಥ್ಯೂ ಕೋಲ್ ನೇತೃತ್ವದಲ್ಲಿ ಈ ಅಧ್ಯಯನ ನಡೆದಿದೆ. ಸಮುದ್ರದ ಶಾಖದ ಅಲೆಗಳು 1970–2000ದ ಅವಧಿಯಲ್ಲಿ ವರ್ಷಕ್ಕೆ 20 ದಿನಗಳಿದ್ದವು. ಅದು ವರ್ಷಕ್ಕೆ 220– 250 ದಿನಗಳವರೆಗೆ ಏರಿಕೆಯಾಗುವ ಸಾಧ್ಯತೆ ಇದ್ದು, 21ನೇ ಶತಮಾನದ ಅಂತ್ಯದ ವೇಳೆಗೆ ಹಿಂದೂ ಮಹಾಸಾಗರದ ಜಲಾನಯನ ಪ್ರದೇಶವು ಶಾಶ್ವತ ಶಾಖದ ಅಲೆಯ ಸ್ಥಿತಿಗೆ ತಳ್ಳಬಹುದು ಎಂದು ಅಂದಾಜಿಸಿದೆ.



ಸಮುದ್ರದಲ್ಲಿ ಉಷ್ಣತೆ ಹೆಚ್ಚಿದರೆ ಅದು ಹವಳಗಳು, ಸಮುದ್ರದಾಳದಲ್ಲಿನ ಹುಲ್ಲು ಮತ್ತು ಜೀವರಾಶಿ ಮೇಲೆ ದುಷ್ಪರಿಣಾಮ ಬೀರುತ್ತದೆ. ಇದು ಮೀನುಗಾರಿಕೆ ವಲಯದ ಮೇಲೂ ಪ್ರತಿಕೂಲ ಪರಿಣಾಮ ಬೀರುತ್ತದೆ. ಹಿಂದೂ ಮಹಾಸಾಗರದಲ್ಲಿನ ತಾಪಮಾನ ಏರಿಕೆಯು ಮೇಲ್ಮೈಗೆ ಸೀಮಿತವಾಗಿಲ್ಲ. ಅದು ಸಾಗರದ 2,000 ಮೀಟರ್‌ಗಳಷ್ಟು ಆಳದವರೆಗೂ ಉಷ್ಣತೆಯನ್ನು ಏರಿಸುತ್ತಿದೆ ಎಂದು ಅಧ್ಯಯನ ಹೇಳಿದೆ.

ಶಾಖಾಘಾತ: ವೃದ್ಧೆ ಸಾವು

ಪಾಲಕ್ಕಾಡ್/ತಿರುವನಂತಪುರ (ಪಿಟಿಐ): ಕೇರಳದ ಪಾಲಕ್ಕಾಡ್ ಜಿಲ್ಲೆಯಲ್ಲಿ ಶಾಖಾಘಾತದಿಂದ (ಬಿಸಿಲಿನ ತಾಪ) ವೃದ್ಧೆಯೊಬ್ಬರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಎಡಪ್ಪುಳ್ಳಿ ಗ್ರಾಮದ ಕಾಲುವೆಯಲ್ಲಿ 90 ವರ್ಷದ ವೃದ್ಧೆ ಶವವಾಗಿ ಪತ್ತೆಯಾಗಿದ್ದಾರೆ. ಬುದ್ಧಿಮಾಂದ್ಯ ರೋಗಿಯಾಗಿದ್ದ ಮಹಿಳೆ ಮನೆಯಿಂದ ಹೊರಗೆ ಬಂದ ನಂತರ ಶಾಖಾಘಾತಕ್ಕೆ ಸಿಲುಕಿದ್ದಾರೆ. ಮರಣೋತ್ತರ ಪರೀಕ್ಷೆಯಲ್ಲಿ ಆಕೆಯ ದೇಹದ ಮೇಲೆ ಸುಟ್ಟ ಗಾಯಗಳು ಕಂಡುಬಂದಿದ್ದು, ಶಾಖಾಘಾತ ದೃಢಪಟ್ಟಿದೆ ಎಂದು ಪಾಲಕ್ಕಾಡ್ ಜಿಲ್ಲಾ ಆರೋಗ್ಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕಳೆದ ವಾರ, ಜಿಲ್ಲೆಯಲ್ಲಿ ಶಾಖಾಘಾತದ ಸುಟ್ಟ ಗಾಯಗಳಿಂದ ವ್ಯಕ್ತಿಯೊಬ್ಬರು ಸಾವನ್ನಪ್ಪಿದ್ದರು ಎಂದು ಅವರು ಹೇಳಿದ್ದಾರೆ.

12 ಜಿಲ್ಲೆಗಳಲ್ಲಿ ಗರಿಷ್ಠ ತಾಪಮಾನದ ಎಚ್ಚರಿಕೆ: ತೀವ್ರ ಬಿಸಿಲಿನ ತಾಪಕ್ಕೆ ಕೇರಳ ತತ್ತರಿಸುತ್ತಿದ್ದು, ಮುಂದಿನ ಐದು ದಿನಗಳು 12 ಜಿಲ್ಲೆಗಳಲ್ಲಿ ಗರಿಷ್ಠ ತಾಪಮಾನ ದಾಖಲಾಗುವ ಎಚ್ಚರಿಕೆಯನ್ನು ಹವಾಮಾನ ಇಲಾಖೆಯು ನೀಡಿದೆ. ಬೆಳಿಗ್ಗೆ 11 ರಿಂದ ಮಧ್ಯಾಹ್ನ 3ರವರೆಗೆ ಜನರು ಮನೆಯಿಂದ ಹೊರಬರದಂತೆ ಸಲಹೆ ನೀಡಲಾಗಿದೆ.

ಕೊಲ್ಲಂ, ಪಾಲಕ್ಕಾಡ್ ಮತ್ತು ತ್ರಿಶೂರ್ ಜಿಲ್ಲೆಗಳ ಕೆಲವು ಪ್ರದೇಶಗಳಲ್ಲಿ ಬಿಸಿಗಾಳಿ ಬೀಸುವ ಸಾಧ್ಯತೆಯಿದೆ. ಪಾಲಕ್ಕಾಡ್ ಜಿಲ್ಲೆಯಲ್ಲಿ 41 ಡಿಗ್ರಿ ಸೆಲ್ಸಿಯಸ್ ಮತ್ತು ಕೊಲ್ಲಂನಲ್ಲಿ 40 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ಕಂಡುಬರಲಿದೆ ಎಂದು ಹವಾಮಾನ ಇಲಾಖೆಯು ಮುನ್ಸೂಚನೆ ನೀಡಿದೆ.

ರಾಜ್ಯದಲ್ಲಿ ದಿನನಿತ್ಯವು ತಾಪಮಾನ ಏರಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಅಂಗನವಾಡಿಗಳನ್ನು ಒಂದು ವಾರದವರೆಗೆ ತೆರೆಯದಿರಲು ನಿರ್ಧರಿಸಿದೆ.

ರಾಜ್ಯದ 17 ಜಿಲ್ಲೆಗಳಲ್ಲಿ ಬಿಸಿ ಗಾಳಿ ಎಚ್ಚರಿಕೆ

ಒಂದನೇ ಪುಟದಿಂದ...

ಭಾನುವಾರ ಬೆಳಿಗ್ಗೆ 8.30ಕ್ಕೆ ಅನ್ವಯಿಸಿದಂತೆ ಹಿಂದಿನ 24 ಗಂಟೆಗಳ ಅವಧಿಯಲ್ಲಿ ರಾಜ್ಯದಲ್ಲಿ ಕಲಬುರಗಿಯಲ್ಲಿ ಗರಿಷ್ಠ (42.9 ಡಿಗ್ರಿ ಸೆಲ್ಸಿಯಸ್) ಉಷ್ಣಾಂಶ ವರದಿಯಾಗಿದೆ.

ಬೆಂಗಳೂರಿನಲ್ಲಿ 38.5 ಡಿಗ್ರಿ ಸೆಲ್ಸಿಯಸ್: ಬೆಂಗಳೂರಿನಲ್ಲಿ ತಾಪಮಾನ ಮತ್ತಷ್ಟು ಹೆಚ್ಚಳವಾಗಿದ್ದು, ಸತತ ಎರಡನೇ ದಿನವೂ ಗರಿಷ್ಠ ಉಷ್ಣಾಂಶ 38 ಡಿಗ್ರಿ ಸೆಲ್ಸಿಯಸ್ ತಲುಪಿದೆ. ಭಾನುವಾರ ಗರಿಷ್ಠ ಉಷ್ಣಾಂಶ 38.5 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ಉಷ್ಣಾಂಶ 23.4 ಡಿಗ್ರಿ ಸೆಲ್ಸಿಯಸ್ ವರದಿಯಾಗಿದೆ. ಶನಿವಾರ ಗರಿಷ್ಠ ಉಷ್ಣಾಂಶ 38 ಡಿಗ್ರಿ ಸೆಲ್ಸಿಯಸ್‌ಗೆ ತಲುಪಿತ್ತು.

ಸೋಮವಾರ ಮತ್ತು ಮಂಗಳವಾರ ಕೂಡ ಬೆಂಗಳೂರಿನಲ್ಲಿ ಗರಿಷ್ಠ ಉಷ್ಣಾಂಶ 38 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ಉಷ್ಣಾಂಶ 23 ಡಿಗ್ರಿ ಸೆಲ್ಸಿಯಸ್ ಇರುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಮಣಿಪುರದಲ್ಲಿ ಸಂಘರ್ಷ; ವ್ಯಕ್ತಿ ಸಾವು

ಇಂಫಾಲ್ (ಪಿಟಿಐ): ಜನಾಂಗೀಯ ಸಂಘರ್ಷಪೀಡಿತ ಮಣಿಪುರದಲ್ಲಿ ಎರಡು ಗ್ರಾಮಗಳ ಜನರ ನಡುವೆ ಭಾನುವಾರ ನಡೆದ ಗಲಭೆಯಲ್ಲಿ ದಲ್ಲಿ ಒಬ್ಬ ವ್ಯಕ್ತಿ ಮೃತಪಟ್ಟು, ಇಬ್ಬರು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಪಶ್ಚಿಮ ಇಂಫಾಲ್‌ನ ಕೌಟ್ರಕ್ ಗ್ರಾಮದ ಮೇಲೆ ಪಕ್ಕದ ಕಾಂಗ್ಪೋಕ್ಪಿ ಜಿಲ್ಲೆಯ ಗ್ರಾಮವೊಂದರ ಹತ್ತಾರು ಬಂದೂಕುಧಾರಿಗಳು ದಾಳಿ ನಡೆಸಿದರು. ಕೌಟ್ರಕ್‌ನ ಗ್ರಾಮಸ್ಥರು ಇದಕ್ಕೆ ಪ್ರತಿದಾಳಿ ನಡೆಸಿದರು. ಈ ಘರ್ಷಣೆಯು ಅಕ್ಕಪಕ್ಕದ ಗ್ರಾಮಗಳಿಗೂ ಹಬ್ಬಿತು ಎಂದು ಪೊಲೀಸರು ತಿಳಿಸಿದ್ದಾರೆ.

ಇದೇ ವೇಳೆ, ಹತ್ಯೆ ಖಂಡಿಸಿ ಕಾಂಗ್‌ಪೋಕ್ಪಿ ಜಿಲ್ಲೆಯ ಕಮಿಟಿ ಆನ್ ಟ್ರೈಬಲ್ ಯುನಿಟಿ (ಸಿಒಟಿಯು) ಭಾನುವಾರ 12 ಗಂಟೆಗಳ ಕಾಲ ಬಂದ್‌ಗೆ ಕರೆ ನೀಡಿತ್ತು.

ಕಳೆದ ವರ್ಷ ಮೇ 3ರಂದು ಮಣಿಪುರದಲ್ಲಿ ಜನಾಂಗೀಯ ಸಂಘರ್ಷ ಆರಂಭವಾದಾಗಿನಿಂದಲೂ ಕೌಟ್ರಕ್ ಗ್ರಾಮದಲ್ಲಿ ಕುಕಿ ಬುಡಕಟ್ಟು ಸಮುದಾಯ ಮತ್ತು ಮೈತೇಯಿ ಸಮುದಾಯಗಳ ನಡುವೆ ಘರ್ಷಣೆ ನಡೆಯುತ್ತಲೇ ಇದೆ.

ಟಿಎಂಸಿ ಕಾರ್ಯಕರ್ತನ ಹತ್ಯೆ

ಕೋಲ್ಕತ್ತ (ಪಿಟಿಐ): ಇಲ್ಲಿ ನಡೆದ ಪ್ರತ್ಯೇಕ ಘಟನೆಗಳಲ್ಲಿ ತೃಣಮೂಲ ಕಾಂಗ್ರೆಸ್ ಕಾರ್ಯಕರ್ತರೊಬ್ಬರ ಹತ್ಯೆಯಾಗಿದ್ದು, ಸ್ಥಳೀಯ ಬಿಜೆಪಿ ಮುಖಂಡರೊಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

ಪಕ್ಷದ ಎರಡು ಗುಂಪುಗಳ ನಡುವಿನ ಘರ್ಷಣೆಯಲ್ಲಿ ಟಿಎಂಸಿ ಕಾರ್ಯಕರ್ತ ಸಂಜೀವ್ ದಾಸ್ ಯಾನೆ ಪೋಟ್ಲಾ ಎಂಬುವವರನ್ನು ಬಾಗುಯಾಟಿ ಪ್ರದೇಶದಲ್ಲಿ ಕೊಲೆ ಮಾಡಲಾಗಿದೆ. ಈ ಹಿಂದೆ ದಾಸ್ ವಿರುದ್ಧ ಶಸ್ತ್ರಾಸ್ತ್ರ ಕಾಯ್ದೆಗೆ ಸಂಬಂಧಿಸಿದ 11 ಪ್ರಕರಣಗಳು ದಾಖಲಾಗಿದ್ದವು. ಪ್ರಕರಣ ಸಂಬಂಧ 13 ಮಂದಿಯನ್ನು ಬಂಧಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಶನಿವಾರ ರಾತ್ರಿ ದಕ್ಷಿಣ ಕೋಲ್ಕತ್ತದ ಆನಂದಪುರ ಪ್ರದೇಶದಲ್ಲಿ ಟಿಎಂಸಿ ಕಾರ್ಯಕರ್ತರು ತನ್ನ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಆರೋಪಿಸಿ ಬಿಜೆಪಿ ನಾಯಕಿ ಸರಸ್ವತಿ ಸರ್ಕಾರ್ ಎಂಬುವವರು ಸ್ಥಳೀಯ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಬಿಜೆಪಿಯ ಐಟಿ ಸೆಲ್ ಮುಖ್ಯಸ್ಥ ಮತ್ತು ಪಶ್ಚಿಮ ಬಂಗಾಳದ ಸಹ-ಪ್ರಭಾರಿ ಅಮಿತ್ ಮಾಳವಿಯಾ 'ಪಶ್ಚಿಮ ಬಂಗಾಳದಲ್ಲಿ ಯಾವುದೇ ಮಹಿಳೆ ಸುರಕ್ಷಿತವಾಗಿಲ್ಲ. ಕಳೆದ ರಾತ್ರಿ, ಟಿಎಂಸಿ ಗೂಂಡಾಗಳು ಬಿಜೆಪಿಯ ಕಸಬಾ ಮಂಡಲದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿರುವ ಸರಸ್ವತಿ ಸರ್ಕಾರ್ ಅವರನ್ನು ಗುರಿಯಾಗಿಸಿ ದಾಳಿ ಮಾಡಿದ್ದಾರೆ. ಮಮತಾ ಬ್ಯಾನರ್ಜಿಯವರ ಘೋರ ವೈಫಲ್ಯದಿಂದ ಪರಿಸ್ಥಿತಿಯು ಇನ್ನಷ್ಟು ಹದಗೆಟ್ಟಿದೆ' ಎಂದು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಗುಂಡಿನ ಚಕಮಕಿ: ವಿಡಿಜಿ ಸದಸ್ಯ ಸಾವು

ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಉಧಂಪುರ ಜಿಲ್ಲೆಯ ದೂರದ ಹಳ್ಳಿಯೊಂದರಲ್ಲಿ ಭಾನುವಾರ ನಸುಕಿನಲ್ಲಿ ನುಸುಳಿದ ಭಯೋತ್ಪಾದಕರೊಂದಿಗಿನ ಗುಂಡಿನ ಚಕಮಕಿಯಲ್ಲಿ ಗ್ರಾಮ ರಕ್ಷಣಾ ಸಿಬ್ಬಂದಿ (ವಿಡಿಜಿ) ಸದಸ್ಯ ಮೊಹಮ್ಮದ್ ಷರೀಫ್ ಹುತಾತ್ಮರಾಗಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಚೀನಾ ಜತೆ ಮಾತುಕತೆ ಸುಗಮ: ರಾಜನಾಥ ಸಿಂಗ್

'ಭಾರತ ಯಾರಿಗೂ ತಲೆಬಾಗದು'

ಅಹಮದಾಬಾದ್(ಪಿಟಿಐ): 'ಭಾರತ ಮತ್ತು ಚೀನಾ ನಡುವಿನ ಮಾತುಕತೆಗಳು ಉತ್ತಮ ವಾತಾವರಣದಲ್ಲಿ, ಸುಗಮವಾಗಿ ನಡೆಯುತ್ತಿವೆ. ಭಾರತ ಎಂದಿಗೂ ತಲೆಬಾಗುವುದಿಲ್ಲ' ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಭಾನುವಾರ ಹೇಳಿದ್ದಾರೆ.

ಲೋಕಸಭೆ ಚುನಾವಣೆಗೆ ಸ್ಪರ್ಧಿಸಿರುವ ಬಿಜೆಪಿ ಅಭ್ಯರ್ಥಿಗಳ ಪರ ಪ್ರಚಾರ ನಡೆಸಲು ಅಹಮದಾಬಾದ್‌ಗೆ ಆಗಮಿಸಿರುವ ಸಿಂಗ್, 'ಭಾರತವು ಇನ್ನು ಮುಂದೆ ದುರ್ಬಲ ರಾಷ್ಟ್ರವಲ್ಲ. ಮಿಲಿಟರಿ ದೃಷ್ಟಿಕೋನದಿಂದಲೂ ಪ್ರಬಲ ರಾಷ್ಟ್ರವಾಗಿದೆ. ತನ್ನ ನೆರೆಹೊರೆಯ ದೇಶಗಳೊಂದಿಗೆ ಉತ್ತಮ ಸಂಬಂಧವನ್ನು ಕಾಯ್ದುಕೊಳ್ಳಲು ಬಯಸುತ್ತದೆ' ಎಂದು ಹೇಳಿದರು.

ಚೀನಾ ಆಕ್ರಮಣ ಸಂಬಂಧ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ವಿರುದ್ಧ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಆರೋಪದ ಕುರಿತು ಕೇಳಲಾದ ಪ್ರಶ್ನೆಗೆ ರಾಜನಾಥ್ ಸಿಂಗ್ ಈ ರೀತಿ ಪ್ರತಿಕ್ರಿಯಿಸಿದರು.

'ನಾವು ಮಾತುಕತೆಯ ಫಲಿತಾಂಶಕ್ಕಾಗಿ ಕಾಯಬೇಕೆನ್ನುವುದು ನನ್ನ ಭಾವನೆ. ಆದರೆ, ಭಾರತವು ಎಲ್ಲಿಯೂ ತಲೆಬಾಗಿಲ್ಲ ಮತ್ತು ಎಂದಿಗೂ ತಲೆಬಾಗುವುದಿಲ್ಲವೆಂದು ದೇಶವಾಸಿಗಳಿಗೆ ಭರವಸೆ ನೀಡಲು ಬಯಸುತ್ತೇನೆ' ಎಂದರು.

ಭಾರತದ ರಕ್ಷಣಾ ರಫ್ತು 2014ರಲ್ಲಿ ₹600 ಕೋಟಿ ಇತ್ತು. ಇದು 2023-24ರ ಆರ್ಥಿಕ ವರ್ಷದಲ್ಲಿ ₹21,000 ಕೋಟಿಯ ಗಡಿ ದಾಟಿದೆ. ಇದು ಮುಂದೆಯೂ ಹೆಚ್ಚಲಿದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ರಕ್ಷಣಾ ಸಾಮಗ್ರಿಗಳು, ಕ್ಷಿಪಣಿಗಳು ಮತ್ತು ಇತರ ಶಸ್ತ್ರಾಸ್ತ್ರಗಳು, ಬಾಂಬ್‌ಗಳು ಅಥವಾ ಯುದ್ಧ ಟ್ಯಾಂಕ್‌ಗಳನ್ನು ಭಾರತದಲ್ಲಿ ಭಾರತೀಯರೇ ತಯಾರಿಸುವುದನ್ನು ಖಾತ್ರಿಪಡಿಸಿಕೊಳ್ಳುವುದು ಮೋದಿ ಸರ್ಕಾರದ ಬದ್ಧತೆಯಾಗಿತ್ತು. ಇಂದು ನಾವು ಒಂದು ಲಕ್ಷ ಕೋಟಿ ರೂಪಾಯಿಗೂ ಹೆಚ್ಚು ಮೌಲ್ಯದ ರಕ್ಷಣಾ ಉತ್ಪಾದನೆಯನ್ನು ಸಾಧಿಸಿದ್ದೇವೆ ಎಂದು ಅವರು ಹೇಳಿದರು.

ಭ್ರೂಣ ಲಿಂಗ ಪತ್ತೆ ಹಾಗೂ ಗರ್ಭಪಾತ ಜಾಲ ಪ್ರಕರಣ

17 ಆರೋಪಿಗಳ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಮೈಸೂರು: ಭ್ರೂಣ ಲಿಂಗ ಪತ್ತೆ ಹಾಗೂ ಗರ್ಭಪಾತ ಜಾಲ ಪ್ರಕರಣಕ್ಕೆ ಸಂಬಂಧಿಸಿದಂತೆ ಇಲ್ಲಿನ ಉದಯಗಿರಿ ಪೊಲೀಸ್ ಠಾಣೆಯಲ್ಲಿ 17 ಮಂದಿ ಆರೋಪಿಗಳ ವಿರುದ್ಧ ಪ್ರಕರಣ ದಾಖಲಾಗಿದೆ.

ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ನೀಡಿದ ದೂರು ಆಧರಿಸಿ ಕ್ರಮ ಕೈಗೊಳ್ಳಲಾಗಿದೆ. ಮಾತಾ ಆಸ್ಪತ್ರೆ, ಆಯುರ್ವೇದಿಕ್ ಪೈಲ್ಸ್ ಡೇ ಕೇರ್ ಕೇಂದ್ರ ಹಾಗೂ ಚಾಮುಂಡೇಶ್ವರಿ ಆಸ್ಪತ್ರೆಯ ವೈದ್ಯರು ಹಾಗೂ ಸಿಬ್ಬಂದಿಯೂ ಈ ಆರೋಪಿಗಳ ಪಟ್ಟಿಯಲ್ಲಿದ್ದಾರೆ.

ಪ್ರಮುಖ ಆರೋಪಿಗಳಾದ ಶಿವನಂಜೇಗೌಡ, ನಯನ್ ಕುಮಾರ್, ಸುನಂದಾ ಎಂಬುವರು ಲ್ಯಾಬ್‌ಗಳಿಗೆ ಪರೀಕ್ಷೆಗೆಂದು ಬರುತ್ತಿದ್ದ ಗರ್ಭಿಣಿಯರನ್ನು ಸಂಪರ್ಕಿಸಿ ಮಧ್ಯವರ್ತಿಗಳಾದ ಡಾ.ತುಳಸೀರಾಮ್, ಸಿದ್ದೇಶ್, ಪುಟ್ಟರಾಜು, ಎ.ಎಲ್.ಸತ್ಯ, ಅಭಿಷೇಕ್ ಗೌಡ, ಧನಂಜಯಗೌಡ ಎಂಬುವರ ಮೂಲಕ ಮಂಡ್ಯ ತಾಲ್ಲೂಕಿನ ಹಾಡ್ಯ ಗ್ರಾಮದ ಆಲೆಮನೆಯೊಂದರಲ್ಲಿ ಸ್ಕ್ಯಾನಿಂಗ್ ಯಂತ್ರ ಬಳಸಿ ಭ್ರೂಣ ಲಿಂಗ ಪತ್ತೆ ಮಾಡುತ್ತಿದ್ದರು.

ಬಳಿಕ ಮೈಸೂರಿನ ಈ ಮೂರು ಆರೋಗ್ಯ ಕೇಂದ್ರಗಳಲ್ಲಿ ಗರ್ಭಿಣಿಯರ ಗರ್ಭಪಾತ ಮಾಡಿಸಿ ಭ್ರೂಣಗಳನ್ನು ವಿಲೇವಾರಿ ಮಾಡುತ್ತಿದ್ದರು ಎಂದು ದೂರಲಾಗಿದೆ.

ವೈದ್ಯ ಚಂದನ್ ಬಲ್ಲಾಳ್, ಸಿಬ್ಬಂದಿ ಮೀನಾ, ರಿಜ್ಮಾ ಖಾನಂ, ನಿಸಾರ್ ಅಹಮದ್, ಮಂಜುಳಾ, ಉಷಾರಾಣಿ ಎಂಬುವರ ವಿರುದ್ಧ ಪ್ರಕರಣ ದಾಖಲಾಗಿದೆ. ಗರ್ಭಪಾತ ಮಾಡಿಸಿಕೊಂಡ ಮಹಿಳೆಯರ ಸಂಬಂಧಿಗಳು ನೀಡುತ್ತಿದ್ದ ಕಮಿಷನ್ ಅನ್ನು ನೇರವಾಗಿ ಮಧ್ಯವರ್ತಿಗಳ ಮೂಲಕ ಬ್ಯಾಂಕ್ ಖಾತೆಗೆ ಜಮಾ ಮಾಡಿಸಿಕೊಳ್ಳುತ್ತಿದ್ದರು ಎಂದು ದೂರಿನಲ್ಲಿ ಹೇಳಲಾಗಿದೆ.

'ಭ್ರೂಣಲಿಂಗ ಪತ್ತೆಗೆ ಸಂಬಂಧಿಸಿದಂತೆ ಬೆಂಗಳೂರಿನಲ್ಲಿ ದಾಖಲಾಗಿರುವ ಪ್ರಕರಣವು ಠಾಣೆಗೆ ವರ್ಗಾವಣೆಯಾಗಿದೆ. ಕುಟುಂಬ ಕಲ್ಯಾಣಾಧಿಕಾರಿ ನೀಡಿದ ದೂರು ಆಧರಿಸಿ ಮತ್ತೊಂದು ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಉದಯಗಿರಿ ಪೊಲೀಸರು ತಿಳಿಸಿದ್ದಾರೆ.

'ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಐಡಿ ತನಿಖೆಗೆ ಆದೇಶಿಸಲಾಗಿತ್ತು. ಇದೀಗ ಆ ವರದಿ ಬಂದಿದ್ದು ಅದರ ಆಧಾರದ ಮೇಲೆ ಆರೋಗ್ಯ ಇಲಾಖೆ ಕೇಂದ್ರ ಕಚೇರಿಯಿಂದ ನೀಡಿದ ನಿರ್ದೇಶನದಂತೆ 17 ಮಂದಿ ವಿರುದ್ಧ ಎಫ್‌ಐಆರ್ ಮಾಡಿಸಿದ್ದೇವೆ' ಎಂದು ಡಿಎಚ್‌ಒ ಡಾ.ಪಿ.ಸಿ. ಕುಮಾರಸ್ವಾಮಿ ತಿಳಿಸಿದರು.

ಮಹದೇವ್ ಬೆಟ್ಟಿಂಗ್ ಆ್ಯಪ್ ಪ್ರಕರಣ

ನಟ ಸಾಹಿಲ್ ಖಾನ್ ಬಂಧನ

ಮುಂಬೈ (ಪಿಟಿಐ): ಮಹದೇವ್ ಬೆಟ್ಟಿಂಗ್ ಆ್ಯಪ್ ಪ್ರಕರಣಕ್ಕೆ ಸಂಬಂಧಿಸಿ ಛತ್ತೀಸಗಢದ ನಟ ಸಾಹಿಲ್ ಖಾನ್ ಅವರನ್ನು ಮುಂಬೈ ಸೈಬರ್ ಸೆಲ್‌ನ ವಿಶೇಷ ತನಿಖಾ ತಂಡವು ಬಂಧಿಸಿದ್ದು, ಆರೋಪಿ ಖಾನ್ ಅವರನ್ನು ಮುಂಬೈ ಕೋರ್ಟ್ ಮೇ 1ರವರೆಗೆ ಪೊಲೀಸ್ ಕಸ್ಟಡಿಗೆ ವಹಿಸಿದೆ.

ಬಂಧನ ಪೂರ್ವ ಜಾಮೀನು ಅರ್ಜಿಯನ್ನು ಬಾಂಬೆ ಹೈಕೋರ್ಟ್ ತಿರಸ್ಕರಿಸಿದ ನಂತರ ನಟನನ್ನು ಶನಿವಾರ ಛತ್ತೀಸಗಢದ ಜಗದಲ್‌ಪುರದಿಂದ ಬಂಧಿಸಲಾಗಿತ್ತು. ಅಲ್ಲಿಂದ ಕರೆತಂದ ಮುಂಬೈ ಸೈಬರ್ ಸೆಲ್‌ನ ಎಸ್‌ಐಟಿ ತಂಡವು ಖಾನ್ ಅವರನ್ನು ದಾದರ್‌ನ ಮ್ಯಾಜಿಸ್ಟ್ರೇಟ್ ಕೋರ್ಟ್‌ಗೆ ಭಾನುವಾರ ಹಾಜರುಪಡಿಸಿತು.

ತನಿಖೆ ವೇಳೆ 2,000ಕ್ಕೂ ಹೆಚ್ಚು ಸಿಮ್ ಕಾರ್ಡ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. 1,700 ಬ್ಯಾಂಕ್ ಖಾತೆಗಳ ವಿವರಗಳನ್ನು ಕಲೆಹಾಕಲಾಗಿದೆ. ಇವೆಲ್ಲವನ್ನೂ ಪರಿಶೀಲಿಸಬೇಕಾಗಿದೆ. ಆರೋಪಿ ತನಿಖೆಗೆ ಸಹಕರಿಸುತ್ತಿಲ್ಲ. ಹೆಚ್ಚಿನ ವಿಚಾರಣೆಯ ಅಗತ್ಯವಿರುವುದರಿಂದ ಕಸ್ಟಡಿಗೆ ನೀಡುವಂತೆ ತನಿಖಾಧಿಕಾರಿಗಳು ಕೋರ್ಟ್‌ಗೆ ಮನವಿ ಮಾಡಿದರು. ನ್ಯಾಯಾಧೀಶರು ಖಾನ್ ಅವರನ್ನು ಮೇ 1ರವರೆಗೆ ತನಿಖಾ ತಂಡದ ಕಸ್ಟಡಿಗೆ ವಹಿಸಿ ಆದೇಶ ನೀಡಿದರು.

ಸಾಹಿಲ್ ಖಾನ್ ಅವರನ್ನು ಎಸ್‌ಐಟಿ ಅಧಿಕಾರಿಗಳು ಮುಂಬೈ ಸೈಬರ್ ಪೊಲೀಸ್ ಕಚೇರಿಗೆ ವಿಚಾರಣೆಗೆ ಕರೆದೊಯ್ದರು– ಪಿಟಿಐ ಚಿತ್ರ

'ಖಾನ್ ತನಿಖೆಗೆ ಸಹಕರಿಸುತ್ತಿದ್ದಾರೆ. ದಾಖಲೆಗಳು ಮತ್ತು ಬ್ಯಾಂಕ್ ವಿವರಗಳನ್ನು ಸಲ್ಲಿಸಿದ್ದಾರೆ' ಎಂದು ಅವರ ವಕೀಲ ಮುಜಾಹಿದ್ ಅನ್ಸಾರಿ ನ್ಯಾಯಾಲಯಕ್ಕೆ ತಿಳಿಸಿದರು.

'ಸ್ಟೈಲ್' ಮತ್ತು 'ಎಕ್ಸ್‌ಕ್ಯೂಸ್ ಮಿ' ಚಿತ್ರಗಳಿಂದ ಗುರುತಿಸಿಕೊಂಡಿದ್ದ ಸಾಹಿಲ್ ಖಾನ್ ಫಿಟ್‌ನೆಸ್ ಪರಿಣತ ಕೂಡ ಹೌದು. ಪ್ರಕರಣಕ್ಕೆ ಸಂಬಂಧಿಸಿ ಸಾಹಿಲ್ ಖಾನ್ ಅವರನ್ನು ಎಸ್‌ಐಟಿ ಇತ್ತೀಚೆಗೆ ವಿಚಾರಣೆ ನಡೆಸಿತ್ತು.

ಸುಮಾರು ₹15 ಸಾವಿರ ಕೋಟಿ ಅವ್ಯವಹಾರಕ್ಕೆ ಸಂಬಂಧಿಸಿದ ಈ ಪ್ರಕರಣ ಸಂಬಂಧ ಮುಂಬೈನ ಮಾತುಂಗ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಈ ಪ್ರಕರಣದಲ್ಲಿ ಹಣ ಅಕ್ರಮ ವರ್ಗಾವಣೆ ಆಯಾಮದಲ್ಲೂ ಜಾರಿ ನಿರ್ದೇಶನಾಲಯ (ಇ.ಡಿ) ಕೂಡ ತನಿಖೆ ನಡೆಸುತ್ತಿದ್ದು, ಈವರೆಗೆ ಒಂಬತ್ತು ಮಂದಿಯನ್ನು ಬಂಧಿಸಿದೆ.

ಸಾಹಿಲ್ ಖಾನ್ ಸೇರಿ ಇತರ 31 ಮಂದಿ ವಿರುದ್ಧ ಪ್ರತ್ಯೇಕ ಪ್ರಕರಣ ದಾಖಲಿಸಿ ತನಿಖೆ ನಡೆಸುತ್ತಿರುವ ಮುಂಬೈ ಪೊಲೀಸರು, ಈ ಪ್ರಕರಣದಲ್ಲಿ ಬಂಧಿಸಿರುವ ಮೊದಲ ವ್ಯಕ್ತಿ ಸಾಹಿಲ್ ಖಾನ್ ಆಗಿದ್ದಾರೆ ಎಂದು ಅಧಿಕಾರಿ ತಿಳಿಸಿದರು.

ರಾಜ್ಯದ ಕೆಲವು ಹಣಕಾಸು ಮತ್ತು ರಿಯಲ್ ಎಸ್ಟೇಟ್ ಸಂಸ್ಥೆಗಳು ಹಾಗೂ ವಿವಾದಿತ ಮಹಾದೇವ್ ಬೆಟ್ಟಿಂಗ್ ಆ್ಯಪ್‌ನ ಪ್ರವರ್ತಕರ ನಡುವಿನ ಅಕ್ರಮ ವಹಿವಾಟಿನ ಕುರಿತು ಎಸ್‌ಐಟಿ ತನಿಖೆ ನಡೆಸುತ್ತಿದ್ದು, ಇವರ ಬ್ಯಾಂಕ್ ಖಾತೆಗಳು, ಮೊಬೈಲ್ ಫೋನ್‌ಗಳು, ಲ್ಯಾಪ್‌ಟಾಪ್‌ಗಳು ಮತ್ತು ಎಲ್ಲ ತಾಂತ್ರಿಕ ಸಾಧನಗಳ ಪರಿಶೀಲನೆಯನ್ನು ಈ ತನಿಖೆ ಒಳಗೊಂಡಿರಲಿದೆ ಎಂದು ಮುಂಬೈ ಪೊಲೀಸರು ತಿಳಿಸಿದರು.

ಮಹದೇವ್ ಆನ್‌ಲೈನ್ ಗೇಮಿಂಗ್ ಮತ್ತು ಬೆಟ್ಟಿಂಗ್ ಆ್ಯಪ್ ಪ್ರಕರಣ ಸಂಬಂಧ ನವದೆಹಲಿ ಮತ್ತು ಗೋವಾದ ಇಬ್ಬರು ವ್ಯಕ್ತಿಗಳನ್ನು ಏ.24ರಂದು ಬಂಧಿಸಿರುವುದಾಗಿ ಛತ್ತೀಸಗಢದ ಭ್ರಷ್ಟಾಚಾರ ವಿರೋಧಿ ಬ್ಯೂರೊದ (ಎಸಿಬಿ) ಆರ್ಥಿಕ ಅಪರಾಧ ವಿಭಾಗವು ಹೇಳಿದೆ.

'ಪಿಆರ್‌ಎಸ್ ಲೆಜಿಸ್ಲೇಟಿವ್ ರಿಸರ್ಚ್' ಸಂಸ್ಥೆ ವರದಿ • ಹೆಚ್ಚು ಚರ್ಚೆಯಿಲ್ಲದೆ ಮಸೂದೆಗಳ ಅಂಗೀಕಾರ

ಶಾಸನಸಭೆಗಳ ಕಲಾಪ ಅವಧಿ ಸರಾಸರಿ 22 ದಿನ!

ನವದೆಹಲಿ (ಪಿಟಿಐ): ವಿವಿಧ ರಾಜ್ಯಗಳಲ್ಲಿ ವಿಧಾನಸಭೆ ಅಧಿವೇಶನಗಳು 2023ನೆ ಸಾಲಿನಲ್ಲಿ ಸರಾಸರಿ 22 ದಿನಗಳಷ್ಟೇ ನಡೆದಿವೆ. ಸರ್ಕಾರ ಮತ್ತು ರಾಜ್ಯಪಾಲರ ನಡುವಿನ ಶೀತಲಸಮರದ ಪರಿಣಾಮ, ಕೆಲ ರಾಜ್ಯಗಳಲ್ಲಿ ಅಧಿವೇಶನವನ್ನು ಮುಂದೂಡದೇ ಕಲಾಪವನ್ನು ಆರು ತಿಂಗಳವರೆಗೂ ಲಂಬಿಸಲಾಗಿದೆ.

'ಪಿಆರ್‌ಎಸ್ ಲೆಜಿಸ್ಲೇಟಿವ್ ರಿಸರ್ಚ್' ಸಂಸ್ಥೆಯ ವರದಿ ಪ್ರಕಾರ, 2023ರಲ್ಲಿ ರಾಜ್ಯ ವಿಧಾನಸಭೆಗಳ ಅಧಿವೇಶನ ಸರಾಸರಿ 22 ದಿನ ನಡೆದಿದ್ದು, ಸರಾಸರಿ ಕಲಾಪದ ಅವಧಿಯು 5 ಗಂಟೆಗಳಾಗಿವೆ.

2023ರಲ್ಲಿ 7 ರಾಜ್ಯಗಳಲ್ಲಿ ಅಧಿವೇಶನ ಮುಂದೂಡದೇ ಕಲಾಪವನ್ನು ನಡೆಸದೇ ಅವಧಿ ಲಂಬಿಸಲಾಗಿದೆ. ಎರಡು ಕಲಾಪಗಳ ನಡುವಿನ ಅಂತರ ಆರು ತಿಂಗಳಿಗೂ ಹೆಚ್ಚು ಕಾಲವಿತ್ತು ಎಂದು ವರದಿ ಹೇಳಿದೆ.

ಸಂವಿಧಾನದ ಪ್ರಕಾರ, ರಾಜ್ಯ ಶಾಸನಸಭೆಗಳ ಅಧಿವೇಶನ ಕನಿಷ್ಠ 6 ತಿಂಗಳಿಗೊಮ್ಮೆ ನಡೆಯಬೇಕು. ಇಲ್ಲಿ ಬಹುತೇಕ ಶೇ 62ರಷ್ಟು ಕಲಾಪ ಬಜೆಟ್ ಅಧಿವೇಶನದ ಅವಧಿಯದ್ದೇ ಆಗಿದೆ ಎಂದು ವರದಿ ಉಲ್ಲೇಖಿಸಿದೆ.

ದೆಹಲಿಯಲ್ಲಿ ಆ ವರ್ಷ ವಿಧಾನಸಭೆ ಅಧಿವೇಶನ ಮಾರ್ಚ್‌ನಿಂದ ಡಿಸೆಂಬರ್‌ವರೆಗೆ ನಡೆದಿದ್ದರೆ, ಪಂಜಾಬ್‌ನಲ್ಲಿ ಮಾರ್ಚ್‌ನಿಂದ ಅಕ್ಟೋಬರ್‌ವರೆಗೆ ನಡೆದಿದೆ. ಈ ಅವಧಿಯಲ್ಲಿ ಸದನ ಸೇರಿರುವುದು ಕ್ರಮವಾಗಿ 14 ಮತ್ತು 10 ಬಾರಿ ಮಾತ್ರ ಎಂದು ತಿಳಿಸಿದೆ.

ರಾಜ್ಯಪಾಲರು ಬಜೆಟ್ ಅಧಿವೇಶನ ಕರೆಯುತ್ತಿಲ್ಲ ಎಂದು ಆರೋಪಿಸಿ ಪಂಜಾಬ್ ಸರ್ಕಾರವು ಫೆ. 2023ರಲ್ಲಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ರಾಜ್ಯ ಸಚಿವ ಸಂಪುಟದ ಸಲಹೆಗೆ ರಾಜ್ಯಪಾಲರು ಬದ್ಧರಾಗಿರಬೇಕು ಎಂದು ಕೋರ್ಟ್ ತಾಕೀತು ಮಾಡಿತ್ತು.

ಅಂತೆಯೇ ರಾಜಸ್ಥಾನದಲ್ಲಿ ಜನವರಿಯಿಂದ ಆಗಸ್ಟ್‌ವರೆಗೂ ಅಧಿವೇಶನದ ಅವಧಿ ಇತ್ತು. 2021 ಮತ್ತು 2022ರಲ್ಲಿ ರಾಜಸ್ಥಾನದಲ್ಲಿ ಒಂದು ಬಾರಿಯಷ್ಟೇ ಅಧಿವೇಶನ ಕರೆಯಲಾಗಿತ್ತು. ಅದರ ಅವಧಿಯೂ ಜನವರಿಯಿಂದ ಡಿಸೆಂಬರ್‌ವರೆಗೂ ಮುಂದುವರಿದಿತ್ತು.

ಪಶ್ಚಿಮ ಬಂಗಾಳದಲ್ಲಿ 2023ರ ಜುಲೈನಲ್ಲಿ ಅಧಿವೇಶನ ಆರಂಭವಾಗಿತ್ತು. 2024ರ ಮಾರ್ಚ್‌ವರೆಗೆ ಅದನ್ನು ಮುಂದೂಡಿರಲಿಲ್ಲ. ಫೆಬ್ರುವರಿಯಲ್ಲಿ ಬಜೆಟ್ ಅಂಗೀಕರಿಸಲು ಕಲಾಪ ನಡೆದಿತ್ತು. ಆದರೆ, ರಾಜ್ಯಪಾಲರ ಸಾಂಪ್ರದಾಯಿಕ ಭಾಷಣವಿಲ್ಲದೇ ಕಲಾಪವು ಆರಂಭವಾಗಿತ್ತು ಎಂದು ವರದಿಯು ಉಲ್ಲೇಖಿಸಿದೆ.

ಮಹಾರಾಷ್ಟ್ರ ವಿಧಾನಸಭೆಯಲ್ಲಿ ಅತಿ ಹೆಚ್ಚು, ಅಂದರೆ 41 ದಿನ ಕಲಾಪ ನಡೆದಿವೆ. ನಂತರದ ಸ್ಥಾನಗಳಲ್ಲಿ ಪಶ್ಚಿಮ ಬಂಗಾಳ (40 ದಿನ) ಮತ್ತು ಕರ್ನಾಟಕ (39 ದಿನ) ಇವೆ. ಆಂಧ್ರಪ್ರದೇಶ, ಹರಿಯಾಣ, ಮಧ್ಯಪ್ರದೇಶ, ಪಂಜಾಬ್ ಮತ್ತು ತೆಲಂಗಾಣದಂತಹ ರಾಜ್ಯಗಳಲ್ಲಿ ವಿಧಾನಸಭೆಗಳ ಕಲಾಪ 20 ದಿನಗಳಿಗಿಂತ ಕಡಿಮೆ ಅವಧಿ ನಡೆದಿವೆ. ಅರುಣಾಚಲ ಪ್ರದೇಶ, ನಾಗಾಲ್ಯಾಂಡ್, ಉತ್ತರಾಖಂಡದಲ್ಲಿ ಅಧಿವೇಶನವು 10 ದಿನಗಳಿಗಿಂತ ಕಡಿಮೆ ನಡೆದಿದೆ ಎಂದು ವರದಿ ಪ್ರಸ್ತಾಪಿಸಿದೆ.

ಕಡಿಮೆ ಅವಧಿಯ ಕಲಾಪಗರಿಷ್ಠ ಮಸೂದೆಗಳಿಗೆ ಅಸ್ತು

ರಾಜ್ಯ ಶಾಸನಸಭೆಗಳು ಕಲಾಪವನ್ನು ನಡೆಸಿದ ಅವಧಿ ಕಡಿಮೆಯಿದ್ದರೂ 500ಕ್ಕೂ ಹೆಚ್ಚು ಮಸೂದೆಗಳು ಅಂಗೀಕಾರವಾಗಿವೆ. 53 ಲಕ್ಷ ಕೋಟಿಗೂ ಹೆಚ್ಚು ಗಾತ್ರದ ಬಜೆಟ್‌ಗೆ ಅಂಗೀಕಾರ ನೀಡಿದ್ದವು.

2023ನೇ ಸಾಲಿನಲ್ಲಿ ರಾಜ್ಯ ಶಾಸನಸಭೆಗಳಲ್ಲಿ ಮಂಡನೆಯಾದ ಮಸೂದೆಗಳ ಪೈಕಿ ಶೇ 44ರಷ್ಟು, ಮಂಡನೆಯಾದ ಒಂದೇ ದಿನದಲ್ಲಿ ಅಂಗೀಕಾರಗೊಂಡಿವೆ.

ಗುಜರಾತ್, ಜಾರ್ಖಂಡ್, ಮಿಜೋರಾಂ, ಪುದುಚೇರಿ, ಪಂಜಾಬ್ ರಾಜ್ಯಗಳ ವಿಧಾನಸಭೆಗಳಲ್ಲಿ ಮಸೂದೆಗಳನ್ನು ಅವು ಮಂಡನೆಯಾದ ದಿನ ಅಥವಾ ಮಾರನೇ ದಿನವೇ ಅಂಗೀಕರಿಸಲಾಗಿದೆ.

ಇದಕ್ಕೆ ವಿರುದ್ಧವಾಗಿ ಕೇರಳ ಮತ್ತು ಮೇಘಾಲಯ ವಿಧಾನಸಭೆಗಳಲ್ಲಿ ಶೇ 90ರಷ್ಟು ಮಸೂದೆಗಳು ಮಂಡನೆಯಾದ ಐದು ದಿನಗಳ ತರುವಾಯ ಅಂಗೀಕಾರಗೊಂಡಿವೆ.

ಅಂಗೀಕಾರಗೊಂಡ ಬಳಿಕ ಶೇ 59ರಷ್ಟು ಮಸೂದೆಗಳಿಗೆ ತಿಂಗಳ ಅವಧಿಯಲ್ಲಿ ಆಯಾ ರಾಜ್ಯಗಳ ರಾಜ್ಯಪಾಲರ ಅನುಮೋದನೆ ದೊರೆತಿವೆ. ಬಿಹಾರ, ಗುಜರಾತ್ ಹರಿಯಾಣ, ಉತ್ತರ ಪ್ರದೇಶಗಳಲ್ಲಿ ಮಸೂದೆಗಳು ಅಂಗೀಕಾರಗೊಂಡ ತಿಂಗಳಲ್ಲಿಯೇ ರಾಜ್ಯಪಾಲರ ಅನುಮೋದನೆ ದೊರೆತಿದೆ.

ಅಂಗೀಕಾರವಾಗಿ ಎರಡು ತಿಂಗಳಾದರೂ ಅನುಮೋದನೆ ಪಡೆಯದ ಮಸೂದೆಗಳ ಪ್ರಮಾಣ ಅಸ್ಸಾಂನಲ್ಲಿ ಶೇ 80ರಷ್ಟಿದ್ದರೆ, ನಾಗಾಲ್ಯಾಂಡ್‌ನಲ್ಲಿ ಶೇ 57, ಜಾರ್ಖಂಡ್, ಪಶ್ಚಿಮ ಬಂಗಾಳದಲ್ಲಿ ಶೇ 50ರಷ್ಟಿದೆ.

ಪಶ್ಚಿಮ ಬಂಗಾಳದಲ್ಲಿ ಮಸೂದೆ ಅಂಗೀಕಾರವಾದ ಸರಾಸರಿ 92 ದಿನ ಬಳಿಕ ರಾಜ್ಯಪಾಲರ ಅನುಮೋದನೆ ದೊರೆತಿದೆ. ಅಸ್ಸಾಂನಲ್ಲಿ 73 ದಿನ ನಂತರ, ಜಾರ್ಖಂಡ್‌ನಲ್ಲಿ 72, ಕೇರಳದಲ್ಲಿ 67, ಹಿಮಾಚಲ ಪ್ರದೇಶದಲ್ಲಿ ಸರಾಸರಿ 55 ದಿನಗಳ ರಾಜ್ಯಪಾಲರ ಅನುಮೋದನೆ ದೊರೆತಿದೆ ಎಂದು ವರದಿ ಹೇಳಿದೆ.

ರಾಯಲ್ ಚಾಲೆಂಜರ್ಸ್ ಬೆಂಗಳೂರಿಗೆ ಒಲಿದ ಜಯ • ವಿಲ್ ಚೊಚ್ಚಲ ಶತಕ, ಕೊಹ್ಲಿ ಅರ್ಧಶತಕ

ಜ್ಯಾಕ್ಸ್ ಸಿಕ್ಸರ್‌ಗಳಿಗೆ ಬೆಚ್ಚಿದ ಟೈಟನ್ಸ್

ಅಹಮದಾಬಾದ್ (ಪಿಟಿಐ): ತಮ್ಮ ಚೊಚ್ಚಲ ಶತಕ ಗಳಿಸಿದ ವಿಲ್ ಜ್ಯಾಕ್ಸ್ ಮತ್ತು ವಿರಾಟ್ ಕೊಹ್ಲಿ ಅವರ ಸುಂದರ ಬ್ಯಾಟಿಂಗ್ ಬಲದಿಂದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಐಪಿಎಲ್‌ನಲ್ಲಿ ಸತತ ಎರಡನೇ ಜಯ ಸಾಧಿಸಿತು.

ಮೊಟೇರಾದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ 201 ರನ್ ಗೆಲುವಿನ ಗುರಿಯನ್ನು ಇನಿಂಗ್ಸ್‌ನಲ್ಲಿ 24 ಎಸೆತಗಳು ಬಾಕಿಯಿದ್ದಾಗಲೇ ಆರ್‌ಸಿಬಿ ಮುಟ್ಟಿತು. 16 ಓವರ್‌ಗಳಲ್ಲಿ 1 ವಿಕೆಟ್‌ಗೆ 206 ರನ್ ಗಳಿಸಿ, 9 ವಿಕೆಟ್‌ಗಳಿಂದ ಜಯಿಸಿತು. ಟೂರ್ನಿಯಲ್ಲಿ ತಂಡಕ್ಕೆ ಒಟ್ಟಾರೆ ಇದು ಮೂರನೇ ಜಯ.

ಬರೋಬ್ಬರಿ ಹತ್ತು ಸಿಕ್ಸರ್ ಹೊಡೆದ ಜ್ಯಾಕ್ಸ್ (ಅಜೇಯ 100; 41ಎಸೆತ) ಮಿಂಚಿದರು. ಟೂರ್ನಿಯಲ್ಲಿ ನಾಲ್ಕನೇ ಅರ್ಧಶತಕ ಗಳಿಸಿದ ವಿರಾಟ್ (ಅಜೇಯ 70; 44ಎ) ಇನಿಂಗ್ಸ್ ಮಧ್ಯದ ಓವರ್‌ಗಳಲ್ಲಿ ತುಸು ವೇಗವಾಗಿ ಆಡಿದರು. ಕಳೆದ ಪಂದ್ಯಗಳಲ್ಲಿ ಅವರ ನಿಧಾನ ಶೈಲಿಯು ಬಹಳಷ್ಟು ಚರ್ಚೆಗೆ ಕಾರಣವಾಗಿತ್ತು.

ಈ ಪಂದ್ಯದಲ್ಲಿ ಇಂಗ್ಲೆಂಡ್ ಆಲ್‌ರೌಂಡರ್ ಜ್ಯಾಕ್ಸ್ ಆಟ ಕಣ್ಣಿಗೆ ಕಟ್ಟುವಂತಿತ್ತು. ಇನಿಂಗ್ಸ್‌ನ ನಾಲ್ಕನೇ ಓವರ್‌ನಲ್ಲಿ ಫಫ್ ಡುಪ್ಲೆಸಿ (24;12ಎ) ಔಟಾದರು. ಇನ್ನೊಂದು ಬದಿಯಲ್ಲಿದ್ದ ವಿರಾಟ್ ಕೊಹ್ಲಿ 10 ರನ್ ಗಳಿಸಿದ್ದರು. ಅವರೊಂದಿಗೆ ಸೇರಿಕೊಂಡ ಜಾಕ್ಸ್ ಬೌಲರ್‌ಗಳ ಎಸೆತಗಳನ್ನು ದಂಡಿಸಿದರು. ಕೊಹ್ಲಿಗಿಂತಲೂ ವೇಗವಾಗಿ ರನ್ ಗಳಿಸಿದರು.

ಕೊಹ್ಲಿ 32 ಎಸೆತಗಳಲ್ಲಿ ಅರ್ಧಶತಕ ಹೊಡೆದರೆ, ಜ್ಯಾಕ್ಸ್ 50ರ ಗಡಿ ದಾಟಲು ಕೊಹ್ಲಿಗಿಂತಲೂ ಒಂದು ಎಸೆತ ಕಡಿಮೆ ತೆಗೆದುಕೊಂಡರು. ಅದರಲ್ಲಿ ನಾಲ್ಕು ಸಿಕ್ಸರ್‌ಗಳಿದ್ದವು. ಆದರೆ ಅದರ ನಂತರದ 10 ಎಸೆತಗಳಲ್ಲಿಯೇ 100ರ ಗಡಿ ಮುಟ್ಟಿದರು. ರಶೀದ್ ಖಾನ್ ಹಾಕಿದ 16ನೇ ಓವರ್‌ನಲ್ಲಿಯೇ ಅವರು 26 ರನ್ ಸೂರೆ ಮಾಡಿದರು. ಓವರ್‌ನ ಕೊನೆಯ ಎಸೆತದಲ್ಲಿ ಸಿಕ್ಸರ್ ಎತ್ತುವ ಮೂಲಕ ತಮ್ಮ ಶತಕ ಹಾಗೂ ವಿಜಯಕ್ಕೆ ಬೇಕಿದ್ದ ರನ್ ದಾಖಲಿಸಿದರು. ಇದೊಂದೇ ಓವರ್‌ನಲ್ಲಿ ಅವರು ನಾಲ್ಕು ಸಿಕ್ಸರ್ ಮತ್ತು ಒಂದು ಬೌಂಡರಿ ಸಿಡಿಸಿದರು. 243.90ರ ಸ್ಟ್ರೈಕ್‌ರೇಟ್‌ನಲ್ಲಿ ಅವರು ರನ್ ಗಳಿಸಿದರು.

ಜ್ಯಾಕ್ಸ್ ಪ್ರತಿಯೊಂದು ಸಿಕ್ಸರ್ ಬಾರಿಸಿದಾಗಲೂ ಇನ್ನೊಂದು ತುದಿಯಲ್ಲಿದ್ದ ಕೊಹ್ಲಿ ಸಂಭ್ರಮಿಸಿದರು, ಅಚ್ಚರಿಯಿಂದ ಕಣ್ಣರಳಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಜ್ಯಾಕ್ಸ್‌ಗೆ ಟೂರ್ನಿಯಲ್ಲಿ ಇದು ಐದನೇ ಪಂದ್ಯ. ಕೋಲ್ಕತ್ತ ನೈಟ್ ರೈಡರ್ಸ್ ಎದುರಿನ ಪಂದ್ಯದಲ್ಲಿ ಅವರು ಅರ್ಧಶತಕ ಗಳಿಸಿದ್ದರು.

ಇಲ್ಲಿ ಅವರು ಮತ್ತು ಕೊಹ್ಲಿ ಮುರಿಯದ ಎರಡನೇ ವಿಕೆಟ್ ಜೊತೆಯಾಟದಲ್ಲಿ 166 ರನ್ ಸೇರಿಸಿದರು. ಕೊಹ್ಲಿ ಟೂರ್ನಿಯಲ್ಲಿ 500 ರನ್ ಸೇರಿಸಿದರು. ಇದರೊಂದಿಗೆ ಐಪಿಎಲ್‌ನಲ್ಲಿ ಏಳನೇ ಸಲ ಈ ಸಾಧನೆ ಮಾಡಿ ಡೇವಿಡ್ ವಾರ್ನರ್ ದಾಖಲೆಯನ್ನು ಸರಿಗಟ್ಟಿದರು.

ಸಾಯಿ–ಶಾರೂಕ್ ಮಿಂಚು: ಮಧ್ಯಾಹ್ನ ಟಾಸ್ ಗೆದ್ದ ಬೆಂಗಳೂರು ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು.

ಸ್ವಪ್ನಿಲ್ ಸಿಂಗ್ (23ಕ್ಕೆ1) ಮತ್ತು ವಿಶ್ರಾಂತಿ ಮುಗಿಸಿ ಮರಳಿದ ಗ್ಲೆನ್ ಮ್ಯಾಕ್ಸ್‌ವೆಲ್ (28ಕ್ಕೆ1) ಅವರ ಉತ್ತಮ ಬೌಲಿಂಗ್‌ನಿಂದಾಗಿ ಆತಿಥೇಯ ತಂಡವು 45 ರನ್‌ಗಳಿಗೆ ಎರಡು ವಿಕೆಟ್ ಕಳೆದುಕೊಂಡಿತ್ತು.

ಈ ಸಂದರ್ಭದಲ್ಲಿ ಜೊತೆಗೂಡಿದ ಸಾಯಿ ಸುದರ್ಶನ್ (ಔಟಾಗದೆ 84; 49ಎ, 4X8, 6X4) ಹಾಗೂ ಶಾರೂಕ್ ಖಾನ್ (58; 30ಎ, 4X3, 6X5) ಮೂರನೇ ವಿಕೆಟ್ ಜೊತೆಯಾಟದಲ್ಲಿ 86 ರನ್ ಸೇರಿಸಿದರು. ಸಿರಾಜ್ ಬೌಲಿಂಗ್‌ನಲ್ಲಿ ಖಾನ್ ಔಟಾದ ನಂತರ ಕ್ರೀಸ್‌ಗೆ ಬಂದ ಡೇವಿಡ್ ಮಿಲ್ಲರ್ (ಅಜೇಯ 26) ಉತ್ತಮ ಕಾಣಿಕೆ ನೀಡಿ ತಂಡವು ದ್ವಿಶತಕದ ಮೊತ್ತ ಗಳಿಸಲು ಕಾರಣರಾದರು.

ಆರ್‌ಸಿಬಿ– ಗರಿಷ್ಠ ಸ್ಕೋರ್ ಚೇಸಿಂಗ್ ಸಾಧನೆ (ಐಪಿಎಲ್)

ರನ್	ಎದುರಾಳಿ	ಸ್ಥಳ	ವರ್ಷ
204	ಪಂಜಾಬ್ ಕಿಂಗ್ಸ್	ಬೆಂಗಳೂರು	2010
201	ಗುಜರಾತ್ ಟೈಟನ್ಸ್	ಅಹಮದಾಬಾದ್	2024
192	ರೈಸಿಂಗ್ ಪುಣೆ ಸೂಪರ್‌ಜೈಂಟ್ಸ್	ಬೆಂಗಳೂರು	2016
187	ಸನ್‌ರೈಸರ್ಸ್	ಹೈದರಾಬಾದ್	2023

‘ಬೌಲರ್‌ಗಳಿಗೆ ನೆರವು ಸಿಗುತ್ತಿಲ್ಲ’

ಅಹಮದಾಬಾದ್ (ಪಿಟಿಐ): ಐಪಿಎಲ್ ಪಂದ್ಯಗಳು ನಡೆಯುತ್ತಿರುವ ಮೈದಾನಗಳ ಬೌಂಡರಿ ಚಿಕ್ಕದು. ಅಲ್ಲದೇ ಸಪಾಟಾದ ಪಿಚ್‌ಗಳನ್ನು ಸಿದ್ಧಗೊಳಿಸುತ್ತಿರುವುದರಿಂದ 250ಕ್ಕೂ ಹೆಚ್ಚು ರನ್‌ಗಳ ಮೊತ್ತ ಸಹಜವಾಗಿದೆ. ಬೌಲರ್‌ಗಳಿಗೆ ಯಾವುದೇ ನೆರವು ದೊರೆಯುತ್ತಿಲ್ಲ ಎಂದು ಆರ್‌ಸಿಬಿ ತಂಡದ ವೇಗಿ ಮೊಹಮ್ಮದ್ ಸಿರಾಜ್ ಹೇಳಿದರು.



ವಿಲ್ ಜ್ಯಾಕ್ಸ್ –ಪಿಟಿಐ ಚಿತ್ರ

ವಿರಾಟ್ ಕೊಹ್ಲಿ –ಎಎಫ್‌ಪಿ ಚಿತ್ರ

ಐಪಿಎಲ್ ಟೂರ್ನಿಗಳಲ್ಲಿ 500+ ರನ್ ಗಳಿಕೆಗಳು

ಟೂರ್ನಿಗಳು	ಆಟಗಾರ
7	ಡೇವಿಡ್ ವಾರ್ನರ್
7	ವಿರಾಟ್ ಕೊಹ್ಲಿ
5	ಶಿಖರ್ ಧವನ್
5	ಕೆ.ಎಲ್. ರಾಹುಲ್

ಸ್ಕೋರ್ ಕಾರ್ಡ್

ಗುಜರಾತ್ ಟೈಟನ್ಸ್ 3 ವಿಕೆಟ್‌ಗೆ 200 (20 ಓವರ್‌ಗಳಲ್ಲಿ)
ವೃದ್ಧಿಮಾನ್ ಸಿ ಶರ್ಮಾ ಬಿ ಸಿಂಗ್ 5 (4ಎ, 4X1)
ಗಿಲ್ ಸಿ ಗ್ರೀನ್ ಬಿ ಮ್ಯಾಕ್ಸ್‌ವೆಲ್ 16 (19ಎ, 4X1)
ಸುದರ್ಶನ್ ಔಟಾಗದೇ 84 (49ಎ, 4X8, 6X4)
ಶಾರುಖ್ ಬಿ ಸಿರಾಜ್ 58 (30ಎ, 4X3, 6X5)
ಮಿಲ್ಲರ್ ಔಟಾಗದೇ 26 (19ಎ, 4X2, 6X1)
ಇತರೆ: 11 (ಲೆಗ್ ಬೈ 1, ನೋಬಾಲ್ 1, ವೈಡ್ 9)
ವಿಕೆಟ್ ಪತನ: 1–6 (ವೃದ್ಧಿಮಾನ್ ಸಹಾ 0.6), 2–45 (ಶುಭಮನ್ ಗಿಲ್ 6.4), 3–131 (ಎಂ.ಶಾರುಖ್ ಖಾನ್ 14.1)
ಬೌಲಿಂಗ್: ಸ್ವಪ್ನಿಲ್ ಸಿಂಗ್ 3–0–23–1, ಮೊಹಮದ್ ಸಿರಾಜ್ 4–0–34–1, ಯಶ್ ದಯಾಳ್ 4–0–34–0, ಗ್ಲೆನ್ ಮ್ಯಾಕ್ಸ್‌ವೆಲ್ 3–0–28–1, ಕರ್ಣ ಶರ್ಮಾ 3–0–38–0, ಕ್ಯಾಮರಾನ್ ಗ್ರೀನ್ 3–0–42–0

ರಾಯಲ್ ಚಾಲೆಂಜರ್ಸ್ ಬೆಂಗಳೂರು 1 ವಿಕೆಟ್‌ಗೆ 206 (16 ಓವರ್‌ಗಳಲ್ಲಿ)
ಕೊಹ್ಲಿ ಔಟಾಗದೇ 70 (44ಎ, 4X6, 6X3)
ಡುಪ್ಲೆಸಿ ಸಿ ಸಬ್ (ವಿ ಶಂಕರ್) ಬಿ ಸಾಯಿ 24 (12ಎ, 4X1, 6X3)
ಜ್ಯಾಕ್ಸ್ ಔಟಾಗದೇ 100 (41ಎ, 4X5, 6X10)
ಇತರೆ: 12 (ಬೈ4, ಲೆಗ್‌ಬೈ4, ನೋಬಾಲ್1, ವೈಡ್ 3)
ವಿಕೆಟ್ ಪತನ: 1–40(ಫಫ್ ಡುಪ್ಲೆಸಿ 3.5)
ಬೌಲಿಂಗ್: ಅಜ್ಮತುಲ್ಲಾ ಒಮರ್ಜಾಯ್ 2–0–18–0, ಸಂದೀಪ್ ವಾರಿಯರ್ 1–0–15–0, ಸಾಯಿ ಕಿಶೋರ್ 3–0–30–1, ರಶೀದ್ ಖಾನ್ 4–0–51–0, ನೂರ್ ಅಹಮದ್ 4–0–23–0, ಮೋಹಿತ್ ಶರ್ಮಾ 2–0–41–0
ಪಂದ್ಯದ ಆಟಗಾರ: ವಿಲ್ ಜ್ಯಾಕ್ಸ್

ಫಲಿತಾಂಶ: ಆರ್‌ಸಿಬಿ ತಂಡಕ್ಕೆ 9 ವಿಕೆಟ್‌ಗಳ ಜಯ

ಅರ್ಧಶತಕ ಗಳಿಸಿದ ಋತುರಾಜ್ ಗಾಯಕವಾಡ್ –ಪಿಟಿಐ ಚಿತ್ರ

ತುಷಾರ್ ದಾಳಿಗೆ ಮಂಕಾದ ಸನ್‌ರೈಸರ್ಸ್

ಚೆನ್ನೈ (ಪಿಟಿಐ): ವೇಗಿ ತುಷಾರ್ ದೇಶಪಾಂಡೆ ಅವರ ಅಮೋಘ ಬೌಲಿಂಗ್ ಎದುರು ಸನ್‌ರೈಸರ್ಸ್ ಹೈದರಾಬಾದ್ ತಂಡದ ಬ್ಯಾಟರ್‌ಗಳು ಮಂಕಾದರು.

ಲೆಗ್ ಕಟರ್, ಸ್ವಿಂಗ್ ಎಸೆತಗಳನ್ನು ಪರಿಣಾಮಕಾರಿಯಾಗಿ ಪ್ರಯೋಗಿಸಿದ ತುಷಾರ್ (3–0–27–4) ಅವರ ಬೌಲಿಂಗ್ ನೆರವಿನಿಂದ ಚೆನ್ನೈ ಸೂಪರ್ ಕಿಂಗ್ಸ್ ತಂಡವು 78 ರನ್‌ಗಳಿಂದ ಸನ್‌ರೈಸರ್ಸ್ ಎದುರು ಜಯಿಸಿತು. ಹಾಲಿ ಚಾಂಪಿಯನ್ ತಂಡವು ಅಂಕ ಪಟ್ಟಿಯಲ್ಲಿ ಮೂರನೇ ಸ್ಥಾನಕ್ಕೇರಿತು.

ಚೆಪಾಕ್ ಕ್ರೀಡಾಂಗಣದಲ್ಲಿ ಭಾನುವಾರ ರಾತ್ರಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಸನ್‌ರೈಸರ್ಸ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು.

ನಾಯಕ ಋತುರಾಜ್ ಗಾಯಕವಾಡ್ (98; 54ಎ, 4X10, 6X3) ಹಾಗೂ ಡ್ಯಾರಿಲ್ ಮಿಚೆಲ್ (52; 32ಎ, 4X7, 6X1) ಎರಡನೇ ವಿಕೆಟ್ ಜೊತೆಯಾಟದಲ್ಲಿ 107 ರನ್ ಸೇರಿಸಿದರು. ಇದರಿಂದಾಗಿ ಚೆನ್ನೈ ತಂಡವು 20 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 212 ರನ್ ಗಳಿಸಿತು. ನಾಲ್ಕು ಸಿಕ್ಸರ್ ಬಾರಿಸಿದ ಶಿವಂ ದುಬೆ (ಅಜೇಯ 39; 20ಎ) ಕೂಡ ತಮ್ಮ ಕಾಣಿಕೆ ನೀಡಿದರು.

ಸನ್‌ರೈಸರ್ಸ್ ತಂಡವು ಇದಕ್ಕುತ್ತರವಾಗಿ 18.5 ಓವರ್‌ಗಳಲ್ಲಿ 134 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು.

ಈ ಟೂರ್ನಿಯಲ್ಲಿ 250ಕ್ಕೂ ಹೆಚ್ಚು ರನ್‌ಗಳ ಮೊತ್ತವನ್ನು ಮೂರು ಬಾರಿ ಗಳಿಸಿರುವ ಸನ್‌ರೈಸರ್ಸ್ ತಂಡಕ್ಕೆ ಈ ಮೊತ್ತ ದೊಡ್ಡದೇನೂ ಆಗಿರಲಿಲ್ಲ. ಆದರೆ ತುಷಾರ್ ಶಿಸ್ತಿನ ಬೌಲಿಂಗ್ ಮುಂದೆ ಸನ್‌ರೈಸರ್ಸ್ ತಂಡದ ಅಗ್ರಕ್ರಮಾಂಕದ ಬ್ಯಾಟರ್‌ಗಳು ವೈಫಲ್ಯ ಅನುಭವಿಸಿದರು. ದೊಡ್ಡ ಹೊಡೆತಗಳನ್ನು ಪ್ರಯೋಗಿಸುವ ಯತ್ನದಲ್ಲಿ ಫೀಲ್ಡರ್‌ಗಳಿಗೆ ಸುಲಭದ ಕ್ಯಾಚ್ ಆದರು.

ದುಬೆ ಮಿಂಚು: ಚೆನ್ನೈ ತಂಡವು ದ್ವಿಶತಕದ ಗಡಿ ಮುಟ್ಟಲು ಶಿವಂ ದುಬೆ ಕಾಣಿಕೆಯು ಮಹತ್ವದ್ದಾಗಿತ್ತು. ಮಿಚೆಲ್ ಔಟಾದ ನಂತರ ಕ್ರೀಸ್‌ಗೆ ಬಂದ ದುಬೆ ರನ್ ಗಳಿಕೆಯ ವೇಗ ಹೆಚ್ಚಿಸಿದರು. ಋತುರಾಜ್ ಅವರೊಂದಿಗಿನ ಜೊತೆಯಾಟದಲ್ಲಿ 32 ಎಸೆತಗಳಲ್ಲಿ 74 ರನ್ ಗಳಿಸಿದರು. ಕೊನೆಯ ಓವರ್‌ನಲ್ಲಿ ಸಿಕ್ಸರ್‌ನೊಂದಿಗೆ ಶತಕ ಪೂರೈಸುವ ಋತುರಾಜ್ ಲೆಕ್ಕಾಚಾರ ಕೈಕೊಟ್ಟಿತು.

ಆಗ ಚೆನ್ನೈ ಅಭಿಮಾನಿಗಳ ಕಣ್ಮಣಿ ಮಹೇಂದ್ರಸಿಂಗ್ ಧೋನಿ ಕ್ರೀಸ್‌ಗೆ ಬಂದರು. ಒಂದು ಬೌಂಡರಿ ಸಹಿತ ಐದು ರನ್ ಗಳಿಸಿದ ಧೋನಿ ಟೂರ್ನಿಯಲ್ಲಿ ಏಳನೇ ಬಾರಿ ಅಜೇಯರಾಗುಳಿದರು.

ಸಂಕ್ಷಿಪ್ತ ಸ್ಕೋರು: ಚೆನ್ನೈ ಸೂಪರ್ ಕಿಂಗ್ಸ್: 20 ಓವರ್‌ಗಳಲ್ಲಿ 3 ವಿಕೆಟ್ ಗಳಿಗೆ 212 (ಋತುರಾಜ್ ಗಾಯಕವಾಡ್ 98, ಡ್ಯಾರಿಲ್ ಮಿಚೆಲ್ 52, ಶಿವಂ ದುಬೆ ಔಟಾಗದೆ 39, ಭುವನೇಶ್ವರ್ ಕುಮಾರ್ 38ಕ್ಕೆ1, ಜೈದೇವ್ ಉನದ್ಕತ್ 38ಕ್ಕೆ1) **ಸನ್‌ರೈಸರ್ಸ್ ಹೈದರಾಬಾದ್:** 18.5 ಓವರ್‌ಗಳಲ್ಲಿ 134 (ಏಡನ್ ಮರ್ಕರಂ 32, ಹೆನ್ರಿಚ್ ಕ್ಲಾಸೆನ್ 20, ತುಷಾರ್ ದೇಶಪಾಂಡೆ 27ಕ್ಕೆ4, ಮುಸ್ತಫಿಜುರ್ ರೆಹಮಾನ್ 19ಕ್ಕೆ2, ಮಥೀಷ ಪಥಿರಾಣ 17ಕ್ಕೆ2) **ಫಲಿತಾಂಶ:** ಚೆನ್ನೈ ಸೂಪರ್ ಕಿಂಗ್ಸ್‌ಗೆ 78 ರನ್ ಜಯ. **ಪಂದ್ಯದ ಆಟಗಾರ:** ಋತುರಾಜ್ ಗಾಯಕವಾಡ್

ಭಾರತ ತಂಡದ ಅನ್ಮೋಲ್ ಖರಬ್

ಉಬರ್ ಕಪ್: ಕ್ವಾರ್ಟರ್‌ಗೆ ಭಾರತ ಮಹಿಳಾ ತಂಡ

ಚೆಂಗ್ಡು, ಚೀನಾ (ಪಿಟಿಐ): ಭಾರತದ ಇಶಾರಾಣಿ ಬರೂವಾ ಮತ್ತು ಅನ್ಮೋಲ್ ಖರಬ್ ಅವರ ಅಮೋಘ ಆಟದ ನೆರವಿನಿಂದ ಭಾರತ ಮಹಿಳಾ ತಂಡ ಇಲ್ಲಿ ನಡೆಯುತ್ತಿರುವ ಉಬರ್ ಕಪ್ ಬ್ಯಾಡ್ಮಿಂಟನ್ ಟೂರ್ನಿಯ ಕ್ವಾರ್ಟರ್ ಫೈನಲ್ ಪ್ರವೇಶಿಸಿತು.

ಭಾನುವಾರ ನಡೆದ ‘ಎ’ ಗುಂಪಿನ ಎರಡನೇ ಪಂದ್ಯದಲ್ಲಿ ಭಾರತವು ಸಿಂಗಪುರ ತಂಡವನ್ನು 4-1 ಗೋಲುಗಳಿಂದ ಮಣಿಸಿತು.

ಆರಂಭಿಕ ಪಂದ್ಯದಲ್ಲಿ ಅಶ್ಮಿತಾ ಚಾಲಿಹಾ ಅವರ ಸೋಲಿನಿಂದ ಚೇತರಿಸಿಕೊಂಡ ಭಾರತ, ಉಳಿದ ಪಂದ್ಯಗಳನ್ನು ಸುಲಭವಾಗಿ ಗೆದ್ದುಕೊಂಡಿತು. ಪ್ರಮುಖ ಆಟಗಾರರ ಗೈರುಹಾಜರಿಯಲ್ಲಿ ಯುವ ಮತ್ತು ಅನನುಭವಿ ಆಟಗಾರ್ತಿಯರು ತಮ್ಮ ಕೌಶಲ ಪ್ರದರ್ಶಿಸಿ ಎರಡು ಪಂದ್ಯಗಳಲ್ಲಿ ಗೆದ್ದರು.

‘ಎ’ ಗುಂಪಿನ ಮತ್ತೊಂದು ಪಂದ್ಯದಲ್ಲಿ ಚೀನಾ 3-0 ರಿಂದ ಕೆನಡಾವನ್ನು ಮಣಿಸಿತು.

ಈ ಗೆಲುವಿನೊಂದಿಗೆ ಭಾರತ ‘ಎ’ ಗುಂಪಿನಲ್ಲಿ ಚೀನಾ ನಂತರ ಎರಡನೇ ಸ್ಥಾನದಲ್ಲಿದೆ.

ಮುಯ್ಯಿ ತೀರಿಸಿಕೊಳ್ಳಲು ಡೆಲ್ಲಿ ಸಜ್ಜು

ಕೋಲ್ಕತ್ತ (ಪಿಟಿಐ): ರಿಷಭ್ ಪಂತ್ ನಾಯಕತ್ವದ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಪ್ಲೇ ಆಫ್ ಪ್ರವೇಶದತ್ತ ದಿಟ್ಟ ಹೆಜ್ಜೆ ಇಟ್ಟು ಮುನ್ನಡೆಯುತ್ತಿದೆ.

ಈಡನ್ ಗಾರ್ಡನ್‌ನಲ್ಲಿ ಸೋಮವಾರ ನಡೆಯಲಿರುವ ಪಂದ್ಯದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಬೌಲಿಂಗ್ ದೌರ್ಬಲ್ಯವನ್ನು ಬಳಸಿಕೊಂಡು ಜಯಿಸುವ ಛಲದಲ್ಲಿದೆ. ಅದರೊಂದಿಗೆ ಐದನೇ ಸ್ಥಾನದಲ್ಲಿರುವ ಡೆಲ್ಲಿ ತಂಡವು ಅಗ್ರ ನಾಲ್ಕರಲ್ಲಿ ಒಂದಾಗುವತ್ತ ಚಿತ್ತ ನೆಟ್ಟಿದೆ. ಮೊದಲ ಸುತ್ತಿನಲ್ಲಿ ಮುಖಾಮುಖಿಯಾಗಿದ್ದಾಗ ಕೋಲ್ಕತ್ತ ಎದುರು ಅನುಭವಿಸಿದ್ದ ಸೋಲಿಗೆ ಮುಯ್ಯಿ ತೀರಿಸಿಕೊಳ್ಳಲೂ ಪಂತ್ ಬಳಗ ಸಿದ್ಧವಾಗಿದೆ.

ಡೆಲ್ಲಿ ತಂಡವು ಇದುವರೆಗೆ ಆಡಿರುವ ಹತ್ತು ಪಂದ್ಯಗಳಲ್ಲಿ ಐದು ಜಯಿಸಿ, ಉಳಿದಿದ್ದರಲ್ಲಿ ಸೋತಿದೆ. ಕೋಲ್ಕತ್ತ ತಂಡವು ಎಂಟು ಪಂದ್ಯಗಳಲ್ಲಿ ಆಡಿದೆ. ಆ ಪೈಕಿ ಐದು ಜಯಿಸಿ, ಮೂರರಲ್ಲಿ ಸೋತಿದೆ. ಇದರೊಂದಿಗೆ ಉತ್ತಮ ರನ್ ರೇಟ್ ಸಹ ಇರುವುದರಿಂದ ಎರಡನೇ ಸ್ಥಾನದಲ್ಲಿದೆ.

ಆದರೆ ಕಳೆದ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ಎದುರು 261 ರನ್‌ಗಳ ಗುರಿ ನೀಡಿದ್ದ ಕೋಲ್ಕತ್ತ ಸೋತಿತು. ಅದಕ್ಕೆ ಕಾರಣವಾಗಿದ್ದು ಬೌಲರ್‌ಗಳ ವೈಫಲ್ಯ. ಏಳು ಬೌಲರ್‌ಗಳ ದಾಳಿಯಲ್ಲಿ ತಂಡಕ್ಕೆ ಸಿಕ್ಕಿದ್ದು ಎರಡು ವಿಕೆಟ್ ಮಾತ್ರ. ಅದರಲ್ಲೂ ಒಂದು ರನ್‌ಔಟ್ ಇತ್ತು.

ತಂಡದಲ್ಲಿ ಅನುಭವಿ ಬೌಲರ್‌ಗಳ ಕೊರತೆ ಎದ್ದುಕಾಣುತ್ತಿದೆ. ಸುನಿಲ್ ನಾರಾಯಣ, ವರುಣ ಚಕ್ರವರ್ತಿ ಅವರು ಸ್ಪಿನ್ ವಿಭಾಗದಲ್ಲಿ ಉತ್ತಮವಾಗಿದ್ದಾರೆ. ಆದರೆ ವೇಗದ ವಿಭಾಗ ತುಸು ದುರ್ಬಲವಾಗಿದೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಸಿನಿಮಾ ಆ್ಯಪ್

ಇಂಡಿಯನ್ ಪ್ರೀಮಿಯರ್ ಲೀಗ್ ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ರಾಜಸ್ಥಾನ ರಾಯಲ್ಸ್	9	8	1	16	0.694
ಕೋಲ್ಕತ್ತ ನೈಟ್ ರೈಡರ್ಸ್	8	5	3	10	0.972
ಚೆನ್ನೈ ಸೂಪರ್ ಕಿಂಗ್ಸ್	9	5	4	10	0.810
ಸನ್‌ರೈಸರ್ಸ್ ಹೈದರಾಬಾದ್	9	5	4	10	0.075
ಲಖನೌ ಸೂಪರ್ ಜೈಂಟ್ಸ್	9	5	4	10	0.059
ಡೆಲ್ಲಿ ಕ್ಯಾಪಿಟಲ್ಸ್	10	5	5	10	-0.276
ಗುಜರಾತ್ ಟೈಟನ್ಸ್	10	4	6	8	-1.113
ಪಂಜಾಬ್ ಕಿಂಗ್ಸ್	9	3	6	6	-0.187
ಮುಂಬೈ ಇಂಡಿಯನ್ಸ್	9	3	6	6	-0.261
ಆರ್‌ಸಿಬಿ (ಬೆಂಗಳೂರು)	10	3	7	6	-0.415

ಆರೆಂಜ್ ಕ್ಯಾಪ್: ವಿರಾಟ್ ಕೊಹ್ಲಿ, ಆರ್‌ಸಿಬಿ (500 ರನ್)

ಪರ್ಪಲ್ ಕ್ಯಾಪ್: ಜಸ್‌ಪ್ರೀತ್ ಬೂಮ್ರಾ, ಹರ್ಷಲ್ ಪಟೇಲ್, ಮುಸ್ತಫಿಜುರ್ (14 ವಿಕೆಟ್)

ಮಹಿಳಾ ಕ್ರಿಕೆಟ್: ಭಾರತಕ್ಕೆ ಜಯ

ಸಿಲೆಟ್ (ಬಾಂಗ್ಲಾದೇಶ) (ಪಿಟಿಐ): ರೇಣುಕಾ ಸಿಂಗ್ (18ಕ್ಕೆ3) ಮತ್ತು ಪೂಜಾ ವಸ್ತ್ರಾಕರ್ (25ಕ್ಕೆ2) ಅವರ ಬೌಲಿಂಗ್ ದಾಳಿಯ ನೆರವಿನಿಂದ ಭಾರತ ಮಹಿಳೆಯರ ತಂಡವು ಭಾನುವಾರ ನಡೆದ ಟಿ20 ಪಂದ್ಯದಲ್ಲಿ ಬಾಂಗ್ಲಾ ವಿರುದ್ಧ 44 ರನ್‌ಗಳಿಂದ ಜಯಿಸಿತು.

ಶಫಾಲಿ ವರ್ಮಾ (31, 22ಎ) ಮತ್ತು ಯಷ್ಟಿಕಾ ಭಾಟಿಯಾ (36, 29ಎ) ಅವರ ಬ್ಯಾಟಿಂಗ್‌ನಿಂದ ಭಾರತ 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 145 ರನ್ ಗಳಿಸಿತು. ಈ ಗುರಿ ಬೆನ್ನಟ್ಟಿದ ಆತಿಥೇಯ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗೆ 101 ಗಳಿಸಿತು.

ಸಂಕ್ಷಿಪ್ತ ಸ್ಕೋರ್: ಭಾರತ 20 ಓವರ್‌ಗಳಲ್ಲಿ 7 ವಿಕೆಟ್‌ಗೆ 145. (ಶೆಫಾಲಿ ವರ್ಮಾ 31, ಯಷ್ಟಿಕಾ ಭಾಟಿಯಾ 36, ರಬೆಯಾ ಖಾನ್ 23ಕ್ಕೆ3) ಬಾಂಗ್ಲಾದೇಶ 20 ಓವರ್‌ಗಳಲ್ಲಿ 8 ವಿಕೆಟ್‌ಗೆ 101 (ನಿಜರ್ ಸುಲ್ತಾನಾ ಔಟಾಗದೆ 51, ರೇಣುಕಾ ಸಿಂಗ್ 18ಕ್ಕೆ3, ಪೂಜಾ ವಸ್ತ್ರಾಕರ್ 25ಕ್ಕೆ2) ಫಲಿತಾಂಶ: ಭಾರತಕ್ಕೆ 44 ರನ್‌ಗಳ ಜಯ.

ಪಾಕ್ ತಂಡಕ್ಕೆ ಕರ್ಸ್ಟನ್ ಕೋಚ್

ಲಾಹೋರ್ (ಪಿಟಿಐ): ಪಾಕಿಸ್ತಾನದ ಏಕದಿನ ಹಾಗೂ ಟಿ20 ತಂಡಗಳಿಗೆ ದಕ್ಷಿಣ ಆಫ್ರಿಕಾದ ಗ್ಯಾರಿ ಕರ್ಸ್ಟನ್ ಅವರನ್ನು ಮುಖ್ಯ ಕೋಚ್ ಆಗಿ ನೇಮಕ ಮಾಡಲಾಗಿದೆ. ಟೆಸ್ಟ್ ತಂಡಕ್ಕೆ ಆಸ್ಟ್ರೇಲಿಯಾದ ಜೇಸನ್ ಗಿಲೆಸ್ಪಿ ಕೋಚ್ ಆಗಿ ಕಾರ್ಯನಿರ್ವಹಿಸುವರು.

ಈ ನೇಮಕದ ಕುರಿತು ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ಭಾನುವಾರ ಪ್ರಕಟಿಸಿದೆ.



ಟಿಸಿಎಸ್ ವಿಶ್ವ ಟೆನ್ ಕೆ ಓಟದಲ್ಲಿ ಪ್ರಶಸ್ತಿ ಗೆದ್ದ (ಎಡದಿಂದ) ಕೆನ್ಯಾದ ಪೀಟರ್ ಮ್ವಾನಿಕಿ (ಪುರುಷರು), ಕೆನ್ಯಾದ ಲಿಲಿಯನ್ ಕಸಾಯಿತ್ (ಮಹಿಳೆಯರು), ಕಿರಣ್ ಮಾತ್ರೆ (ಭಾರತದ ಪುರುಷ ವಿಭಾಗ), ಸಂಜೀವನಿ ಜಾಧವ್ (ಭಾರತದ ಮಹಿಳಾ ವಿಭಾಗ) –ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ಉದ್ಯಾನನಗರಿಯಲ್ಲಿ ಓಟದ ಹಬ್ಬ: ಪೀಟರ್, ಲಿಲಿಯನ್ ಮುಡಿಗೆ ಕಿರೀಟ

ವಿಶ್ವ ಟೆನ್ ಕೆ: ಕೆನ್ಯಾ ಅಥ್ಲೀಟ್‌ಗಳ ಪಾರಮ್ಯ

• ಪ್ರದೀಶ್ ಎಚ್. ಮರೋಡಿ

ಬೆಂಗಳೂರು: ಕೆನ್ಯಾದ ಪೀಟರ್ ಮ್ವಾನಿಕಿ ಮತ್ತು ಲಿಲಿಯನ್ ಕಸಾಯಿತ್ ಉದ್ಯಾನ ನಗರಿಯಲ್ಲಿ ಭಾನುವಾರ ನಡೆದ ಟಿಸಿಎಸ್ ವಿಶ್ವ ಟೆನ್ ಕೆ ಓಟದಲ್ಲಿ ಕ್ರಮವಾಗಿ ಪುರುಷ ಹಾಗೂ ಮಹಿಳೆಯರ ಎಲೀಟ್ ವಿಭಾಗದಲ್ಲಿ ಚಾಂಪಿಯನ್ ಆದರು.

16ನೇ ಆವೃತ್ತಿಯ ಓಟದಲ್ಲಿ ಈ ಬಾರಿಯೂ ಕೆನ್ಯಾದ ಅಥ್ಲೀಟ್‌ಗಳು ತಮ್ಮ ಪಾರಮ್ಯ ಮುಂದುವರಿಸಿದರು. ಆಗಸದಲ್ಲಿ ಸೂರ್ಯ ಉದಯಿಸುವ ಮುನ್ನವೇ ಕಬ್ಬನ್ ರಸ್ತೆಯ ಮಾಣೇಕ್ ಶಾ ಮೈದಾನದ ಬಳಿ ಜಮಾಯಿಸಿದ್ದ ಸಹಸ್ರಾರು ಮಂದಿಯ ಮುಖದಲ್ಲಿ ಉತ್ಸಾಹದ ಚಿಲುಮೆ ಪುಟಿಯುತ್ತಿತ್ತು. ರಂಗುರಂಗಿನ ಪೋಷಾಕು ತೊಟ್ಟು ಬಂದಿದ್ದ ಅವರು ಓಟದ ಗಮ್ಮತ್ತು ಹೆಚ್ಚಿಸಿದರು. ಒಂದೆಡೆ ವಾತಾವರಣ ಬಿಸಿಯೇರುತ್ತಿದ್ದರೆ, ಮತ್ತೊಂದೆಡೆ ಡಿಜೆ ಸಂಗೀತ ಕಾವೇರಿಸಿತ್ತು. ಈ ಸಂಭ್ರಮದ ನಡುವೆಯೇ ಓಟದಲ್ಲಿ ಕೆನ್ಯಾ, ಇಥಿಯೋಪಿಯಾದ ಘಟಾನುಘಟಿ ಅಥ್ಲೀಟ್‌ಗಳು ಮಿಂಚು ಹರಿಸಿದರು.

ಪೀಟರ್, 28 ನಿಮಿಷ 15 ಸೆಕೆಂಡ್‌ನಲ್ಲಿ ಗುರಿ ತಲುಪಿದರು. ಅವರಿಗೆ ಸ್ವದೇಶದ ಸ್ನೇಹಿತ ಹಿಲರಿ ಚೆಪ್ಕ್‌ವೋನಿ ತೀವ್ರ ಪೈಪೋಟಿ ನೀಡಿದರು. ಕಳೆದ ಆವೃತ್ತಿಯಲ್ಲಿ ಮೂರನೇ ಸ್ಥಾನ ಪಡೆದಿದ್ದ ಹಿಲರಿ ಈ ಬಾರಿ 18 ಸೆಕೆಂಡ್ ಅಂತರದಲ್ಲಿ ಚಿನ್ನ ತಪ್ಪಿಸಿಕೊಂಡರು. ಇಥಿಯೋಪಿಯಾದ ಹ್ಯಾಗೋಸ್ ಐಯೋಬ್ ಕಂಚು ಗೆದ್ದರು.

ಅಕೋಲ್‌ಗೆ ಆಘಾತ: ಅಚ್ಚರಿಯೆಂಬಂತೆ ವಿಶ್ವದ 2ನೇ ಅತಿ ವೇಗದ ಟೆನ್ ಕೆ ಓಟಗಾರ್ತಿ ಕೆನ್ಯಾದ ಇಮಾಕ್ಯುಲೇಟ್ ಅನ್ಯಾಂಗೊ ಅಕೋಲ್ ಅವರನ್ನು ಹಿಂದಿಕ್ಕಿದ ಲಿಲಿಯನ್ ಚಿನ್ನ ಗೆದ್ದುಕೊಂಡರು. ಆರಂಭದಿಂದಲೇ ಮುನ್ನಡೆ ಕಾಯ್ದುಕೊಂಡಿದ್ದ ಅಕೋಲ್ ಅವರನ್ನು 7.1 ಕಿ.ಮೀ. ಅಂತರದಲ್ಲಿ ಕಸಾಯಿತ್ ಹಿಂದಿಕ್ಕಿದರು. ಅವರು 30 ನಿಮಿಷ 56 ಸೆಕೆಂಡುಗಳಲ್ಲಿ ಗುರಿ ತಲುಪಿದರೆ, 21 ಸೆಕೆಂಡುಗಳ ಅಂತರದಲ್ಲಿ ಬಂದ ಅಕೋಲ್ ಬೆಳ್ಳಿ ಗೆದ್ದರು. ಇಥಿಯೋಪಿಯಾದ ಲೆಮ್ಲೆಮ್ ಹೈಲು ಕಂಚಿನ ಪದಕಕ್ಕೆ ತೃಪ್ತಿಪಟ್ಟರು.

ಸಂಜೀವನಿಗೆ ಚಿನ್ನ: ಭಾರತದ ಮಹಿಳೆಯರ ಎಲೀಟ್ ವಿಭಾಗದಲ್ಲಿ ಕೂಟ ದಾಖಲೆಯನ್ನು ಹೊಂದಿರುವ ಮಹಾರಾಷ್ಟ್ರದ ಸಂಜೀವನಿ ಮತ್ತೆ ಚಾಂಪಿಯನ್ ಆಗಿ ಹೊರಹೊಮ್ಮಿದರು. 2018ರ ಕೂಟ ದಾಖಲೆಯ (33 ನಿ. 38ಸೆ) ಸಮಯಕ್ಕಿಂತ 25 ಸೆಕೆಂಡ್ ತಡವಾಗಿ ಗುರಿ ಮುಟ್ಟಿದರು. 26 ವರ್ಷದ ಅವರು 2022ರ ಆವೃತ್ತಿಯಲ್ಲಿ ಬೆಳ್ಳಿ ಪದಕ ಗೆದ್ದಿದ್ದರು. ಪಶ್ಚಿಮ ಬಂಗಾಳದ ಲಿಲ್ಲಿ ದಾಸ್ ಮತ್ತು ದೆಹಲಿಯ ಪ್ರೀನು ಯಾದವ್ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕಕ್ಕೆ ಮುತ್ತಿಕ್ಕಿದರು. ಕಳೆದ ಬಾರಿಯ ಚಾಂಪಿಯನ್ ತಂಶಿ ಸಿಂಗ್ ಅವರು ಒಂಬತ್ತನೇ ಸ್ಥಾನ ಪಡೆದರು.

ಫಲಿತಾಂಶಗಳು: ಎಲೀಟ್ ಪುರುಷರು: ಪೀಟರ್ ಮ್ವಾನಿಕಿ (ಕೆನ್ಯಾ)–1 ಸಮಯ: 28 ನಿ. 15 ಸೆ., ಹಿಲರಿ ಚೆಪ್ಕ್‌ವೋನಿ (ಕೆನ್ಯಾ)–2, ಹ್ಯಾಗೋಸ್ ಐಯೋಬ್ (ಇಥಿಯೋಪಿಯಾ)–3. **ಮಹಿಳೆಯರು:** ಲಿಲಿಯನ್ ಕಸಾಯಿತ್ (ಕೆನ್ಯಾ)–1 ಸಮಯ: 30 ನಿ. 56 ಸೆ., ಇಮಾಕ್ಯುಲೇಟ್ ಅನ್ಯಾಂಗೊ ಅಕೋಲ್ (ಕೆನ್ಯಾ)–2, ಲೆಮ್ಲೆಮ್ ಹೈಲು (ಇಥಿಯೋಪಿಯಾ)–3 **ಭಾರತೀಯರ ವಿಭಾಗ: ಎಲೀಟ್ ಪುರುಷರು:** ಕಿರಣ್ ಮಾತ್ರೆ (ಕೂಟ ದಾಖಲೆ: 29 ನಿ.32 ಸೆ), (ಮಹಾರಾಷ್ಟ್ರ)–1 ಸಮಯ:29 ನಿ. 32 ಸೆ., ರಂಜಿತ್ ಕುಮಾರ್ ಪಟೇಲ್ (ಉತ್ತರ ಪ್ರದೇಶ)2, ಧರ್ಮೇಂದ್ರ (ರಾಜಸ್ಥಾನ)–3. **ಮಹಿಳೆಯರು:** ಸಂಜೀವನಿ ಜಾಧವ್ (ಮಹಾರಾಷ್ಟ್ರ)–1 ಸಮಯ: 34 ನಿ.03 ಸೆ., ಲಿಲ್ಲಿ ದಾಸ್ (ಪಶ್ಚಿಮ ಬಂಗಾಳ)–2, ಪ್ರೀನು ಯಾದವ್ (ದೆಹಲಿ)–3.

ಕೂಟ ದಾಖಲೆ ಬರೆದ ಕಿರಣ್

ಮಹಾರಾಷ್ಟ್ರದ ಕಿರಣ್ ಮಾತ್ರೆ ಭಾರತದ ಪುರುಷರ ಎಲೀಟ್ ವಿಭಾಗದಲ್ಲಿ ಕೂಟ ದಾಖಲೆ ಬರೆದರು. 22 ವರ್ಷದ ಅವರು ವೈಯಕ್ತಿಕ ಶ್ರೇಷ್ಠ ಸಾಧನೆಯೊಂದಿಗೆ ಎಂಟು ವರ್ಷಗಳ ಹಿಂದಿನ ದಾಖಲೆಯನ್ನು ಮುರಿದು ಗಮನ ಸೆಳೆದರು.

29 ನಿಮಿಷ 32 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. 2016ರಲ್ಲಿ ಸುರೇಶ್ ಕುಮಾರ್ (29 ನಿ.49 ಸೆ.) ನಿರ್ಮಿಸಿದ್ದ ದಾಖಲೆಯನ್ನು ಮೀರಿ ನಿಂತರು. ಕಿರಣ್ ಅವರಿಗೆ ಪೈಪೋಟಿ ನೀಡಿದ ಉತ್ತರಪ್ರದೇಶದ ರಂಜಿತ್ ಕುಮಾರ್ ಪಟೇಲ್ (29 ನಿ. 35ಸೆ), ರಾಜಸ್ಥಾನದ ಧರ್ಮೇಂದ್ರ (29 ನಿ. 45ಸೆ), ಉತ್ತರಾಖಂಡದ ದೀಪಕ್ ಭಟ್ (29 ನಿ. 45ಸೆ) ಅವರೂ ಹಿಂದಿನ ಕೂಟ ದಾಖಲೆ ಮೀರಿದರು.

ಪುರುಷರ ಎಲೀಟ್ ವಿಭಾಗದಲ್ಲಿ ಒಟ್ಟಾರೆ ಒಂಬತ್ತನೇ ಸ್ಥಾನ ಗಳಿಸಿದ ಶ್ರೇಯಕ್ಕೆ ಪಾತ್ರವಾದ ಕಿರಣ್, ಕಳೆದ ಆವೃತ್ತಿಯಲ್ಲಿ ಭಾರತದ ಎಲೀಟ್ ವಿಭಾಗದಲ್ಲಿ 12ನೇ ಸ್ಥಾನ ಪಡೆದಿದ್ದರು. ರಂಜಿತ್ ಮತ್ತು ಧರ್ಮೇಂದ್ರ ಅವರು ಹಿಂದಿನ ಕೂಟದಲ್ಲಿ ಕ್ರಮವಾಗಿ 9 ಮತ್ತು 10ನೇ ಸ್ಥಾನ ಗಳಿಸಿದ್ದರು. ಅವರು ಈ ವರ್ಷ ಕ್ರಮವಾಗಿ ಮೊದಲ ಮೂರು ಸ್ಥಾನಗಳನ್ನು ಗಳಿಸಿದರು.

ಆರ್ಚರಿ ವಿಶ್ವಕಪ್: ಒಲಿಂಪಿಕ್ ಚಾಂಪಿಯನ್ ಕೊರಿಯಾಗೆ ಆಘಾತ

ಭಾರತ ಪುರುಷರ ಚಾರಿತ್ರಿಕ ಸಾಧನೆ

ಶಾಂಘೈ (ಪಿಟಿಐ): ಧೀರಜ್ ಬೊಮ್ಮದೇವರ, ತರುಣ್ ದೀಪ್ ರಾಯ್ ಮತ್ತು ಪ್ರವೀಣ್ ಜಾಧವ್ ಅವರನ್ನೊಳಗೊಂಡ ಭಾರತ ಪುರುಷರ ರಿಕರ್ವ್ ತಂಡವು ಹಾಲಿ ಒಲಿಂಪಿಕ್ ಚಾಂಪಿಯನ್ ದಕ್ಷಿಣ ಕೊರಿಯಾವನ್ನು ಮಣಿಸಿ ಆರ್ಚರಿ ವಿಶ್ವಕಪ್‌ನಲ್ಲಿ ಚಿನ್ನದ ಪದಕ ಜಯಿಸಿದೆ. 14 ವರ್ಷಗಳ ನಂತರ ಭಾರತ ಐತಿಹಾಸಿಕ ಸಾಧನೆ ಮಾಡಿದೆ.

ಕೊರಿಯಾ ವಿರುದ್ಧದ ಈ ಗೆಲುವಿನಿಂದಾಗಿ ಭಾರತಕ್ಕೆ ಮುಂಬರುವ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಸ್ಥಾನ ಪಡೆಯುವ ಅವಕಾಶ ಹೆಚ್ಚಿಸಿದೆ. ಧೀರಜ್, ತರುಣ್ ಮತ್ತು ಪ್ರವೀಣ್ ಅವರನ್ನೊಳಗೊಂಡ ತಂಡ ಒಂದು ಸೆಟ್ ಕೂಡ ಕಳೆದುಕೊಳ್ಳದೆ ಪ್ರಬಲ ಕೊರಿಯಾವನ್ನು ಮಣಿಸಿತು.

ಈ ಸಲ ಟೂರ್ನಿಯ ಅಗ್ರ ಎರಡು ಪ್ರಬಲ ತಂಡಗಳ ನಡುವಿನ ಹೋರಾಟದಲ್ಲಿ ಭಾರತವು 5-1 (57-57, 57-55, 55-53) ಅಂತರದಿಂದ ಗೆದ್ದು, ಋತುವಿನ ಆರಂಭಿಕ ವಿಶ್ವಕಪ್‌ನಲ್ಲಿ (ಸ್ಟೇಜ್1) ಚಿನ್ನದ ಪದಕಗಳನ್ನು ಐದಕ್ಕೆ ಏರಿಸಿತು.

ರಿಕರ್ವ್ ಮಿಶ್ರ ಡಬಲ್ಸ್ ವಿಭಾಗದಲ್ಲಿ ಅಂಕಿತಾ ಭಕತ್ ಮತ್ತು ಧೀರಜ್ ಜೋಡಿ ಮೆಕ್ಸಿಕೊದ ತಂಡವನ್ನು 6-0 ಅಂತರದಿಂದ ಸೋಲಿಸಿ ಕಂಚು ಗೆದ್ದುಕೊಂಡಿತು.

ಪುರುಷರ ವೈಯಕ್ತಿಕ ವಿಭಾಗದಲ್ಲಿ ಧೀರಜ್ ಒಲಿಂಪಿಕ್ಸ್‌ಗೆ ಸ್ಥಾನ ಗಿಟ್ಟಿಸಿದ್ದಾರೆ. ಅಂತಿಮ ಒಲಿಂಪಿಕ್ ಅರ್ಹತಾ ಸ್ಪರ್ಧೆಯು ಜೂನ್ 18ರಿಂದ 23 ರವರೆಗೆ ಟರ್ಕಿಯಲ್ಲಿ ನಡೆಯಲಿದೆ.

ದೀಪಿಕಾಗೆ ಬೆಳ್ಳಿ: ಮಗುವಿನ ತಾಯಿಯಾದ ನಂತರ ವಿಶ್ವ ಸ್ಪರ್ಧಾ ಕಣಕ್ಕೆ ಮರಳಿರುವ ದೀಪಿಕಾ ಕುಮಾರಿ, ಮಹಿಳಾ ರಿಕರ್ವ್ ವೈಯಕ್ತಿಕ ವಿಭಾಗದಲ್ಲಿ ಬೆಳ್ಳಿ ಪದಕ ಪಡೆದರು. ಫೈನಲ್‌ನಲ್ಲಿ ದೀಪಿಕಾ 6-0 ನೇರ ಸೆಟ್‌ಗಳಲ್ಲಿ ಏಷ್ಯನ್ ಗೇಮ್ಸ್ ಚಾಂಪಿಯನ್ ಲಿಮ್ ಸಿಹ್ಯೋನ್ ವಿರುದ್ಧ ಸೋತರು.

ಒಟ್ಟು ಐದು ಚಿನ್ನ, ಎರಡು ಬೆಳ್ಳಿ ಮತ್ತು ಒಂದು ಕಂಚಿನೊಂದಿಗೆ ಭಾರತ ಒಟ್ಟು ಎಂಟು ಪದಕಗಳನ್ನು ಗೆದ್ದಿದೆ.



ಆರ್ಚರಿ ವಿಶ್ವಕಪ್‌ನಲ್ಲಿ ಚಿನ್ನ ಗೆದ್ದ ಭಾರತ ಪುರುಷರ ರಿಕರ್ವ್ ತಂಡ. ತರುಣ್ ದೀಪ್ ರಾಯ್, ಧೀರಜ್ ಬೊಮ್ಮದೇವರ, ಪ್ರವೀಣ್ ಜಾಧವ್ –ಸಾಯ್ ಎಕ್ಸ್ ಚಿತ್ರ

ಕೊಡವ ಹಾಕಿ: ಚೇಂದಂಡ ತಂಡ ಚಾಂಪಿಯನ್

ನಾಪೋಕ್ಲು (ಕೊಡಗು): ಚೇಂದಂಡ ತಂಡವು ಇಲ್ಲಿನ ಚೆರಿಯಪರಂಬುವಿನ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ನಡೆದ ‘ಕುಂಡ್ಯೋಳಂಡ ಕಪ್’ ಕೊಡವ ಕೌಟುಂಬಿಕ ಹಾಕಿ ಟೂರ್ನಿಯಲ್ಲಿ 3ನೇ ಬಾರಿ ಪ್ರಶಸ್ತಿ ಗೆದ್ದಿತು.

ಭಾನುವಾರ ಬಿರುಬಿಸಿಲಿನಲ್ಲಿ ನಡೆದ ರೋಚಕ ಫೈನಲ್‌ನಲ್ಲಿ ಚೇಂದಂಡ 8–7 ಗೋಲುಗಳ ಅಂತರದಿಂದ ನೆಲ್ಲಮಕ್ಕಡ ತಂಡವನ್ನು ಪರಾಭವಗೊಳಿಸಿತು. 30 ಸಾವಿರಕ್ಕೂ ಅಧಿಕ ಪ್ರೇಕ್ಷಕರು ಈ ಜಿದ್ದಾಜಿದ್ದಿನ ಪಂದ್ಯಕ್ಕೆ ಸಾಕ್ಷಿಯಾದರು.

ಚೇಂದಂಡ ಪರ ನಿಕಿನ್ ತಿಮ್ಮಯ್ಯ 2 ಗೋಲು ದಾಖಲಿಸಿದರೆ, ಎದುರಾಳಿ ತಂಡದ ಪರ ರೋಷನ್ ಮತ್ತು ಮ್ಯಾಕ್ ಮೊಣ್ಣಪ್ಪ ತಲಾ ಒಂದು ಗೋಲು ಮೂಲಕ ಸ್ಕೋರ್ ಸಮನಾಗಿಸಿದರು. ಪೆನಾಲ್ಟಿ ಶೂಟೌಟ್‌ನಲ್ಲೂ ಎರಡೂ ತಂಡಗಳೂ ಪೈಪೋಟಿ ತೋರಿದವು. ಅಂತಿಮವಾಗಿ ಚೇಂದಂಡ ಕೇವಲ ಒಂದು ಗೋಲಿನ ಅಂತರದಿಂದ ವಿಜಯದ ನಗೆ ಬೀರಿತು. 3 ಮತ್ತು 4ನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಕುಲ್ಲೇಟಿರ, ಕುಪ್ಪಂಡ ವಿರುದ್ಧ 3- 2ರಿಂದ ಜಯಿಸಿತು.

ಮುಂದಿನ ವರ್ಷ 25ನೇ ಕೌಟುಂಬಿಕ ಹಾಕಿ ಉತ್ಸವ ಮುದ್ದಂಡ ಕುಟುಂಬಸ್ಥರ ನೇತೃತ್ವದಲ್ಲಿ ಮಡಿಕೇರಿಯಲ್ಲಿ ನಡೆಯಲಿದೆ.

ಗಿನ್ನಿಸ್ ದಾಖಲೆ ಬರೆದ ಟೂರ್ನಿ: ‘ಒಟ್ಟು 360 ಕುಟುಂಬಗಳ 3 ಸಾವಿರಕ್ಕೂ ಅಧಿಕ ಹಾಕಿ ಆಟಗಾರರು ಪಾಲ್ಗೊಳ್ಳುವ ಕೊಡವ ಕೌಟುಂಬಿಕ ಹಾಕಿ ಟೂರ್ನಿಯ 24ನೇ ಆವೃತ್ತಿ ಕುಂಡ್ಯೋಳಂಡ ಕಪ್ ಗಿನ್ನೆಸ್ ದಾಖಲೆಗೆ ಸೇರ್ಪಡೆಯಾಯಿತು’ ಎಂದು ಗಿನ್ನಿಸ್ ಬುಕ್ ಆಫ್ ರೆಕಾರ್ಡ್ಸ್ ಸಮಿತಿ ಸದಸ್ಯ ಸ್ವಪ್ನಿಲ್ ಘೋಷಿಸಿದರು.